ಗುರುವಾರ, ಸೆಪ್ಟೆಂಬರ್ 28, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ದೇವತೆ....
ನೇಪಾಳದ ಕಠ್ಮಂಡುವಿನಲ್ಲಿ ನಡೆದ 'ಕುಮಾರಿ ಪೂಜಾ' ಕಾರ್ಯಕ್ರಮದಲ್ಲಿ ದೇವಿಯಂತೆ ಕಂಗೊಳಿಸಿದ ಬಾಲಕಿ

PARISHRAMA
GROUP OF INSTITUTIONS

CREATIVITY
HONESTY
TRUST

Launching
PARISHRAMA
PU COLLEGE
WITH INTEGRATED NEET, JEE MAINS & KCET TRAINING

UNDER THE GUIDANCE OF PRADEEP ESHWAR

it matters
WHERE YOU
START

BE OUR GUEST & SCAN TO LAUNCH OUR COURSE

ADMISSIONS OPEN FOR 2024-25

PCMB & PCMC - Residential & Day Scholars

Parishrama NEET Academy App
First of it's kind App in the industry for student progress tracking & feedback mechanism (contact us to know more)

- Faculty with Proven Track Record
- Intense NEET & JEE Training
- 100% In-house Study Material
- Hygienic Food
- Separate Hostel for Boys & Girls
- 24x7 Security & Medical Assistance

PARISHRAMA PU COLLEGE AT

- RR NAGAR (Residential)
- RAJAJINAGAR
- JAYANAGAR
- ELECTRONIC CITY
- HEBBAL
- SHESHADRIPURAM
- KENGERI
- VIJAYNAGAR
- BANASHANKARI
- WHITEFIELD
- SARJAPURA
- JALAHALLI CROSS
- NAGARBHAVI
- JP NAGAR
- BANASWADI
- MALLESHWARAM
- VIDYARANYAPURA
- KR PURAM

Call: 080 24413444, 82963 19392, 879249 5792, 636154 6584

ಅವಕಾಶವಾದಿ ರಾಜಕಾರಣ ಅಲ್ಲ: ಜೆಡಿಎಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ದೇವೇಗೌಡ • ಕಾಂಗ್ರೆಸ್ ವಿರುದ್ಧ ವಾಗ್ದಾಳಿ

‘ಬಿಜೆಪಿ ಸಖ್ಯ ಜಾತ್ಯತೀತತೆಗೆ ಧಕ್ಕೆ ತಾರದು’

ಪ್ರಜಾವಾಣಿ ವಾರ್ತೆ

ಎಚ್.ಡಿ. ದೇವೇಗೌಡ

ಬೆಂಗಳೂರು: ‘ಬಿಜೆಪಿ ಜತೆ ಮೈತ್ರಿಗೆ ನಾನೇ ಒಪ್ಪಿಗೆ ನೀಡಿದೆ. ಜೆಡಿಎಸ್ ಪಕ್ಷ ಎನ್‌ಡಿಎ ಭಾಗವಾದರೂ ಮುಸ್ಲಿಮರು ಸೇರಿದಂತೆ ಎಲ್ಲ ಸಮುದಾಯಗಳ ಹಿತಾಸಕ್ತಿಗೆ ಬದ್ಧವಾಗಿರುತ್ತದೆ’ ಎಂದು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಹೇಳಿದರು.

‘ನಮ್ಮ ಪಕ್ಷದ ಎಲ್ಲಾ ಶಾಸಕರು, ನಾಯಕರ ಅಭಿಪ್ರಾಯ ಪಡೆದು ಈ ನಿರ್ಧಾರಕ್ಕೆ ಬಂದಿದ್ದೇವೆ. ರಾಜಕೀಯ ಬೆಳವಣಿಗೆ, ಪಕ್ಷದ ಹಿತದೃಷ್ಟಿಯಿಂದ ಕೆಲವು ಹೆಜ್ಜೆಗಳನ್ನು ಇಟ್ಟಿದ್ದೇವೆ. ಇದು ಅವಕಾಶವಾದಿ ರಾಜಕಾರಣ ಅಲ್ಲ’ ಎಂದು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಮೈತ್ರಿಯಲ್ಲಿ ತಪ್ಪು ಹುಡುಕುವ ವ್ಯರ್ಥ ಪ್ರಯತ್ನವನ್ನು ಕಾಂಗ್ರೆಸ್ ಮಾಡುತ್ತಿದೆ. ದೇಶದ ಎಲ್ಲೆಡೆ ಕಾಂಗ್ರೆಸ್ ತನ್ನ ಸ್ವಾರ್ಥಕ್ಕಾಗಿ ಜಾತ್ಯತೀತ ನಿಲುವಿನ ಇತರೆ ಪಕ್ಷಗಳನ್ನು ಬಲಿಕೊಡುತ್ತಿದೆ. 2018ರಲ್ಲಿ ಅತಂತ್ರ ವಿಧಾನಸಭೆ ನಿರ್ಮಾಣವಾದಾಗ ಕಾಂಗ್ರೆಸ್ ನಾಯಕರೇ ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡಬೇಕು ಎಂದು ವಿನಂತಿಸಿದ್ದರು. ಒಂದೇ ವರ್ಷದಲ್ಲಿ ತಮ್ಮ ನಿಲುವು ಬದಲಾಯಿಸಿ, ಶಾಸಕರ ರಾಜೀನಾಮೆಗೆ ಕುಮ್ಮಕ್ಕು ನೀಡುವ ಮೂಲಕ ಬಿಜೆಪಿ ಅಧಿಕಾರಕ್ಕೆ ಬರಲು ಕಾರಣರಾದರು. ಕಾಂಗ್ರೆಸ್‌ನ ಇಂತಹ ದ್ವಿಮುಖ ನೀತಿಯ ವಿರುದ್ಧ ಜೆಡಿಎಸ್ ಹೋರಾಟ ನಡೆಸುತ್ತಿದೆ ಎಂದರು.

‘ರಾಜ್ಯಸಭೆಗೆ ನಡೆದ ಚುನಾವಣೆಯಲ್ಲಿ ಬಿ.ಎಂ. ಫಾರೂಕ್ ಅವರನ್ನು ಕಾಂಗ್ರೆಸ್‌ನವರು ಸೋಲಿಸಿದರು. ಆಗ ಅವರಿಗೆ ಜಾತ್ಯತೀತತೆ ನೆನಪಾಗಲಿಲ್ಲವೇ’ ಎಂದು ಪ್ರಶ್ನಿಸಿದರು.

‘ನಾವೇನು ಬಿಜೆಪಿ ನಾಯಕರ ಜತೆ ಕದ್ದುಮುಚ್ಚಿ ಮಾತನಾಡಿಲ್ಲ. ಮೈತ್ರಿಯಿಂದ ಪಕ್ಷಕ್ಕೆ ಯಾವುದೇ ಸಮಸ್ಯೆ ಇಲ್ಲ. ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ಜತೆ ಚರ್ಚೆ ಆಗಿದೆ. ಪ್ರಧಾನಿಗಳ ಜತೆ ಇನ್ನೂ ಮಾತುಕತೆ ನಡೆಸಿಲ್ಲ’ ಎಂದು ಮಾಹಿತಿ ನೀಡಿದರು.

‘ಬಿಜೆಪಿ ಜತೆ ಹೊಂದಾಣಿಕೆ ಮಾಡಿಕೊಂಡರೂ ತನ್ನ ಸಿದ್ಧಾಂತ, ನಿಲುವಿನಿಂದ ವಿಮುಖವಾಗುವುದಿಲ್ಲ. ಜಾತ್ಯತೀತ ಸಿದ್ಧಾಂತ ಗಾಳಿಗೆ ತೂರುವ ಕೆಲಸಕ್ಕೆ ಆಸ್ಪದ ನೀಡಿಲ್ಲ. ಕಳೆದ 60 ವರ್ಷಗಳ ನನ್ನ ರಾಜಕೀಯ ಜೀವನದಲ್ಲಿ ಯಾವುದೇ ಸಮುದಾಯಕ್ಕೆ ಅನ್ಯಾಯವಾಗಲು ಬಿಟ್ಟಿಲ್ಲ. ಮುಂದೆಯೂ ಬಿಡುವುದಿಲ್ಲ. ಆದರೆ, ಮುಸ್ಲಿಂ ಸಮುದಾಯ ಕಳೆದ ಚುನಾವಣೆಯಲ್ಲಿ ಬೆಂಬಲ ನೀಡಲಿಲ್ಲ. ಇದು ನೋವಿನ ವಿಚಾರ’ ಎಂದು ತಿಳಿಸಿದರು.

ಸಂಪರ್ಕಕ್ಕೆ ಸಿಗದ ಇಬ್ರಾಹಿಂ: ಎಚ್‌ಡಿಕೆ

ಮೈತ್ರಿ ನಂತರ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ.ಇಬ್ರಾಹಿಂ ಅವರು ಸಂಪರ್ಕಕ್ಕೆ ಸಿಕ್ಕಿಲ್ಲ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

‘ಮೈತ್ರಿ ಬಗ್ಗೆ ಮುಸ್ಲಿಂ ನಾಯಕರಿಗೆ ಮನವರಿಕೆ ಮಾಡಿದ್ದೇವೆ. ಇಬ್ರಾಹಿಂ ಅವರಿಗೂ ಮಾಹಿತಿ ಇದೆ. ಮೈತ್ರಿಯ ಯಾವ ವಿಷಯಗಳನ್ನೂ ಮುಚ್ಚಿಟ್ಟಿಲ್ಲ’ ಎಂದರು.

ಮುಸ್ಲಿಂ ಮತಗಳಿಲ್ಲದೇ ಕುಮಾರಸ್ವಾಮಿ ಗೆದ್ದಿದ್ದಾರಾ ಎಂಬ ವಸತಿ ಸಚಿವ ಜಮೀರ್ ಅಹಮದ್ ಖಾನ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಚನ್ನಪಟ್ಟಣದಲ್ಲಿ ಕಾಂಗ್ರೆಸ್ ಪ್ರಬಲವಾಗಿದ್ದಿದ್ದರೆ ಆ ಸಮುದಾಯ ಅಲ್ಲೂ ಮತ ಹಾಕುತ್ತಿರಲಿಲ್ಲ ಎಂದರು.

‘ಸರ್ಕಾರ ಬೀಳಿಸುವಾಗ ಬಿಜೆಪಿಯ ಐವರು ಶಾಸಕರು ಬೆಂಬಲ ಕೊಡಲು ಮುಂದಾಗಿದ್ದರು. ಆದರೆ, ಸಚಿವ ಮಹಾಶಯರೊಬ್ಬರು ಐವರು ಬಿಜೆಪಿ ಶಾಸಕರು ಬಂದರೆ ಕಾಂಗ್ರೆಸ್‌ನ ಇನ್ನೂ ಐವರನ್ನು ಕಳುಹಿಸುತ್ತೇವೆ ಎಂದಿದ್ದರು’ ಎಂದು ಜಮೀರ್ ವಿರುದ್ಧ ಕುಮಾರಸ್ವಾಮಿ ಅವರು ಆಕ್ರೋಶ ವ್ಯಕ್ತಪಡಿಸಿದರು.

‘ಮೈತ್ರಿಯಿಂದ ಜೆಡಿಎಸ್ ಅಂತ್ಯ’

ರಾಮನಗರ: ‘ಮುಂದಿನ ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮಧ್ಯೆ ಏರ್ಪಟ್ಟಿರುವ ಮೈತ್ರಿಯು, ಜೆಡಿಎಸ್‌ನ ಅಂತ್ಯಕ್ಕೆ ನಾಂದಿಯಾಗಲಿದೆ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನಾವು ಜೆಡಿಎಸ್ ಜತೆ ಈಗಾಗಲೇ ಮೈತ್ರಿ ಮಾಡಿಕೊಂಡು ಅನುಭವಿಸಿದ್ದೇವೆ. ಬೇರೆಯವರು (ಬಿಜೆಪಿ) ಸಹ ಅನುಭವಿಸಲಿದೆ. ಏನೇ ಆದರೂ, ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಹೆಚ್ಚಿನ ಸ್ಥಾನಗಳನ್ನು ಖಚಿತವಾಗಿ ಗೆಲ್ಲಲಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

‘ರಾಜ್ಯದಲ್ಲಿ ಕಾಂಗ್ರೆಸ್ ಜತೆ ಬೇರೆ ಪಕ್ಷಗಳು ಕೈ ಜೋಡಿಸುವ ಇಚ್ಛೆ ತೋರಿದರೆ, ಆ ಕುರಿತು ಪಕ್ಷದ ನಾಯಕರು ತೀರ್ಮಾನ ಕೈಗೊಳ್ಳಲಿದ್ದಾರೆ. ಹಿಂದೆ ಎಡಪಕ್ಷಗಳು ಸೇರಿದಂತೆ ಕೆಲ ಪಕ್ಷಗಳು ನಮಗೆ ಬೆಂಬಲ ಕೊಟ್ಟಿವೆ’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಜೆಡಿಎಸ್ ಜಾತ್ಯತೀತವೇ: ಸಿದ್ದರಾಮಯ್ಯ ಪ್ರಶ್ನೆ

ಮಹದೇಶ್ವರ ಬೆಟ್ಟ (ಚಾಮರಾಜನಗರ ಜಿಲ್ಲೆ): ‘ಚುನಾವಣೆ ಸಲುವಾಗಿ ಕೋಮುವಾದಿ ಪಕ್ಷದೊಂದಿಗೆ ಮೈತ್ರಿ ಮಾಡಿಕೊಂಡ ಬಳಿಕ ಜೆಡಿಎಸ್ ಜಾತ್ಯತೀತವೇ? ಅವರು ಏನು ಮಾಡಿದರೂ, ಹೇಳಿದರೂ ಒಪ್ಪಿಕೊಳ್ಳಬೇಕೇ? ಜಾತ್ಯತೀತ ಪದವನ್ನು ಮೊದಲು ತೆಗೆದು ಹಾಕಲಿ. ಅವರು ಯಾರ ಜೊತೆಗೆ ಹೋದರೂ ನಮ್ಮದೇನೂ ತಕರಾರಿಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಹೇಳಿದರು.

‘ಬಿಜೆಪಿಯ ಬಿ ಟೀಂ ಆಗಿದ್ದಿದ್ದರೆ 5 ವರ್ಷ ನಾನೇ ಮುಖ್ಯಮಂತ್ರಿಯಾಗಿರುತ್ತಿದ್ದೆ’ ಎಂಬ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿಕೆಗೆ ಮುಖ್ಯಮಂತ್ರಿ ಪ್ರತಿಕ್ರಿಯಿಸಿದರು.

2004ರಲ್ಲಿ ಬಿಜೆಪಿಯ ವೆಂಕಯ್ಯ ನಾಯ್ಡು ಅವರನ್ನು ಭೇಟಿಯಾಗಲು ವಿಮಾನ ಕಾಯ್ದಿರಿಸಿದ್ದೀರಾ ಎಂದು ಕೇಳಿದ್ದಕ್ಕೆ, ‘ಅದೆಲ್ಲ ಸುಳ್ಳು. ನಾನು ಅಡ್ವಾಣಿಯವರನ್ನು ಭೇಟಿ ಮಾಡಿದ್ದು ನಿಜ. ವೆಂಕಯ್ಯನಾಯ್ಡು ಅವರನ್ನು ಭೇಟಿ ಮಾಡಿಲ್ಲ. ಅಡ್ವಾಣಿಯವರು ಈ ಹಿಂದೆ ಜನತಾ ಪಕ್ಷದಲ್ಲಿದ್ದರು. ಹಾಗಾಗಿ ಅವರ ಪರಿಚಯ ಇತ್ತು’ ಎಂದರು.

ಮೈತ್ರಿ ಪರಿಣಾಮವಾಗಿ ಹಲವರು ಕಾಂಗ್ರೆಸ್‌ನತ್ತ: ಡಿಕೆಶಿ

ಬೆಂಗಳೂರು: ‘ಬಿಜೆಪಿ, ಜೆಡಿಎಸ್ ಮೈತ್ರಿಯಿಂದ ಆ ಎರಡೂ ಪಕ್ಷಗಳ ಹಲವರು ಅಸಮಾಧಾನಗೊಂಡಿದ್ದು, ಕಾಂಗ್ರೆಸ್ ಸೇರಲು ಬಯಸುತ್ತಿದ್ದಾರೆ. ಮೂವರು ಮಾಜಿ ಶಾಸಕರ ಜತೆ ಮಂಗಳವಾರ ರಾತ್ರಿ ಮಾತುಕತೆ ನಡೆಸಿದ್ದೇನೆ’ ಎಂದು ಕೆಪಿಸಿಸಿ ಅಧ್ಯಕರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಯಶವಂತಪುರ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಮುಖಂಡರನ್ನು ಕಾಂಗ್ರೆಸ್ ಪಕ್ಷಕ್ಕೆ ಬರಮಾಡಿಕೊಂಡ ಬಳಿಕ ಮಾತನಾಡಿದ ಅವರು, ‘ಹಿಂದೆ ಜಾತ್ಯತೀತ ಸಿದ್ಧಾಂತದ ಸರ್ಕಾರ ಉಳಿಯಬೇಕು ಎಂದು ನಾವೆಲ್ಲರೂ ಹೋರಾಟ ಮಾಡಿದ್ದೆವು. ಈಗ ಅವರು ಸರ್ಕಾರ ಉರುಳಿಸಿದವರ ಜತೆಯಲ್ಲೇ ಕೈ ಜೋಡಿಸಿದ್ದಾರೆ’ ಎಂದರು.

‘ಮೈತ್ರಿಯನ್ನು ವಿರೋಧಿಸಿ ಎರಡೂ ಪಕ್ಷಗಳ ಹಲವರು ಕಾಂಗ್ರೆಸ್‌ನತ್ತ ಬರುತ್ತಿದ್ದಾರೆ. ನಮಗೆ ಮುಖಂಡರಿಗಿಂತಲೂ ಹೆಚ್ಚಾಗಿ ಕಾರ್ಯಕರ್ತರು ಮುಖ್ಯ. ಶಿವಮೊಗ್ಗ, ರಾಮನಗರ, ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆ ಎರಡೂ ಪಕ್ಷಗಳ ಕಾರ್ಯಕರ್ತರು ಕಾಂಗ್ರೆಸ್ ಸೇರಲು ಬಯಸಿದ್ದಾರೆ. ‘ಆಪರೇಷನ್ ಹಸ್ತ’ ಮಾಡುವುದಿಲ್ಲ. ನಮ್ಮದು ‘ಕೋ–ಆಪರೇಷನ್’ ರಾಜಕೀಯ ಎಂದು ಈಗಾಗಲೇ ಹೇಳಿದ್ದೇನೆ. ಅದೇ ರೀತಿ ಕಾರ್ಯಕರ್ತರ ಹಂತದಲ್ಲೇ ಪಕ್ಷ ಸೇರ್ಪಡೆಗೆ ಸೂಚನೆ ನೀಡಲಾಗಿದೆ’ ಎಂದು ಹೇಳಿದರು.

ಆಶ್ರಯ ಸಮಿತಿ ಮಾಜಿ ಅಧ್ಯಕ್ಷ ಕೆ.ಎಂ. ಹೊಂಬೇಗೌಡ, ಎಪಿಎಂಸಿ ಸದಸ್ಯ ಟಿ.ಎ.ಮೂರ್ತಿ, ನಿವೃತ್ತ ಪಶುವೈದ್ಯಾಧಿಕಾರಿ ಡಾ.ರಾಜು, ಉದ್ಯಮಿ ತಿಮ್ಮೇಗೌಡ ಸೇರಿದಂತೆ ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತಾವರೆಕೆರೆ, ಸೂಲಿವಾರ, ಬ್ಯಾಲಾಳು, ದೊಣ್ಣೇನಹಳ್ಳಿ, ಕುರುಬರಪಾಳ್ಯ, ಉದ್ದಂಡಹಳ್ಳಿ, ಗೊಲ್ಲಹಳ್ಳಿ ಗ್ರಾಮಗಳ ಜಡಿಎಸ್‌ನ 70ಕ್ಕೂ ಹೆಚ್ಚು ಮುಖಂಡರು ಮತ್ತು ಕಾರ್ಯಕರ್ತರು ಕಾಂಗ್ರೆಸ್ ಸೇರಿದರು.

ಕೊನೆಯವರೆಗೂ ಇರಲಿದೆ ಮೈತ್ರಿ: ಜಿಟಿಡಿ

ಕೊಪ್ಪಳ: ‘ಮುಂಬರುವ ಲೋಕಸಭಾ ಚುನಾವಣೆ ತನಕ ಮಾತ್ರವಲ್ಲದೇ ಕೊನೆಯ ತನಕವೂ ಬಿಜೆಪಿ ಜೊತೆ ನಮ್ಮ ಮೈತ್ರಿ ಇದ್ದೇ ಇರುತ್ತದೆ’ ಎಂದು ಜೆಡಿಎಸ್ ರಾಜ್ಯ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡ ಹೇಳಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರ ಜೊತೆ ಮಾತನಾಡಿ, ‘ನಮ್ಮ ಪಕ್ಷದ ಅಸ್ತಿತ್ವ ಉಳಿಸಿಕೊಳ್ಳಲು ಬಿಜೆಪಿ ಜೊತೆ ಕೈ ಜೋಡಿಸಿದ್ದೇವೆ. ಇದು ನಮಗೆ ಅನಿವಾರ್ಯ ಹಾಗೂ ಅಗತ್ಯವೂ ಆಗಿತ್ತು. ನಮ್ಮ ಪಕ್ಷಕ್ಕೆ ಅವಕಾಶಗಳು ಸಾಕಷ್ಟಿವೆ. ಶಾಸಕರಾದವರು ಸಂಸದರಾಗಬಹುದು, ಇನ್ನೂ ಕೆಲವರು ವಿಧಾನ ಪರಿಷತ್ ಸದಸ್ಯರೂ ಆಗಬಹುದು’ ಎಂದು ಭವಿಷ್ಯ ನುಡಿದರು.

‘ಬಿಜೆಪಿ ಜೊತೆ ಕೈ ಜೋಡಿಸಿದರೂ ಜೆಡಿಎಸ್ ತನ್ನ ತತ್ವ ಹಾಗೂ ಸಿದ್ಧಾಂತಗಳನ್ನು ಬಿಟ್ಟುಕೊಡುವುದಿಲ್ಲ. ರೈತರ ಪರವಾಗಿಯೇ ಇರುತ್ತೇವೆ. ಮೈತ್ರಿಯಿಂದಾಗಿ ಅಲ್ಪಸಂಖ್ಯಾತರು ನಮ್ಮ ಪಕ್ಷ ಬಿಟ್ಟು ಹೋಗುತ್ತಾರೆ ಎನ್ನುವುದು ಊಹಾಪೋಹ’ ಎಂದು ಸ್ಪಷ್ಟಪಡಿಸಿದರು.

ಪ್ರಜಾವಾಣಿ@75 DH DECCAN HERALD

ಡಿಎಚ್–ಪಿವಿ ಬಡ ವಿದ್ಯಾರ್ಥಿಗಳ ಶೈಕ್ಷಣಿಕ ನಿಧಿ

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	**ಎಚ್.ಗೋಪಾಲ**, ನಂ.736/ಎ, 2ನೇ ಅಡ್ಡರಸ್ತೆ, 2ನೇ ಮುಖ್ಯರಸ್ತೆ, ಇ ಬ್ಲಾಕ್, ರಾಜಾಜಿನಗರ, ಬೆಂಗಳೂರು	50,000
2	**ಛಾಯಾಕುಮಾರಿ ಎಂ.ವಿ**, ನಂ.149, 4ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಶ್ರೀನಿವಾಸನಗರ, ಬಿಎಸ್‌ಕೆ ಮೊದಲ ಹಂತ, ಬೆಂಗಳೂರು	25,000
3	**ಲಲಿತಾ ಎನ್.ಕೆ.ಮೂರ್ತಿ**, ನಂ.92/301, ಸಾಯಿ ರೆಸಿಡೆನ್ಸಿ, ನಂದಕುಮಾರ್ ಲೇಔಟ್, ರಾಮಾಂಜನೇಯ ನಗರ, ಬೆಂಗಳೂರು	20,000
4	**ಎನ್.ಸಿ.ಬಸಮ್ಮ**, ನಂ.ಬಿ–13, ಮುಗುಳು ಮಲ್ಲಿಗೆ, ಬಾಪೂಜಿ ನಗರ, ವಿದ್ಯಾನಗರ, ದಾವಣಗೆರೆ	10,000
5	**ಕಾಂತರಾಜು ಎಸ್.ಟಿ**, ಜೆ.ಸಿ.ಎಕ್ಸ್‌ಟೆನ್ಶನ್, ಕನಕಪುರ	10,000
6	**ಮಂಗಳಾ ಕೆ.**, ನಂ.92/301, ಸಾಯಿ ರೆಸಿಡೆನ್ಸಿ, ನಂದಕುಮಾರ್ ಲೇಔಟ್, ರಾಮಾಂಜನೇಯ ನಗರ, ಬೆಂಗಳೂರು	10,000
7	**ಭಾಸ್ಕರ್ ಎಂ.ವಿ**, ನಂ.73, 3ನೇ ಮುಖ್ಯರಸ್ತೆ, 8ನೇ ಅಡ್ಡರಸ್ತೆ, ಶ್ರೇಯಸ್ ಕಾಲೋನಿ, ಜೆ.ಪಿ.ನಗರ, 7ನೇ ಹಂತ, ಬೆಂಗಳೂರು	10,000
8	**ಡಾ. ಶರತ್ ಬಾಬು ಎ.**, ಶ್ರೀ ರೇಣುಕಾ ನಿಲಯ, 7ನೇ ಅಡ್ಡರಸ್ತೆ, ಮಂಜುನಾಥ ಬಡಾವಣೆ, ಪಿ ಒ ಗೋಪಾಲ, ಶಿವಮೊಗ್ಗ	5,100
9	**ನಾಗರತ್ನ**, ನಂಜಪ್ಪನವರ ಪತ್ನಿ, ನಂ.ಡಿ.2, 18ನೇ ಬಿ ಅಡ್ಡರಸ್ತೆ, ಸಿ.ಎಂ. ಎಚ್.ರಸ್ತೆ, ಲಕ್ಷ್ಮೀಪುರ	5,001
10	**ಉಮೇಶ್ ಅಡಿಗ**, ನಂ.151, ವಿಶೇಷ್, 4ನೇ ಮುಖ್ಯರಸ್ತೆ, ವಿಠಲ್‌ನಗರ, ಹೌಸಿಂಗ್ ಕಾಲೋನಿ, ಇಸ್ರೋ ಲೇಔಟ್ ಹತ್ತಿರ, ಬೆಂಗಳೂರು	5,000
11	**ಡಾ. ಅನಂತರಾಮು**, ನಂ.31, ಸುಸ್ವಾ ನಿಲಯ, ಬೆಂಗಳೂರು ಮೈಸೂರು ರಸ್ತೆ, ಸಿದ್ಧಲಿಂಗಪುರ, ಮೈಸೂರು	5,000
12	**ಜನಾರ್ದನ ಶೆಟ್ಟಿ**	5,000
13	**ಎಸ್.ಕೆ.ಶೈಲಜಾ**, ನಂ.844, ‘ಎ’ಬ್ಲಾಕ್, 17ನೇ ಅಡ್ಡರಸ್ತೆ, ಸಹಕಾರನಗರ, ಬೆಂಗಳೂರು	5,000
14	**ಎಸ್.ಕೆ.ಹನುಮಂತಪ್ಪ ಮತ್ತು ಶ್ರೀಮತಿ ಸಾಕಮ್ಮ ಟ್ರಸ್ಟ್**, ನಂ.ಜಿ–2, ವೈಭವ್ ಮ್ಯಾನ್ಷನ್, #.2, 1ನೇ ಅಡ್ಡರಸ್ತೆ, ಜಿಎಂಆರ್ ಲೇಔಟ್, ಆರ್.ಎಂ.ವಿ. 2ನೇ ಹಂತ, ಸಂಜಯನಗರ, ಬೆಂಗಳೂರು	5,000
15	**ಶ್ರೀರಾಮ್ ಎಂ.ಎಸ್.**, ನಂ.211, ಬಿ ಬ್ಲಾಕ್, 2ನೇ ಮಹಡಿ, ಡಿಎಸ್ ಮ್ಯಾಕ್ಸ್ ಸ್ಟರ್ಲಿಂಗ್, ರಾಜಭಾವಿ ರಸ್ತೆ, ವರ್ತೂರು, ಬೆಂಗಳೂರು	3,001
16	**ಎಂ.ಆರ್.ಅನ್ನಪೂರ್ಣ**, ನಂ.20, 11ನೇ ಬ್ಲಾಕ್, ಬಿಇಎಂಎಲ್ ಲೇಔಟ್, ಶ್ರೀರಾಂಪುರ 2ನೇ ಹಂತ, ಮೈಸೂರು	2,001
17	**ಕೆ.ಎಂ.ಮಾಧ್ವ ರಾಯ**, ನಂ.201, ಡೆಕ್ಕನ್ ಎಕ್ಸ್‌ಪ್ರೆಷನ್, 11/1ಎ, 2ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಕೋಡಿಚಿಕ್ಕನಹಳ್ಳಿ, ಬೆಂಗಳೂರು	2,001
18	**ಮಂಜುನಾಥ್. ಎಚ್**, ಆಂಜನೇಯ ನಿಲಯ, ರಾಣೆಬೆನ್ನೂರು	2,000
19	**ಮಲ್ಲೇಶ್ವರಿ**, 1ನೇ ಮಹಡಿ, 2ನೇ ಮುಖ್ಯರಸ್ತೆ, 8ನೇ ಅಡ್ಡರಸ್ತೆ, ಗಣೇಶ ಬ್ಲಾಕ್, ಮಹಾಲಕ್ಷ್ಮೀ ಲೇಔಟ್, ಬೆಂಗಳೂರು	2,000
20	**ಕೆ.ಉಪೇಂದ್ರ**, ನಂ.56,7ನೇ ಮುಖ್ಯರಸ್ತೆ ಸಮೀಪ, ರಸ್ತೆ (ಎಚ್.ಟಿ.ಲೇನ್), ಸಂ.56, ಹಾವನೂರು ಎಕ್ಸ್‌ಟೆನ್ಶನ್, ಹಾವನೂರು	2,000
21	**ಪವನ್ ಕುಮಾರ್ ಬಿ.ಎಸ್**, ನಂ.3436, 1ನೇ ಜಿ ಅಡ್ಡರಸ್ತೆ, ಬಿಟಿಎಸ್ ಗ್ಯಾರೇಜ್ ಹಿಂಭಾಗ, ವಿಜಯನಗರ 2ನೇ ಹಂತ, ಬೆಂಗಳೂರು	2,000
22	**ಶಿವರಂಜಿನಿ ಮಿಥುನ್**, ಬೆಂಗಳೂರು	1,500
23	**ವಿಜಯಕುಮಾರ್ ಆರ್.**, ಈಸೂರು, ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ	1,100
24	**ಗೀತಾ**, ಬೆಂಗಳೂರು	1,000
25	**ನಿಂಗನಗೌಡ ದೇಸಾಯಿ**, ಸಹಾಯಕ ಶಿಕ್ಷಕ, ಸರ್ಕಾರಿ ಬಾಲಕಿಯರ ಪ್ರೌಢಶಾಲೆ, ಕೆಂಭಾವಿ, ಯಾದಗಿರಿ ಜಿಲ್ಲೆ	1,000
	ಇಂದಿನ ಮೊತ್ತ	1,89,704
	ಒಟ್ಟು ಮೊತ್ತ	4,68,646

* ಈಗಾಗಲೇ ಹಣ ನೀಡಿರುವ ದಾನಿಗಳು ತಮ್ಮ ಹೆಸರು, ವಿಳಾಸ, ಮೊತ್ತದ ವಿವರವನ್ನು dept.finc@printersmysore.co.in ಇ–ಮೇಲ್‌ಗೆ ಕಳುಹಿಸಲು ವಿನಂತಿ.

ದೇವೇಗೌಡ, ಸೋಮನಾಥ್‌ಗೆ ಗೌರವ ಡಾಕ್ಟರೇಟ್

ಪ್ರಜಾವಾಣಿ ವಾರ್ತೆ

ಸೋಮನಾಥ

ಬೆಂಗಳೂರು: ರಾಜ್ಯಸಭಾ ಸದಸ್ಯ ಎಚ್.ಡಿ. ದೇವೇಗೌಡ, ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ಅವರಿಗೆ ಬೆಂಗಳೂರು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡುತ್ತಿದೆ.

ಆಯ್ಕೆ ಸಮಿತಿ ಶಿಫಾರಸು ಮಾಡಿದ್ದ ಪಟ್ಟಿಗೆ ರಾಜ್ಯಪಾಲರು ಅನುಮೋದನೆ ನೀಡಿದ್ದು, 58ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪ್ರದಾನ ಮಾಡಲಾಗುತ್ತದೆ.

ಸೆ.29ರಂದು ನಿಗದಿಯಾಗಿದ್ದ ಘಟಿಕೋತ್ಸವವನ್ನು ಕರ್ನಾಟಕ ಬಂದ್ ನಿಂದಾಗಿ ಮುಂದೂಡಲಾಗಿದೆ. ಘಟಿಕೋತ್ಸವದ ದಿನವನ್ನು ಶೀಘ್ರ ಪ್ರಕಟಿಸಲಾಗುವುದು ಎಂದು ವಿಶ್ವವಿದ್ಯಾಲಯ ಹೇಳಿದೆ.

ಸಿದ್ಧವಾಗಲಿದೆ ಜಲಮೂಲಗಳ ಜಿಲ್ಲಾವಾರು ನಕ್ಷೆ

ಬೆಂಗಳೂರು: ರಾಜ್ಯದ ಜಲಮೂಲಗಳ ಸಂರಕ್ಷಣೆ ಮತ್ತು ಅಭಿವೃದ್ಧಿಗೆ ಜಲಮೂಲಗಳ ಜಿಲ್ಲಾವಾರು ನಕ್ಷೆ ಸಿದ್ಧಪಡಿಸಲು ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜು ಸೂಚಿಸಿದರು.

ಬುಧವಾರ ನಡೆದ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ಕಾವೇರಿ ನೀರು: ಸಂಸದರ ಮೌನ ಖಂಡನೀಯ

ರೈತರ ಪ್ರತಿಭಟನೆಯಲ್ಲಿ ಪಾಲ್ಗೊಂಡು ಸ್ಫಟಿಕಪುರಿ ಮಠದ ಪೀಠಾಧ್ಯಕ್ಷ ನಂಜಾವಧೂತ ಸ್ವಾಮೀಜಿ ಆಕ್ರೋಶ

ಪ್ರಜಾವಾಣಿ ವಾರ್ತೆ

ಮಂಡ್ಯ: ‘ಕಾವೇರಿ ನೀರಿನ ಕುರಿತು ರಾಜ್ಯದ 28 ಸಂಸದರು ಸದನದ ಒಳಗೆ ಮತ್ತು ಹೊರಗೆ ಒಗ್ಗಟ್ಟಿನ ಧ್ವನಿ ಎತ್ತದಿರುವುದು ಖಂಡನೀಯ’ ಎಂದು ಸ್ಫಟಿಕಪುರಿ ಮಠದ ಪೀಠಾಧ್ಯಕ್ಷ ನಂಜಾವಧೂತ ಸ್ವಾಮೀಜಿ ಬುಧವಾರ ಆಕ್ರೋಶ ವ್ಯಕ್ತಪಡಿಸಿದರು.

ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ನಗರದ ಸರ್‌ಎಂವಿ ಪ್ರತಿಮೆ ಎದುರು ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ನಡೆಸುತ್ತಿರುವ ಹೋರಾಟ ಬೆಂಬಲಿಸಿ ಅವರು ಮಾತನಾಡಿದರು.

‘ಪ್ರಧಾನಮಂತ್ರಿಗೆ ಸಮಸ್ಯೆ ಅರ್ಥವಾಗಬೇಕಾದರೆ ಸಂಸದರು ಧ್ವನಿ ಎತ್ತಬೇಕು. ಹಿಂದೊಮ್ಮೆ ಕಾವೇರಿ ವಿಚಾರದಲ್ಲಿ ಎಚ್.ಡಿ.ದೇವೇಗೌಡರು ಧರಣಿ ಕುಳಿತಾಗ ಆಗಿನ ಪ್ರಧಾನಿ ಮಧ್ಯಪ್ರವೇಶ ಮಾಡಿದ್ದರು’ ಎಂದು ಸ್ಮರಿಸಿದರು.

‘ರಾಜ್ಯಕ್ಕೆ ಆಗುತ್ತಿರುವ ಅನ್ಯಾಯಕ್ಕೆ ಐತಿಹಾಸಿಕ ಹಿನ್ನೆಲೆ ಇದೆ. ಹಲವು ಸಂದರ್ಭದಲ್ಲಿ ದಬ್ಬಾಳಿಕೆ ಮಾಡಲಾಗಿದೆ. ರಾಜ್ಯ ಸರ್ಕಾರ ದಿಟ್ಟ ರಾಜಕೀಯ ಇಚ್ಛಾಶಕ್ತಿ ಪ್ರದರ್ಶಿಸಬೇಕು. ಬಂಗಾರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ಸುಗ್ರೀವಾಜ್ಞೆ ತಂದು ನೀರು ಬಿಡದಿರಲು ನಿರ್ಧರಿಸಿದ್ದರು. ಆಗ ಅವರನ್ನು ಜೈಲಿಗೆ ಹಾಕಲಿಲ್ಲ, ನೀವೇಕೆ ಹೆದರುತ್ತೀರಿ’ ಎಂದು ಪ್ರಶ್ನಿಸಿದರು.

‘ತಮಿಳುನಾಡಿನ ವಕೀಲರು ಸಮರ್ಥವಾಗಿ ವಾದ ಮಾಡುತ್ತಿದ್ದಾರೆ. ಆದರೆ ನಮ್ಮ ವಕೀಲರಿಗೆ ಪ್ರಾಯೋಗಿಕ ಜ್ಞಾನ ಕಡಿಮೆ ಇದೆ. ವರ್ಚುವಲ್ ಆಗಿ ಪ್ರಾಧಿಕಾರದ ಸಭೆಯಲ್ಲಿ ಅವರು ಏಕೆ ಪಾಲ್ಗೊಳ್ಳಬೇಕು’ ಎಂದು ಪ್ರಶ್ನಿಸಿದರು.

ಬಿಜೆಪಿ ಮುಖಂಡರು ಕಿವಿಯಲ್ಲಿ ಚೆಂಡುಹೂವು ಇಟ್ಟುಕೊಂಡು, ಕೈಯಲ್ಲಿ ಕುಡಿಕೆ ಹಿಡಿದು ಪ್ರತಿಭಟಿಸಿದರು. ‘ಕಿವಿಗೆ ಹೂವು ಮುಡಿಸಿ ಕುಡಿಕೆಯಷ್ಟು ನೀರನ್ನೂ ಕಿತ್ಕಂಡ್ರಲ್ಲಪ್ಪೋ’ ಎಂದು ಘೋಷಣೆ ಕೂಗಿದರು.

ಹೋರಾಟಗಾರ ರೂಪೇಶ್ ರಾಜಣ್ಣ ಹಾಗೂ ಬೆಂಬಲಿಗರು ನಗರದ ಕಾವೇರಿ ನೀರಾವರಿ ನಿಗಮದ ಕಚೇರಿ ಎದುರು ಪ್ರತಿಭಟಿಸಿದರು.

ಶ್ರೀರಂಗಪಟ್ಟಣದಲ್ಲಿ ಭೂಮಿತಾಯಿ ರೈತ ಹೋರಾಟ ಸಮಿತಿ ಸದಸ್ಯರು ಜೋಡೆತ್ತುಗಳೊಂದಿಗೆ ಮೆರವಣಿಗೆ ನಡೆಸಿದರು. ಪಾಂಡವಪುರ, ಕೆ.ಆರ್. ಪೇಟೆ, ಮದ್ದೂರು, ಮಳವಳ್ಳಿಯಲ್ಲೂ ವಿವಿಧ ಸಂಘಟನೆಗಳ ಮುಖಂಡರು ಪ್ರತಿಭಟನೆ ನಡೆಸಿದರು.

ಮೈಸೂರಿನಲ್ಲಿ ಕರ್ನಾಟಕ ಪ್ರಜಾ ಪಾರ್ಟಿ ಸದಸ್ಯರು ನ್ಯಾಯಾಲಯದ ಮುಂಭಾಗ ಪತ್ರ ಚಳುವಳಿ ನಡೆಸಿದರು. ಕಾವೇರಿ ಕ್ರಿಯಾ ಸಮಿತಿ ಸದಸ್ಯರ ನಿರಂತರ ಹೋರಾಟವು ಮೂರನೇ ದಿನ ಕೋಟೆ ಆಂಜನೇಯ ದೇವಾಲಯದ ಆವರಣದಲ್ಲಿ ನಡೆಯಿತು. ಜೆಡಿಎಸ್ ಕಾರ್ಯಕರ್ತರು ಗಾಂಧಿ ವೃತ್ತದ ಬಳಿ ಖಾಲಿ ಕೊಡ ಹಿಡಿದು ಪ್ರತಿಭಟಿಸಿದರು.

ಬಿಜೆಪಿ ಕಾರ್ಯಕರ್ತ ಶಿವಕುಮಾರ್ ಆರಾಧ್ಯ ಮೈಮೇಲೆ ಸಗಣಿ ನೀರು ಸುರಿದುಕೊಂಡು ಪ್ರತಿಭಟನೆ ನಡೆಸಿದರು

ಸಗಣಿ ನೀರು ಸುರಿದುಕೊಂಡರು

ಬಿಜೆಪಿ ಕಾರ್ಯಕರ್ತ ಶಿವಕುಮಾರ್ ಆರಾಧ್ಯ, ಜಿಲ್ಲಾಧಿಕಾರಿ ಕಚೇರಿ ಎದುರು ಮೈಮೇಲೆ ಸಗಣಿ ನೀರು, ಗಂಜಲ ಸುರಿದುಕೊಂಡು ಪ್ರತಿಭಟನೆ ನಡೆಸಿದರು. ‘ತಮಿಳುನಾಡಿಗೆ ನೀರು ಬಿಟ್ಟರೆ ಜನರಿಗೆ ಸಗಣಿ ನೀರೇ ಗತಿ’ಎಂದು ಘೋಷಣೆ ಕೂಗಿದರು. ‘ನೀರು ನಿಲ್ಲಿಸಬೇಕು, ಇಲ್ಲದಿದ್ದರೆ ದಯಾಮರಣ ನೀಡಬೇಕು. ಈ ಬಾರಿ ಭತ್ತ, ಕಬ್ಬು ಬೆಳೆಯಲು ಸಾಧ್ಯವಾಗದ ಕಾರಣ ಮನೆಯ ಕೊಳಚೆ ನೀರಿನಲ್ಲಿ ಗಾಂಜಾ ಬೆಳೆದು ಬದುಕಲು ಅನುಮತಿ ನೀಡಬೇಕು’ ಎಂದು ಒತ್ತಾಯಿಸಿ ರಾಷ್ಟ್ರಪತಿಗೆ ಬರೆದ ಪತ್ರವನ್ನು ಜಿಲ್ಲಾಧಿಕಾರಿ ಕಚೇರಿಗೆ ಸಲ್ಲಿಸಿದರು.

1 ಗಂಟೆ ಪಂಪ್‌ಹೌಸ್ ಯಂತ್ರ ಸ್ಥಗಿತ

ಕಾವೇರಿ ನದಿಯಿಂದ ಮೈಸೂರಿಗೆ ಕುಡಿಯುವ ನೀರು ಪೂರೈಸುವ ಶ್ರೀರಂಗಪಟ್ಟಣ ತಾಲ್ಲೂಕು ಮೇಳಾಪುರ ಪಂಪ್‌ಹೌಸ್‌ಗೆ ಗ್ರಾಮಸ್ಥರು ಮುತ್ತಿಗೆ ಹಾಕಿ 1 ಗಂಟೆ ಕಾಲ ಯಂತ್ರಗಳನ್ನು ಸ್ಥಗಿತಗೊಳಿಸಿದ್ದರು.

ಯಜಮಾನ್ ಕರಿಯಪ್ಪ, ಜಯರಾಮೇಗೌಡ ನೇತೃತ್ವದಲ್ಲಿ 20ಕ್ಕೂ ಹೆಚ್ಚು ಮಂದಿ ಪಂಪ್‌ಹೌಸ್ ಒಳಗೆ ಪ್ರವೇಶಿಸಿ, ಸಿಬ್ಬಂದಿಯನ್ನು ಹೊರಗೆ ಕಳುಹಿಸಿ ನೀರು ಪೂರೈಸುವ ಯಂತ್ರಗಳನ್ನು ಸ್ಥಗಿತಗೊಳಿಸಿದರು.

ಸ್ಥಳಕ್ಕೆ ಬಂದ ಪೊಲೀಸರು ಪ್ರತಿಭಟನಾಕಾರರನ್ನು ಮನವೊಲಿಸಿ ಯಂತ್ರಗಳನ್ನು ಚಾಲನೆಗೊಳಿಸಿದರು. ಮೇಳಾಪುರ ಪಂಪ್‌ಹೌಸ್‌ನಿಂದ 1 ಗಂಟೆ ಕಾಲ ನೀರು ಸರಬರಾಜು ಸ್ಥಗಿತಗೊಂಡಿತ್ತು.

ಹೆದ್ದಾರಿ ಬಂದ್ ನಾಳೆ

ಮಂಡ್ಯ: ‘ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ಸೆ.29ರಂದು ನಡೆಯಲಿರುವ ರಾಜ್ಯ ಬಂದ್‌ಗೆ ರೈತಸಂಘ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದ್ದು ಅಂದು ಬೆಂಗಳೂರು– ಮೈಸೂರು ಹೆದ್ದಾರಿ ಬಂದ್ ಮಾಡಲಾಗುವುದು’ ಎಂದು ರೈತಸಂಘ ಜಿಲ್ಲಾ ಘಟಕದ ಅಧ್ಯಕ್ಷ ಕೆಂಪೂಗೌಡ ತಿಳಿಸಿದರು.

‘ಶ್ರೀರಂಗಪಟ್ಟಣ ತಾಲ್ಲೂಕಿನ ಗೌರಿಪುರ ಮತ್ತು ಮದ್ದೂರು ತಾಲ್ಲೂಕಿನ ಗೆಜ್ಜಲಗೆರೆ ಬಳಿ ಎರಡೂ ಕಡೆ ಹೆದ್ದಾರಿ ಬಂದ್ ಮಾಡಲಾಗುವುದು. ಹೆದ್ದಾರಿಯಲ್ಲಿ ಎತ್ತಿನಗಾಡಿಗಳನ್ನು ನಿಲ್ಲಿಸಿ, ಜಾನುವಾರುಗಳನ್ನು ಕಟ್ಟಿ ಹೋರಾಟ ಮಾಡಲಾಗುವುದು’ ಎಂದರು.

ಬಾಕಿ 12 ಟಿಎಂಸಿ ಅಡಿ ನೀರು ಬಿಡಲು ಸಲಹೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾವೇರಿ ಕೊಳ್ಳದ ಜಲಾಶಯಗಳಲ್ಲಿ ನೀರಿನ ಮಟ್ಟ ಸುಧಾರಿಸಿದರೆ ತಮಿಳುನಾಡಿಗೆ 12.165 ಟಿಎಂಸಿ ಅಡಿಯಷ್ಟು ಬಾಕಿ (ಬ್ಯಾಕ್‌ಲಾಗ್) ನೀರನ್ನು ಬಿಡುಗಡೆ ಮಾಡುವಂತೆ ಕಾವೇರಿ ನೀರು ನಿಯಂತ್ರಣ ಸಮಿತಿಯು ಕರ್ನಾಟಕಕ್ಕೆ ಹೇಳಿದೆ.

ಮಂಗಳವಾರ ನಡೆದ ಸಮಿತಿಯ ಸಭೆಯಲ್ಲಿ ಕರ್ನಾಟಕ ಹಾಗೂ ತಮಿಳುನಾಡಿನ ಜಲಾಶಯಗಳ ನೀರಿನ ಮಟ್ಟ, ಮಳೆ ಪ್ರಮಾಣ ಮತ್ತಿತರ ಅಂಶಗಳ ಕುರಿತು ಪರಾಮರ್ಶೆ ನಡೆಸಲಾಯಿತು. ಬಳಿಕ ಸಮಿತಿಯು ರಾಜ್ಯಕ್ಕೆ ಈ ಸಲಹೆ ನೀಡಿತು. ಜಲ-ಹವಾಮಾನ ಸ್ಥಿತಿ ಸುಧಾರಿಸಿದಾಗ, ನಂತರದ ಅವಧಿಯಲ್ಲಿ ಕರ್ನಾಟಕ ರಾಜ್ಯವು ಈ ಕೊರತೆಯನ್ನು ಉತ್ತಮಗೊಳಿಸಬಹುದು ಎಂದು ಸಮಿತಿ ಹೇಳಿದೆ. ಈ ಸಲಹೆಗೆ ಕರ್ನಾಟಕದ ತಂಡ ಆಕ್ಷೇಪ ವ್ಯಕ್ತಪಡಿಸಿದೆ.

ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ, ಸಾಮಾನ್ಯ ವರ್ಷಗಳಲ್ಲಿ ಕರ್ನಾಟಕವು ತಮಿಳುನಾಡಿಗೆ ಪ್ರತಿವರ್ಷ 177 ಟಿಎಂಸಿ ಅಡಿ ನೀರು ಬಿಡುಗಡೆ ಮಾಡಬೇಕು. ಜೂನ್‌ನಿಂದ ಸೆಪ್ಟೆಂಬರ್ 25ರ ವರೆಗೆ 117 ಟಿಎಂಸಿ ಬಿಡುಗಡೆ ಮಾಡಬೇಕಿತ್ತು. ಆದರೆ, 43 ಟಿಎಂಸಿ ಅಡಿಯಷ್ಟು ನೀರು ಬಿಟ್ಟಿದೆ. ಅಂದರೆ ನಿಗದಿಪಡಿಸಿದ್ದಕ್ಕಿಂತ 74 ಟಿಎಂಸಿ ಅಡಿಗಳಷ್ಟು ಕಡಿಮೆ ನೀರನ್ನು ಹರಿಸಿದೆ ಎಂಬುದನ್ನು ಸಮಿತಿಯು ಗಮನಿಸಿತು.

ಕರ್ನಾಟಕವು ಪ್ರತಿದಿನ 5 ಸಾವಿರ ಕ್ಯೂಸೆಕ್‌ನಷ್ಟು ನೀರನ್ನು ತಮಿಳುನಾಡಿಗೆ ಬಿಡಬೇಕು ಎಂದು ಸಮಿತಿಯು ಸೆ. 13ರಂದು ಶಿಫಾರಸು ಮಾಡಿತ್ತು. 13ರಿಂದ 25ರ ವರೆಗೆ 56,700 ಕ್ಯೂಸೆಕ್ (4.91 ಟಿಎಂಸಿ ಅಡಿ) ನೀರನ್ನು ಕರ್ನಾಟಕವು ಬಿಟ್ಟಿದೆ. ಈ ಅವಧಿಯಲ್ಲಿ 0.71 ಟಿಎಂಸಿ ಅಡಿಯಷ್ಟು ಕಡಿಮೆ ನೀರನ್ನು ಬಿಟ್ಟಿದೆ. ಮುಂದಿನ ದಿನಗಳಲ್ಲಿ ಈ ನೀರನ್ನು ಬಿಡುಗಡೆ ಮಾಡಬೇಕು ಎಂದು ಸಮಿತಿ ಹೇಳಿತು.

ಕಾವೇರಿ ಜಲಾನಯನ ಪ್ರದೇಶದ ನಾಲ್ಕು ಜಲಾಶಯಗಳಲ್ಲಿ ಈಗ 49.65 ಟಿಎಂಸಿ ಅಡಿಯಷ್ಟು ಮಾತ್ರ ನೀರಿದೆ. ಈ ವರ್ಷದ ಮುಂಗಾರಿನಲ್ಲಿ ಹಾರಂಗಿಗೆ 21.91 ಟಿಎಂಸಿ ಅಡಿ, ಹೇಮಾವತಿಗೆ 26 ಟಿಎಂಸಿ ಅಡಿ, ಕೆಆರ್‌ಎಸ್‌ಗೆ 51.34 ಟಿಎಂಸಿ ಅಡಿ ಹಾಗೂ ಕಬಿನಿಗೆ 40 ಟಿಎಂಸಿ ಅಡಿ ನೀರು ಬಂದಿದೆ. ಈ ಅವಧಿಯಲ್ಲಿ ಕೆಆರ್‌ಎಸ್ ಜಲಾಶಯದಿಂದ 28.38 ಟಿಎಂಸಿ ಅಡಿ ಹಾಗೂ ಕಬಿನಿಯಿಂದ 22.70 ಟಿಎಂಸಿ ಅಡಿ ನೀರನ್ನು ನದಿಗೆ ಬಿಡಲಾಗಿದೆ. ಇನ್ನೊಂದೆಡೆ, ಮುಂಗಾರಿನಲ್ಲಿ ಕಳೆದ ಮೂವತ್ತು ವರ್ಷಗಳಲ್ಲಿ ಈ ನಾಲ್ಕು ಜಲಾಶಯಗಳ ಸರಾಸರಿ ಒಳಹರಿವಿನ ಪ್ರಮಾಣ 247 ಟಿಎಂಸಿ ಅಡಿಯಷ್ಟು ಇದೆ. ಈ ವರ್ಷ ಒಳಹರಿವಿನ ಪ್ರಮಾಣ ಶೇ 53ರಷ್ಟು ಕಡಿಮೆ ಆಗಿದೆ ಎಂಬುದನ್ನು ಸಮಿತಿ ಗಮನಿಸಿತು.

ಈದ್ ಮಿಲಾದ್‌ನ ಮಹತ್ವ

• ಚಾಂದ್ ಬಾಷಾ ಅರಸೀಕೆರೆ

> ಇಸ್ಲಾಂನ ಪ್ರಮುಖ ಹಾಗೂ ಕೊನೆಯ ಪ್ರವಾದಿಗಳಾದ ಮಹಮ್ಮದ್ (ಸಅ) ಅವರ ಜನ್ಮದಿನಾಚರಣೆ ಇಂದು

ಪ್ರವಾದಿಗಳೆಂದೂ ತಮ್ಮ ಹುಟ್ಟುಹಬ್ಬವನ್ನು ಆಚರಿಸುವ ವಿಚಾರವಾಗಿ ಎಲ್ಲಿಯೂ ಹೇಳಿಕೊಂಡವರಲ್ಲ. ಪ್ರವಾದಿಗಳು ಮಕ್ಕಾದ ಖುರೈಶ್ ಬುಡಕಟ್ಟಿಗೆ ಸೇರಿದ, ತಂದೆ ಅಬ್ದುಲ್ಲಾ ಹಾಗೂ ತಾಯಿ ಆಮಿನಾರವರಿಗೆ ಕ್ರಿ. ಶ. 571ರಲ್ಲಿ ಜನಿಸಿದರು. ಪ್ರವಾದಿಗಳ ಜನನಕ್ಕಿಂತ ಮೊದಲೇ ಅವರ ತಂದೆ ನಿಧನರಾಗಿದ್ದರೆ, ಪ್ರವಾದಿಗಳ ಆರನೇ ವಯಸ್ಸಿಗೆ ತಾಯಿ ಆಮಿನಾ ಅಸುನೀಗುತ್ತಾರೆ. ಅನಂತರ ತಾತ ಹಾಗೂ ಚಿಕ್ಕಪ್ಪನವರ ಮುತುವರ್ಜಿಯಲ್ಲಿ ಪ್ರವಾದಿಗಳು ಕುರಿಕಾಯುವ ಕಾಯಕದಲ್ಲಿ ತಮ್ಮ ಬಾಲ್ಯವನ್ನು ಕಳೆಯುತ್ತಾರೆ.

ಮಕ್ಕಾನಗರವು ಕವಿಗಳ, ಭಾಷಣಕಾರರ ತಾಣವಾಗಿದ್ದರೂ ಪ್ರವಾದಿಗಳು ಯಾವುದೇ ಶಾಲೆಗೆ ಹೋಗಲಿಲ್ಲ; ಧಾರ್ಮಿಕ ಚರ್ಚೆಗಳಲ್ಲಿ, ಕವಿಗೋಷ್ಠಿಗಳಲ್ಲಿ ಭಾಗವಹಿಸಲೂ ಇಲ್ಲ. ಅವರು ಸದಾ ಪ್ರಕೃತಿಯೊಂದಿಗೆ ಏಕಾಂತದಲ್ಲಿ ಇರುವುದನ್ನು ಬಯಸುತ್ತಿದ್ದರು. ಪ್ರವಾದಿಗಳು ತಮ್ಮ ನಲವತ್ತನೇ ವಯಸ್ಸಿಗೆ ಬಂದಾಗ, ಧ್ಯಾನ–ಪ್ರಾರ್ಥನೆಗಾಗಿ ಮಕ್ಕಾದ ಆಚೆಗಿರುವ ಹಿರಾ ಎಂಬ ಬೆಟ್ಟದ ಗುಹೆಯನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಅಲ್ಲಿ ದೇವಚರ ಜಿಬ್ರೀಲ್ ಅವರು ಪ್ರತ್ಯಕ್ಷರಾಗಿ, ಪ್ರವಾದಿಗಳಿಗೆ ಜ್ಞಾನವನ್ನು ಬೋಧಿಸುತ್ತಾರೆ. ದೇವಚರರಿಂದ ದೊರಕಿದ ದೈವಸಂದೇಶವು ಪ್ರವಾದಿಗಳ ತುಟಿಯಲ್ಲಿ ದಿವ್ಯವಚನವಾಗಿ ಕುರ್‌ಆನ್ ಎಂಬ ಪವಿತ್ರ ಗ್ರಂಥವಾಗಿ ಅವತೀರ್ಣಗೊಳ್ಳುತ್ತದೆ.

ಪ್ರವಾದಿಗಳು ಸಂಪೂರ್ಣ ಮನುಕುಲ ಒಂದೇ ಎಂದು ಸಾರಿ, ಸಮಾನತೆಯ ಆದೇಶವಿತ್ತು, ಪರಸ್ಪರ ಪ್ರೀತಿಯೇ ಧರ್ಮದ ಸಾರವೆಂದು ಸಾರಿದ ಮಾನವತಾವಾದಿ. ಮನುಷ್ಯರು ಪರಸ್ಪರ ಸಹೋದರರಂತೆ ಬಾಳಬೇಕೆಂದು ಪ್ರೇರಣೆಯನ್ನಿತ್ತವರು. ಪ್ರವಾದಿಗಳು ತತ್ವಜ್ಞಾನಿಗಳು, ಸಮಾಜಸುಧಾರಕರು; ಅವರು ದಯಾಪರತೆ, ಔದಾರ್ಯ, ಸಂವೇದನಾಶೀಲತೆ, ದೈವಭಕ್ತಿ, ಪರಿಶ್ರಮ, ಪ್ರಾಮಾಣಿಕತೆಗಳೆಂಬ ಗುಣಗಳ ಒಡೆಯರಾಗಿದ್ದರು. ತಮ್ಮ ಶತ್ರುಗಳನ್ನೂ ಗೌರವದಿಂದ ಕಾಣುತ್ತಿದ್ದರು. ಜ್ಞಾನಾರ್ಜನೆ ಪ್ರತಿ ಮುಸ್ಲಿಂ ಸ್ತ್ರೀ–ಪುರುಷರ ಕರ್ತವ್ಯವಾಗಿದೆ ಎಂದು ತಿಳಿಸಿ ಶಿಕ್ಷಣದ ಮಹತ್ವವನ್ನು ಅವರು ಎತ್ತಿಹಿಡಿದಿದ್ದಾರೆ.

ಪ್ರವಾದಿಗಳ ನಡವಳಿಕೆಯಲ್ಲಿ ದಯಾಪರತೆ, ನಮ್ರತೆ, ನಿಃಸ್ವಾರ್ಥ, ತಾಳ್ಮೆ ಹಾಗೂ ಔದಾರ್ಯಗಳು ವ್ಯಾಪಕವಾಗಿ ಗೋಚರಿಸುತ್ತಿದ್ದವು. ಅವರು ಮಿತಭಾಷಿಗಳು; ತಾವು ಮಾತನಾಡಿದಾಗಲೆಲ್ಲ ಕೇವಲ ವಿವೇಚನೆಯ ಮಾತನ್ನೇ ಆಡುತಿದ್ದರು. ತಮ್ಮ ಪ್ರಿಯಪುತ್ರ ಇಬ್ರಾಹಿಂ ಮರಣ ಹೊಂದಿದ ದಿನ ಸೂರ್ಯಗ್ರಹಣವಾಗಿರುತ್ತದೆ. ಬಂದ ನೆಂಟರಿಷ್ಟರೆಲ್ಲ ಭಗವಂತ ತನ್ನ ವೈಯಕ್ತಿಕ ಸಂತಾಪವನ್ನು ಗ್ರಹಣದ ಮುಖೇನ ಸೂಚಿಸುತ್ತಿದ್ದಾನೆ ಎಂದು ಹೇಳುತ್ತಾರೆ. ಆಗ ಪ್ರವಾದಿಗಳು ‘ಗ್ರಹಣವೆಂಬುವುದು ಪ್ರಕೃತಿಯ ವಿದ್ಯಮಾನಗಳಲ್ಲಿ ಒಂದು; ಮನುಷ್ಯರ ಜೀವನ್ಮರಣಗಳಿಗೂ ಅದಕ್ಕೂ ಸಂಬಂಧವನ್ನು ಕಲ್ಪಿಸದಿರಿ’ ಎನ್ನುತ್ತಾರೆ.

ಮಹಿಳೆಯರಿಗೆ ಸಂಪೂರ್ಣ ಗೌರವ ಹಾಗೂ ಮುಕ್ತ ಸ್ವಾತಂತ್ರ್ಯವನ್ನು ಘೋಷಿಸಿದವರು ಪ್ರವಾದಿಗಳು. ಎಲ್ಲರೂ ತಮ್ಮ ನೆರೆಹೊರೆಯವರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಬೇಕೆಂದು ಸೂಚಿಸುತ್ತಾರೆ. ಜೀವನದ ಪ್ರತಿ ಹೊಣೆಗಾರಿಕೆಯನ್ನು ಸಂಪೂರ್ಣವಾಗಿ ನಿರ್ವಹಿಸಬೇಕು; ಏನೇ ಸಂಕಷ್ಟ ಎದುರಾದರೂ ಸತ್ಯವನ್ನೇ ನುಡಿಯಬೇಕು ಎಂದಿದ್ದಾರೆ.

ಪ್ರವಾದಿಗಳ ಜನ್ಮದಿನೋತ್ಸವ ಎಂದರೆ ವೈಮನಸ್ಯಗಳನ್ನು ದೂರವಿಟ್ಟು, ನೆರೆಹೊರೆಯವರ ಜೊತೆ ಶಾಂತಿ, ಸೌಹಾರ್ದತೆ, ಪರಸ್ಪರ ಪ್ರೀತಿಯಿಂದ ಬದುಕುವುದು; ಬಡವರು, ರೋಗಿಗಳು, ವೃದ್ಧರು, ಅನಾಥರು, ತಬ್ಬಲಿಗಳ, ಹಸಿದವರ ಸೇವೆಯೇ ಪರಮೋಚ್ಚ ಸೇವೆಯೆಂದು ನಂಬುವುದು.

ಸಮಾನಾಂತರ ಪರೀಕ್ಷಾ ವೇಳಾಪಟ್ಟಿ

ಅರಸೀಕೆರೆ: ‘ಇಡೀ ರಾಜ್ಯದಲ್ಲಿ ಪರೀಕ್ಷಾ ವೇಳಾಪಟ್ಟಿಯನ್ನು ಸಮಾನಾಂತರವಾಗಿ ತರಬೇಕು ಎಂದು ನಿರ್ಧರಿಸಲಾಗಿದೆ’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ ಬುಧವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ’ಕೋವಿಡ್–19 ನಂತರ ಪರೀಕ್ಷಾ ವೇಳಾಪಟ್ಟಿ ಏರುಪೇರಾಗಿದೆ. ಅತಿಥಿ ಉಪನ್ಯಾಸಕರ ನೇಮಕ ಹಾಗೂ ವರ್ಗಾವಣೆಯಿಂದ ಸಮಸ್ಯೆಯಾಗುತ್ತಿದೆ’ ಎಂದರು.

ಸ್ಥಿರಾಸ್ತಿ ನೋಂದಣಿ: ಒಂದೇ ದಿನ ₹ 312 ಕೋಟಿ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸ್ಥಿರಾಸ್ತಿ ನೋಂದಣಿಯಲ್ಲಿ ಭಾರಿ ಏರಿಕೆಯಾಗಿದ್ದು, ಬುಧವಾರ ಒಂದೇ ದಿನ ದಾಖಲೆಯ ₹ 312 ಕೋಟಿ ನೋಂದಣಿ ಮತ್ತು ಮುದ್ರಾಂಕ ಶುಲ್ಕ ಸಂಗ್ರಹವಾಗಿದೆ.

‘ಬುಧವಾರ ಒಟ್ಟು 26,058 ದಸ್ತಾವೇಜುಗಳನ್ನು ನೋಂದಣಿ ಮಾಡಲಾಗಿದೆ. ಇದು ದಿನವೊಂದರಲ್ಲಿ ನಡೆದ ಅತ್ಯಧಿಕ ದಸ್ತಾವೇಜುಗಳ ನೋಂದಣಿಯ ದಾಖಲೆ. ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಇತಿಹಾಸದಲ್ಲೇ ಒಂದೇ ದಿನ ಅತ್ಯಧಿಕ ಮೊತ್ತದ ಶುಲ್ಕ ಸಂಗ್ರಹವಾಗಿದೆ’ ಎಂದು ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಅಕ್ಟೋಬರ್ 1ರಿಂದ ರಾಜ್ಯದಾದ್ಯಂತ ಸ್ಥಿರಾಸ್ತಿಗಳ ಪರಿಷ್ಕೃತ ಮಾರ್ಗಸೂಚಿ ದರಗಳು ಜಾರಿಗೆ ಬರಲಿವೆ. ಮಾರ್ಗಸೂಚಿ ದರಗಳಲ್ಲಿ ಶೇಕಡ 30ರಷ್ಟು ಹೆಚ್ಚಳವಾಗಲಿದ್ದು, ಅದಕ್ಕೆ ಸಮನಾಗಿ ನೋಂದಣಿ ಮತ್ತು ಮುದ್ರಾಂಕ ಶುಲ್ಕದ ಪ್ರಮಾಣವೂ ಏರಿಕೆಯಾಗಲಿದೆ. ಈ ಕಾರಣದಿಂದ ಕೆಲವು ದಿನಗಳಿಂದ ಸ್ಥಿರಾಸ್ತಿ ನೋಂದಣಿ ಪ್ರಮಾಣದಲ್ಲಿ ಭಾರಿ ಏರಿಕೆಯಾಗಿದೆ. ಉಪ ನೋಂದಣಿ ಕಚೇರಿಗಳಲ್ಲಿ ಬೆಳಿಗ್ಗೆ 8ರಿಂದ ರಾತ್ರಿ 8ರವರೆಗೂ ದಸ್ತಾವೇಜುಗಳ ನೋಂದಣಿಗೆ ಅವಕಾಶ ಕಲ್ಪಿಸಲಾಗಿದೆ.

ಶುಕ್ರವಾರ 12,955 ದಸ್ತಾವೇಜುಗಳ ನೋಂದಣಿಯಾಗಿದ್ದು, ₹ 130.87 ಕೋಟಿ ಶುಲ್ಕ ಸಂಗ್ರಹವಾಗಿತ್ತು. ಸೋಮವಾರ 15,936 ದಸ್ತಾವೇಜುಗಳ ನೋಂದಣಿಯಿಂದ ₹ 158.28 ಕೋಟಿ ಸಂಗ್ರಹವಾಗಿತ್ತು. ಮಂಗಳವಾರ ಕೂಡ ₹ 150 ಕೋಟಿಗಿಂತ ಹೆಚ್ಚು ಶುಲ್ಕ ಸಂಗ್ರಹವಾಗಿದೆ ಎಂದು ನೋಂದಣಿ ಮತ್ತು ಮುದ್ರಾಂಕ ಇಲಾಖೆ ಅಧಿಕಾರಿಗಳು ವಿವರ ನೀಡಿದ್ದಾರೆ.

ಕರಾವಳಿ ರಕ್ಷಣಾ ಪಡೆಯಿಂದ ಸಹಾಯ

ಮೀನುಗಾರನಿಗೆ ತುರ್ತು ನೆರವು

ಪ್ರಜಾವಾಣಿ ವಾರ್ತೆ

ಮಂಗಳೂರು: ಮೀನುಗಾರಿಕೆಗೆ ತೆರಳಿದ್ದ ವೇಳೆ ಕಡಲಿನಲ್ಲಿ ಹೃದಯಾಘಾತಕ್ಕೆ ಒಳಗಾಗಿದ್ದ ಮೀನುಗಾರರೊಬ್ಬರಿಗೆ ಸಮುದ್ರದಲ್ಲೇ ಪ್ರಥಮ ಚಿಕಿತ್ಸೆ ಒದಗಿಸಿ, ತಕ್ಷಣವೇ ನವಮಂಗಳೂರು ಬಂದರಿಗೆ ಕರೆತಂದು ಹೆಚ್ಚಿನ ಚಿಕಿತ್ಸೆ ಪಡೆಯಲು ಕರಾವಳಿ ರಕ್ಷಣಾ ಪಡೆ ನೆರವಾಯಿತು.

‘ಬೇಬಿ ಮೇರಿ–4’ ಮೀನುಗಾರಿಕಾ ದೋಣಿಯಲ್ಲಿ ಕಡಲಿಗೆ ತೆರಳಿದ್ದ ವಸಂತ ಅವರು ಪಣಂಬೂರು ತೀರದಿಂದ ಸುಮಾರು 36 ನಾಟಿಕಲ್ ಮೈಲುಗಳಷ್ಟು ದೂರದಲ್ಲಿ ಕಡಲಿನಲ್ಲಿದ್ದರು. ಮಂಗಳವಾರ ಮಧ್ಯಾಹ್ನ 3.20ರ ಸುಮಾರಿಗೆ ಅವರಿಗೆ ಎದೆ ಬೇನೆ ಹಾಗೂ ಉಸಿರಾಟದ ತೀವ್ರ ಸಮಸ್ಯೆ ಕಾಣಿಸಿಕೊಂಡಿತ್ತು. ಇದನ್ನು ಗಮನಿಸಿದ ಇನ್ನೊಂದು ಮೀನುಗಾರಿಕಾ ದೋಣಿಯ (ಸುಲ್ತಾನ್ಯ) ಮೀನುಗಾರರು ಈ ಬಗ್ಗೆ ಕರ್ನಾಟಕದ ಕರಾವಳಿ ರಕ್ಷಣಾ ಪಡೆಯ ಜಿಲ್ಲಾ ಕೇಂದ್ರಕ್ಕೆ ಮಾಹಿತಿ ನೀಡಿ ತುರ್ತು ನೆರವು ಕೋರಿದ್ದರು.

ಇದಕ್ಕೆ ಸ್ಪಂದಿಸಿದ ಕರಾವಳಿ ರಕ್ಷಣಾ ಪಡೆಯು ಸಾಗರ ರಕ್ಷಣಾ ಉಪಕೇಂದ್ರವನ್ನು (ಎಂಆರ್‌ಎಸ್‌ಸಿ) ಸನ್ನದ್ಧಗೊಳಿಸಿ, ತನ್ನೆಲ್ಲ ನೌಕೆಗಳಿಗೆ ತುರ್ತು ರಕ್ಷಣೆಯ ಅಗತ್ಯದ ಕುರಿತ ಸಂದೇಶ ರವಾನಿಸಿತು. ಈ ದೋಣಿಗೆ ಸಮೀಪದಲ್ಲಿದ್ದ ಕರಾವಳಿ ರಕ್ಷಣಾ ತಡೆಯ ಇಂಟರ್‌ಸೆಪ್ಟರ್ ದೋಣಿ ಸಿ- 446, ಹೃದಯಾಘಾತದ ಲಕ್ಷಣಗಳನ್ನು ಎದುರಿಸುತ್ತಿದ್ದ ಮೀನುಗಾರ ವಸಂತ ಅವರಿದ್ದ ದೋಣಿಯತ್ತ ಧಾವಿಸಿತು. ಇಂಟರ್‌ಸೆಪ್ಟರ್ ದೋಣಿಯ ಸಿಬ್ಬಂದಿ ವಸಂತ ಅವರ ಆರೋಗ್ಯ ತಪಾಸಣೆ ನಡೆಸಿ, ಪ್ರಥಮ ಚಿಕಿತ್ಸೆ ಒದಗಿಸಿದರು. ಹೆಚ್ಚಿನ ಚಿಕಿತ್ಸೆ ಸಲುವಾಗಿ ಆ ಮೀನುಗಾರರನ್ನು ಅದೇ ದೋಣಿಯಲ್ಲಿ ಪಣಂಬೂರಿನ ನವಮಂಗಳೂರು ಬಂದರಿನ ದಕ್ಕೆಗೆ ಕರೆತಂದರು.

ಮೀನುಗಾರಿಕಾ ಇಲಾಖೆ ಹಾಗೂ ನವಮಂಗಳೂರು ಬಂದರು ಪ್ರಾಧಿಕಾರದ ನೆರವಿನಿಂದ ಬಂದರಿನ ಜೆಟ್ಟಿಯಲ್ಲಿ ವಸಂತ ಅವರಿಗೆ ತುರ್ತು ವೈದ್ಯಕೀಯ ಸೇವೆಗಳನ್ನು ಒದಗಿಸಲಾಯಿತು. ಬಳಿಕ ಮೀನುಗಾರಿಕಾ ದೋಣಿ ಮಾಲೀಕರನ್ನು ಸಂಪರ್ಕಿಸಿದ ಕರಾವಳಿ ರಕ್ಷಣಾ ಪಡೆಯ ಅಧಿಕಾರಿಗಳು ಹೃದಯಾಘಾತಕ್ಕ ಒಳಗಾದ ವ್ಯಕ್ತಿಯನ್ನು ನಗರದ ಬೆಂದೂರುವೆಲ್‌ನ ಎಸ್‌ಸಿಎಸ್ ಆಸ್ಪತ್ರೆಗೆ ರವಾನಿಸಿ ಹೆಚ್ಚಿನ ವೈದ್ಯಕೀಯ ನೆರವು ಒದಗಿಸುವುದಕ್ಕೆ ವ್ಯವಸ್ಥೆ ಕಲ್ಪಿಸಿತು.

ಹೃದಯಾಘಾತಕ್ಕೆ ಒಳಗಾಗಿ ಸಮುದ್ರದಲ್ಲಿ ಅಪಾಯಕ್ಕೆ ಸಿಲುಕಿದ್ದ ಮೀನುಗಾರರೊಬ್ಬರನ್ನು ಕರಾವಳಿ ರಕ್ಷಣಾ ಪಡೆ ಸಿಬ್ಬಂದಿ ಇಂಟರ್‌ಸೆಪ್ಟರ್ ದೋಣಿ ಸಿ–446ರ ಮೂಲಕ ರಕ್ಷಿಸಿ ಕರೆತಂದರು

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ರೇಬಿಸ್ ನಿರ್ಮೂಲನೆಗೆ ಬೇಕು ಇಚ್ಛಾಶಕ್ತಿ
'ಇಂಡಿಯಾ' ಕೂಟದಲ್ಲಿ ಅಸಮಾಧಾನ 6
ವಿದ್ಯಾರ್ಥಿಗಳ ಹತ್ಯೆ: ತನಿಖೆ ಆರಂಭಿಸಿದ ಸಿಬಿಐ 6

ಈದ್ ಮಿಲಾದ್ ಶುಭಾಶಯಗಳು

ಸೆನ್ಸೆಕ್ಸ್	ನಿಫ್ಟಿ	₹/$
66,118 ▲	19,716 ▲	83.22 ▲

ಬೆಳಿಗ್ಗೆ 6ರಿಂದ ಸಂಜೆ 6ರವರೆಗೆ • 29ರ ಹೋರಾಟಕ್ಕೆ ನೂರಕ್ಕೂ ಹೆಚ್ಚು ಸಂಘಟನೆಗಳ ಬೆಂಬಲ

ಕಾವೇರಿಗಾಗಿ ರಾಜ್ಯ ಬಂದ್ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಮಿಳುನಾಡಿಗೆ ಕಾವೇರಿ ನೀರು ಹರಿಸಬಾರದು' ಎಂದು ಆಗ್ರಹಿಸಿ ಮಂಗಳವಾರ ಬೆಂಗಳೂರು ಬಂದ್ ನಡೆದ ಬೆನ್ನಲ್ಲೇ, ಮತ್ತು ಕೆಲವು ಸಂಘಟನೆಗಳು ಶುಕ್ರವಾರ(ಸೆ.29) ಕರ್ನಾಟಕ ಬಂದ್‌ಗೆ ಕರೆ ನೀಡಿವೆ.

ಕನ್ನಡ ಒಕ್ಕೂಟದ ಅಧ್ಯಕ್ಷ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಕರೆ ನೀಡಿರುವ ಬಂದ್‌ಗೆ ನೂರಕ್ಕೂ ಹೆಚ್ಚು ಸಂಘಟನೆಗಳು ಬೆಂಬಲ ವ್ಯಕ್ತಪಡಿಸಿ-ವೆ. ಕಾವೇರಿ ನೀರು ಅವಲಂಬಿಸಿರುವ ಬೆಂಗಳೂರು, ಮೈಸೂರು, ರಾಮನಗರ, ಚಾಮರಾಜನಗರ, ಮಂಡ್ಯ ಜಿಲ್ಲೆಗಳ ನಗರ ಪ್ರದೇಶಗಳಲ್ಲಿ ಬಂದ್‌ಗೆ ಬೆಂಬಲ ಹೆಚ್ಚಾಗಿದ್ದು, ವ್ಯಾಪಾರ-ವಹಿವಾಟು ಸ್ಥಗಿತಗೊಳ್ಳುವ ಸಾಧ್ಯತೆ ಇದೆ.

ರಾಜ್‌ಕುಮಾರ್ ಅಭಿಮಾನಿಗಳ ಸಂಘ, ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್‌ಕುಮಾರ್ ಶೆಟ್ಟಿ ಹಾಗೂ ಶಿವರಾಮೇಗೌಡ ಬಣ, ಕನ್ನಡ ಸೇನೆ, ಕನ್ನಡ ಜಾಗೃತಿ ವೇದಿಕೆ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಬಂದ್‌ಗೆ ಬೆಂಬಲ ಘೋಷಿಸಿವೆ. ಚಿತ್ರರಂಗದವರು ರ‍್ಯಾಲಿಯಲ್ಲಿ ಪಾಲ್ಗೊಳ್ಳುವಂತೆ ಸಂಘಟನೆಗಳು ಮನವಿ ಮಾಡಿವೆ. ಜಿಲ್ಲಾ ಕೇಂದ್ರಗಳಲ್ಲೂ ದೊಡ್ಡಮಟ್ಟ-ದಲ್ಲಿ ಪ್ರತಿಭಟನಾ ರ‍್ಯಾಲಿ ನಡೆಸಲು ಸಂಘಟನೆಗಳು ತೀರ್ಮಾನಿಸಿವೆ.

ಓಲಾ-ಉಬರ್ ಚಾಲಕರ ಸಂಘವು ಬೆಂಬಲ ನೀಡಿದ್ದು ಬೆಂಗಳೂರಿನಲ್ಲಿ ಅವುಗಳ ಸಂಚಾರ ಇರುವುದಿಲ್ಲ. ಬಿಎಂಟಿಸಿ ಹಾಗೂ ಕೆಎಸ್‌ಆರ್‌ಟಿಸಿ ಬಸ್ ಸಂಚಾರ ಯಥಾಪ್ರಕಾರ ಇರಲಿದೆ. ಮಂಗಳವಾರ ಬಂದ್‌ಗೆ ಬೆಂಬಲ ನೀಡಿದ್ದ ಸಂಘಟನೆಗಳು ಹೊರತುಪಡಿಸಿ ಬೇರೆಲ್ಲಾ ಸಂಘಟನೆಗಳು ಪ್ರತಿಭಟನೆ ನಡೆಸಲು ಮುಂದಾಗಿವೆ.

'ರಾಜ್ಯದಲ್ಲಿ ಬರ ಪರಿಸ್ಥಿತಿಯಿದೆ. ಕಾವೇರಿಕೊಳ್ಳದ ಜಿಲ್ಲೆಗಳಲ್ಲಿ ನೀರು ಸಿಗದೆ ಬೆಳೆಗಳು ಒಣಗುತ್ತಿವೆ. ಬೆಂಗಳೂರಿನ ಜನರಿಗೂ ನೀರಿಲ್ಲದ ಸ್ಥಿತಿ ಬರಲಿದೆ. ಇಂತಹ ಸಂದರ್ಭದಲ್ಲಿ ತಮಿಳುನಾಡಿಗೆ ನೀರು ಹರಿಸಲಾಗು-ತ್ತಿದೆ. ರಾಜ್ಯದ ಸಂಸದರು ಕಾವೇರಿ ವಿಚಾರವಾಗಿ ಸಂಸತ್‌ನಲ್ಲಿ ಚರ್ಚಿ-ಸುತ್ತಿಲ್ಲ. ಸಂಸದರು ರಾಜೀನಾಮೆ ನೀಡಬೇಕು' ಎಂದು ಒಕ್ಕೂಟದ ಅಧ್ಯಕ್ಷ ವಾಟಾಳ್ ನಾಗರಾಜ್ ಆಗ್ರಹಿಸಿದರು.

'ಬಂದ್ ಶಾಂತಿಯುತವಾಗಿ ನಡೆಯಲಿದೆ. ಬಂದ್ ವಾಪಸ್ ಪಡೆಯುವ ಪ್ರಶ್ನೆಯೇ ಇಲ್ಲ' ಎಂದು ಅವರು ಹೇಳಿದರು.

ಮಲ್ಲೇಶ್ವರ, ಶೇಷಾದ್ರಿಪುರ, ಮೆಜೆಸ್ಟಿಕ್ ಭಾಗದಲ್ಲಿ ಬುಧವಾರ ತೆರೆದ ವಾಹನದಲ್ಲಿ ಸಂಚರಿಸಿದ ವಾಟಾಳ್ ನಾಗರಾಜ್ ಅವರು ಬಂದ್‌ಗೆ ಬೆಂಬಲ ಸೂಚಿಸುವಂತೆ ಕೋರಿದರು.

5ನೇ ಪುಟ ನೋಡಿ

ಏನು ಇರುತ್ತದೆ??
- ಆಸ್ಪತ್ರೆಗಳು
- ಔಷಧಿ ಮಳಿಗೆಗಳು
- ಆಂಬುಲೆನ್ಸ್ ಸಂಚಾರ
- ಬ್ಯಾಂಕ್‌ಗಳು
- ದಿನಪತ್ರಿಕೆಗಳು
- ಮೆಟ್ರೊ, ರೈಲು

ಅನುಮಾನ
- ಬಿಎಂಟಿಸಿ ಬಸ್
- ಕೆಎಸ್‌ಆರ್‌ಟಿಸಿ ಬಸ್
- ಸರ್ಕಾರಿ ಕಚೇರಿಗಳು
- ಐಟಿ-ಬಿಟಿ ಕಂಪನಿಗಳು
- ಹೋಟೆಲ್‌ಗಳು

ಏನು ಇರುವುದಿಲ್ಲ?
- ಆಟೊ
- ಮ್ಯಾಕ್ಸಿ ಕ್ಯಾಬ್
- ಖಾಸಗಿ ಬಸ್‌ಗಳು
- ಶಾಲಾ ವಾಹನಗಳು
- ಜಿಲ್ಲಾ ಕೇಂದ್ರದ ಪ್ರಮುಖ ಮಾರುಕಟ್ಟೆ
- ಕೆಲ ಖಾಸಗಿ ಶಾಲೆಗಳು
- ಗೂಡ್ಸ್ ಸಾಗಣೆ ವಾಹನಗಳು
- ಆಭರಣ ಮಳಿಗೆಗಳು
- ಓಲಾ–ಉಬರ್ ಕ್ಯಾಬ್
- ಚಿತ್ರಮಂದಿರಗಳು
- ಕೈಗಾರಿಕೆಗಳು

ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನೆ

ಸಿದ್ದರಾಮಯ್ಯ

ಮಹದೇಶ್ವರ ಬೆಟ್ಟ (ಚಾಮರಾಜನಗರ ಜಿಲ್ಲೆ): 'ತಮಿಳುನಾಡಿಗೆ 18 ದಿನಗಳ ಕಾಲ 3 ಸಾವಿರ ಕ್ಯೂಸೆಕ್ ನೀರು ಹರಿಸಬೇಕು ಎಂಬ ಕಾವೇರಿ ನೀರು ನಿಯಂತ್ರಣ ಸಮಿತಿ ಶಿಫಾರಸಿನ ವಿರುದ್ಧ ಸುಪ್ರೀಂಕೋರ್ಟ್‌ನಲ್ಲಿ ಕಾನೂನು ಹೋರಾಟ ನಡೆಸಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, 'ಸದ್ಯ ನಮ್ಮ ಬಳಿ ನೀರು ಇಲ್ಲ, ಈಗಾಗಲೇ ಕಾನೂನು ತಜ್ಞರ ಸಲಹೆ ಪಡೆದಿದ್ದೇವೆ. ನೀರಿನ ವಿಚಾರದಲ್ಲಿ ಯಾವುದೇ ರಾಜಿಯಿಲ್ಲ' ಎಂದರು.

'ರಾಜ್ಯದಲ್ಲಿ ಮಳೆ ಚೆನ್ನಾಗಿ ಆಗಲಿ. ರಾಜ್ಯದ ಸಂಕಷ್ಟ ಪರಿಸ್ಥಿತಿ ನಿವಾರಣೆಯಾಗಲಿ, ರೈತರಿಗೆ ಒಳ್ಳೆಯದಾಗಲಿ ಎಂದು ಮಾದಪ್ಪನಲ್ಲಿ ಕೇಳಿಕೊಂಡಿದ್ದೇನೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಹನಿ ನೀರೂ ಬಿಡುವುದಿಲ್ಲ'

ಶಿವಕುಮಾರ್

ಬೆಂಗಳೂರು: 'ತಮಿಳುನಾಡಿಗೆ ನಿತ್ಯ 3,000 ಕ್ಯೂಸೆಕ್ ನೀರು ಹರಿಸಬೇಕೆಂಬ ಆದೇಶವಿದೆ. ಈ ಪೈಕಿ ಒಂದು ಹನಿ ನೀರನ್ನೂ ಕೃಷ್ಣರಾಜ ಸಾಗರ (ಕೆಆರ್‌ಎಸ್) ಜಲಾಶಯದಿಂದ ಬಿಡುವುದಿಲ್ಲ' ಎಂದು ಜಲ ಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, '2,000 ಕ್ಯೂಸೆಕ್ ನೀರು ನಿತ್ಯವೂ ಹರಿದುಹೋಗುತ್ತಲೇ ಇರುತ್ತದೆ. ಬಾಕಿ ಇರುವ 1,000 ಕ್ಯೂಸೆಕ್ ನೀರು ಹರಿಸಲು ಪರ್ಯಾಯ ವ್ಯವಸ್ಥೆ ಮಾಡುತ್ತೇವೆ. ರೈತರ ಹಿತರಕ್ಷಣೆ ವಿಚಾರದಲ್ಲಿ ನಮ್ಮ ಸರ್ಕಾರ ಯಾವುದೇ ರಾಜಿಗೂ ಸಿದ್ಧವಿಲ್ಲ' ಎಂದರು.

'ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ತರಬೇಕು ಎಂದು ವಿರೋಧ ಪಕ್ಷದವರು ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ. ಇಲ್ಲಿ ಮನವಿ ಕೊಟ್ಟರೆ ಏನು ಪ್ರಯೋಜನ? ಅವರು ದೆಹಲಿಯಲ್ಲಿ ಹೋಗಿ ಹೋರಾಟ ಮಾಡಲಿ' ಎಂದು ಹೇಳಿದರು.

ಶೂಟಿಂಗ್‌ನಲ್ಲಿ ಬಂಪರ್ ಪದಕ

ಭಾರತದ ಶೂಟರ್‌ಗಳು ಚೀನಾದ ಹಾಂಗ್‌ಝೌನಲ್ಲಿ ನಡೆಯುತ್ತಿರುವ ಏಷ್ಯನ್ ಕ್ರೀಡಾಕೂಟದಲ್ಲಿ ಬುಧವಾರ ಎರಡು ಚಿನ್ನ ಸೇರಿದಂತೆ ಏಳು ಪದಕಗಳನ್ನು ಗೆದ್ದು ಸಂಭ್ರಮಿಸಿದರು.

ಸಿಫ್ಟ್ ಕೌರ್ ಸಮ್ರಾ
ಮಹಿಳೆಯರ 50 ಮೀ. ರೈಫಲ್ 3 ಪೊಸಿಷನ್
ಪಾಯಿಂಟ್ಸ್: 469.6 (ವಿಶ್ವದಾಖಲೆ)

19th Asian Games Hangzhou 2022

ಚಿನ್ನ

ಮಹಿಳೆಯರ 25 ಮೀ. ಪಿಸ್ತೂಲ್ ತಂಡ
ಇಶಾ ಸಿಂಗ್, ರಿದಂ ಸಾಂಗ್ವಾನ್ ಮತ್ತು ಮನು ಭಾಕರ್
ಪಾಯಿಂಟ್ಸ್: 1,759

ಬೆಳ್ಳಿ
- ಅನಂತ್ ಜೀತ್ ಸಿಂಗ್ — ಪುರುಷರ ಸ್ಕೀಟ್ ವಿಭಾಗ
- ಇಶಾ ಸಿಂಗ್ — ಮಹಿಳೆಯರ 25 ಮೀ. ಪಿಸ್ತೂಲ್ ವಿಭಾಗ
- ಮಹಿಳೆಯರ 50 ಮೀ. ರೈಫಲ್ 3 ಪೊಸಿಷನ್ ತಂಡ — ಸಿಫ್ಟ್ ಕೌರ್ ಸಮ್ರಾ, ಆಶಿ ಚೋಕ್ಸಿ ಮತ್ತು ಮಾನಿನಿ ಕೌಶಿಕ್

ಕಂಚು
- ಆಶಿ ಚೋಕ್ಸಿ — ಮಹಿಳೆಯರ 50 ಮೀ. ರೈಫಲ್ 3 ಪೊಸಿಷನ್
- ಪುರುಷರ ಸ್ಕೀಟ್ ತಂಡ — ಅನಂತ್ ಜೀತ್ ಸಿಂಗ್, ಅಂಗದ್ ವೀರ್ ಸಿಂಗ್ ಬಾಜ್ವಾ ಮತ್ತು ಗುರುಜ್ಯೋತ್ ಸಿಂಗ್

ಸೇಲಿಂಗ್: ಡಿಂಘಿ ಐಎಲ್‌ಸಿಎ 7 ಪುರುಷರ ವಿಭಾಗದಲ್ಲಿ ವಿಷ್ಣು ಸರವಣನ್‌ಗೆ ಕಂಚು

ಪುಟ 11

'ಭಾರತ–ಚೀನಾ ಸಂಬಂಧ ಅಸಹಜ'

ಎಸ್ ಜೈಶಂಕರ್

ನ್ಯೂಯಾರ್ಕ್ (ಪಿಟಿಐ): '2020ರ ಗಾಲ್ವಾನ್ ಘರ್ಷಣೆಯ ನಂತರ ಭಾರತ–ಚೀನಾ ಸಂಬಂಧ ಅಸಹಜ ಸ್ಥಿತಿಯಲ್ಲಿದೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಹೇಳಿದ್ದಾರೆ.

ನ್ಯೂಯಾರ್ಕ್‌ನಲ್ಲಿ ಬುಧವಾರ ನಡೆದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ವಿಶ್ವದ ಎರಡು ಅತಿ ದೊಡ್ಡ ರಾಷ್ಟ್ರಗಳ ನಡುವೆ ಉದ್ಭವಿಸುವ ಉದ್ವಿಗ್ನತೆಯು ಜಗತ್ತಿನ ಎಲ್ಲ ರಾಷ್ಟ್ರಗಳ ಮೇಲೆಯೂ ಪರಿಣಾಮ ಬೀರುತ್ತದೆ' ಎಂದು ಹೇಳಿದ್ದಾರೆ.

'ಚೀನಾದೊಂದಿಗೆ ವ್ಯವಹರಿಸುವುದು ಸುಲಭವಲ್ಲ. ಅದು ತನ್ನ ನಡೆ ಬಗ್ಗೆ ಏನೂ ಹೇಳುವುದಿಲ್ಲ, ಏಕೆ ಹಾಗೆ ನಡೆದುಕೊಳ್ಳುತ್ತದೆ ಎಂಬ ಬಗ್ಗೆಯೂ ತಿಳಿಸುವುದಿಲ್ಲ. ಚೀನಾದ ನಡೆಯ ಬಗ್ಗೆ ನೀವು ಊಹಿಸಬೇಕಷ್ಟೆ. ಆದರೆ, ಕೊನೆಗೆ ದ್ವಂದ್ವವೇ ಕಂಡುಬರುತ್ತದೆ' ಎಂದು ಜೈಶಂಕರ್ ವಿಶ್ಲೇಷಿಸಿದ್ದಾರೆ.

'ಒಪ್ಪಂದಗಳನ್ನು ಉಲ್ಲಂಘಿಸಿರುವ ದೇಶದೊಂದಿಗೆ ಸಹಜವಾದ ಬಾಂಧವ್ಯ ಹೊಂದುವುದು ಕಷ್ಟ. ಹೀಗಾಗಿಯೇ ಕಳೆದ ಮೂರು ವರ್ಷಗಳ ವಿದ್ಯ-ಮಾನಗಳನ್ನು ಗಮನಿಸಿದರೆ, ಭಾರತ ಮತ್ತು ಚೀನಾ ಸಂಬಂಧ ಅಸಹಜ ಸ್ಥಿತಿಯಲ್ಲಿರುವುದು ಗೊತ್ತಾಗುತ್ತದೆ' ಎಂದು ಹೇಳಿದ್ದಾರೆ.

'ಭಾರತ ಮತ್ತು ಚೀನಾ ನಡುವೆ ಒಡಕು ಉಂಟಾಗಿದೆ. ಎರಡೂ ದೇಶಗಳ ನಡುವೆ ಮಿಲಿಟರಿ ಮಟ್ಟದಲ್ಲಿ ಸಂಘರ್ಷವನ್ನು ಕಾಣಬಹುದು. ಈ ಎಲ್ಲ ಕಾರಣ ಗಳಿಂದಾಗಿ ಭಾರತದಲ್ಲಿ ಚೀನಾ ಕುರಿತಂತೆ ಗ್ರಹಿಕೆಯೇ ಬದಲಾಗಿದೆ' ಎಂದು ವಿವರಿಸಿದ್ದಾರೆ.

ನನ್ನ ಹೆಸರಲ್ಲಿ ಮನೆ ಇಲ್ಲ: ಮೋದಿ

ಅಹಮದಾಬಾದ್: 'ನನ್ನ ಹೆಸರಿನಲ್ಲಿ ಮನೆಯಿಲ್ಲ. ಆದರೆ, ನಮ್ಮ ಸರ್ಕಾರ ದೇಶದ ಲಕ್ಷಾಂತರ ಮಹಿಳೆಯರನ್ನು ಮನೆ ಮಾಲೀಕರನ್ನಾಗಿ ಮಾಡಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು. 6

ಒಳ ಪುಟಗಳು
ಆಸ್ಕರ್‌ಗೆ '2018- ಎವರಿ ಒನ್ ಇಸ್ ಎ ಹೀರೊ' ಪ್ರವೇಶ 6
53 ಸ್ಥಳದಲ್ಲಿ ಎನ್‌ಐಎ ದಾಳಿ 7
'ರಾಮ ಮಂದಿರ ಆಂದೋಲನದ ಇತಿಹಾಸ ಪ್ರದರ್ಶನ' 10
ಇ-ಆಡಳಿತ ಸವಾಲಿಗೆ 'ಬ್ಲಾಕ್ ಚೈನ್' 10

ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ವಿರೋಧಿಸಿ ಬಿಜೆಪಿ ಮತ್ತು ಜೆಡಿಎಸ್ ನಾಯಕರು, ಶಾಸಕರು ವಿಧಾನಸೌಧದ ಆವರಣದಲ್ಲಿರುವ ಮಹಾತ್ಮ ಗಾಂಧಿ ಪ್ರತಿಮೆ ಎದುರು ಬುಧವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಚಿನಕುರಳಿ
ಪ್ರಕಾಶ್ ಶೆಟ್ಟಿ

ಕಾವೇರಿ: ಗಾಂಧಿ ಪ್ರತಿಮೆ ಎದುರು ಧರಣಿ

ಬಿಜೆಪಿ–ಜೆಡಿಎಸ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ ನದಿಯಿಂದ ತಮಿಳುನಾಡಿಗೆ ನೀರು ಹರಿಸುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಮತ್ತು ಜೆಡಿಎಸ್ ಜಂಟಿಯಾಗಿ ವಿಧಾನಸೌಧದ ಆವರಣದಲ್ಲಿರುವ ಮಹಾತ್ಮ ಗಾಂಧಿ ಪ್ರತಿಮೆ ಎದುರು ಬುಧವಾರ ಪ್ರತಿಭಟನೆ ನಡೆಸಿದವು.

ಎರಡೂ ಪಕ್ಷಗಳ ಶಾಸಕರು, ಸಂಸದರು, ಮಾಜಿ ಶಾಸಕರು ಮತ್ತು ಮುಖಂಡರು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು. ಎರಡೂ ಪಕ್ಷಗಳ ಬಾವುಟಗಳನ್ನು ಹಿಡಿದು ಪ್ರತಿಭಟನಾನಿರತರು ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕಿದರು.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಸಂಸದ ಡಿ.ವಿ. ಸದಾನಂದ ಗೌಡ, ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಯಡಿಯೂರಪ್ಪ, 'ಕಾಂಗ್ರೆಸ್ ಪಕ್ಷವು ಡಿಎಂಕೆ ಜತೆಗಿನ ಹೊಂದಾಣಿಕೆ ರಾಜ-ಕಾರಣಕ್ಕಾಗಿ ರಾಜ್ಯದ ಜನರಿಗೆ ದ್ರೋಹ ಬಗೆಯುತ್ತಿದೆ' ಎಂದರು.

5ನೇ ಪುಟ ನೋಡಿ

ಹೊರೆ ತಪ್ಪಿಸಲು ಚಿಕ್ಕಿ, ಬಾಳೆಹಣ್ಣು ನೀಡಲು ಕೋರಿಕೆ

ಪಾಲಕರ ಜೇಬಿಗೆ ಮೊಟ್ಟೆ ದರದ 'ಭಾರ'

• ರಾಜೇಂದ್ರ ಹೆಗಡೆ

ಶಿರಸಿ: ಅಕ್ಷರ ದಾಸೋಹ ಯೋಜನೆಯಡಿ ಶಾಲಾ ವಿದ್ಯಾರ್ಥಿ-ಗಳಿಗೆ ಬಿಸಿಯೂಟದ ಜತೆ ವಿತರಿಸುವ ಮೊಟ್ಟೆಯ ಹೆಚ್ಚುವರಿ ಮೊತ್ತ ಪಾಲಕರ ಹೆಗಲೇರಿದೆ. ಇದು ಮೊಟ್ಟೆ ಖರೀದಿ ಮತ್ತು ವಿತರಣೆ ಮೇಲೆ ಪರಿಣಾಮ ಬೀರಿದೆ.

ಮಾರುಕಟ್ಟೆಯಲ್ಲಿನ ನಿಗದಿತ ಮೊಟ್ಟೆ ದರಕ್ಕಿಂತ ಸರ್ಕಾರದಿಂದ ಕಡಿಮೆ ಅನುದಾನ ಬರುತ್ತಿದ್ದು, ಖರೀದಿಯ 'ಹೆಚ್ಚುವರಿ ಹೊರೆ'ಯನ್ನು ಶಿಕ್ಷಕರು, ಪಾಲಕರ ಮೇಲೆ ಹಾಕುತ್ತಿದ್ದಾರೆ.

ಶಿರಸಿ ಶೈಕ್ಷಣಿಕ ಜಿಲ್ಲೆಯಲ್ಲಿ 1.08 ಲಕ್ಷ ಮಕ್ಕಳಿದ್ದು, ಅವರಲ್ಲಿ 72 ಸಾವಿರ ಮಕ್ಕಳು ಮೊಟ್ಟೆ ತಿನ್ನುತ್ತಾರೆ. ಶಾಲೆಗಳಲ್ಲಿ ವಾರಕ್ಕೆ ಎರಡು ದಿನ ಮೊಟ್ಟೆ ವಿತರಿಸಲಾಗುತ್ತಿದ್ದು, ಇದಕ್ಕೆ ತಿಂಗಳಿಗೆ ₹46 ಲಕ್ಷ ವೆಚ್ಚವಾಗುತ್ತದೆ. ಸರ್ಕಾರವು ₹34 ಲಕ್ಷ ಅನುದಾನ ನೀಡುತ್ತದೆ. ಮಾರುಕಟ್ಟೆ ಮೌಲ್ಯದ ಅನುಸಾರ ಹೆಚ್ಚುವರಿ ಹಣ ಪಾವತಿಸಿ, ಶಿಕ್ಷಕರು ಮೊಟ್ಟೆ ಖರೀದಿಸುತ್ತಾರೆ.

'ಚಿಲ್ಲರೆ ಅಂಗಡಿಗಳಲ್ಲಿ ಒಂದು ಮೊಟ್ಟೆ ದರ ₹ 7 ರಿಂದ ₹ 8 ಇದೆ. ಆದರೆ, ಸರ್ಕಾರವು ಮೊಟ್ಟೆ ಖರೀದಿಗೆ ₹5, ಸಾಗಣೆ ಮತ್ತು ಬೇಯಿಸಲು ₹1 ಅನುದಾನ ಕೊಡುತ್ತದೆ. ತಲಾ ಒಂದು ಮೊಟ್ಟೆಗೆ ನಾವೇ ₹ 2 ಹೆಚ್ಚುವರಿ ಪಾವತಿಸುತ್ತೇವೆ. ಆದರೆ, ಅದನ್ನು ಸರ್ಕಾರ ನಮಗೆ ಮರುಪಾವತಿ ಸಲ್ಲ. ಹೆಚ್ಚುವರಿ ಹಣವನ್ನು ದಾನಿಗಳು ಇಲ್ಲವೇ ಪಾಲಕರಿಂದ ಪಡೆಯಲು ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳು ಹೇಳುತ್ತಾರೆ' ಎಂದು ಶಿಕ್ಷಕರು ತಿಳಿಸಿದರು.

'ನಾವೇ ಎಷ್ಟು ದಿನ ಸ್ವಂತ ಹಣ ಖರ್ಚು ಮಾಡಲು ಸಾಧ್ಯ? ಸರ್ಕಾರ ಬೆಲೆ ಏರಿಕೆಗೆ ತಕ್ಕಂತೆ ಅನುದಾನ ಹೆಚ್ಚಿಸಿದರೆ, ಶಿಕ್ಷಕರು ಅಥವಾ ಪಾಲಕರ ಮೇಲಿನ ಹೊರೆ ತಪ್ಪಿಸಬಹುದು' ಎಂದು ಅವರು ಹೇಳಿದರು.

ಪಾಲಕರ ವಿರೋಧ: 'ಬಡತನ ಕಾರಣ ಸಂಸಾರ ನಿಭಾಯಿಸುವುದೇ ಕಷ್ಟವಾಗಿದೆ. ಶಾಲೆಯಲ್ಲಿ ಮಕ್ಕಳಿಗೆ ಮೊಟ್ಟೆ ಸಿಗುತ್ತದೆ ಎಂಬ ಸಮಾಧಾನವಿತ್ತು. ಆದರೆ, ಮೊಟ್ಟೆಯ ಹೆಚ್ಚುವರಿ ಖರೀದಿ ಹಣ ಭರಿಸಲು ಶಿಕ್ಷಕರು ಮೌಖಿಕವಾಗಿ ಹೇಳುತ್ತಿದ್ದಾರೆ. ಇದರಿಂದ ಪ್ರತಿ ತಿಂಗಳು ಒಂದು ಮಗುವಿಗೆ ನಾವು ನಾಲ್ಕು ವಾರಕ್ಕೆ ₹ 16 ಮತ್ತು ಐದು ವಾರಕ್ಕೆ ₹ 20 ಪಾವತಿಸಬೇಕಾಗುತ್ತದೆ. ಏನು ಮಾಡಬೇಕೆಂದು ಗೊತ್ತಾಗುತ್ತಿಲ್ಲ' ಎಂದು ಪಾಲಕರು ಹೇಳಿದರು.

'ಹೆಚ್ಚುವರಿ ಮೊತ್ತ ಭರಿಸಲು ಆಕ್ಷೇಪಿಸುವ ಪಾಲಕರು ತಮ್ಮ ಮಕ್ಕಳಿಗೆ ಮೊಟ್ಟೆ ಬದಲು ಬಾಳೆಹಣ್ಣು, ಚಿಕ್ಕಿ ನೀಡುವಂತೆ ಕೋರುತ್ತಾರೆ. ಇದರಿಂದ ಶೇ 10ರಷ್ಟು ವಿದ್ಯಾರ್ಥಿಗಳು ಮೊಟ್ಟೆ ತಿನ್ನುವುದು ಬಿಟ್ಟಿದ್ದಾರೆ' ಎಂದು ಅಕ್ಷರ ದಾಸೋಹ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಶಿರಸಿ ತಾಲ್ಲೂಕಿನ ಶಾಲೆಯೊಂದರಲ್ಲಿ ಊಟ ಮಾಡುತ್ತಿರುವ ಮಕ್ಕಳು

> **ಹಲವೆಡೆ ಪಾಲಕರೇ ಸ್ವಪ್ರೇರಣೆಯಿಂದ ತರಕಾರಿ, ಸೊಪ್ಪು, ತೆಂಗಿನಕಾಯಿಗಳನ್ನು ಶಾಲಾ ಬಿಸಿಯೂಟಕ್ಕೆ ನೀಡುತ್ತಾರೆ. ಮೊಟ್ಟೆಯ ಹೆಚ್ಚುವರಿ ದರವನ್ನೂ ಪಾಲಕರಿಂದ ಪಡೆಯುವುದು ಯಾವ ನ್ಯಾಯ?**
> **ಕೇಶವ ನಾಯ್ಕ**, ಪಾಲಕ, ಶಿರಸಿ

> **ಮೊಟ್ಟೆಗೆ ಸರ್ಕಾರ ನೀಡುವ ದರಕ್ಕೂ ಮಾರುಕಟ್ಟೆ ದರಕ್ಕೂ ವ್ಯತ್ಯಾಸವಾದರೆ ಹೆಚ್ಚುವರಿ ಮೊತ್ತದ ಹೊರೆಯನ್ನು ಪಾಲಕರ ಮೇಲೆ ಯಾವುದೇ ಕಾರಣಕ್ಕೂ ಹಾಕಬಾರದು.**
> **ಪಿ.ಬಸವರಾಜ**
> ಡಿಡಿಪಿಐ, ಶಿರಸಿ ಶೈಕ್ಷಣಿಕ ಜಿಲ್ಲೆ

ನಾಳೆ ಮೆಟ್ರೊ ನೇರಳೆ ಮಾರ್ಗದಲ್ಲಿ ವ್ಯತ್ಯಯ

ಬೆಂಗಳೂರು: ಮೆಟ್ರೊ ನೇರಳೆ ಮಾರ್ಗದಲ್ಲಿ ಕೆಂಗೇರಿಯಿಂದ ಚಲ್ಲಘಟ್ಟ ಮೆಟ್ರೊ ನಿಲ್ದಾಣದವರೆಗೆ ಸೆ.29ರಂದು ಸುರಕ್ಷತಾ ಪರಿಶೀಲನೆ ಹಮ್ಮಿಕೊಳ್ಳಲಾಗಿದೆ. ಅಂದು ಮೈಸೂರು ರಸ್ತೆ ನಿಲ್ದಾಣ-ಕೆಂಗೇರಿ ನಿಲ್ದಾಣಗಳ ನಡುವೆ ರೈಲು ಸೇವೆ ಸ್ಥಗಿತಗೊಳ್ಳಲಿದೆ.

ಮೆಟ್ರೊ ರೈಲ್ವೆ ಸುರಕ್ಷತಾ ಆಯುಕ್ತರು (ದಕ್ಷಿಣ ವೃತ್ತ) ಪರಿಶೀಲನೆ ನಡೆಸಲಿದ್ದಾರೆ. ಆದ್ದರಿಂದ ಪೂರ್ಣದಿನ ರೈಲು ಸ್ಥಗಿತಗೊಳ್ಳಲಿದೆ. ಬೈಯ್ಯಪ್ಪನಹಳ್ಳಿ-ಮೈಸೂರು ರಸ್ತೆವರೆಗೆ ಮತ್ತು ವೈಟ್‌ಫೀಲ್ಡ್-ಕೃಷ್ಣರಾಜಪುರ ನಡುವೆ ಎಂದಿನಂತೆ ಮೆಟ್ರೊ ರೈಲು ಸಂಚರಿಸಲಿದೆ. ಹಸಿರು ಮಾರ್ಗದಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಬೈಯ್ಯಪ್ಪನಹಳ್ಳಿ- ಕೆ.ಆರ್. ಪುರ ನಡುವೆ ಹೊಸದಾಗಿ ನಿರ್ಮಿಸಲಾಗಿರುವ ಮೆಟ್ರೊ ಮಾರ್ಗದಲ್ಲಿ ಸೆ.22ರಂದು ಪರಿಶೀಲನೆ ನಡೆಸಿ, ಮೆಟ್ರೊ ಸಂಚಾರಕ್ಕೆ ಸುರಕ್ಷಿತವಾಗಿರುವುದಾಗಿ ಅಂದೇ ಘೋಷಿಸಿದ್ದರು.

ನೇರಳೆ ಮಾರ್ಗದ ಇನ್ನೊಂದು ತುದಿಯಲ್ಲಿರುವ ಕೆಂಗೇರಿ-ಚಲ್ಲಘಟ್ಟ ಮಾರ್ಗಗಳ ಪರಿಶೀಲನೆ ಮಾಡಿ, ಸುರಕ್ಷತೆ ಬಗ್ಗೆ ಹಸಿರು ನಿಶಾನೆ ತೋರಿಸಿದ ಬಳಿಕ ಎರಡೂ ಕಡೆಗಳಲ್ಲಿ ರೈಲು ಸಂಚಾರಕ್ಕೆ ದಿನ ನಿಗದಿಯಾಗಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಹೃದಯಕ್ಕಾಗಿ ನಡಿಗೆ 30ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಪರ್ಶ ಆಸ್ಪತ್ರೆಯಿಂದ ವಿಶ್ವ ಹೃದಯ ದಿನದ ಅಂಗವಾಗಿ ಇದೇ 30ರ ಶನಿವಾರ ನಗರದಲ್ಲಿ 'ಹೃದಯಕ್ಕಾಗಿ ನಡಿಗೆ' – ವಾಕಥಾನ್ ಹಮ್ಮಿಕೊಳ್ಳಲಾಗಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ. ಮಹಾಂತೇಶ ಆರ್. ಚರಂತಿಮಠ, 'ಇಂದಿನ ಒತ್ತಡದ ಜೀವನಶೈಲಿ ಪ್ರಭಾವದಿಂದ ಹೃದಯಾಘಾತ ಮತ್ತು ಹೃದ್ರೋಗ ಕಾಯಿಲೆಗಳು ಹೆಚ್ಚುತ್ತಿವೆ. ಜತೆಗೆ ಮಧುಮೇಹ, ಅಧಿಕ ರಕ್ತದೊತ್ತಡ, ಪಾರ್ಶ್ವವಾಯು ಕಾಯಿಲೆಗಳ ಬಗ್ಗೆ ಜಾಗೃತಿ ಮೂಡಿಸಲು ಈ ವಾಕಥಾನ್ ಹಮ್ಮಿಕೊಳ್ಳಲಾಗಿದೆ' ಎಂದು ತಿಳಿಸಿದರು.

'ಸ್ವಾತಂತ್ರ್ಯ ಉದ್ಯಾನದಿಂದ ಮಂತ್ರಿಮಾಲ್‌ವರೆಗೆ ನಡೆಯುವ ವಾಕಥಾನ್‌ದಲ್ಲಿ ಭಾರತೀಯ ಹೃದ್ರೋಗ ಸಂಘ, ಲಯನ್ಸ್ ಕ್ಲಬ್‌ನ ಸದಸ್ಯರು ಸೇರಿ ವಿವಿಧ ಶಾಲಾ-ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ' ಎಂದರು.

ಕಾವೇರಿ ಕುರಿತ ಚಿಂತನ ಸಭೆಯಲ್ಲಿ ವಿಷಯ ತಜ್ಞರು, ಕನ್ನಡಪರ ಹೋರಾಟಗಾರರ ಆಗ್ರಹ

‘ಸಂಕಷ್ಟ ಸೂತ್ರಕ್ಕೆ ಒತ್ತಾಯಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾವೇರಿ ವಿವಾದಕ್ಕೆ ಸಂಬಂಧಿಸಿದಂತೆ 'ಸಂಕಷ್ಟ ಸೂತ್ರ'ವನ್ನು ತಕ್ಷಣವೇ ಘೋಷಿಸಲು ರಾಜ್ಯ ಸರ್ಕಾರವು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಒತ್ತಾಯಿಸಬೇಕು' ಎಂದು ವಿಷಯ ತಜ್ಞರು ಹಾಗೂ ಕನ್ನಡ ಪರ ಹೋರಾಟಗಾರರು ಆಗ್ರಹಿಸಿದ್ದಾರೆ.

ಕನ್ನಡ ಗೆಳೆಯರ ಬಳಗ ಮತ್ತು ಕರ್ನಾಟಕ ವಿಕಾಸ ರಂಗ ಜಂಟಿಯಾಗಿ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ 'ತಮಿಳುನಾಡಿಗೆ ನೀರು, ಕಾವೇರಿ ಸಂಕಟ-ಮುಂದೇನು?' ಚಿಂತನ ಸಭೆಯಲ್ಲಿ ಸಂಕಷ್ಟ ಸೂತ್ರ ಘೋಷಣೆಗೆ ಆಗ್ರಹ ಸೇರಿದಂತೆ ಐದು ನಿರ್ಣಯಗಳನ್ನು ಕೈಗೊಳ್ಳಲಾಯಿತು. 'ಇದನ್ನು ಸರ್ಕಾರಕ್ಕೆ ನೀಡಿ, ಕ್ರಮಕ್ಕೆ ಆಗ್ರಹಿಸಲಾಗುವುದು' ಎಂದು ಆಯೋಜಕರು ತಿಳಿಸಿದರು.

ನೀರಾವರಿ ತಜ್ಞ ಕ್ಯಾಪ್ಟನ್ ರಾಜಾರಾವ್, 'ರಾಜ್ಯದಲ್ಲಿ ಮುಂಗಾರು ಮಳೆ ಕೊರತೆಯಾಗಿದ್ದು, ಕುಡಿಯುವ ನೀರಿಗೂ ಪರಿತಪಿಸುವ ಪರಿಸ್ಥಿತಿ ಎದುರಾಗಿದೆ. ಇಂತಹ ಸಂದರ್ಭದಲ್ಲಿ ತಮಿಳುನಾಡಿಗೆ ಕಾವೇರಿ ನೀರು ಹರಿಸುವುದು ಸೂಕ್ತವಲ್ಲ. ಸುಪ್ರೀಂ ಕೋರ್ಟ್ ಮೂಲಕ ತಮಿಳುನಾಡು ನಮ್ಮನ್ನು ಸಂಕಷ್ಟಕ್ಕೆ ನೂಕಿದೆ. ಮುಂಗಾರು ವಿಫಲವಾದಾಗ ನೀರು ಬಿಡಿ ಎಂದರೆ ಎಲ್ಲಿಂದ ಬಿಡಬೇಕು? ನಾವು ಇರುವ ನೀರಿನಲ್ಲಿಯೇ ಈ ವರ್ಷ ಕಳೆಯಬೇಕಾಗಿದೆ. ತಮಿಳುನಾಡಿನವರು ನೀರನ್ನು ಪೋಲು ಮಾಡಿ, ಈಗ ಹೆಚ್ಚುವರಿ ನೀರನ್ನು ಕೇಳುತ್ತಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದರು.

'ನಾವು ಕುಡಿಯುವ ನೀರು ಕೇಳಿದರೆ, ಅವರು ನೀರಾವರಿಗೆ ಕೇಳುತ್ತಿದ್ದಾರೆ. ಸುಪ್ರೀಂ ಕೋರ್ಟ್ ತೀರ್ಪು ಅವರ ಪರವಾಗಿ ಬಂದಿರುವುದರಿಂದ ನಾವು ಎಲ್ಲಿಗೆ ಹೋಗಿ ನ್ಯಾಯ ಕೇಳಬೇಕು? ನಮ್ಮ ವಕೀಲರು ಸರಿಯಾಗಿ ವಾದ ಮಾಡಿ, ಇಲ್ಲಿಯ ಪರಿಸ್ಥಿತಿ ಗಂಭೀರತೆಯನ್ನು ಮನವರಿಕೆ ಮಾಡಿಸಬೇಕು' ಎಂದರು.

ಮಳೆ ಕೊರತೆ: ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣ ಇಲಾಖೆಯ ನಿವೃತ್ತ ಉಪ ಮಹಾನಿರ್ದೇಶಕ ಎಚ್.ಎಸ್.ಎಂ. ಪ್ರಕಾಶ್, 'ರಾಜ್ಯದಲ್ಲಿ ಈ ಬಾರಿ ಸಾಮಾನ್ಯ ಮುಂಗಾರಿಗಿಂತಲೂ ಮಳೆಯ ಪ್ರಮಾಣ ಕಮ್ಮಿ ಇರಲಿದೆ ಎನ್ನುವುದು ಅಧ್ಯಯನದಿಂದ ಪ್ರಬಲವಾಗಿ ತಿಂಗಳಲ್ಲೇ ತಿಳಿದು ಬಂದಿತ್ತು. ಭಾರತದ ಸುತ್ತಮುತ್ತ ನೆಲದಾಳ ಅಥವಾ ಸಮುದ್ರದ ಒಳಗಿನ ಹಲವಾರು ದೊಡ್ಡ ಜ್ವಾಲಾಮುಖಿಗಳು ನಿಷ್ಕ್ರಿಯ ಆಗಿರುವುದರಿಂದ ನೀರಾವಿಯ ಮೂಲಗಳು ಸ್ಥಗಿತವಾಗಿವೆ. 2017, 2018 ಹಾಗೂ 2019ರಲ್ಲಿ ದೊಡ್ಡ ಜ್ವಾಲಾಮುಖಿಗಳು ಸಕ್ರಿಯವಾಗಿದ್ದವು. ಹೀಗಾಗಿ, ಎರಡು ವರ್ಷ ಭಾರಿ ಮಳೆಯಾಗಿತ್ತು. ಇವುಗಳು ಈಗ ಸಕ್ರಿಯವಾಗುವ ಮುನ್ಸೂಚನೆಗಳೂ ಕಂಡು ಬರುತ್ತಿಲ್ಲ. ಮುಂದಿನ ಮೂರು ತಿಂಗಳ ಪರಿಸ್ಥಿತಿ ಎರಡೂ ರಾಜ್ಯಗಳಿಗೆ ಆಶಾದಾಯಕವಾಗಿಲ್ಲ' ಎಂದು ಹೇಳಿದರು.

ಕನ್ನಡ ಗೆಳೆಯರ ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ್, 'ಕಾವೇರಿ ವಿಚಾರದಲ್ಲಿ ಕರ್ನಾಟಕದ ಪರವಾಗಿ ಕೋರ್ಟ್‌ನಲ್ಲಿ ಸಮರ್ಥವಾಗಿ ವಾದ ಮಂಡಿಸದಿದ್ದರಿಂದ ನಮಗೆ ಸೋಲಾಗಿದೆ. ನಮ್ಮ ರಾಜಕೀಯ ನಾಯಕರಿಗೆ ಇಚ್ಛಾಶಕ್ತಿ ಕೊರತೆಯಿದ್ದು, ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ತಮ್ಮ ರಾಜಕೀಯ ಮೇಲಾಟಕ್ಕೆ ನಮ್ಮನ್ನು ಬಲಿ ನೀಡುತ್ತಿವೆ. ತಮಿಳುನಾಡಿಗೆ 3 ಸಾವಿರ ಕ್ಯೂಸೆಕ್ ನೀರು ಹರಿಸಿದರೆ ನಮಗೆ ಕುಡಿಯಲೂ ನೀರು ಇರುವುದಿಲ್ಲ' ಎಂದು ಕಳವಳ ವ್ಯಕ್ತಪಡಿಸಿದರು.

ಸಭೆಯಲ್ಲಿ (ಎಡದಿಂದ) ಕನ್ನಡ ಕ್ರೈಸ್ತರ ಸಂಘದ ಅಧ್ಯಕ್ಷ ರಫಾಯಲ್ ರಾಜ್, ರಾ.ನಂ. ಚಂದ್ರಶೇಖರ್, ಎಚ್.ಎಸ್.ಎಂ. ಪ್ರಕಾಶ್, ಕ್ಯಾಪ್ಟನ್ ರಾಜಾರಾವ್, ಶಾಸನ ತಜ್ಞ ಆರ್. ಶೇಷಶಾಸ್ತ್ರಿ, ಸಂಶೋಧಕ ದೇವರ ಕೊಂಡಾರೆಡ್ಡಿ, ಪಿ.ವಿ. ನಾರಾಯಣ ಮತ್ತು ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ. ಚನ್ನೇಗೌಡ ಅವರು ಗಿಡಕ್ಕೆ ನೀರೆರೆದರು –ಪ್ರಜಾವಾಣಿ ಚಿತ್ರ

ಪ್ರಮುಖ ನಿರ್ಣಯಗಳು

- ಸಂಕಷ್ಟ ಸೂತ್ರ ಘೋಷಿಸಿದ ಬಳಿಕವೇ ಮುಂದಿನ ಕಲಾಪಗಳನ್ನು ನಡೆಸುವಂತೆ ರಾಜ್ಯ ಸರ್ಕಾರ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಆಗ್ರಹಿಸಬೇಕು
- ಜೂನ್‌ನಿಂದ ಸೆಪ್ಟೆಂಬರ್‌ವರೆಗಿನ 4 ತಿಂಗಳ ಮುಂಗಾರಿನಲ್ಲಿ 10 ಟಿಎಂಸಿ ಅಂತರ್ಜಲವನ್ನು ಬಳಸಲು ತಮಿಳುನಾಡಿಗೆ ಸೂಚಿಸುವಂತೆ ಪ್ರಾಧಿಕಾರಕ್ಕೆ ಒತ್ತಾಯಿಸಬೇಕು
- ಕಾವೇರಿ ಜಲ ವಿವಾದ ಪರಿಹರಿಸಲು ಮಧ್ಯ ಪ್ರವೇಶಿಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಬೇಕು
- ಎಲ್ಲಾ ನದಿಗಳಿಂದ ಉಪಯೋಗಿಸಬಹು-ದಾದ ನೀರಿನ ಪ್ರಮಾಣ ತಿಳಿಯಲು ಹಾಗೂ ಮೌಲ್ಯಮಾಪನ ಮಾಡಲು ತಜ್ಞರ ಸಮಿತಿ ರಚಿಸುವಂತೆ ಕೇಂದ್ರ ಸರ್ಕಾರಕ್ಕೆ ವಿನಂತಿ ಮಾಡಬೇಕು
- ಮೇಕೆದಾಟು ಯೋಜನೆ ತಡೆಯಲು ಪ್ರಯ-ತ್ನಿಸುತ್ತಿರುವ ತಮಿಳುನಾಡಿನ ವಿರುದ್ಧ ರಾಜ್ಯ ಸರ್ಕಾರ ಗಟ್ಟಿ ಧ್ವನಿ ಎತ್ತಬೇಕು

‘ಬೆಂಗಳೂರನ್ನು ಬೆಳೆಸುವುದು ನಿಲ್ಲಿಸಿ’

‘ಬೆಂಗಳೂರನ್ನು ದೊಡ್ಡದಾಗಿ ಬೆಳೆಸಲಾಗುತ್ತಿದೆ. 20, 30 ಅಂತಸ್ತುಗಳ ಕಟ್ಟಡಗಳು ಎಲ್ಲೆಡೆ ನಿರ್ಮಾಣವಾಗುತ್ತಿವೆ. ಹೀಗೇ ನಗರವನ್ನು ಬೆಳೆಸಿದರೆ ನೀರನ್ನು ಎಲ್ಲಿಂದ ತರುತ್ತಾರೆ? ನ್ಯೂಯಾರ್ಕ್, ಸಿಂಗಪುರದ ರೀತಿ ನಗರವನ್ನು ಬೆಳೆಸುತ್ತೇವೆ ಅಂದರೆ ಅದು ಸಾಧ್ಯವಾಗದು. ನದಿ ಪಾತ್ರದಲ್ಲಿ ಊರುಗಳನ್ನು ಕಟ್ಟಬೇಕು. ಸಮಗ್ರ ನಗರ ಯೋಜನೆ ರೂಪಿಸಿ, ಪ್ರಕೃತಿ ವಿಕೋಪಗಳ ಬಗ್ಗೆ ಮುನ್ಸೂಚನೆ ತಿಳಿಸಲು ಅಧ್ಯಯನ ಮಾಡಬೇಕು’ ಎಂದು ಸಾಹಿತಿ ಪಿ.ವಿ. ನಾರಾಯಣ ಹೇಳಿದರು.

‘ಕಾವೇರಿ ನೀರು ಹಂಚಿಕೆಗೆ ಸಂಬಂಧಿಸಿದಂತೆ ಕಾವೇರಿ ಜಲವಿವಾದ ನ್ಯಾಯಮಂಡಳಿಯನ್ನು ಪುನರ್ ರಚನೆ ಮಾಡಿ, ಎರಡು ರಾಜ್ಯಗಳ ಮನವೊಲಿಸುವ ಕೆಲಸವನ್ನು ಕೇಂದ್ರ ಸರ್ಕಾರ ಮಾಡಬೇಕು. ತಜ್ಞರ ಜತೆಗೆ ರೈತ ಪ್ರತಿನಿಧಿಗಳೂ ಸಮಿತಿಯಲ್ಲಿ ಇರಬೇಕು. ಬೆಂಗಳೂರು ಹಾಗೂ ಕರ್ನಾಟಕ ಬಂದ್, ಚಳವಳಿಯಿಂದ ಸಮಸ್ಯೆಗಳು ಬಗೆಹರಿಯುವುದಿಲ್ಲ. ನಾವು ಅವರನ್ನು, ಅವರು ನಮ್ಮನ್ನು ವಿರೋಧಿಸುವುದು ಆಗಬಾರದು. ಪ್ರಧಾನಿ ನರೇಂದ್ರ ಮೋದಿ ಅವರು ಕೂಡಲೇ ಮಧ್ಯ ಪ್ರವೇಶಿಸಬೇಕು’ ಎಂದು ಆಗ್ರಹಿಸಿದರು.

‘ಕಾವೇರಿ ನೀರಿಗೆ ಪಕ್ಷಭೇದ ಮರೆತು ಹೋರಾಡಿ’

ಬೆಂಗಳೂರು: ಕಾವೇರಿ ನದಿ ನೀರಿಗಾಗಿ ಪಕ್ಷ ಭೇದ ಮರೆತು ಎಲ್ಲರೂ ಒಗ್ಗಟ್ಟಾಗಿ ಹೋರಾಟ ಮಾಡಬೇಕು ಎಂದು ಆಮ್ ಆದ್ಮಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ‘ಮುಖ್ಯಮಂತ್ರಿ’ ಚಂದ್ರು ಹೇಳಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನಾನು ಮೂಲತಃ ರೈತ, ನಂತರ ಸಿನಿಮಾ ಕಲಾವಿದ, ನಾನು ಈಗ ಒಂದು ಪಕ್ಷದ ಅಧ್ಯಕ್ಷನಾಗಿದ್ದರೂ, ಮೊದಲಿನಿಂದಲೂ ನಾಡು, ನುಡಿ, ನೀರಿಗಾಗಿ ಕಲಾವಿದರನ್ನು ಸೇರಿಸಿ ಹೋರಾಟ ಮಾಡಿದ್ದೇನೆ. ಕಾವೇರಿ ನೀರಿಗಾಗಿ ಮಾತ್ರವಲ್ಲದೇ ಮಹದಾಯಿ, ಕೃಷ್ಣಾ, ತುಂಗಭದ್ರಾ ಹೋರಾಟದಲ್ಲೂ ಭಾಗವಹಿಸುತ್ತೇವೆ. ನಾಡು, ನುಡಿ, ಜಲ ಮತ್ತು ಗಡಿ ಸಮಸ್ಯೆಗಳು ಬಂದಾಗ ತಮಿಳು ಭಾಷಿಕರಂತೆ ಒಗ್ಗಟ್ಟಿನಿಂದ ಹೋರಾಡಬೇಕು’ ಎಂದು ತಿಳಿಸಿದರು.

‘ಸುಪ್ರೀಂ ಕೋರ್ಟ್ ಕಾವೇರಿ ನೀರು ಹಂಚಿಕೆ ಬಗ್ಗೆ ತೀರ್ಪು ಕೊಡುವ ಮುಂಚಿತವಾಗಿ ರಾಜ್ಯದಲ್ಲಿ ಬಂದ್ ಮಾಡಿದರೆ ಇಲ್ಲಿನ ಸಮಸ್ಯೆಗಳ ಬಗ್ಗೆ ಅವರಿಗೂ ಸಂದೇಶ ಹೋಗಲಿದೆ ಎನ್ನುವ ಉದ್ದೇಶದಿಂದ ತುರ್ತಾಗಿ ಬಂದ್ ಮಾಡಿದ್ದೇವೆ’ ಎಂದು ತಿಳಿಸಿದರು.

ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಇದ್ದರು.

ರಜನಿಕಾಂತ್ ಮಾತನಾಡಲಿ’

ಬೆಂಗಳೂರು: ‘ಕಾವೇರಿ ವಿಚಾರದಲ್ಲಿ ನಟ ರಜನಿಕಾಂತ್ ಅವರು ಧ್ವನಿ ಎತ್ತಬೇಕು’ ಎಂದು ವಾಟಾಳ್ ನಾಗರಾಜ್ ಆಗ್ರಹಿಸಿದ್ದಾರೆ. ‘ಕಾವೇರಿ ವಿಚಾರದಲ್ಲಿ ರಜನಿಕಾಂತ್ ಅವರು ತಮ್ಮ ನಿಲುವು ಪ್ರಕಟಿಸಬೇಕು. ಅವರು ಕರ್ನಾಟಕದಲ್ಲೇ ಜನಿಸಿದವರು. ಉಭಯ ರಾಜ್ಯಗಳ ನಡುವಿನ ದಶಕಗಳ ನೀರು ಹಂಚಿಕೆ ವಿವಾದ ಬಗೆಹರಿಸಲು ಅವರು ಧ್ವನಿ ಎತ್ತಬೇಕು. ಅವರು ಮಧ್ಯಪ್ರವೇಶಿಸದಿದ್ದರೆ ರಾಜ್ಯದಲ್ಲಿ ಅವರ ಚಿತ್ರ ನಿಷೇಧಿಸಬೇಕು’ ಎಂದು ವಾಟಾಳ್ ನಾಗರಾಜ್ ಆಗ್ರಹಿಸಿದರು.

PUBLIC NOTICE

General Public is/are hereby informed that my client/s is/are intending to purchase the below mentioned Schedule land from its registered owner viz., **Sri M Manjunatha,** S/o Late Muniyappa, R/at No 92, Vokkaligara Street, Vijayapura Town, Devanahalli Taluk, Bengaluru Rural District. If any person/s having any right, title, interest or claim of any kind or any objections, he/she/they is/are at liberty to notify with documentary proof of his/her/their right, title or claim/s if any to the below mentioned address **within 15 days** from the date of the publication of this notice. Any claim/s or objection/s raised and received **after 15 days** shall not bind on my client/s and my client/s will proceed to purchase the Schedule Property presuming that there are no claim/s or objection/s what so ever.

SCHEDULE

All that piece and parcel of the agricultural land bearing Survey No 101/1, measuring 2 Acre 11 Guntas, situated at Thindlu Village, Kundana Hobli, Devanahalli Taluk and bounded on the:- **East by :** Land belonging to Sri Ramaiah, **West by** : Land belonging to Sri Hanumappa **North by :** Land belonging to Sri Subbaiah, **South by :** Land belonging to Subramani K & others.

Sd/- Venkataramana Reddy
Advocate, No.85/1, II Floor, 19th Main, Sector-1, HSR Layout, Bengaluru-560102.
Contact No: 9844130703

PUBLIC NOTICE

It is hereby informed to the general public that **M/s. Daya Associates,** an Association of Persons (AOP), No. 653, 3rd Block Koramangala, Bangalore – 560 034, is the absolute owner of the following lands.

Sl. No.	Survey No.	Location	Extent of Land Acres	Extent of Land Guntas
1	206/2	Gunjur Village, Varthur Hobli, Bangalore East Taluk.	0	27
2	206/3	Gunjur Village, Varthur Hobli, Bangalore East Taluk.	1	02
3	206/5	Gunjur Village, Varthur Hobli, Bangalore East Taluk.	0	36
4	206/6	Gunjur Village, Varthur Hobli, Bangalore East Taluk.	0	36
5	191/2	Gunjur Village, Varthur Hobli, Bangalore East Taluk.	1	10
6	192/3	Gunjur Village, Varthur Hobli, Bangalore East Taluk.	0	33
7	192/2	Gunjur Village, Varthur Hobli, Bangalore East Taluk.	0	30
8	191/3	Gunjur Village, Varthur Hobli, Bangalore East Taluk.	1	15
9	192/4	Gunjur Village, Varthur Hobli, Bangalore East Taluk.	1	21.5
		TOTAL	9	25.5

It has come to the knowledge of the undersigned that one **Mr. Akarsh.S, S/o. Mr. H.R.S.Reddy,** is attempting to alienate / sell / dispose off the said lands to third parties, in a fraudulent and illegal manner, without the consent and concurrence of **M/s. Daya Associates, Association of Persons (AOP) and its Partners viz., (1) Mr. Mohan Kumar K.P, S/o. Late Mr. K.M.Prabhakar Reddy, (2) Mrs. Dayanandini K.P., D/o. Late Mr. K.M.Prabhakar Reddy and (3) Mr. K.M.Muniswamy Reddy, S/o. Late Mr.K.M.Muni Reddy.**

Hence, general public are hereby informed and cautioned to refrain and not to deal / transact / enter into any agreements / arrangements / transactions with the said Mr. Akarsh.S, S/o. Mr. H.R.S.Reddy, in respect of the aforesaid lands, in any manner whatsoever. Any person/s dealing / entering into transactions / agreements / arrangements with the said Mr. Akarsh.S, S/o. Mr. H.R.S.Reddy, in respect of the aforesaid lands, shall be void ab initio and shall be doing at their own risk and consequences thereof and such transactions shall not be binding on us and shall not be responsible for all such transactions and the consequences arising therefrom.

Sd/- **(MOHAN KUMAR K.P)**
S/o. Late Mr. K.M.Prabhakar Reddy, Partner – M/s. Daya Associates (AOP),
No.422, 2nd Cross, 17th H Main, 3rd Block Koramangala, Bangalore – 560 034.
Mobile : 98458 04872

Date: 28.09.2023
Place: Bengaluru

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

General

REPUTED SECURITY Agency Requires Experienced Field Officers, Area/ Operations/ Marketing Managers for Bangalore. Contact: 9886349781/ 9886038747.

Walk-in

TATA ADVANCED SYSTEMS — WALK-IN DRIVE

Operator Assembly

Qualification: ITI- Fitter & Apprentice (NCVT) **Exp:** 4 to 8 Years

Description:
Assembly: Hands on experience in the Aerostructure Assembly process. Good understanding on Engineering drawing, familiar with hand tools & cutting tools **Work Location: Hyderabad**

Date of Interview & Timings:30-09-2023 & 09.00AM - 06.00PM
01-10-2023 & 09.00AM - 12.30PM

Documents to Carry (Only Xerox Copies):
1. Updated CV & Passport Size Photograph. (2) All Education Certificates.(3) Present Company CTC Letter & Last 3 months Payslips. (4) Previous Company Experience Letters/Service Certificates (5) Aadhaar Copy.

Venue: Lords Eco Inn Belagavi
Near, CTS No 4823/A/13, Kolhapur Circle Belagavi, Karnataka - 590010.

DH DECCAN HERALD | ಪ್ರಜಾವಾಣಿ
Classifieds
More value, more impact
NAME CHANGE
Tell us your New Name!
Book your AD WITH US NOW!
www.dhclassifieds.com
BOOK NOW
For more details contact:
+91 9886213331 | +91 9901641752 | +91 9845114560 | +91 9900428036 | +91 9731810277 | 080- 45557163/164

Manager

URGENT WANTED
Production Manager: Fast growing specialized in surface treatment plant Aluminium & Titanium Anodizing, Relevant Experience. 4-6 Years of Experience Company: Indaco Metal Coats Pvt Ltd
accounts@indacocoats.com
8951552412

BUSINESS

Business Offers

Finance

WANTED BUSINESS
Partner Veg Hotel Investment 15 Lakhs Contact: 8892501007/ 9606701007

NRI'S INVESTMENT And Finance Available On Low Interest Against Properties, Land& Building,Sites,Flats,Converted& Agriculture Lands Call:7204995189

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology-9880916988

REAL ESTATE BUYING

Sites

Anjanapura

BDA-SITES WANTED Anjanapura Any Block Banashankari 6th Stage JPNagar 8th 9th Phase 30x40 40x60 50x80 Immediate Settlement Call:9945610779

REAL ESTATE SELLING

Commercial Building

Mysore Road

MYSORE ROAD Cross Near Chamrajpet Anantharamaiah Compound G +3 (Built-up area 5600 sqft) Commercial New Building with lift available for Sale. Contact: 9845173914.

PERSONAL

Announcements

I, SUMA Murali W/O Murali K R/O #250,8thRoad,Defence Layout,Vidyaranyapura,Bengaluru-97 have changed my name to Suma D vide affidavit dated 25-09-2023 before the notary R.Ramesh (Reg.No 19895) Bengaluru.

Change of Name

CHANGE OF NAME
I, **YASHAVANTHA A.R.** S/o. A. Ramappa Residing at No. 283,11th Cross, 19th Main Road, Giri Road, Avalahalli, Bangalore-560026 declare that **YESHWANTH A.R.** and **YASHAVANTHA A.R.** both names are one and the same person, i.e. myself only. Henceforth, I will be known as **YASHAVANTHA A.R.** only. vide affidavit dated: 25.09.2023 Sworn before Notary H.R. Karunakara, Bengaluru.

I, MEENA aged about 37 years, Wife of JAGANNATHA. S, residing at No. 25, 4th Cross, Gurudarshan Layout, Nanjappa Circle, Vidyaranyapura, Bangalore-560097, Karnataka, have changed my son's Name from SURYA. J to SURYA JAGANNATHA Vide Affidavit dated 27.09.2023 sworn before advocate and notary C.K. Anupama, Bangalore

CHANGE OF NAME
I, **AMBIKA SARAVANAN** Residing at #64, 4th Cross, Nandi Durga Road Extn, Bangalore-560046 have changed my name to **AMBIKA** vide affidavit dated 27.9.2023 before notary Bhagya Kumari N, Bangalore. Henceforth I shall be called as **AMBIKA** only.

I, BENEEMA THANKAM MATHEWS W/o.Zalmon Sunny Thomas R/o#6, 3rd Block, Blessing Garden Layout,Byrathi Kothanur, Bengaluru-560077 have changed my Name to BENEEMA THANKAM MATHEW vide affidavit dated:25.9.2023 sworn before Notary Uday Kumar.K. Bengaluru.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

CHANGE OF NAME
I, **AKASH KUTTAPPA** have changed my name from **AKASH KOOPADIRA KUTTAPPA to AKASH KUTTAPPA** vide affidavit dated: 15.9.2023 before notary Amruth Appachu K Asst. Engineer Karnataka Public Works Department Henceforth I shall be known as **AKASH KUTTAPPA** only.

I PALLAVI B.J alias PALLAVI. K. PATIL R/a N-6, LIC Colony 24th main road, J.P.Nagar 1st phase, Bangalore- 560078 declare that Both Name belongs to me Only. Vide Affidavit Dated 19/09/2023 Before Notary L. Puttaraju Bangalore.

CHANGE OF NAME
I, **MITHUN N R** son of No JC-340657Y Rank Sub Name **RAMESH N P** (RETD) presently R/at 1A, Lakshmi Nilaya, Maheshwari Nagar, Mahadevapura Post, Blr-48 have change my name from **MITHUN N R** to **MADHUSUDAN N R** vide affidavit dated 7.9.2023 before Notary J. Ananda Kumar, Bangalore. Henceforth I shall be called **MADHUSUDAN N R** only.

I, PRANAV DURAIMURUGAN, have changed my name to PRANAV DURAI vide affidavit dated 27.09.2023 sworn before Notary Rajanna. S.M. Bengaluru

Lost

DOCUMENT LOST
I, Jomal Johny Kutty R/at. C/o. E.T. Joseph No. GE-68, Banjara Layout, 3rd main, Garden Enclave, Horamavu, Blr-43 have lost my Husband's Johny Kutty Chacko Original Sale Deed Documents No. KRI-1-16169/2006-07, of Book-1, CD No. 242 Dated: 14-8-2006 & Document No KRI-1-24500/2006-07 of Book-1, stored on CD No. 198, Dated: 22.3.2006 Registered in Sub Registrar, K.R. Puram, Bengluru **Finders Please Contact: 9242494638 or Inform Near by the Police Station.**

PUBLIC NOTICE

LOSS OF DOCUMENTS
I, YV. PRASAD R/at No: 104, 10th Cross, Indiranagar, Bangalore- 560038, have lost the following land documents of Survey Nos 95/2, Koralure Village, Kasaba Hobli, Hosakote Taluk, while in transit.
(a) **Sale Deed, Bearing Document No: 3647/1966-67, Dated 15/11/1966**
(b) **Rectification Deed No: 2165/1993-94, Dated : 15/02/1994,**
(c) **Mr. Moinuddin Saheb Family Tree.**
Lost Report No. 0742791/2023 Dated 26/09/2023
FINDER PLEASE CONTACT: 9986067132

PUBLIC NOTICE

General Public is/are hereby informed that my client/s is/are intending to purchase the below mentioned Schedule Lands from its registered owner viz., **Mr Kushal Kumar Jain,** S/o Mr Inder Chand Jain, R/at No 36, Chakravarthi Layout, Palace Cross Road, VTC: Bengaluru North Taluk, Bengaluru-560020. If any person/s having any right, title, interest or claim of any kind or any objections, he/ she/they is/are at liberty to notify with documentary proof of his/her/their right, title or claim if any to the below mentioned address **within 15 days** from the date of the publication of this notice. Any claim/s or objection/s raised and received after 15 days shall not bind on my clients and my client/s will proceed to purchase the Schedule Lands presuming that there are no claim/s or objection/s what so ever.

SCHEDULE

Item No-1: All that piece and parcel of the bearing Survey No:90/2 (old) New Sy No 90/5 measuring 23¾ guntas, situated at Thindlu Village, Kundana Hobli, Devanahalli Taluk and bounded on the:- **East by :** Land belonging to Sri. Aswathappa, **West by :** Land belonging to Sri. Thimmarayappa, **North by:** Land belonging to Smt Chowdamma & Sri Anjinappa, **South by**: Land belonging to Smt Lakshmamma.

Item No-2 : All that piece and parcel of the bearing Survey No:92 measuring 2 Acre 12 Guntas (including Kharab land 2 Acre 30 Guntas), situated at Thindlu Village, Kundana Hobli, Devanahalli Taluk and bounded on the:- **East by :** Land belonging to Sri. Ramakrishnappa, **West by:** Land belonging to Sri. Maddurappa, **North by:** Land belonging to Attibele Muniswamappa & Uttanahalli Krishnappa, **South by :** Land belonging to Poojari Anjinappa.

Item No-3: All that piece and parcel of the bearing Survey No 101/4, measuring 24 Guntas and 1 Gunta of Kharab land, situated at Thindlu Village, Kundana Hobli, Devanahalli Taluk and bounded on the:- **East by :** Land belonging to Sri Venkatarayappa, **West by** : Land belonging to Sri Aswathappa, **North by :** Land belonging to Smt Jayamma & Smt Kempamma, **South by**: Land belonging to Smt Pillamma.

Item No-4: All that piece and parcel of the bearing Survey No 106/6 (old Sy No 106/4) measuring 24¼ Guntas situated at Thindlu Village, Kundana Hobli, Devanahalli Taluk and bounded on the:- **East by :** Land belonging to Sri. Muniyappa, **West by** : Land belonging to Huvadigara Ramaiah, **North by:** Land belonging to Smt B Narasamma, **South by** : Sy No 106/4

Item No-5 : All that piece and parcel of the bearing Survey No 164/2, measuring 1 Acre, situated at Thindlu Village, Kundana Hobli, Devanahalli Taluk and bounded on the:- **East by :** Land belonging to Smt Gowramma, **West by** : Land belonging to Sri Muniraj, **North by** : Land bearing Sy No 163, **South by** : Land belonging to Sri Muninanjappa.

Item No-6 : All that piece and parcel of the bearing Survey No 172/3 (old Sy No 172) measuring 2 Acre 19 Guntas situated at Thindlu Village, Kundana Hobli, Devanahalli Taluk and bounded on the:- **East by :** Remaining land same Sy No 172 belonging to Sri Krishnappa & Sri Munishamappa, **West by** : Land belonging to Smt Nanjamma & Sri Narayanappa, **North by:** Land belonging to Dyavarahalli Venkatappa, **South by:** Land belonging to Attibele Venkatappa.

Sd/- Venkataramana Reddy
Advocate, No.85/1, II Floor, 19th Main, Sector-1, HSR Layout, Bengaluru-560102. **Mob: 9844130703**

ಪದವಿ ಪರೀಕ್ಷೆ ಮುಂದೂಡಿಕೆ

ಬೆಂಗಳೂರು: ತಮಿಳುನಾಡಿಗೆ ಕಾವೇರಿ ನದಿ ನೀರು ಹರಿಸುವುದನ್ನು ವಿರೋಧಿಸಿ ಸೆ. 29ರಂದು ‘ಕರ್ನಾಟಕ ಬಂದ್‘ಗೆ ಕರೆ ನೀಡಿರುವ ಹಿನ್ನೆಲೆಯಲ್ಲಿ ಅಂದು ನಿಗದಿಯಾಗಿದ್ದ ಬೆಂಗಳೂರು ವಿಶ್ವವಿದ್ಯಾಲಯದ ಎರಡು ಮತ್ತು ನಾಲ್ಕನೇ ಸಮಿಸ್ಟರ್‌ನ ಪದವಿ ಪರೀಕ್ಷೆ-ಗಳನ್ನು ಸೆ.30ಕ್ಕೆ ಮುಂದೂಡಲಾಗಿದೆ ಎಂದು ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವರು ಪ್ರಕಟ-ಣೆಯಲ್ಲಿ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ನೀರಿನ ಅದಾಲತ್ ನಾಳೆ

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ) ವಿವಿಧ ಉಪವಿಭಾಗಗಳಲ್ಲಿ ಸೆ.29ರಂದು ಬೆಳಿಗ್ಗೆ 9.30ರಿಂದ 11 ಗಂಟೆ ವರೆಗೆ ನೀರಿನ ಅದಾಲತ್ ನಡೆಸಲಿದೆ. ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ಸಹಾಯವಾಣಿ 1916ಕ್ಕೆ ಕರೆ ಮಾಡಬಹುದು ಅಥವಾ ವಾಟ್ಸ್‌ಆ್ಯಪ್ ಸಂಖ್ಯೆ 87622 28888ಗೆ ಸಂದೇಶ ಕಳುಹಿಸಿ ದೂರು ದಾಖಲಿಸಬಹುದು ಎಂದು ಮಂಡಳಿಯ ಪ್ರಕಟಣೆ ತಿಳಿಸಿದೆ.

ವಿಶ್ವಕರ್ಮ ಮಹೋತ್ಸವ, ಪ್ರಶಸ್ತಿ ಪ್ರದಾನ 30ಕ್ಕೆ

ಬೆಂಗಳೂರು: ವಿಶ್ವಕರ್ಮ ಸೇವಾ ಪ್ರತಿ-ಷ್ಠಾನದಿಂದ ಇದೇ 30ರಂದು ವಿರಾಟ್ ವಿಶ್ವಕರ್ಮ ಮಹೋತ್ಸವ, ‘ವಿಶ್ವಕರ್ಮ ಶ್ರೀ’ ಮತ್ತು ‘ವಿಶ್ವಕರ್ಮ ಸೇವಾ ರತ್ನ’ ಪ್ರಶಸ್ತಿ ಪ್ರದಾನ ಕಾರ್ಯಕ್ರಮವು ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಲಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪ್ರತಿಷ್ಠಾನದ ಕಾರ್ಯಾಧ್ಯಕ್ಷ ಬಿ.ಎಂ. ಉಮೇಶ್ ಕುಮಾರ್, ‘ಪಂಚಶಿಲ್ಪಿಗಳು, ಸಾಧಕರಿಗೆ ವಿಶ್ವಕರ್ಮ ಹೆಸರಿನ ವಿವಿಧ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು. 11 ಜನರಿಗೆ ‘ವಿಶ್ವಕರ್ಮ ಶ್ರೀ’ ಪ್ರಶಸ್ತಿ, ಇಬ್ಬರಿಗೆ ‘ಸ್ಮಾರಕ’ ಪ್ರಶಸ್ತಿ, 11 ಜನರಿಗೆ ‘ವಿಶ್ವಕರ್ಮ ಸೇವಾ ರತ್ನ’ ಪ್ರಶಸ್ತಿ ಪ್ರದಾನ ಮಾಡಲಾಗುವುದು’ ಎಂದರು.

‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಬಿಜೆಪಿ ಸಂಸದೀಯ ಮಂಡಳಿಯ ಸದಸ್ಯ ಬಿ.ಎಸ್. ಯಡಿಯೂರಪ್ಪ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, ಶಾಸಕ ಬಸವರಾಜ ಬೊಮ್ಮಾಯಿ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ’ ಎಂದು ತಿಳಿಸಿದರು.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ನಂ. 16 ಸಿ-1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು-560052. ಫೋನ್: 080-22268677/78/79 ಫ್ಯಾಕ್ಸ್: 080-22268667
ಇ-ಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ಸಂಖ್ಯೆ: ಕವಿನಿಆ-7-ಸಿಐಎನ್-2022-23/1276/655 ದಿನಾಂಕ: 27-09-2023

ಸಾರ್ವಜನಿಕ ವಿಚಾರಣೆ ಬಗ್ಗೆ ಸೂಚನೆ

ವಿಷಯ: ದಿನದ ಸಮಯಾಧಾರಿತ (Time of Day) ಇತ್ಯರ್ಥ ಕಾರ್ಯವಿಧಾನದ ಮೇಲೆ ಚರ್ಚಾ ಪತ್ರದ ಸಾರ್ವಜನಿಕ ವಿಚಾರಣೆ ಬಗ್ಗೆ.

ಮೇಲ್ಕಂಡ ವಿಷಯದಲ್ಲಿ ಪ್ರಸ್ತಾಪಿಸಿರುವ ಚರ್ಚಾ ಪತ್ರ ಪ್ರಕಟಗೊಳಿಸಲಾಗಿದ್ದು, ಸದರಿ ಪ್ರತಿಯನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ವೆಬ್‌ಸೈಟ್: **https://kerc.karnataka.gov.in** ನಲ್ಲಿ ಲಭ್ಯವಿರಿಸಲಾಗಿದೆ.

ಆಯೋಗವು **ದಿನಾಂಕ: 26-10-2023 ರಂದು ಗುರುವಾರ ಬೆಳಿಗ್ಗೆ 11.00** ಘಂಟೆಗೆ ಆಯೋಗದ ನ್ಯಾಯಾಂಗ ಸಭಾಂಗಣದಲ್ಲಿ ಸಾರ್ವಜನಿಕ **ವಿಚಾರಣೆಯನ್ನು ಏರ್ಪಡಿಸಿದ್ದು,** ಆಸಕ್ತರು ಈ ವಿಚಾರಣೆಯಲ್ಲಿ ಭಾಗವಹಿಸಿ ಆಯೋಗದ ಮುಂದೆ ಖುದ್ದಾಗಿ ಹಾಜರಾಗಬಹುದು ಮತ್ತು ಮೌಖಿಕ ಸಲ್ಲಿಕೆಗಳನ್ನು ಮಾಡಬಹುದು.

ಸಹಿ/- ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

ವಾಸಾಸಂಇ/ವಾ.ಪ್ರ/1472/2023-24

ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಅನ್ಸಾರಿ ನಗರ, ನವದೆಹಲಿ – 110 608
ಅಡ್ಮಿಷನ್ ನೋಟಿಸ್ 213/2023

ಜನವರಿ-2024ನೇ ಅವಧಿಗೆ ಡಿಎಂ/ಎಂ.ಸಿಎಚ್ & ಎಂಡಿ (ಆಸ್ಪತ್ರೆ ಆಡಳಿತ) ಕೋರ್ಸ್‌ಗಳ ಪ್ರವೇಶಾತಿಗಾಗಿ ಐಎನ್‌ಐ-ಎಸ್‌ಎಸ್ ಪ್ರವೇಶ ಪರೀಕ್ಷೆ

ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ನವದೆಹಲಿ ಇವರು, ಕೆಳಕಂಡ ವಿವರಗಳ ಪ್ರಕಾರ ಜನವರಿ2024ನೇ ಅವಧಿಯ ಪೋಸ್ಟ್-ಡಾಕ್ಟೋರಲ್ [ಎಐಐಎಂಎಸ್ ನವದೆಹಲಿ ಮತ್ತು ಇನ್ನಿತರ ಸಹಭಾಗಿ **ಎಐಐಎಂಎಸ್, ಪಿಜಿಐಎಂಇಆರ್, ನಿಮ್ಹಾನ್ಸ್, ಜೆಐಪಿಎಂಇಆರ್ ಮತ್ತು ಎಸ್‌ಸಿಟಿಐಎಂಎಸ್‌ಟಿ** ಗಳಲ್ಲಿ **ಡಿಎಂ/ಎಂ.ಸಿಎಚ್. (3 ವರ್ಷ) / ಎಂಡಿ (ಆಸ್ಪತ್ರೆ ಆಡಳಿತ) ಕೋರ್ಸ್‌ಗೆ** ಪ್ರವೇಶಾತಿ ನೀಡುವ **ಪ್ರವೇಶ ಪರೀಕ್ಷೆಗಾಗಿ** ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಿದ್ದಾರೆ.

ಅರ್ಜಿಗಾಗಿ ಆನ್‌ಲೈನ್ ನೋಂದಣಿ

ಕೋರ್ಸ್‌ಗಳು	ಸಂಸ್ಥೆಗಳು	ಪ್ರಾರಂಭ	ಮುಕ್ತಾಯ
ಡಿಎಂ/ಎಂ.ಸಿಎಚ್. (3 ವರ್ಷ) / & ಎಂಡಿ (ಆಸ್ಪತ್ರೆ ಆಡಳಿತ)	ಎಐಐಎಂಎಸ್ – ನವದೆಹಲಿ ಮತ್ತು ಇನ್ನಿತರ ಹೊಸ ಎಐಐಎಂಎಸ್'ಗಳು, ಪಿಜಿಐಎಂಇಆರ್– ಚಂಡೀಗಢ್, ನಿಮ್ಹಾನ್ಸ್-ಬೆಂಗಳೂರು, ಜೆಐಪಿಎಂಇಆರ್-ಪುದುಚೆರಿ ಮತ್ತು ಎಸ್‌ಸಿಟಿಐಎಂಎಸ್‌ಟಿ-ತಿರುವನಂತಪುರಂ	27.09.2023	11.10.2023 ರಂದು ಸಂಜೆ 5:00 ಗಂಟೆ

ಮಹತ್ವದ ಸೂಚನೆ:- ವಿವರಣಾತ್ಮಕ ಕೈಪಿಡಿ, ವಿವರವಾದ ಮಾಹಿತಿ ಇತ್ಯಾದಿಗಳಿಗಾಗಿ ದಯವಿಟ್ಟು www.aiimsexams.ac.in ವೆಬ್‌ಸೈಟ್‌ಗೆ ಭೇಟಿ ಕೊಡಿ. ಮುಂದಿನ ಯಾವುದೇ ತಿದ್ದುಪಡಿ/ಮಾರ್ಪಾಡು/ಬದಲಾವಣೆಗಳನ್ನು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ, ಆದ್ದರಿಂದ ಎಲ್ಲಾ ಅರ್ಜಿದಾರರು ನಿಯಮಿತವಾಗಿ ಸದರಿ ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಬೇಕು.

ಸಹಿ/-
ಸಹಾಯಕ ನಿಯಂತ್ರಕರು (ಪರೀಕ್ಷೆಗಳು)

CBC 17112/12/0022/2324

ಎನ್‌ಪಿಕೆಎಲ್: 35 ಕಿರುಸೇತುವೆ, 3 ಅಂಡರ್‌ಪಾಸ್ ನಿರ್ಮಾಣ ಇನ್ನೊಂದು ವರ್ಷದಲ್ಲಿ ಪೂರ್ಣ

ಪ್ರಮುಖ ರಸ್ತೆ ಕಾಮಗಾರಿಗೆ ವೇಗ

• ಆರ್. ಮಂಜುನಾಥ್

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಿಡಿಎ ಬಡಾವಣೆಯಲ್ಲಿ ಹಾದುಹೋಗುವ ಮೈಸೂರು ರಸ್ತೆ-ಮಾಗಡಿ ರಸ್ತೆ ಸಂಪರ್ಕಿಸುವ ಪ್ರಮುಖ ರಸ್ತೆ (ಎಂಎಆರ್) ಕಾಮಗಾರಿ ವೇಗ ಪಡೆದುಕೊಂಡಿದೆ.

ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಯೋಜನೆಯ ಹಲವು ಅನುಮತಿ ಪ್ರಕ್ರಿಯೆಗಳು, ಟೆಂಡರ್ ಸಮ್ಮತಿ ಕಾರ್ಯಗಳು ಕಳೆದ ಆರು ತಿಂಗಳಲ್ಲಿ ಮುಗಿದಿರುವುದರಿಂದ ಎಂಎಆರ್ ಕಾಮಗಾರಿಗೆ ಚುರುಕುಗೊಂಡಿದೆ.

ನಾಡಪ್ರಭು ಕೆಂಪೇಗೌಡ ಬಿಡಿಎ ಬಡಾವಣೆಯಲ್ಲಿ ಎಂಎಆರ್‌ನಲ್ಲಿ 35 ಕಿರುಸೇತುವೆ ನಿರ್ಮಾಣವಾಗಬೇಕಿದೆ. ಅದಕ್ಕೆ ಬಿಡಿಎ ಆಯುಕ್ತ ಕುಮಾರ್ ನಾಯಕ್ ಅವರು ಮಾರ್ಚ್‌ನಲ್ಲಿ ಅನುಮತಿ ನೀಡಿದ್ದು, ಈಗಾಗಲೇ 15 ಕಿರುಸೇತುವೆಗಳ ಕಾಮಗಾರಿ ಮುಗಿದಿವೆ.

ನಾಡಪ್ರಭು ಕೆಂಪೇಗೌಡ ಬಡಾವಣೆ ಎಂಎಆರ್‌ನಲ್ಲಿ ಕಿರು ಸೇತುವೆ ಕಾಮಗಾರಿ

10 ಕಿರುಸೇತುವೆಗಳು ನಿರ್ಮಾಣ ಕಾರ್ಯ ಅಂತಿಮ ಹಂತದಲ್ಲಿದ್ದು, ಉಳಿದ ಇನ್ನೈದು ತಿಂಗಳಲ್ಲಿ ಪೂರ್ಣಗೊಳ್ಳಲಿವೆ.

ಎಂಎಎಆರ್‌ನಲ್ಲಿ 2.90 ಕಿ.ಮೀ, 5.10 ಕಿ.ಮೀ ಹಾಗೂ 9.70 ಕಿ.ಮೀನಲ್ಲಿ ಅಂಡರ್‌ಪಾಸ್‌ಗಳನ್ನು ನಿರ್ಮಿಸಬೇಕಿದೆ. ಇವುಗಳು ಬಡಾವಣೆಯ ರಸ್ತೆಗಳನ್ನು ಪ್ರಮುಖ ರಸ್ತೆಗೆ ಸಂಪರ್ಕಿಸುತ್ತವೆ. ಈ ಕಾಮಗಾರಿಯ ಗುತ್ತಿಗೆಯನ್ನು ಸೆ.14ರಂದು ಕರಾರು ಪತ್ರದ ಮೂಲಕ ದೃಢೀಕರಿಸಲಾಗಿದೆ. ಅಂಡರ್‌ಪಾಸ್‌ಗಳ ನಿರ್ಮಾಣ ಕಾರ್ಯವೂ ಇದೀಗ ನಡೆಯುತ್ತಿದ್ದು, ಒಂದು ವರ್ಷದಲ್ಲಿ ಎಲ್ಲವೂ ಮುಗಿಯಲಿವೆ ಎಂದು ಬಿಡಿಎ ಎಂಜಿನಿಯರ್‌ಗಳು ತಿಳಿಸಿದರು.

ಅಂಕಿಅಂಶ

10.75 ಕಿ.ಮೀ ಎಂಎಆರ್ ಉದ್ದ	₹450 ಕೋಟಿ ಯೋಜನೆ ಅಂದಾಜು ವೆಚ್ಚ	100 ಮೀ. ಅಗಲದ ರಸ್ತೆ	9 ಬ್ಲಾಕ್ ಸಂಪರ್ಕಿಸುವ ಪ್ರವೇಶ ರಸ್ತೆ
35 ಸಣ್ಣ ಸೇತುವೆಗಳು ₹26.91 ಕೋಟಿ ಒಟ್ಟು ವೆಚ್ಚ	3 ಅಂಡರ್‌ಪಾಸ್‌ಗಳು ₹39.31 ಕೋಟಿ ನಿರ್ಮಾಣ ವೆಚ್ಚ	1 ರೈಲು ಕೆಳಸೇತುವೆ ₹38.42 ಕೋಟಿ ನಿರ್ಮಾಣ ವೆಚ್ಚ	

ನಾಲ್ಕು ಪ್ರಕರಣ: 10.75 ಕಿ.ಮೀ ಪ್ರಮುಖ ರಸ್ತೆಯಲ್ಲಿ ಸುಮಾರು 1 ಕಿ.ಮೀ ರಸ್ತೆಯ ಪ್ರದೇಶದ ಭೂಸ್ವಾಧೀನ ಪ್ರಕ್ರಿಯೆ ನ್ಯಾಯಾಲಯದಲ್ಲಿದೆ. 9.75 ಕಿ.ಮೀ ರಸ್ತೆಯ ಪೈಕಿ ಸುಮಾರು 3 ಕಿ.ಮೀ ರಸ್ತೆ ಮುಗಿದಿದೆ. ಉಳಿದ ರಸ್ತೆ ಅಭಿವೃದ್ಧಿ ಕಾರ್ಯ ಪ್ರಗತಿಯಲ್ಲಿದೆ. ಇನ್ನೊಂದು ವರ್ಷದಲ್ಲಿ ಸಂಪೂರ್ಣಗೊಳಿಸಲಾಗುತ್ತದೆ ಎಂದು ಬಿಡಿಎ ಎಂಜಿನಿಯರ್‌ಗಳು ಹೇಳಿದರು.

ಎಂಎಆರ್ ನಿರ್ಮಾಣವಾಗುವುದರಿಂದ ಮೈಸೂರು ರಸ್ತೆ ಮತ್ತು ಮಾಗಡಿ ರಸ್ತೆಗೆ ಸಂಪರ್ಕ ಸಿಗುವ ಜತೆಗೆ, ಸೂಲಿಕೆರೆ– ರಾಮಸಂದ್ರ, ಕೆಂಚಾಪುರ, ಕನ್ನಹಳ್ಳಿ ಗ್ರಾಮಗಳಿಗೂ ಸಂಪರ್ಕ ಕಲ್ಪಿಸಲಿದೆ. ಇದಲ್ಲದೆ, ನಾಡಪ್ರಭು ಕೆಂಪೇಗೌಡ ಬಡಾವಣೆಯ 56 ರಸ್ತೆಗಳಿಗೆ ಸಂಪರ್ಕ ಒದಗಿಸಲಿದೆ.

ಎಲ್ಲೆಲ್ಲಿ ಕಿರು ಸೇತುವೆ?: ಕೊಮ್ಮಘಟ್ಟ, ಭೀಮನಕುಪ್ಪೆ, ಕನ್ನಳ್ಳಿ, ರಾಮಸಂದ್ರ, ಕೆಂಚನಪುರ, ಸೂಲಿಕೆರೆ, ಕೊಡಿಗೆಹಳ್ಳಿ, ಚಲ್ಲಘಟ್ಟ.

ಬಿಡಿಎ: 5 ಎಕರೆ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆ ಹಾಗೂ ಉದ್ದೇಶಿತ ಪ್ರಮುಖ ರಸ್ತೆಯಲ್ಲಿ (ಎಂಎಎಆರ್) 5 ಎಕರೆ ಒತ್ತುವರಿಯನ್ನು ಬಿಡಿಎ ತೆರವು ಮಾಡಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಚಲ್ಲಘಟ್ಟ ಗ್ರಾಮದ ಸರ್ವೆ ನಂ. 4 ಮತ್ತು 8 ಅನ್ನು ನಾಡಪ್ರಭು ಕೆಂಪೇಗೌಡ ಬಡಾವಣೆಗೆ ಹಾಗೂ ಎಂಎಎಆರ್‌ಗೆ ಭೂಸ್ವಾಧೀನ ಪಡಿಸಿಕೊಳ್ಳಲಾಗಿತ್ತು. ಈ ಪ್ರದೇಶದಲ್ಲಿ ಕಂದಾಯ ನಿವೇಶನದಾರರು ಒತ್ತುವರಿ ಮಾಡಿಕೊಂಡು ಕಾಮಗಾರಿಗೆ ಅಡಚಣೆ ಉಂಟುಮಾಡಿದ್ದರು.

ಬಿಡಿಎ ಆರಕ್ಷಕ ಅಧೀಕ್ಷಕ ಕೆ. ನಂಜುಂಡೇಗೌಡ ಅವರ ನೇತೃತ್ವದಲ್ಲಿ ಕಾರ್ಯಪಾಲಕ ಎಂಜಿನಿಯರ್ ಅಶೋಕ್ ಹಾಗೂ ಬಿಡಿಎ ಸಿಬ್ಬಂದಿ, ಸ್ಥಳೀಯ ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಲಾಯಿತು ಎಂದು ಪ್ರಕಟಣೆ ತಿಳಿಸಿದೆ.

ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ 5 ಎಕರೆ ಒತ್ತುವರಿಯನ್ನು ಬಿಡಿಎ ಸಿಬ್ಬಂದಿ ತೆರವುಗೊಳಿಸಿದರು

ಕವಾಟಕ್ಕೆ ಹಾನಿ: ಯಶಸ್ವಿ ಶಸ್ತ್ರಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೃದಯದಿಂದ ದೇಹದ ವಿವಿಧ ಭಾಗಗಳಿಗೆ ರಕ್ತ ಸಾಗಿಸುವ ಮಹಾ ಅಪಧಮನಿಯ ಕವಾಟಕ್ಕೆ ಹಾನಿಯಾಗಿ, ಹೃದಯ ವೈಫಲ್ಯಕ್ಕೆ ಒಳಗಾಗಿದ್ದ ನಗರದ 64 ವರ್ಷದ ಮಹಿಳೆಗೆ ಫೋರ್ಟಿಸ್ ಆಸ್ಪತ್ರೆ ವೈದ್ಯರು ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ನಡೆಸಿದ್ದಾರೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆಸ್ಪತ್ರೆಯ ಹೃದ್ರೋಗ ತಜ್ಞ ಡಾ. ಶ್ರೀನಿವಾಸ್ ಪ್ರಸಾದ್, 'ಹತ್ತು ವರ್ಷಗಳಿಂದ ಮಧುಮೇಹ ಹಾಗೂ ಅಧಿಕ ರಕ್ತದೊತ್ತಡದಿಂದ ಮಹಿಳೆ ಬಳಲುತ್ತಿದ್ದರು. ಇದಲ್ಲದೆ, ಜನ್ಮಜಾತ ಹೃದಯ ಕವಾಟದ ಅಸ್ವಸ್ಥತೆಗೆ ಒಳಗಾಗಿದ್ದರು. ಮಹಾ ಅಪಧಮನಿಯ ಕವಾಟ ಬದಲಾವಣೆ ಮತ್ತು ಸಿಎಬಿಜಿ (ಕೊರೊನರಿ ಆರ್ಟರಿ ಬೈಪಾಸ್ ಗ್ರಾಫ್ಟ್) ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಇತ್ತೀಚೆಗೆ ಅವರು ಉಸಿರಾಟದ ಸಮಸ್ಯೆಯನ್ನೂ ಎದುರಿಸುತ್ತಿದ್ದರು. ಪರೀಕ್ಷೆಗೆ ಒಳಪಡಿಸಿದಾಗ ಏಕನಾಳದ ಪರಿಧಮನಿಯ ಕಾಯಿಲೆ ಇರುವುದು ಪತ್ತೆಯಾಯಿತು' ಎಂದು ಹೇಳಿದರು.

'ಮಹಿಳೆಯ 'ಪ್ರಾಸ್ಥೆಟಿಕ್ ಕವಾಟ' ವಿಫಲವಾಗಿದ್ದರಿಂದ, ರಕ್ತನಾಳವು ತೀವ್ರವಾಗಿ ಹಾನಿಗೊಳಗಾಗಿತ್ತು. ಮತ್ತೊಮ್ಮೆ ಕವಾಟ ಬದಲಾವಣೆ ಅಸಾಧ್ಯವಾದ್ದರಿಂದ ಕೆಲ ಆಸ್ಪತ್ರೆಗಳು ಚಿಕಿತ್ಸೆಗೆ ನಿರಾಕರಿಸಿದ್ದವು. ಇದರಿಂದ ಅವರ ಆರೋಗ್ಯ ಸ್ಥಿತಿ ಹದಗೆಟ್ಟಿತ್ತು. ಹೀಗಾಗಿ, ಕವಾಟ ಮರು ಜೋಡಣೆ (ಟಿಎವಿಆರ್) ಶಸ್ತ್ರಚಿಕಿತ್ಸೆ ಮೂಲಕ ಚೇತರಿಸಿಕೊಳ್ಳಲು ನೆರವಾದೆವು' ಎಂದರು.

₹7,500 ಕನಿಷ್ಠ ಪಿಂಚಣಿಗೆ ಆಗ್ರಹ

ಪ್ರಾದೇಶಿಕ ಭವಿಷ್ಯನಿಧಿ ಆಯುಕ್ತರ ಕಚೇರಿ ಮುಂಭಾಗ ನಿವೃತ್ತರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಿಷ್ಠ ₹7,500 ಪಿಂಚಣಿ ಹಾಗೂ ಭತ್ಯೆ, ವೈದ್ಯಕೀಯ ಸೌಲಭ್ಯ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಇಪಿಎಸ್–95 ಬಿಎಂಟಿಸಿ, ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘಟನೆಯ ಸದಸ್ಯರು ಭವಿಷ್ಯ ನಿಧಿ ಪ್ರಾದೇಶಿಕ ಆಯುಕ್ತರ ಕಚೇರಿ ಎದುರು ಬುಧವಾರ ಪ್ರತಿಭಟನೆ ನಡೆಸಿದರು.

ಕೇಂದ್ರ ಸರ್ಕಾರ ನಿವೃತ್ತ ನೌಕರರ ಕನಿಷ್ಠ ಬೇಡಿಕೆಗಳನ್ನು ಈಡೇರಿಸುತ್ತಿಲ್ಲ. 11 ತಿಂಗಳ ಹಿಂದೆ ಸುಪ್ರೀಂ ಕೋರ್ಟ್ ತೀರ್ಪನ್ನು ಕೇಂದ್ರಿಯ ಇಪಿಎಫ್‌ಒ ಅಧಿಕಾರಿಗಳು ತಿರುಚಿ ಹಲವು ಸುತ್ತೋಲೆಗಳನ್ನು ಹೊರಡಿಸುತ್ತಿದ್ದಾರೆ. ಇದರಿಂದ, ನಿವೃತ್ತರ ಸಮಸ್ಯೆಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ. ನಿವೃತ್ತರಿಂದ ಸಂಗ್ರಹಿಸುವ ದೇಣಿಗೆ ಮತ್ತು ನೀಡುವ ಪಿಂಚಣಿ ನಡುವೆ ಅಜಗಜಾಂತರವಿದ್ದು, ಇಲ್ಲಿಯೂ ವಂಚನೆ ಮಾಡಲಾಗುತ್ತಿದೆ' ಎಂದು ಸಂಘದ ಅಧ್ಯಕ್ಷ ಶಂಕರ್ ಕುಮಾರ್ ದೂರಿದರು.

'ನಿವೃತ್ತ ನೌಕರರಲ್ಲಿ ಹೆಚ್ಚಿನವರು ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಅವರಿಗೆ ಈಗ ನೀಡುತ್ತಿರುವ ಪಿಂಚಣಿಯಿಂದ ಜೀವನ ನಿರ್ವಹಣೆ ಕಷ್ಟವಾಗಿದೆ. ವೈದ್ಯಕೀಯ ಸೌಲಭ್ಯ ಸೇರಿ ಇತರೆ ಸವಲತ್ತುಗಳನ್ನು ನೀಡಬೇಕು' ಎಂದು ಸಂಘದ ಕಾರ್ಯಾಧ್ಯಕ್ಷ ನಂಜುಂಡೇಗೌಡ ಆಗ್ರಹಿಸಿದರು. ಸ್ಥಳಕ್ಕೆ ಬಂದ ಪ್ರಾದೇಶಿಕ ಭವಿಷ್ಯ ನಿಧಿ ಅಧಿಕಾರಿಗಳು ಪ್ರತಿಭಟನಕಾರರಿಂದ ಮನವಿ ಸ್ವೀಕರಿಸಿದರು. 'ತಮ್ಮ ಮನವಿಯನ್ನು ಸಚಿವರ ಕಾರ್ಯಾಲಯಕ್ಕೆ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗುವುದು' ಎಂದು ಹೇಳಿದರು.

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಇಪಿಎಸ್–95 ಬಿಎಂಟಿಸಿ, ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘಟನೆಯ ಸದಸ್ಯರು ಭವಿಷ್ಯ ನಿಧಿ ಪ್ರಾದೇಶಿಕ ಆಯುಕ್ತರ ಕಚೇರಿ ಎದುರು ಬುಧವಾರ ಪ್ರತಿಭಟನೆ ನಡೆಸಿದರು. ಪ್ರಜಾವಾಣಿ ಚಿತ್ರ

'ಚುನಾವಣೆಗೂ ಕುಕ್ಕರ್ ವಿತರಣೆಗೂ ಸಂಬಂಧವಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನನ್ನ ಜನ್ಮ ದಿನದ ಪ್ರಯುಕ್ತ ಕಳೆದ 10 ವರ್ಷಗಳಿಂದ ವಿವಿಧ ಕಡೆಗಳಲ್ಲಿ ಬಡವರಿಗೆ ಕುಕ್ಕರ್, ಇಸ್ತ್ರಿಪೆಟ್ಟಿಗೆ, ನೋಟ್‌ಬುಕ್ ವಿತರಣೆ ಮಾಡುತ್ತಾ ಬಂದಿದ್ದೇನೆ. ಜನವರಿಯಲ್ಲಿ ವರುಣಾ ಕ್ಷೇತ್ರದ ಕುಪ್ಪರವಳ್ಳಿಯಲ್ಲಿ ವಿತರಣೆ ಮಾಡಲಾಗಿತ್ತು. ಅದಕ್ಕೂ ವಿಧಾನಸಭಾ ಚುನಾವಣೆಗೂ ಯಾವುದೇ ಸಂಬಂಧವಿಲ್ಲ' ಎಂದು ರಾಜ್ಯ ಮಡಿವಾಳರ ಸಂಘದ ಅಧ್ಯಕ್ಷ ಸಿ. ನಂಜಪ್ಪ ಸ್ಪಷ್ಟನೆ ನೀಡಿದ್ದಾರೆ.

'2022ರಲ್ಲಿ ಮೈಸೂರು ಜಿಲ್ಲೆಯಲ್ಲಿ ಕಾರ್ಯಕ್ರಮ ಮಾಡಲು ನಿರ್ಧರಿಸಲಾಗಿತ್ತು. ಸಿದ್ದರಾಮಯ್ಯ ಅವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿತ್ತು. ಅವರು ಬರಲಾಗುವುದಿಲ್ಲ ಎಂದು ಹೇಳಿದ್ದರಿಂದ ಕಾರ್ಯಕ್ರಮವನ್ನೇ ಮುಂದಕ್ಕೆ ಹಾಕಿ ಜನವರಿ 27ಕ್ಕೆ ನಡೆಸಲಾಗಿತ್ತು. ಆಗ ಯಾವುದೇ ಚುನಾವಣೆ ಘೋಷಣೆಯಾಗಿರಲಿಲ್ಲ' ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಮಡಿವಾಳ ಸಮಾಜ ಸಂಘಟಿತರಾಗಿರುವುದಕ್ಕೆ ಯತೀಂದ್ರ ಸಿದ್ದರಾಮಯ್ಯ ಕೃತಜ್ಞತೆ ಸಲ್ಲಿಸುತ್ತಾ ಆ ಕಾರ್ಯಕ್ರಮವನ್ನು ನೆನಪು ಮಾಡಿಕೊಂಡರು. ಅದನ್ನೇ ವಿವಾದ ಮಾಡಲಾಗಿದೆ' ಎಂದು ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಬಿಧೂಡಿಗೆ ಟೊಂಕ್ ಜಿಲ್ಲೆ ಚುನಾವಣೆ ಹೊಣೆ

ನವದೆಹಲಿ (ಪಿಟಿಐ): ಲೋಕಸಭೆ ಕಲಾಪದ ವೇಳೆ ಬಿಎಸ್‌ಪಿ ಸಂಸದ ಡ್ಯಾನಿಶ್ ಅಲಿ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿ ಸುದ್ದಿಯಾಗಿದ್ದ ಪಕ್ಷದ ಸಂಸದ ರಮೇಶ್ ಬಿಧೂಡಿ ಅವರಿಗೆ ಬಿಜೆಪಿಯು ರಾಜಸ್ಥಾನದ ಟೊಂಕ್ ಜಿಲ್ಲೆಯಲ್ಲಿ ಚುನಾವಣೆ ಜವಾಬ್ದಾರಿ ನೀಡಿದೆ.

ರಮೇಶ್ ಬಿಧೂಡಿ

ಕಾಂಗ್ರೆಸ್‌ನ ಹಿರಿಯ ನಾಯಕ ಸಚಿನ್ ಪೈಲಟ್ ಪ್ರತಿನಿಧಿಸುವ ಕ್ಷೇತ್ರವೂ ಸೇರಿದಂತೆ ಟೊಂಕ್ ಜಿಲ್ಲೆಯಲ್ಲಿ ನಾಲ್ಕು ವಿಧಾನಸಭಾ ಕ್ಷೇತ್ರಗಳಿವೆ. ಜಿಲ್ಲೆಯಲ್ಲಿ ಗುರ್ಜರ್ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ.

ದಕ್ಷಿಣ ದೆಹಲಿ ಲೋಕಸಭಾ ಕ್ಷೇತ್ರ ಪ್ರತಿನಿಧಿಸುವ ಬಿಧೂಡಿ ಅವರು ಗುರ್ಜರ್ ಸಮುದಾಯಕ್ಕೆ ಸೇರಿದವರು. ಪೈಲಟ್ ಕೂಡ ಇದೇ ಸಮುದಾಯಕ್ಕೆ ಸೇರಿದವರಾಗಿರುವುದರಿಂದ, ಬಿಜೆಪಿಯ ನಡೆಗೆ ಮಹತ್ವ ಬಂದಿದೆ

ಬಜಾಜ್ ಪಲ್ಸರ್ ಎನ್150 ಬೈಕ್ ಬಿಡುಗಡೆ

ಬೆಂಗಳೂರು: ಬಜಾಜ್ ಆಟೊ ಕಂಪನಿಯ ಹೊಸ ಪಲ್ಸರ್ ಎನ್150 ಬೈಕ್ ಅನ್ನು ನಗರದ ಬನ್ನೇರುಘಟ್ಟ ರಸ್ತೆಯಲ್ಲಿರುವ ಪಾಪ್ಯುಲರ್ ಬಜಾಜ್ ಶೋರೂಂನಲ್ಲಿ ಬುಧವಾರ ಬಿಡುಗಡೆ ಮಾಡಲಾಯಿತು.

ಬೆಂಗಳೂರಿನಲ್ಲಿ ಇದರ ಎಕ್ಸ್‌ಶೋರೂಂ ಬೆಲೆ ₹1.18 ಲಕ್ಷ ಇದೆ. 14 ಲೀಟರ್ ಇಂಧನ ಸಾಮರ್ಥ್ಯ ಹೊಂದಿರುವ ಬೈಕ್, 45–50 ಕಿಲೋಮೀಟರ್‌ವರೆಗೆ ಮೈಲೇಜ್ ನೀಡಲಿದೆ ಎಂದು ಕಂಪನಿ ತಿಳಿಸಿದೆ. ಎನ್150 ಬೈಕ್ ಎನ್160 ಗಿಂತಲೂ ತೂಕದಲ್ಲಿ 7 ಕೆ.ಜಿ. ಕಡಿಮೆ ಇದ್ದು, 145 ಕೆ.ಜಿ. ತೂಕ ಹೊಂದಿದೆ ಎಂದು ಕಂಪನಿ ತಿಳಿಸಿದೆ.

ನಿಧನ ವಾರ್ತೆ

ಕೆ.ಜಿ. ಶಿವಣ್ಣ



ರಾಜರಾಜೇಶ್ವರಿನಗರ: ಗೋವಾ ವಿಮೋಚನಾ ಹೋರಾಟಗಾರ ಕೆ.ಜಿ.ಶಿವಣ್ಣ (81) ಹೃದಯಾಘಾತದಿಂದ ನಿಧನರಾದರು. ನಾಗರಬಾವಿಯ ಆರೋಗ್ಯ ಬಡಾವಣೆಯಲ್ಲಿ ನೆಲೆಸಿದ್ದರು. ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ. ಮೃತರ ಅಂತ್ಯಕ್ರಿಯೆ ಸುಮನಹಳ್ಳಿ ಚಿತಾಗಾರದಲ್ಲಿ ಬುಧವಾರ ನಡೆಯಿತು.

ಬೆಂಗಳೂರು ಗಾಲ್ಫ್ ಕ್ಲಬ್
ನಂ 2, ಸ್ಯಾಂಕಿ ರಸ್ತೆ, ಹೈಗ್ರೌಂಡ್ಸ್, ಬೆಂಗಳೂರು–560001

ಪ್ರಕಟಣೆ

ಸದಸ್ಯರಿಗೆ ಕಳುಹಿಸುತ್ತಿರುವ ನೋಟೀಸಿನಲ್ಲಿ ನಮೂದಿಸಿರುವ ವ್ಯವಹಾರಗಳನ್ನು **ದಿನಾಂಕ: 19ನೇ ಅಕ್ಟೋಬರ್ 2023 ರಂದು ಗುರುವಾರ ಸಂಜೆ 5.00 ಗಂಟೆಗೆ** ಸದಸ್ಯರ ವಿಶೇಷ ಸಾಮಾನ್ಯ ಸಭೆಯನ್ನು ಹೊಸ ಕ್ಲಬ್ ಹೌಸ್ ಆವರಣದಲ್ಲಿ ನಡೆಸಲಾಗುವುದೆಂದು ಈ ಮೂಲಕ ಪ್ರಕಟಿಸಲಾಗಿದೆ.

ಸಮಿತಿಯ ಅಪ್ಪಣೆಯ ಮೇರೆಗೆ
ಸಹಿ/–
ಸ್ಥಳ: ಬೆಂಗಳೂರು — ವಿಠಲ್ ಬೆಳ್ಳಂದೂರು
ದಿನಾಂಕ: 27.09.2023 — ಗೌರವ ಕಾರ್ಯದರ್ಶಿ

ಐಐಟಿ ನಿವೃತ್ತ ನಿರ್ದೇಶಕ ಉದಯ್ ದೇಸಾಯಿ ಆಶಯ

'ಹವಾಮಾನ ವೈಪರೀತ್ಯ: ಅಧ್ಯಯನ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹವಾಮಾನ ವೈಪರೀತ್ಯದಿಂದ ಉಂಟಾಗುತ್ತಿರುವ ಜಾಗತಿಕ ತಾಪಮಾನ ಏರಿಕೆ, ಅತಿವೃಷ್ಟಿ ಅನಾವೃಷ್ಟಿಯಂತಹ ಸಮಸ್ಯೆಗಳ ಕುರಿತು ಅಧ್ಯಯನಗಳು ನಡೆಯಬೇಕು' ಎಂದು ಹೈದರಾಬಾದ್‌ನ ಭಾರತೀಯ ತಂತ್ರಜ್ಞಾನ ಸಂಸ್ಥೆಯ (ಐಐಟಿ) ನಿವೃತ್ತ ನಿರ್ದೇಶಕ ಉದಯ್ ಬಿ. ದೇಸಾಯಿ ಆಶಯ ವ್ಯಕ್ತಪಡಿಸಿದರು.

ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ನಗರದಲ್ಲಿ ಬುಧವಾರ ಹಮ್ಮಿಕೊಂಡ 15ನೇ ಘಟಿಕೋತ್ಸವ ಸಮಾರಂಭದಲ್ಲಿ ಪದವಿ ಪ್ರದಾನ ಮಾಡಿ, ಮಾತನಾಡಿದರು.

'ಮಳೆಗಾಲದಲ್ಲಿ ಬಿಸಿಲು, ಬೇಸಿಗೆಯಲ್ಲಿ ಮಳೆ ಆಗುತ್ತಿದೆ. ಪರಿಸರ ಸಮತೋಲವನ್ನು ಕಳೆದುಕೊಂಡಿದೆ. ಈ ಪರಿಸ್ಥಿತಿಯನ್ನು ಹೇಗೆ ನಿಭಾಯಿಸಬೇಕು ಎನ್ನುವುದರ ಬಗ್ಗೆ ಚಿಂತನೆ ಮಾಡಿ, ಪರಿಹಾರೋಪಾಯ ಕಂಡುಕೊಳ್ಳಬೇಕು' ಎಂದು ಹೇಳಿದರು.

'ಆವಿಷ್ಕಾರಗಳು ಮೊದಲ ಪ್ರಯತ್ನದಲ್ಲಿಯೇ ಯಶಸ್ವಿಯಾಗುವುದಿಲ್ಲ. ನಿರಂತರ ಪರಿಶ್ರಮದಿಂದ ಮಾತ್ರ ಯಶಸ್ಸು ಸಾಧ್ಯ. ವಿದ್ಯಾರ್ಥಿಗಳು ಕೈಗೊಳ್ಳುವ ಆವಿಷ್ಕಾರಗಳಿಗೆ ಪ್ರಾಧ್ಯಾಪಕರು ಸೂಕ್ತ ಮಾರ್ಗದರ್ಶನ ನೀಡಿ, ಪ್ರೋತ್ಸಾಹ ನೀಡಬೇಕು' ಎಂದು ಸಲಹೆ ನೀಡಿದರು.

ಗೋಕುಲ ಎಜುಕೇಶನ್ ಫೌಂಡೇಷನ್ ಅಧ್ಯಕ್ಷ ಎಂ.ಆರ್. ಜಯರಾಂ, 'ವಿದ್ಯಾರ್ಥಿಗಳೇ ನಮ್ಮ ವಿದ್ಯಾಸಂಸ್ಥೆಯ ನಿಜವಾದ ರಾಯಭಾರಿಗಳು. ನಮ್ಮ ಸಂಸ್ಥೆಯ ವಿದ್ಯಾರ್ಥಿಗಳು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿ, ದೇಶಕ್ಕೆ ಕೀರ್ತಿ ತಂದುಕೊಡಲಿ' ಎಂದು ಹಾರೈಸಿದರು. ಸಮಾರಂಭದಲ್ಲಿ 1,242 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಘಟಿಕೋತ್ಸವ ಸಮಾರಂಭದಲ್ಲಿ ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳೊಂದಿಗೆ ಉದಯ್ ಬಿ. ದೇಸಾಯಿ,ಗೋಕುಲ ಎಜುಕೇಶನ್ ಫೌಂಡೇಷನ್ ಅಧ್ಯಕ್ಷ ಎಂ.ಆರ್.ಜಯರಾಂ, ಉಪಾಧ್ಯಕ್ಷ ಎಂ.ಆರ್. ಸೀತಾರಾಂ, ಗೌರವ ಕಾರ್ಯದರ್ಶಿ ಎಂ.ಆರ್.ರಾಮಯ್ಯ, ಬಿ.ಎಸ್. ರಾಮಪ್ರಸಾದ್ ಇದ್ದಾರೆ

'ಕ್ರಮ ಕೈಗೊಳ್ಳಲು ವಿಳಂಬ ಮಾಡಿದ್ದ ಮೆಟಾ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಭಾರತೀಯ ಸೇನೆಯ ಚಿನಾರ್ ಕೋರ್ ನೇತೃತ್ವದಲ್ಲಿ ಒಂದು ವರ್ಷ ಕಾಲ ಸಂಘಟಿತ ಪ್ರಚಾರ ಹಾಗೂ ತಪ್ಪು ಮಾಹಿತಿ ಪ್ರಸಾರ ಕಾರ್ಯ ನಡೆಸಿದ್ದವರ ವಿರುದ್ಧ ಕೈಗೊಳ್ಳುವಲ್ಲಿ ಫೇಸ್‌ಬುಕ್‌ನ ಮಾತೃಸಂಸ್ಥೆ ಮೆಟಾದ ಭಾರತದ ತಂಡ ವಿಳಂಬ ಮಾಡಿತ್ತು' ಎಂದು ವಾಷಿಂಗ್ಟನ್ ಪೋಸ್ಟ್ ಬುಧವಾರ ಪ್ರಕಟಿಸಿದ ವರದಿಯಲ್ಲಿ ಹೇಳಲಾಗಿದೆ.

ನಕಲಿ ಪ್ರೊಫೈಲ್‌ಗಳನ್ನು ಹಾಗೂ ಖಾತೆಗಳನ್ನು ಸೃಷ್ಟಿಸಿ, ಸಾಮಾಜಿಕ ಮಾಧ್ಯಮಗಳ ಮೂಲಕ ವಿಶ್ವದೆಲ್ಲೆಡೆ ಸುಳ್ಳು ಸಂದೇಶಗಳನ್ನು ಪ್ರಚಾರ ಮಾಡುವ ಕುರಿತು ಎಚ್ಚರಿಸುವ ಕಾರ್ಯವನ್ನು ಮೆಟಾದ ಸಿಐಬಿ (ಕೋಆರ್ಡಿನೇಟೆಡ್ ಇನ್‌ಆಥೆಂಟಿಕ್ ಬಿಹೇವಿಯರ್) ತಂಡ ಮಾಡುತ್ತದೆ. ಈ ತಂಡದ ವರದಿಯಲ್ಲಿನ ಅಂಶಗಳನ್ನು ಉಲ್ಲೇಖಿಸಿ, ವಾಷಿಂಗ್ಟನ್ ಪೋಸ್ಟ್ ವರದಿ ಮಾಡಿದೆ.

ಆದರೆ, ಭಾರತೀಯ ಸೇನೆಯ ಚಿನಾರ್ ಕೋರ್ ಜಾಲವು ಯಾವ ರೀತಿಯ ಪೋಸ್ಟ್‌ಗಳನ್ನು ಮಾಡುತ್ತಿತ್ತು ಎಂಬ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲ. ಆದರೆ, ಈ ಜಾಲವು ಪ್ರಚಾರ ಮಾಡಿದ ತಪ್ಪು ಮಾಹಿತಿಯು ಜಮ್ಮು-ಕಾಶ್ಮೀರದ ಪತ್ರಕರ್ತರನ್ನು ಅಪಾಯಕ್ಕೆ ಸಿಲುಕಿಸಿತ್ತು ಎಂದು ವರದಿಯಲ್ಲಿ ಹೇಳಲಾಗಿದೆ.

'ಸೇನೆಯ ಅಧಿಕಾರಿಗಳು ಟ್ವಿಟರ್ (ಈಗ ಎಕ್ಸ್) ಹಾಗೂ ಫೇಸ್‌ಬುಕ್ ಪ್ರತಿನಿಧಿಗಳನ್ನು ಭೇಟಿ ಮಾಡಿದ್ದರು. ತಪ್ಪು ಮಾಹಿತಿ ಪ್ರಚುರಪಡಿಸುವ ಪಾಕಿಸ್ತಾನ ಮೂಲದ ಜಾಲತಾಣಗಳ ವಿರುದ್ಧವಾಗಿ ನಡೆಸಿದ ಕಾರ್ಯಾಚರಣೆ ಇದಾಗಿತ್ತು ಎಂದು ಸಮರ್ಥಿಸಿಕೊಂಡಿದ್ದರು' ಎಂದೂ ವಾಷಿಂಗ್ಟನ್ ಪೋಸ್ಟ್ ವರದಿ ಮಾಡಿದೆ.

Karnataka Golf Association
No.1, Golf Avenue, Kodihalli, Bengaluru - 560 008.

NOTICE

Notice is hereby given under Rule 19.7 of the Karnataka Golf Association read in conjunction with section 11 (3) of the Karnataka Societies Registration Act 1960 that a Special General Meeting of the Karnataka Golf Association will be held on **Friday** the **20th October 2023** at **5:30 PM** at the KGA Club House to consider and pass certain resolutions circulated to Members individually.

Sd/-
Roopa Pratap
Hon. Secretary
Date: 28.09.2023
Place: Bengaluru

ಮೈಸೂರು ರೇಸ್ ಕ್ಲಬ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸ್: ಪಿ.ಬಿ. ನಂ.11, ರೇಸ್ ಕೋರ್ಸ್ ರಸ್ತೆ, ಮೈಸೂರು–570010
CIN: U85110KA1968PLC001720; Tel.No.: 0821-2521675
Email: secretary@mysoreraceclub.com; Website: mysoreraceclub.com

ಪ್ರಕಟಣೆ
ವಾರ್ಷಿಕ ಮಹಾಸಭೆ ಮುಂದೂಡಿಕೆ

ಸದಸ್ಯರಿಗೆ ತಿಳಿಸುವುದೇನೆಂದರೆ, ಅನಿರೀಕ್ಷಿತ ಹಾಗೂ ಅನಿವಾರ್ಯ ಕಾರಣಗಳಿಂದ ಉದ್ದೇಶಿತ ಕರ್ನಾಟಕ ರಾಜ್ಯ ಬಂದ್ ಹಿನ್ನೆಲೆಯಲ್ಲಿ 29ನೇ ಸೆಪ್ಟೆಂಬರ್ 2023 ರ ಶುಕ್ರವಾರದಂದು ನಿಗದಿಪಡಿಸಿದ್ದ ಕ್ಲಬ್‌ನ (ಕಂಪನಿ) 55ನೇ ವಾರ್ಷಿಕ ಮಹಾಸಭೆಯನ್ನು ನಡೆಸುವುದು ಸಾಧ್ಯವಾಗುತ್ತಿಲ್ಲ. ಹಾಗಾಗಿ ಕಂಪನಿಯ ನಿರ್ದೇಶಕ ಮಂಡಳಿಯು, ವಾರ್ಷಿಕ ಮಹಾಸಭೆಯನ್ನು ಮುಂದೂಡಿ, **8ನೇ ಅಕ್ಟೋಬರ್, ಭಾನುವಾರ 2023 ರಂದು ಬೆಳಿಗ್ಗೆ 11 ಗಂಟೆಗೆ** ಕ್ಲಬ್ (ಕಂಪನಿ)ನ ಪ್ರಧಾನ ಕಚೇರಿಯಲ್ಲಿ ಈಗಾಗಲೇ ಪ್ರಕಟಣಾ ಫಲಕದಲ್ಲಿ 4ನೇ ಸೆಪ್ಟೆಂಬರ್ 2023ರಲ್ಲಿ ನಮೂದಿಸಿರುವ ಕಾರ್ಯಕ್ರಮ ಪಟ್ಟಿಯಂತೆ ನಡೆಯಲಿದೆ. ಇದಕ್ಕೆ ಸಂಬಂಧಿಸಿದಂತೆ ಮೂಲ ದಿನಾಂಕ 29ನೇ ಸೆಪ್ಟೆಂಬರ್ 2023ರಂತೆ ಈಗಾಗಲೇ ಆಹ್ವಾನ ಪತ್ರಿಕೆಗಳನ್ನು ಸದಸ್ಯರುಗಳಿಗೆ ಕಳುಹಿಸಲಾಗಿದೆ

ಆಡಳಿತ ಸಮಿತಿಯ ಆದೇಶಾನುಸಾರ
ಮೈಸೂರು ರೇಸ್ ಕ್ಲಬ್ ಲಿಮಿಟೆಡ್
ಕಾರ್ಯದರ್ಶಿ ಹಾಗೂ ಸಿಇಒ
ದಿನಾಂಕ: 26–09–2023

ಸೂಚನೆ: ಒಂದು ವೇಳೆ ಸದಸ್ಯರ ವಿಳಾಸ ಬದಲಾಗಿದ್ದಲ್ಲಿ ಕೂಡಲೆ ತಿಳಿಸುವುದು

ಪ್ರಜಾವಾಣಿ@75
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಶ್ರೀ ಸಿದ್ದರಾಮಯ್ಯ
ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ರೇಬಿಸ್: ಎಲ್ಲರೂ ಆರೋಗ್ಯಕ್ಕಾಗಿ; ಒಂದು ಆರೋಗ್ಯ ಎಲ್ಲರಿಗಾಗಿ

ನಾಯಿ ಕಡಿತದ ಮುಖೇನ ಹರಡುವ ರೇಬಿಸ್ ಮಾನವ ಮರಣದ ಸಂಖ್ಯೆಯನ್ನು 2030 ರ ವೇಳೆಗೆ ಶೂನ್ಯ ಪ್ರಮಾಣಕ್ಕಿಳಿಸುವ ಗುರಿ

ವಿಶ್ವ ರೇಬಿಸ್ ದಿನ
ಸೆಪ್ಟೆಂಬರ್ 28

ರೇಬಿಸ್ ರೋಗವು ಪ್ರಾಣಿಗಳ ಕಡಿತದಿಂದ ಮುಖ್ಯವಾಗಿ ನಾಯಿಗಳ ಕಡಿತದಿಂದ ಬರುವ ಮಾರಣಾಂತಿಕ ರೋಗವಾಗಿದೆ. ಆದರೆ ಇದನ್ನು 100% ತಡೆಗಟ್ಟಬಹುದು.

ಸಾಕು ನಾಯಿ, ಬೀದಿ ನಾಯಿ, ನಾಯಿಮರಿಗಳು ಅಥವಾ ಲಸಿಕೆ ಹಾಕಿದ ನಾಯಿ - ಯಾವುದೇ ನಾಯಿ ಕಚ್ಚುವುದರಿಂದಲೂ ರೇಬಿಸ್ ರೋಗ ಬರಬಹುದು.

ನಾಯಿ ಕಚ್ಚಿದರೆ: ಮಾಡಬೇಕಾದ್ದು
- ಕಚ್ಚಿದ ಜಾಗವನ್ನು ಸೋಪು ಮತ್ತು ಶುದ್ಧ ಹರಿಯುವ ನಲ್ಲಿ ನೀರಿನಲ್ಲಿ 15 ನಿಮಿಷಗಳವರೆಗೆ ತೊಳೆಯಿರಿ.
- ಕಚ್ಚಿದ ಜಾಗಕ್ಕೆ ಸ್ಥಳೀಯವಾಗಿ ಲಭ್ಯವಿರುವ ನಂಜು ನಿರೋಧಕ ಔಷಧಿ ಲಭ್ಯವಿದ್ದರೆ ಹಚ್ಚಿರಿ

ಮಾಡಬಾರದ್ದು
- ಕಚ್ಚಿದ ಜಾಗವನ್ನು ಬ್ಯಾಂಡೇಜ್ ಅಥವಾ ಯಾವುದೇ ರೀತಿಯ ಬಟ್ಟೆಯಿಂದ ಮುಚ್ಚಬೇಡಿ
- ಕಚ್ಚಿದ ಜಾಗಕ್ಕೆ ಕೆಸರು/ಹಸುವಿನ ಸಗಣಿ/ಕಾಫಿ ಪುಡಿ, ಮೆಣಸಿನ ಪುಡಿ ಅಥವಾ ಇತರ ಯಾವುದೇ ಕಿರಿಕಿರಿ ಉಂಟುಮಾಡುವ ಪದಾರ್ಥಗಳನ್ನು ಹಚ್ಚಬೇಡಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ **ಶ್ರೀ ದಿನೇಶ್ ಗುಂಡೂರಾವ್** ಅವರು ಆಸ್ಪತ್ರೆಗೆ ಭೇಟಿ ನೀಡಿ ರೋಗಿಗಳ ಆರೋಗ್ಯ ವಿಚಾರಿಸುತ್ತಿರುವುದು

ತಕ್ಷಣವೇ ನಿಮ್ಮ ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರ (PHC) / ಸಮುದಾಯ ಆರೋಗ್ಯ ಕೇಂದ್ರ (CHC) / ಜನರಲ್ ಆಸ್ಪತ್ರೆ / ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ.

ರೇಬಿಸ್ ತಡೆಗಟ್ಟುವ ಲಸಿಕೆ (ARV ಮತ್ತು ರೇಬಿಸ್) ಇಮ್ಯುನೊ ಗ್ಲೋಬ್ಯುಲಿನ್ (RIG) ಚಿಕಿತ್ಸೆ (ಪೋಸ್ಟ್ ಎಕ್ಸ್ಪೋಶರ್ ಪ್ರೊಫೈಲಾಕ್ಸಿಸ್) ಎಲ್ಲಾ ಪ್ರಾಣಿ ಕಡಿತದ ಪ್ರಕರಣಗಳಿಗೆ ಉಚಿತವಾಗಿ ಲಭ್ಯವಿದೆ.

ಲಸಿಕಾ ವೇಳಾಪಟ್ಟಿಯನ್ನು ಪೂರ್ಣಗೊಳಿಸಿ	**ದಿನಗಳು: 0, 3, 7, 14, 28** (ಇಂಟ್ರಾಮಸ್ಕುಲರ್, IM)	**ದಿನಗಳು: 0, 3, 7, 28** (ಇಂಟ್ರಾಡರ್ಮಲ್, ID)

ನೆನಪಿಡಿ:
ಯಾವುದೇ ರೀತಿಯ ಪ್ರಾಣಿಗಳು ಕಚ್ಚಿದಾಗ ತಕ್ಷಣವೇ ಮಕ್ಕಳು ತಮ್ಮ ಪಾಲಕರು/ಪೋಷಕರು/ಶಿಕ್ಷಕರಿಗೆ ತಿಳಿಸುವಂತೆ ಮಕ್ಕಳಲ್ಲಿ ಅರಿವು ಮೂಡಿಸಿ
ಸಾಕು ಪ್ರಾಣಿಗಳು ಹಾಗೂ ಹೈರಿಸ್ಕ್ ಗುಂಪಿನ ಜನರು ಲಸಿಕೆ (ಪ್ರಿ-ಎಕ್ಸ್ಪೋಶರ್ ಪ್ರೊಫೈಲಾಕ್ಸಿಸ್) ಪಡೆಯುವುದು ಸುರಕ್ಷಿತ ಕ್ರಮವಾಗಿದೆ

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ರಕ್ಷಿಸುವುದು ಮತ್ತು ಗೌರವಿಸುವುದು" - ಇದು ನಮ್ಮ ದೇಶದ ಪ್ರತಿಯೊಬ್ಬ ನಾಗರೀಕನ ಮೂಲಭೂತ ಕರ್ತವ್ಯ. ಸಂವಿಧಾನದಲ್ಲಿ ಇದನ್ನು ಪ್ರತಿಪಾದಿಸಲಾಗಿದೆ.
ಪ್ರಕಟಣೆ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಬೀಗ ಒಡೆದು ಚಿನ್ನಾಭರಣ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಿಲಕ್‌ನಗರದ ಎಸ್‌ಆರ್‌ಕೆ ಗಾರ್ಡನ್ ಮನೆಯೊಂದರ ಬಾಗಿಲಿಗೆ ಹಾಕಿದ್ದ ಬೀಗ ಒಡೆದು ದುಷ್ಕರ್ಮಿಗಳು, 3.5 ಕೆ.ಜಿ ಚಿನ್ನಾಭರಣ ಹಾಗೂ ₹ 10 ಲಕ್ಷ ನಗದು ಕಳವು ಮಾಡಿ ಪರಾರಿಯಾಗಿದ್ದಾರೆ.

ಕುಟುಂಬಸ್ಥರು ಕೆಲಸದ ನಿಮಿತ್ತ ರಾಮನಗರಕ್ಕೆ ತೆರಳಿದ್ದರು. ಮನೆಯಲ್ಲಿ ಯಾರೂ ಇಲ್ಲದಿರುವುದನ್ನು ಗಮನಿಸಿದ್ದ ಕಳ್ಳರು ಮಧ್ಯರಾತ್ರಿ ಬಂದು ಬೀಗ ಒಡೆದು ಮನೆಯಲ್ಲಿನ ವಸ್ತುಗಳನ್ನು ಚೆಲ್ಲಾಪಿಲ್ಲಿ ಮಾಡಿ, ಚಿನ್ನ ಹಾಗೂ ನಗದು ಕಳವು ಮಾಡಿದ್ದಾರೆ.

'ಪುತ್ರಿಗೆ ಮದುವೆ ನಿಶ್ಚಯಗೊಂಡಿದ್ದರಿಂದ ಚಿನ್ನಾಭರಣ ಮಾಡಿಸಿ ಮನೆಯ ಕಪಾಟಿನಲ್ಲಿ ಇಟ್ಟಿದ್ದೆವು. ಎಲ್ಲವನ್ನೂ ದೋಚಲಾಗಿದೆ' ಎಂದು ಮಾಲೀಕರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಕಳವು ನಡೆದಿರುವ ಮನೆ ಅಕ್ಕ-ಪಕ್ಕದಲ್ಲಿ ಅಳವಡಿಸಿರುವ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಪರಿಶೀಲಿಸಲಾಗಿದೆ. ಕಳ್ಳರು ಓಡಾಟ ನಡೆಸಿರುವ ದೃಶ್ಯವು ಸೆರೆಯಾಗಿದೆ. ಅದನ್ನು ಪರಿಶೀಲನೆ ನಡೆಸಲಾಗಿದ್ದು ಒಬ್ಬನೇ ಬಂದು ಕೃತ್ಯ ಎಸಗಿರುವ ಸಾಧ್ಯತೆ ಇದೆ. ಬೆರಳಚ್ಚು ತಜ್ಞರು ಪರಿಶೀಲನೆ ನಡೆಸಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸ್ಟೆನೊಗ್ರಾಫರ್ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ಹೈಕೋರ್ಟ್

ಉದ್ಯೋಗ ಕಾಯಂಗೆ ಆದೇಶ ಅವಶ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಾವುದೇ ವ್ಯಕ್ತಿ ಉದ್ಯೋಗಕ್ಕೆ ಸೇರಿದಾಗ ಪ್ರೊಬೇಷನರಿ ಅವಧಿ ಮುಗಿದ ಬಳಿಕ ಉದ್ಯೋಗದಾತ ಸಂಸ್ಥೆಯು ಸೇವೆಯ ಕಾಯಂ ಆದೇಶ ಹೊರಡಿಸಿದರೆ ಮಾತ್ರವೇ ಅದು ಕಾಯಂ ಆಗುತ್ತದೆ' ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ವಿರಾಜಪೇಟೆ ನ್ಯಾಯಾಲಯದಲ್ಲಿ ಸ್ಟೆನೊಗ್ರಾಫರ್ ಆಗಿದ್ದ ಮಹಿಳೆಯೊಬ್ಬರು ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಅರ್ಜಿದಾರರರು ಇಲಾಖಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದರೂ ಅವರನ್ನು ಸೇವೆಯಿಂದ ವಜಾಗೊಳಿಸಿ ಆದೇಶ ಹೊರಡಿಸಿರುವುದು ನಿಯಮ ಬಾಹಿರ' ಎಂದು ಅರ್ಜಿದಾರರ ಪರ ವಕೀಲರು ವಾದ ಮಂಡಿಸಿದ್ದರು. ಆದರೆ, ಈ ಈ ವಾದವನ್ನು ನ್ಯಾಯಪೀಠ ತಳ್ಳಿಹಾಕಿದೆ.

'ಒಬ್ಬ ಉದ್ಯೋಗಿ ಆ ಹುದ್ದೆಗೆ ಸೂಕ್ತ ಹೌದೇ ಅಥವಾ ಅಲ್ಲವೇ ಎಂಬುದರ ಮೌಲ್ಯಮಾಪನ ಮಾಡಲು ಮತ್ತು ಉದ್ಯೋಗಿಯು ತಾನು ಆ ಹುದ್ದೆಗೆ ಸೂಕ್ತ ಹೌದೋ ಅಲ್ಲವೋ ಎಂಬುದನ್ನು ಪರಿಶೀಲಿಸಿಕೊಳ್ಳಲು ಪ್ರೊಬೇಷನರಿ ಅವಧಿಯಲ್ಲಿ ಆಯ್ಕೆಗಳಿರುತ್ತವೆ. ಉದ್ಯೋಗಿ ಪ್ರೊಬೇಷನರಿ ಅವಧಿ ಮುಗಿದ ಬಳಿಕ ಸೇವೆಯಲ್ಲಿ ಮುಂದುವರಿಯಬಹುದು. ಆದರೆ, ಆ ಸೇವೆ ಸ್ವಾಭಾವಿಕ ವಾಗಿಯೇ ಕಾಯಂ ಆಗುವುದಿಲ್ಲ. ಸೇವೆ ಕಾಯಂ ಆಗಬೇಕಾದರೆ ಅದಕ್ಕೆ ಉದ್ಯೋಗ ನೀಡುವ ಸಂಸ್ಥೆ ಪ್ರತ್ಯೇಕ ಆದೇಶವನ್ನು ಹೊರಡಿಸಬೇಕು' ಎಂದು ಹೇಳಿದೆ.

'ನಿಯಮದಂತೆ ಪ್ರೊಬೇಷನರಿ ಅವಧಿಯ ಸೇವಾ ನಿಯಮಗಳ ವಿಚಾರದಲ್ಲಿ ಈಗಾಗಲೇ ಹಲವು ಕೋರ್ಟ್‌ಗಳು ಸ್ಪಷ್ಟ ತೀರ್ಪು ನೀಡಿವೆ. ಅದನ್ನು ಪಾಲನೆ ಮಾಡಬೇಕು. ಈ ಪ್ರಕರಣದಲ್ಲಿ ಅರ್ಜಿದಾರರ ಪ್ರೊಬೇಷನರಿ ಅವಧಿ ಮುಗಿದಿದ್ದರೂ ಸೇವೆಯಲ್ಲಿ ಮುಂದುವರಿದಿದ್ದಾರೆ. ಆದರೆ, ಅವರ ಸೇವೆಯ ಕುರಿತಾಗಿ ಕಾಯಂ ಆದೇಶ ಹೊರಡಿಸಿಲ್ಲ. ಹೀಗಾಗಿ, ಅವರ ಸೇವೆ ಸಹಜವಾಗಿಯೇ ಕಾಯಂ ಆಗಿದೆ ಎಂದು ಹಕ್ಕು ಮಂಡಿಸಲಾಗದು' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಮುಖ್ಯಾಂಶಗಳು

- ಮುಖ್ಯ ನ್ಯಾಯಮೂರ್ತಿ ನೇತೃತ್ವದ ಪೀಠದಿಂದ ಅರ್ಜಿಯ ವಿಚಾರಣೆ
- ಸೇವೆ ಸ್ವಾಭಾವಿಕವಾಗಿ ಕಾಯಂ ಆಗುವುದಿಲ್ಲ
- ಇಲಾಖಾ ಪರೀಕ್ಷೆಯಲ್ಲಿ ಅರ್ಜಿದಾರರು ತೇರ್ಗಡೆ



ಟ್ವಿಟರ್: ಕೇಂದ್ರದ ನಿಲುವು ತಿಳಿಸಲು ಅ.4ರವರೆಗೆ ಗಡುವು

ಬೆಂಗಳೂರು: 'ಕೆಲವು ವೈಯಕ್ತಿಕ ಟ್ವಿಟರ್ ಖಾತೆಗಳನ್ನು ನಿರ್ಬಂಧಿಸಲು ಎಕ್ಸ್ ಕಾರ್ಪ್ (ಹಿಂದಿನ ಟ್ವಿಟರ್) ಕಂಪನಿಗೆ ಸೂಚಿಸಿದ ಆದೇಶ ಮರು ಪರಿಶೀಲಿಸುವ ವಿಚಾರದಲ್ಲಿನ ನಿಮ್ಮ ನಿಲುವು ತಿಳಿಸಿ' ಎಂಬ ನಿರ್ದೇಶನಕ್ಕೆ ಉತ್ತರಿಸಲು ಕೇಂದ್ರ ಸರ್ಕಾರಕ್ಕೆ ಹೈಕೋರ್ಟ್, ಅಕ್ಟೋಬರ್ 4ರವರೆಗೆ ಕಾಲಾವಕಾಶ ನೀಡಿದೆ.

ಈ ಸಂಬಂಧ ಎಕ್ಸ್ ಕಾರ್ಪ್ (ಟ್ವಿಟರ್) ಸಲ್ಲಿಸಿರುವ ಮೇಲ್ಮನವಿಯನ್ನು ನ್ಯಾಯಮೂರ್ತಿ ಜಿ.ನರೇಂದರ್ ಮತ್ತು ವಿಜಯಕುಮಾರ್ ಎ.ಪಾಟೀಲ್ ಅವರಿದ್ದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಕೇಂದ್ರ ಸರ್ಕಾರದ ಪರ ವಕೀಲ ಎಂ.ಎನ್. ಕುಮಾರ್, 'ನಿರ್ಬಂಧದ ಆದೇಶವನ್ನು ಪರಿಶೀಲನೆ ನಡೆಸುವ ಕುರಿತು ನಿಲುವು ತಿಳಿಸುವಂತೆ ಇದೇ 20ರಂದು ನ್ಯಾಯಪೀಠ ಸೂಚಿಸಿದೆ. ಆದರೆ, ಈ ನಿಟ್ಟಿನಲ್ಲಿನ ಕೆಲವು ವಿಚಾರಗಳನ್ನು ಇನ್ನೂ ನಿರ್ಧರಿಸಬೇಕಿದ್ದು, ಅದಕ್ಕಾಗಿ ಮೂರು ವಾರಗಳ ಕಾಲಾವಕಾಶ ನೀಡಬೇಕು' ಎಂದು ಕೋರಿದರು.

ಮೂರು ವಾರಗಳ ಕಾಲಾವಕಾಶ ನೀಡಲು ನಿರಾಕರಿಸಿದ ನ್ಯಾಯಪೀಠ, ಅಕ್ಟೋಬರ್ 4ಕ್ಕೆ ವಿಚಾರಣೆ ಮುಂದೂಡಿ, ಅಷ್ಟರೊಳಗೆ ನಿಮ್ಮ ನಿಲುವು ತಿಳಿಸಿ' ಎಂದು ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಿತು.

ಕೆಲವು ವೈಯಕ್ತಿಕ ಖಾತೆಗಳ ಮೇಲೆ ನಿರ್ಬಂಧ ವಿಧಿಸಿ ಕೇಂದ್ರ ಸರ್ಕಾರ 2021ರ ಫೆಬ್ರುವರಿ ಮತ್ತು 2022ರ ಅವಧಿಯಲ್ಲಿ ಮಾಡಿದ್ದ ಆದೇಶಗಳನ್ನು ಪ್ರಶ್ನಿಸಿದ್ದ ಅರ್ಜಿ ವಜಾಗೊಳಿಸಿದ್ದ ಏಕಸದಸ್ಯ ನ್ಯಾಯಪೀಠದ ತೀರ್ಪು ಪ್ರಶ್ನಿಸಿ ಎಕ್ಸ್ ಕಾರ್ಪ್ ಈ ಮೇಲ್ಮನವಿ ಸಲ್ಲಿಸಿದೆ.

ಸುದ್ದಿ 2 ನಿಮಿಷ

ಮಾದಕ ವಸ್ತು ನಿಯಂತ್ರಣ: ವಿಶೇಷ ಪೊಲೀಸ್ ಕಮಿಷನರೇಟ್‌ಗೆ ಒತ್ತಾಯ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಮಾದಕ ವಸ್ತುಗಳ ಮಾರಾಟ ಮತ್ತು ಸೇವನೆ ನಿಯಂತ್ರಿಸಲು ವಿಶೇಷ ಪೊಲೀಸ್ ಕಮಿಷನರೇಟ್ ಪ್ರಾರಂಭಿಸುವಂತೆ ಕೆಪಿಸಿಸಿ ಮಾಧ್ಯಮ ಸಮಿತಿ ಉಪಾಧ್ಯಕ್ಷ ರಮೇಶ್ ಬಾಬು ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಗ್ರಹಿಸಿದ್ದಾರೆ.

ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸಿರುವ ಅವರು, 'ಕರ್ನಾಟಕದಲ್ಲಿ ಮಾದಕ ವಸ್ತುಗಳ ಬಳಕೆ ಹೆಚ್ಚುತ್ತಿದ್ದು, ಯುವಜನರು ಅಪಾಯದ ಸುಳಿಗೆ ಸಿಲುಕುತ್ತಿರುವ ಬಗ್ಗೆ ಕೇಂದ್ರ ಸರ್ಕಾರವು ರಾಜ್ಯಸಭೆಯಲ್ಲಿ 2022ರ ಡಿಸೆಂಬರ್ 14ರಂದು ಮಾಹಿತಿ ಹಂಚಿಕೊಂಡಿತ್ತು. ಬೆಂಗಳೂರು ಮಹಾನಗರದಲ್ಲಿ ಈ ದಂಧೆ ವ್ಯಾಪಕವಾಗಿ ಬೆಳೆಯುತ್ತಿದೆ. ಅದನ್ನು ನಿಯಂತ್ರಿಸಲು ಮಾದಕ ವಸ್ತುಗಳಿಗೆ ಸಂಬಂಧಿಸಿದ ಪ್ರಕರಣಗಳ ತನಿಖೆ ಹಾಗೂ ನಿಯಂತ್ರಣಕ್ಕೆ ಪ್ರತ್ಯೇಕ ಪೊಲೀಸ್ ಕಮಿಷನರೇಟ್ ತೆರೆಯಬೇಕು' ಎಂದು ಒತ್ತಾಯಿಸಿದ್ದಾರೆ.

ನಗರದಲ್ಲಿ ಪ್ರತಿ ಪೊಲೀಸ್ ಠಾಣೆಯಲ್ಲೂ ಮಾದಕ ವಸ್ತುಗಳ ಪ್ರಕರಣಗಳ ತನಿಖೆಗೆ ಇನ್‌ಸ್ಪೆಕ್ಟರ್ ಹಂತದ ಒಬ್ಬ ಅಧಿಕಾರಿಯನ್ನು ನೇಮಿಸಬೇಕು. ಈ ಪ್ರಕರಣಗಳ ತನಿಖೆಗೆ ಅಗತ್ಯ ಸಿಬ್ಬಂದಿಯನ್ನೂ ಒದಗಿಸಬೇಕು ಎಂದು ಮನವಿ ಮಾಡಿದ್ದಾರೆ.

ರಮೇಶ್ ಬಾಬು ಅವರ ಮನವಿ ಕುರಿತು ಪರಿಶೀಲಿಸುವಂತೆ ಮುಖ್ಯಮಂತ್ರಿ ಅವರು ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಸೂಚಿಸಿದ್ದಾರೆ.

ಪೊಲೀಸರು ಹಾಗೂ ಐಟಿ ಮುಖ್ಯಸ್ಥರ ಜತೆಗೆ ನಡೆದ ಸಂವಾದದಲ್ಲಿ ಸಚಿವ ಜಿ. ಪರಮೇಶ್ವರ ಅವರಿಗೆ ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ನೆನಪಿನ ಕಾಣಿಕೆ ನೀಡಿದರು. ನಗರ ಪೊಲೀಸ್ ಆಯುಕ್ತ ಬಿ. ದಯಾನಂದ್ ಇದ್ದರು

ಸೈಬರ್ ಕ್ರೈಂ ಪತ್ತೆ: ತರಬೇತಿಗೆ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೈಬರ್ ಅಪರಾಧ ಪ್ರಕರಣ ಪತ್ತೆಹಚ್ಚುವುದು ಹಾಗೂ ಅಂಥ ಪ್ರಕರಣಗಳನ್ನು ತಡೆಗಟ್ಟಲು ನಗರದ ಪೊಲೀಸರಿಗೆ ಅಗತ್ಯ ತಂತ್ರಜ್ಞಾನದ ತರಬೇತಿ ನೀಡಲು 'ಬೆಂಗಳೂರು ಸೈಬರ್‌ಸ್ಪಿಯರ್ ಸೆಂಟರ್ ಫಾರ್ ಎಕ್ಸಲೆನ್ಸ್' ಕೇಂದ್ರವನ್ನು ಆರಂಭಿಸಲು ತೀರ್ಮಾನಿಸಲಾಗಿದೆ.

ಈ ಕೇಂದ್ರದ ಅನುಷ್ಠಾನ ಸಂಬಂಧ ನಗರದಲ್ಲಿ ಬುಧವಾರ ಗೃಹಸಚಿವ ಜಿ. ಪರಮೇಶ್ವರ ನೇತೃತ್ವದಲ್ಲಿ ನಡೆದ 'ಟೆಕ್‌ಫ್ಯೂಷನ್ ಸನ್‌ರೈಸ್ ಸಮ್ಮಿಟ್ 2023'ರಲ್ಲಿ ನಗರ ಪೊಲೀಸರು ಹಾಗೂ ನಗರದ ವಿವಿಧ ಐಟಿ ಕಂಪನಿಗಳ ಮುಖ್ಯಸ್ಥರ ಜತೆಗೆ ಸಂವಾದ ನಡೆಯಿತು.

ಸಂವಾದದ ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಸಚಿವ ಪರಮೇಶ್ವರ, 'ಬೆಂಗಳೂರು ನಗರ ತಂತ್ರಜ್ಞಾನ ಅಭಿವೃದ್ಧಿಯಲ್ಲಿ ಮುಂದಿದೆ. ಸೈಬರ್ ಸೆಕ್ಯೂರಿಟಿ ಕೌಶಲ ಜ್ಞಾನವನ್ನು ಪೊಲೀಸರ ಜತೆಗೆ ಹಂಚಿಕೊಳ್ಳುವ ಕುರಿತು ಸಭೆಯಲ್ಲಿ ಚರ್ಚಿಸಲಾಗಿದೆ. ಪೊಲೀಸ್ ಇಲಾಖೆಯಲ್ಲಿ ಎಂಜಿನಿಯರಿಂಗ್, ಎಂಎಸ್‌ಸಿ ಸೇರಿದಂತೆ ಇನ್ನಿತರ ತಾಂತ್ರಿಕ ಪದವೀಧರರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅಂತಹ ಅಧಿಕಾರಿಗಳನ್ನು ಗುರುತಿಸಿ, ಐ.ಟಿ ಕಂಪನಿಗಳ ಸಹಭಾಗಿತ್ವದಲ್ಲಿ ಸೈಬರ್ ಸೆಕ್ಯೂರಿಟಿ ಕುರಿತು ಸೂಕ್ತ ತರಬೇತಿ ನೀಡಲಾಗುವುದು. ಇದಕ್ಕಾಗಿಯೇ ಈ ಕೇಂದ್ರವು ನೆರವಾಗಲಿದೆ' ಎಂದು ವಿವರಿಸಿದರು.

'50ಕ್ಕೂ ಹೆಚ್ಚು ಐಟಿ ಕಂಪನಿಗಳು ಪಾಲ್ಗೊಂಡಿದ್ದವು. ಈ ವೇಳೆ 'ಬೆಂಗಳೂರು ಸುರಕ್ಷಿತ ನಗರಿ'ಯಾಗಿರಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಸಲಹೆ ನೀಡಿದ್ದಾರೆ. ಸಂಚಾರ ದಟ್ಟಣೆ ಸಮಸ್ಯೆ, ಸೈಬರ್ ಅಪರಾಧ ಸಮಸ್ಯೆ ಬಗೆಹರಿಸಬೇಕಾಗಿದೆ' ಎಂದು ತಿಳಿಸಿದರು.

'ತಮ್ಮ ಕಂಪನಿಗಳಲ್ಲಿ ಲಭ್ಯವಿರುವ ಸಂಶೋಧನಾ ಸೌಲಭ್ಯ ಹಾಗೂ ಪ್ರಯೋಗಾಲಯ ಬಳಸಿಕೊಳ್ಳುವಂತೆ ಐಟಿ ಕಂಪನಿಗಳ ಮುಖ್ಯಸ್ಥರು ತಿಳಿಸಿದ್ದಾರೆ. ಅವರ ತಂತ್ರಜ್ಞಾನದ ಸಹಕಾರ ಪಡೆಯಲಾಗುವುದು' ಎಂದು ಹೇಳಿದರು.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್, ನಗರ ಪೊಲೀಸ್ ಆಯುಕ್ತ ಬಿ. ದಯಾನಂದ್, ಸಂಚಾರ ವಿಭಾಗದ ಜಂಟಿ ಕಮಿಷನರ್ ಎಂ.ಎನ್.ಅನುಚೇತ್ ಇದ್ದರು.

ರೇಬಿಸ್: ಈ ವರ್ಷ 25 ಮಂದಿ ಸಾವು

ವಿಶ್ವ ರೇಬಿಸ್ ದಿನ: ಆರೋಗ್ಯ ಇಲಾಖೆಯಿಂದ ಜಾಗೃತಿ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ರೇಬಿಸ್ ಕಾಯಿಲೆಗೆ ಕಳೆದ ವರ್ಷ 41 ಮಂದಿ ಮೃತಪಟ್ಟಿದ್ದರು. ಈ ವರ್ಷ ಜುಲೈ ಅಂತ್ಯಕ್ಕೆ 25 ಮಂದಿ ಮರಣ ಹೊಂದಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ವಿಶ್ವ ರೇಬಿಸ್ ದಿನದ ಪ್ರಯುಕ್ತ ಇಲಾಖೆಯು ಗುರುವಾರ ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡಿದೆ. ಈ ಸಂಬಂಧ ಪ್ರಕಟಣೆ ಹೊರಡಿಸಿದ್ದು, 'ಲೂಯಿ ಪಾಶ್ಚರ್ ಅವರ ಸ್ಮರಣಾರ್ಥ ರೇಬಿಸ್ ದಿನ ಆಚರಿಸಲಾಗುತ್ತಿದೆ. ಈ ರೋಗವು ನಾಯಿಗಳ ಕಡಿತದಿಂದ ಹರಡುತ್ತದೆ. ಇದು ಮಾರಣಾಂತಿಕ ಕಾಯಿಲೆಯಾಗಿದ್ದು, ಸಮಯೋಚಿತ ವೈದ್ಯಕೀಯ ಚಿಕಿತ್ಸೆಯ ಮೂಲಕ ವಾಸಿ ಮಾಡಬಹುದು. ರೋಗ ನಿರ್ಮೂಲನೆಗೆ ಲಸಿಕೆಗಳು, ಔಷಧಿಗಳು ಹಾಗೂ ಎಲ್ಲಾ ವಿಧದ ಚಿಕಿತ್ಸಾ ಸೇವೆಗಳನ್ನು ಉಚಿತವಾಗಿ ಸರ್ಕಾರ ಒದಗಿಸುತ್ತಿದೆ' ಎಂದು ಇಲಾಖೆ ಹೇಳಿದೆ.

'ರಾಷ್ಟ್ರೀಯ ರೋಗ ನಿಯಂತ್ರಣದ ಸಂಸ್ಥೆಯ ರಾಷ್ಟ್ರೀಯ ರೇಬಿಸ್ ನಿರ್ಮೂಲನ ಕ್ರಿಯಾಯೋಜನೆಯ ವರದಿಯಂತೆ, ವಿಶ್ವದಾದ್ಯಂತ ಸಂಭವಿಸುವ ರೇಬಿಸ್ ಸಾವಿನ ಪ್ರಕರಣಗಳಲ್ಲಿ ಶೇ 36ರಷ್ಟು ಪ್ರಕರಣಗಳು ನಮ್ಮ ದೇಶದಲ್ಲಿಯೇ ವರದಿಯಾಗುತ್ತಿವೆ. ಈ ರೋಗದಿಂದ ಪ್ರತಿ ವರ್ಷ 18 ಸಾವಿರದಿಂದ 20 ಸಾವಿರ ಜನರು ಮೃತಪಡುತ್ತಿದ್ದಾರೆ. ಇವರಲ್ಲಿ 15 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಸಂಖ್ಯೆಯೇ ಹೆಚ್ಚಾಗಿದೆ. ಮಕ್ಕಳಿಗೆ ನಾಯಿ ಕಚ್ಚಿದರೆ ಹೆಚ್ಚಿನ ಸಂದರ್ಭಗಳಲ್ಲಿ ಪೋಷಕರು ಅಥವಾ ಸಂಬಂಧಪಟ್ಟವರ ಗಮನಕ್ಕೆ ಬರುವುದಿಲ್ಲ. ಇದು ಕೂಡ ಸಾವಿನ ಸಂಖ್ಯೆ ಹೆಚ್ಚಾಗಲು ಕಾರಣ' ಎಂದು ತಿಳಿಸಿದೆ.

'ರಾಷ್ಟ್ರೀಯ ರೇಬಿಸ್ ನಿಯಂತ್ರಣ ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ. ಎಲ್ಲಾ ಪ್ರಾಣಿ ಕಡಿತದ ಪ್ರಕರಣಗಳಿಗೂ (ಹಾವು ಕಡಿತ ಹೊರತುಪಡಿಸಿ) ಈ ಯೋಜನೆಯಡಿ ಸೌಲಭ್ಯ ಪಡೆಯಬಹುದಾಗಿದೆ. ರೇಬಿಸ್ ನಿರೋಧಕ ಲಸಿಕೆಯು ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಮೇಲ್ಮಟ್ಟದ ಆಸ್ಪತ್ರೆಗಳಲ್ಲಿ ಲಭ್ಯವಿರುತ್ತದೆ. 'ರೇಬಿಸ್ ಇಮ್ಯುನೋಗ್ಲಾಬ್ಯುಲಿನ್' (RIG) ಚುಚ್ಚುಮದ್ದು ಸಮುದಾಯ ಆರೋಗ್ಯ ಕೇಂದ್ರ ಹಾಗೂ ಮೇಲ್ಮಟ್ಟದ ಆಸ್ಪತ್ರೆಗಳಲ್ಲಿ ದೊರೆಯುತ್ತದೆ. ಈ ಚಿಕಿತ್ಸೆಯು ಸಂಪೂರ್ಣ ಉಚಿತವಾಗಿದ್ದು, ಜನರು ರೇಬಿಸ್ ಕಾಯಿಲೆಗೆ ಭಯ ಪಡಬೇಕಾದ ಅಗತ್ಯವಿಲ್ಲ' ಎಂದು ಹೇಳಿದೆ.

ಮುಖ್ಯಾಂಶಗಳು

- ರೇಬಿಸ್ ರೋಗಕ್ಕೆ ರಾಜ್ಯದಲ್ಲಿ ಕಳೆದ ವರ್ಷ 41 ಮಂದಿ ಸಾವು
- ದೇಶದಲ್ಲಿ ಪ್ರತಿವರ್ಷ 20 ಸಾವಿರ ಜನರು ಸಾವು
- ರೋಗ ನಿರ್ಮೂಲನೆಗೆ ಸರ್ಕಾರದಿಂದ ಉಚಿತ ಲಸಿಕೆ, ಔಷಧಿ ಸೇವೆ ಲಭ್ಯ

ಪ್ರಕರಣ ದಾಖಲು

ಬೆಂಗಳೂರು: ದೊಡ್ಡಬಳ್ಳಾಪುರದಲ್ಲಿ ಸೆ.24ರಂದು ದನದ ಮಾಂಸ ಸಾಗಣೆ ವಾಹನಗಳನ್ನು ಶ್ರೀರಾಮಸೇನೆ ಕಾರ್ಯಕರ್ತರು ತಡೆದು ಹಲ್ಲೆ ನಡೆಸಿ, ಕಾರಿಗೆ ಬೆಂಕಿ ಹಚ್ಚಿದ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದ ಫೇಸ್‌ಬುಕ್, ಟೆಲಿಗ್ರಾಂ ಗ್ರೂಪ್‌ಗಳ ವಿರುದ್ಧ ಬೆಂಗಳೂರು ಗ್ರಾಮಾಂತರ ಜಿಲ್ಲಾ ಸೈಬರ್ ಅಪರಾಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ದೊಡ್ಡಬಳ್ಳಾಪುರ ಟುಡೇ ನ್ಯೂಸ್', 'ಕೇಸರಿ ರಾಷ್ಟ್ರ', 'ವಾರ್ತಾ ಗುರು', 'ಸಾರ್ವಜನಿಕ ಸಮಸ್ಯೆ' ಹೆಸರಿನ ಫೇಸ್‌ಬುಕ್ ಗ್ರೂಪ್‌ಗಳು, 'ಥಗ್ಸ್ ಆಫ್ ದೊಡ್ಡಬಳ್ಳಾಪುರ' ಮತ್ತು 'ಶಿವು ಹಿಂದೂ ಹುಲಿ-2.0' ಎಂಬ ಎರಡು ಟೆಲಿಗ್ರಾಂ ಗ್ರೂಪ್‌ಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

99 ಬಾರಿ ಸಂಚಾರ ನಿಯಮ ಉಲ್ಲಂಘಿಸಿದ್ದ ಬೈಕ್ ಸವಾರ

ಬೆಂಗಳೂರು: 99 ಬಾರಿ ಸಂಚಾರ ನಿಯಮ ಉಲ್ಲಂಘಿಸಿದ ಬೈಕ್ ಸವಾರನನ್ನು ಮೈಕ್ರೊ ಲೇಔಟ್ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಪದೇ ಪದೇ ಸಂಚಾರ ನಿಯಮ ಉಲ್ಲಂಘಿಸುತ್ತಿದ್ದ ಬಿಳೆಕಲ್ಲಹಳ್ಳಿಯ ಹಸನ್ ₹ 56 ಸಾವಿರ ದಂಡ ಪಾವತಿಸಬೇಕಿತ್ತು.

ಹಸನ್ ತಮ್ಮ ದ್ವಿಚಕ್ರ ವಾಹನದಲ್ಲಿ ಹೆಲ್ಮೆಟ್ ಇಲ್ಲದೇ ಪ್ರಯಾಣಿಸುತ್ತಿದ್ದ. ಸಿಗ್ನಲ್‌ಗಳಲ್ಲೂ ನಿಯಮ ಪಾಲನೆ ಮಾಡುತ್ತಿರಲಿಲ್ಲ. ದಂಡ ಪಾವತಿಸುವಂತೆ ನೋಟಿಸ್ ಕಳುಹಿಸಿದ್ದರೂ ಪಾವತಿ ಮಾಡಿರಲಿಲ್ಲ.

'ಕಳೆದ ವಾರ ಹೆಲ್ಮೆಟ್ ಇಲ್ಲದೆ ಏಕಮುಖ ಸಂಚಾರ ರಸ್ತೆಯಲ್ಲಿ ಬೈಕ್ ಸವಾರಿ ಮಾಡುತ್ತಿದ್ದ. ಕಾರಿನ ಡ್ಯಾಶ್‌ಬೋರ್ಡ್ ಕ್ಯಾಮೆರಾದಲ್ಲಿ ಸೆರೆ ಹಿಡಿದ ದೃಶ್ಯವನ್ನು ಚಾಲಕರೊಬ್ಬರು ಪೊಲೀಸ್ ಮಹಾನಿರ್ದೇಶಕರ 'ಎಕ್ಸ್' ಖಾತೆಗೆ ಟ್ಯಾಗ್ ಮಾಡಿ ಕ್ರಮಕ್ಕೆ ಆಗ್ರಹಿಸಿದ್ದರು. ಪೊಲೀಸ್ ಮಹಾನಿರ್ದೇಶಕರ ಸೂಚನೆಯಂತೆ ಸಂಚಾರ ಪೊಲೀಸರು ಆತನನ್ನು ಪತ್ತೆಹಚ್ಚಿದ್ದರು. ಆತ 99 ಬಾರಿ ಸಂಚಾರ ನಿಯಮ ಉಲ್ಲಂಘಿಸಿರುವುದು ಗೊತ್ತಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಭಯ ಮೂಡಿಸಿದ ಕರಡಿ ಸಂಚಾರ

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ಹಲವು ದಿನಗಳಿಂದ ಸೋಂಪುರ ಹೋಬಳಿಯ ಬುಗಡಿಹಳ್ಳಿ, ಗೊಲ್ಲರಹಟ್ಟಿ, ಕುರುವೆಲ್ ತಿಮ್ಮನಹಳ್ಳಿ, ಕೆರೆಪಾಳ್ಯ ಸುತ್ತಮುತ್ತಲ ಗ್ರಾಮಗಳಲ್ಲಿ ರಾತ್ರಿ ವೇಳೆ ಕರಡಿ ಓಡಾಡುತ್ತಿದ್ದು, ಗ್ರಾಮಸ್ಥರು ಭಯಭೀತರಾಗಿದ್ದಾರೆ.

ಮಂಗಳವಾರ ರಾತ್ರಿ 7.30ರ ಸಮಯಕ್ಕೆ ಬುಗಡಿಹಳ್ಳಿಯ ಹುಚ್ಚಯ್ಯ ಅವರ ಮನೆಯ ಹಿಂಭಾಗದಲ್ಲಿ ಕರಡಿ ಅವಿತುಕೊಂಡಿದೆ. ಅದನ್ನು ಗಮನಿಸಿದ ಹುಚ್ಚಯ್ಯ ಅಕ್ಕಪಕ್ಕದ ಮನೆಯವರೊಂದಿಗೆ ಸೇರಿ ಓಡಿಸಿದ್ದಾರೆ.

'ಒಂಟಿ ಕರಡಿಯೊಂದು ಹದಿನೈದು ದಿನಗಳಿಂದ ರಾತ್ರಿ ವೇಳೆ ಓಡಾಡುತ್ತಿದೆ. ಇದರಿಂದ ರಾತ್ರಿ ಹೊರಬರಲು ಆತಂಕವಾಗುತ್ತಿದೆ. ಕೆಲಸಗಳಿಗೆ ಹೊರ ಹೋದವರು ತಡವಾದರೆ ಮನೆಗೆ ಬರಲು ಹೆದರುತ್ತಿದ್ದಾರೆ' ಎಂದು ಬುಗಡಿಹಳ್ಳಿಯ ಸಂಪತ್ ಕುಮಾರ್ ಭಯ ವ್ಯಕ್ತಪಡಿಸಿದರು. ಈ ಬಗ್ಗೆ ಅರಣ್ಯ ಅಧಿಕಾರಿಗಳ ಗಮನಕ್ಕೆ ತರಲಾಗಿದೆ ಎಂದು ಗ್ರಾಮದ ದಯಾನಂದ ಮಾಹಿತಿ ನೀಡಿದರು.

ಬುಗಡಿಹಳ್ಳಿ ಗ್ರಾಮದಲ್ಲಿ ರಾತ್ರಿ ವೇಳೆ ಕಾಣಿಸಿಕೊಂಡ ಕರಡಿ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿರುವುದು

ಕೆಲ ದಿನಗಳ ಹಿಂದೆ ಚನ್ನೋಹಳ್ಳಿ ಹಾಗೂ ಜಾಜೂರು ಗ್ರಾಮದ ದೇವಾಲಯದ ಬಳಿ ಕರಡಿ ಕಾಣಿಸಿಕೊಂಡಿತ್ತು. ರಾತ್ರಿ ಸಮಯದಲ್ಲಿ ಗ್ರಾಮದ ಮನೆಗಳ ಹತ್ತಿರ ಬರುತ್ತಿರುವ ಬಗ್ಗೆ ದೂರುಗಳು ಬಂದಿವೆ. ಕರಡಿಯನ್ನು ಹಿಡಿದು ಕಾಡಿಗೆ ಬಿಡಲು ಬೋನು ಇಡಲಾಗಿದೆ ಎಂದು ಅರಣ್ಯಾಧಿಕಾರಿ ಶ್ರೀಧರ್ ತಿಳಿಸಿದರು.

ರಾಷ್ಟ್ರೀಯ ಬಿಲ್ಲುಗಾರಿಕೆ ಸ್ಪರ್ಧೆಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ ಲಖನೌ ತಂಡ

ಬಾಗಲೂರು: ರಾಷ್ಟ್ರೀಯ ಬಿಲ್ಲುಗಾರಿಕೆ ಸ್ಪರ್ಧೆ– ಲಖನೌ ತಂಡಕ್ಕೆ ಸಮಗ್ರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಯಲಹಂಕ: ಬಾಗಲೂರಿನ ಜವಾಹರ್ ನವೋದಯ ವಿದ್ಯಾಲಯದಲ್ಲಿ ನಡೆದ ರಾಷ್ಟ್ರೀಯ ಬಿಲ್ಲುಗಾರಿಕೆ ಸ್ಪರ್ಧೆಯಲ್ಲಿ ಲಖನೌ ತಂಡವು ಸಮಗ್ರ ತಂಡ ಪ್ರಶಸ್ತಿ ಪಡೆದು, ಚಾಂಪಿಯನ್ ಆಗಿ ಹೊರಹೊಮ್ಮಿತು.

ಭೋಪಾಲ್ ತಂಡವು 2ನೇ ಸಮಗ್ರ ಪ್ರಶಸ್ತಿ ಪಡೆಯಿತು.

ಇಂಡಿಯನ್ ರೌಂಡ್ಸ್ ಬಾಲಕರ ವಿಭಾಗದಲ್ಲಿ ಶಿಲ್ಲಾಂಗ್ ಪ್ರಥಮ ಹಾಗೂ ಲಖನೌ ತಂಡ ದ್ವಿತೀಯ ಸ್ಥಾನ ಗಳಿಸಿತು. ಬಾಲಕಿಯರ ವಿಭಾಗದಲ್ಲಿ ಶಿಲ್ಲಾಂಗ್ ಪ್ರಥಮ ಹಾಗೂ ಪಟ್ನಾ ದ್ವಿತೀಯ ಸ್ಥಾನ ಪಡೆಯಿತು. ರಿಕರ್ವ್ ರೌಂಡ್ ಬಾಲಕರ ವಿಭಾಗದಲ್ಲಿ ಲಖನೌ ಪ್ರಥಮ ಹಾಗೂ ಭೋಪಾಲ್ ದ್ವಿತೀಯ ಸ್ಥಾನ ಹಾಗೂ ಬಾಲಕಿಯರ ವಿಭಾಗದಲ್ಲಿ ಲಖನೌ ಪ್ರಥಮ ಹಾಗೂ ಪುಣೆ ತಂಡ ದ್ವಿತೀಯ ಸ್ಥಾನ ಗಳಿಸಿವೆ.

ಇಂಡಿಯನ್ ರೌಂಡ್ಸ್ ವಿಭಾಗದಲ್ಲಿ ಜವಾಹರ್ ನವೋದಯ ವಿದ್ಯಾಲಯದ ಶಿಲ್ಲಾಂಗ್‌ನ ಉಮಾಥೆಲ್ ವಲಯದ ಮಹೆಂಗ್ಬಾಮ್ ಬಿಕಾಶ್ ಸಿಂಗ್ ಹಾಗೂ ಪುಣೆಯ ಪರ್ಭಾನಿ ವಲಯದ ಅಮೃತ್ ಪಾಟೀಲ್ 'ಉತ್ತಮ ಗುರಿಕಾರ ಪ್ರಶಸ್ತಿ'ಯನ್ನು ಪಡೆದರು. ಪಥಸಂಚಲನ ವಿಭಾಗದಲ್ಲಿ ಹೈದರಾಬಾದ್ ಪ್ರಥಮ ಹಾಗೂ ಪಟ್ನಾ ತಂಡ ದ್ವಿತೀಯ ಸ್ಥಾನ ಗಳಿಸಿದವು.

ವಿಧಾನ ಪರಿಷತ್ ಮಾಜಿ ಸದಸ್ಯ ಪುಟ್ಟಣ್ಣ ಬಹುಮಾನ ವಿತರಿಸಿದರು. ಬಾಗಲೂರು ಗ್ರಾಮ ಪಂಚಾಯಿತಿ ಅಧ್ಯಕ್ಷೆ ರೀತಿ ಮುನೇಗೌಡ, ಸದಸ್ಯರಾದ ಬಿ.ಎಸ್. ಪ್ರಭುಸ್ವಾಮಿ, ಬಿ. ಧನಂಜಯ, ವೀಣಾ ಶಿವಣ್ಣ, ಪ್ರೆಸ್ಟೀಜ್ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಕೆ. ಆಂಜಿನಪ್ಪ, ಜವಾಹರ್ ನವೋದಯ ವಿದ್ಯಾಲಯದ ಪ್ರಾಂಶುಪಾಲ ಎಸ್.ಕಣ್ಣನ್ ಇದ್ದರು.

ಮೈಸೂರು ರೇಸ್

ಎವಾಲ್ಡೊ ಗೆಲ್ಲುವ ನಿರೀಕ್ಷೆ

ಮಹಾರಾಜಾಸ್ ಕಪ್ ಗುರುವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಎವಾಲ್ಡೊ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ರೆಂಬ್ರಾಟ್ 12, ಸೆವೆನ್ತ್ ಸಮುರಾಯ್ 7, ಮ್ಯಾಜಿಕ್ ಸರ್ಕಲ್ 1
2ನೇ ರೇಸ್: ಡಿಯರ್ ಲೇಡಿ 2, ರೂಲಿಂಗ್ ಡೈನಾಸ್ಟಿ 4, ಬರ್ಮಿಸಿ 1
3ನೇ ರೇಸ್: ಸ್ಪಿರಿಟ್ ಆಫ್ ದಿ ರೋಸ್ 6, ಅಲ್ಟಿಮೇಟ್ ಸ್ಟ್ರೈಕರ್ 7, ಕ್ಲೆಟಸ್ 1
4ನೇ ರೇಸ್: ವಾರ್ ಟ್ರಯಲ್ 1, ನ್ಯಾಚುರಲ್ ಪ್ಲೈ 6, ಸ್ವಿಸ್ ಟೈಗ್ರೆಸ್ 9
5ನೇ ರೇಸ್: ಅಚೂಕ್ 10, ಜ್ಯೂಯಲ್ ಥೀಫ್ 8, ವಿವಾ ಲ ವಿಡಾ 4
6ನೇ ರೇಸ್: ಎವಾಲ್ಡೊ 2, ಎ ಸ್ಟಾರ್ ಈಸ್ ಬಾರ್ನ್ 1, ಸ್ಯಾಂಟೊರಿನೊ 4
7ನೇ ರೇಸ್: ಬಾಲ್ಟಿಮೋರ್ 3, ದಿ ಕಿಂಗ್ ಎನ್ ಐ 2, ಸೇಕ್ರೆಡ್ ಕ್ರಿಯೇಟರ್ 5
8ನೇ ರೇಸ್: ಒಂಬುಡ್ಸ್‌ಮ್ಯಾನ್ 8, ಕೇಪ್ರಿಗರ್ಲ್ 10, ಫೋರ್ ವ್ಹೀಲ್ ಡ್ರೈವ್ 2

ಉತ್ತಮ ಬೆಟ್: ಸ್ಪಿರಿಟ್ ಆಫ್ ದಿ ರೇಸ್

ನಗರದಲ್ಲಿ ಇಂದು

ಎ.ವಿ. ಪ್ರಸನ್ನ ಅವರ 'ಕುಮಾರವ್ಯಾಸ ಕಂಡ ಶ್ರೀಕೃಷ್ಣ' ಪುಸ್ತಕ ಬಿಡುಗಡೆ: ಎಸ್. ಆರ್. ವಿಜಯಶಂಕರ್, ಆಯೋಜನೆ: ಸಮನ್ವಿತ ತಂಡ, ಸ್ಥಳ: ಬಿ.ಪಿ. ವಾಡಿಯಾ ಸಭಾಂಗಣ, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10.30

'ಗಾನ ಮಾಧುರ್ಯ': ಉದ್ಘಾಟನೆ: ಗಿರೀಶ್ ಲಕ್ಕಣ್ಣ, ಅತಿಥಿಗಳು: ಪದ್ಮಲತಾ ಮೈಸೂರು, ಜಿ. ವಿಶ್ವನಾಥ್, ವಿಜಯ ಕುಮಾರ್, ಉಪಸ್ಥಿತಿ: ಆರ್. ಕೃಷ್ಣಮೂರ್ತಿ, ಆಯೋಜನೆ: ರಂಗ ಸಂಸ್ಥಾನ, ಸ್ಥಳ: ಹೊಂಬೇಗೌಡ ಪದವಿಪೂರ್ವ ಕಾಲೇಜು, ಗಾಯತ್ರಿ ನಗರ, ಬೆಳಿಗ್ಗೆ 10.30

ಯೋಗೀಶ್ ಮಾಸ್ಟರ್ ಅವರ 'ನನ್ನ ಅರಿವಿನ ಪ್ರವಾದಿ' ಪುಸ್ತಕ ಬಿಡುಗಡೆ: ಚಿರಂಜೀವಿ ಸಿಂಘ್, ಅಧ್ಯಕ್ಷತೆ: ಮುಹಮ್ಮದ್ ಸಾದ್ ಬೆಳಗಾಮಿ, ಪುಸ್ತಕ ಪರಿಚಯ: ಚ.ಹ. ರಘುನಾಥ್, ಅತಿಥಿಗಳು: ವಸುಂಧರಾ ಭೂಪತಿ, ಮುಹಮ್ಮದ್ ಕುಂಞ, ಆಯೋಜನೆ: ಶಾಂತಿ ಪ್ರಕಾಶನ, ಸ್ಥಳ: ಬಿಫ್ಟ್ ಸಭಾಂಗಣ, ದಾರುಸ್ಸಲಾಮ್ ಕಟ್ಟಡ, ಕ್ವೀನ್ಸ್ ರಸ್ತೆ, ಬೆಳಿಗ್ಗೆ 11.15

ಎಂ.ಎನ್. ಜಯಕುಮಾರ್ ಅವರ 'ಎನ್‌ಕೌಂಟರ್ಸ್ ಇನ್ ದಿ ವೈಲ್ಡ್ 2.0' ವನ್ಯಜೀವಿ ಛಾಯಾಚಿತ್ರಗಳ ಪ್ರದರ್ಶನ: ಅತಿಥಿ: ಈಶ್ವರ್ ಬಿ. ಖಂಡ್ರೆ, ಜಾವೇದ್ ಅಖ್ತರ್, ರಾಜೀವ್ ರಂಜನ್, ಸುಭಾಷ್ ಮಾಳ್ಖೇಡೆ, ಸುಬ್ಬಯ್ಯ ನಲ್ಲ ಮುತ್ತು, ಶ್ರೀಕೃಷ್ಣನ್ ಎಚ್., ವೆಂಕಟೇಶ್ವರನ್ ರಮಣನ್, ಎಸ್.ಎನ್. ಶಶಿಧರ್, ಆಯೋಜನೆ: ಅರಣ್ಯ ಇಲಾಖೆ, ಎಂ.ಎನ್. ಜಯಕುಮಾರ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11.30

'ಸ್ವರ್ಣಮೂರ್ತಿ' ನಾಟಕ ಪ್ರದರ್ಶನ: ಉದ್ಘಾಟನೆ: ಆದಿತ್ಯ ಚಿಕ್ಕಣ್ಣ, ಅಧ್ಯಕ್ಷತೆ: ಹೇಮಂತ್, ಉಪಸ್ಥಿತಿ: ಎಚ್.ಎಸ್. ಗೋವಿಂದಗೌಡ, ಎಂ. ಜಗದೀಶಗೌಡ, ಆಯೋಜನೆ: ಕರ್ನಾಟಕ ರಂಗ ಸಂಗೀತ ಪರಿಷತ್ತು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 3

'ರಾಷ್ಟ್ರೀಯ ಶಿಕ್ಷಣ ನೀತಿ–2020' ಕುರಿತು ವಿಚಾರಗೋಷ್ಠಿ: ಉಪಸ್ಥಿತಿ: ತಿಮ್ಮೇಗೌಡ, ಹರಿಪ್ರಕಾಶ್ ಕೋಣೆಮನೆ, ಆಯೋಜನೆ: ಪೀಪಲ್ಸ್ ಫೋರಂ ಫಾರ್ ಕರ್ನಾಟಕ ಎಜುಕೇಷನ್, ಸ್ಥಳ: ಜೈನ್ ವಿಶ್ವವಿದ್ಯಾಲಯ, ಜಯನಗರ, ಸಂಜೆ 5

'ಹಾನಗಲ್ ಕುಮಾರೇಶ್ವರ ಪ್ರಶಸ್ತಿ' ಮತ್ತು 'ಪ್ರತಿಭಾ ಪುರಸ್ಕಾರ' ಪ್ರದಾನ: ಸಾನ್ನಿಧ್ಯ: ಚನ್ನಬಸವ ಸ್ವಾಮೀಜಿ, ಪ್ರಶಸ್ತಿ ಪುರಸ್ಕೃತರು: ಶಾಮನೂರು ಶಿವಶಂಕರಪ್ಪ, ಪ್ರತಿಭಾ ಪುರಸ್ಕಾರ ವಿತರಣೆ: ಬಿ.ಎಸ್. ಯಡಿಯೂರಪ್ಪ, ಎನ್. ತಿಪ್ಪಣ್ಣ, ಈಶ್ವರ್ ಬಿ. ಖಂಡ್ರೆ, ಗಂಗಾಂಬಿಕೆ ಮಲ್ಲಿಕಾರ್ಜುನ್, ಬಿ.ಎಸ್. ಪುಟ್ಟರಾಜು, ವಿಶ್ವನಾಥ್ ಪಿ. ಹಿರೇಮಠ, ಜಿ.ಎಚ್. ಯತೀಶಚಂದ್ರ, ಅಧ್ಯಕ್ಷತೆ: ಎಸ್. ಗುರುಸ್ವಾಮಿ, ಆಯೋಜನೆ: ಅಖಿಲ ಭಾರತ ಲಿಂಗಾಯತ ಮಹಾಸಭಾ ಬೆಂಗಳೂರು ನಗರ ಘಟಕ, ಸ್ಥಳ: ಷರಾಫ್ ಬಸಪ್ಪ ಸಭಾಂಗಣ, ಜಗದ್ಗುರು ರೇಣುಕಾಚಾರ್ಯ ಮಹಾವಿದ್ಯಾಲಯ, ರೇಸ್‌ಕೋರ್ಸ್ ರಸ್ತೆ, ಆನಂದರಾವ್ ವೃತ್ತ, ಬೆಳಿಗ್ಗೆ 10.30

ದಾಸರ ಪದಗಳ ಗಾಯನ: ಅನ್ವಿತಾ ಸಾವಿತ್ರಿ, ಅನುಷಾ ಸಾವಿತ್ರಿ, ಪಿಟೀಲು: ರುದ್ರಾರಾಧ್ಯ, ಮೃದಂಗ: ಶ್ರೀನಿವಾಸ್ ಅನಂತರಾಮಯ್ಯ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರ, ಸಂಜೆ 7.30

ಸಂಗೀತ ಸಂಜೆ: ಅತಿಥಿ: ಅನಿತಾ ರೈ, ಉಪಸ್ಥಿತಿ: ಕಾ.ವೆಂ. ಶ್ರೀನಿವಾಸಮೂರ್ತಿ, ಆಯೋಜನೆ: ಇಂಚರ ಸುಗಮ ಸಂಗೀತ ಸಂಸ್ಥೆ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

'ಅಕ್ಷಯಾಂಬರ ಅಗ್ರಪೂಜೆ' ಯಕ್ಷಗಾನ ಪ್ರದರ್ಶನ: ಭಾಗವತರು: ಗಿರೀಶ್ ರೈ ಕಕ್ಕೆಪದವು, ದೇವರಾಜ ಆಚಾರ್ಯ, ಚಂಡೆ, ಮದ್ದಳೆ: ಚಂದ್ರಶೇಖರ ಸರಪಾಡಿ, ಶ್ರೀಧರ ವಿಟ್ಲ, ಆಯೋಜನೆ: ಪುತ್ತೂರು ಮಹಾಲಿಂಗೇಶ್ವರ ಪ್ರವಾಸಿ ಯಕ್ಷಗಾನ ಮಂಡಳಿ, ಸ್ಥಳ: ಅಯ್ಯಪ್ಪ ದೇವಸ್ಥಾನ, ಜಾಲಹಳ್ಳಿ ಕ್ರಾಸ್, ಸಂಜೆ 6

9ನೇ ದ್ವೈವಾರ್ಷಿಕ ಸಮ್ಮೇಳನ: ಅತಿಥಿಗಳು: ಡಾ. ಶರಣಪ್ರಕಾಶ್ ಪಾಟೀಲ, ರಮೇಶ್ ಎಂ.ಕೆ., ಸುಜಾತಾ ರಾಥೋಡ, ಜಾವೇದ್ ಅಖ್ತರ್, ಕೆ.ಕೆ. ಮಾಧವನ್, ಶೈಲೇಶ್ ವಿ. ಶ್ರೀಖಂಡೆ, ಆಯೋಜನೆ: ಏಷ್ಯನ್-ಪೆಸಿಫಿಕ್ ಹೆಪಾಟೊ-ಪ್ಯಾಂಕ್ರಿಯಾಟೊ-ಬಿಲಿಯರಿ ಅಸೋಸಿಯೇಷನ್, ಸ್ಥಳ: ಹಿಲ್ಟನ್ ಕನ್ವೆನ್ಷನ್ ಸೆಂಟರ್, ಸಂಜೆ 6

'ಕನ್ನಡಿಗರೊಳು ಕನ್ನಡದ ನಡೆ' ಕುರಿತ ಉಪನ್ಯಾಸ: ಎಚ್.ಎಂ. ಮೀನ, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಪ್ರವಚನ ವಾಹಿನಿ: ಸಾಮೂಹಿಕ ಸತ್ಯನಾರಾಯಣ ಪೂಜೆ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

'ರಂಗ ರಂಗೋಲಿ' ನಾಟಕೋತ್ಸವ: 'ಮುಖವಾಡ' ನಾಟಕ ಪ್ರದರ್ಶನ: ರಚನೆ: ಎಸ್.ವಿ. ಕೃಷ್ಣಶರ್ಮ, ನಿರ್ದೇಶನ: ಪ್ರದೀಪ್ ಅಂಚೆ, ಆಯೋಜನೆ: ಅಕಾಡೆಮಿ ಆಫ್ ಮ್ಯೂಸಿಕ್, ಸ್ಥಳ: ಚೌಡಯ್ಯ ಸ್ಮಾರಕ ಭವನ, ಮಲ್ಲೇಶ್ವರ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಸಮರ್ಪಕ ಕುಡಿಯುವ ನೀರು ಪೂರೈಕೆ, ಕೆರೆ ನಿರ್ವಹಣೆ

ಆವಲಹಳ್ಳಿ ಗ್ರಾ.ಪಂ.ಗೆ 'ಗಾಂಧಿ ಪುರಸ್ಕಾರ'

• ಶಿವರಾಜ್ ಮೌರ್ಯ

ಕೆ.ಆರ್.ಪುರ: ಪಂಚಾಯತ್‌ರಾಜ್ ಇಲಾಖೆ ನೀಡುವ ಪ್ರಸಕ್ತ ಸಾಲಿನ 'ಗಾಂಧಿ ಗ್ರಾಮ ಪುರಸ್ಕಾರ'ಕ್ಕೆ ಪೂರ್ವ ತಾಲ್ಲೂಕಿನ ಆವಲಹಳ್ಳಿ ಗ್ರಾಮ ಪಂಚಾಯಿತಿ ಆಯ್ಕೆಯಾಗಿದೆ.

ಜೀವನಮಟ್ಟ ಸುಧಾರಣೆ, ಸಂಪನ್ಮೂಲ ಕ್ರೋಢೀಕರಣ, ಮೂಲ ಸೌಕರ್ಯ ಅಭಿವೃದ್ಧಿ, ತ್ಯಾಜ್ಯ ನಿರ್ವಹಣೆ, ಉತ್ತಮ ಆಡಳಿತ, ಸೇವಾ ಪೂರೈಕೆ ಮತ್ತು ನಾವೀನ್ಯ ಯೋಜನೆಗಳ ಮಾನದಂಡಗಳಡಿ ಗ್ರಾಮ ಪಂಚಾಯಿತಿಗಳನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತದೆ.

ಬೆಂಗಳೂರು ಪೂರ್ವ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಗೆ ಬರುವ ಆವಲಹಳ್ಳಿ ಗ್ರಾಮ ಪಂಚಾಯಿತಿ ಆವಲಹಳ್ಳಿ, ಚೀಮಸಂದ್ರ, ವೀರೇನಹಳ್ಳಿ ಗ್ರಾಮಗಳನ್ನು ಒಳಗೊಂಡಿದೆ. ಈ ಗ್ರಾಮಗಳಲ್ಲಿ ಮೂಲ ಸೌಕರ್ಯ, ಕಸ ನಿರ್ವಹಣೆ, ಗ್ರಾಮಸಭೆ, ಕರ ನಿರ್ವಹಣೆಯಂತಹ ಕೆಲಸಗಳನ್ನು ಸಮರ್ಪಕವಾಗಿ ಕೈಗೊಳ್ಳುವ ಮೂಲಕ ಜನಮನ್ನಣೆ ಗಳಿಸಿದೆ.

ಆವಲಹಳ್ಳಿ, ಚೀಮಸಂದ್ರ, ವೀರೇನಹಳ್ಳಿ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮರ್ಪಕ ವ್ಯವಸ್ಥೆ, ಕೆರೆ ನಿರ್ವಹಣೆ, ಕೆರೆ–ಕಟ್ಟೆಗಳ ದಡಗಳಲ್ಲಿ ಗಿಡಗಳನ್ನು ನೆಡುವುದು, ಕರ ವಸೂಲಿ, ಚರಂಡಿ ಸ್ವಚ್ಛತೆ, ರಸ್ತೆಗಳ ನಿರ್ಮಾಣ, ಸರ್ಕಾರಿ ಸ್ವಾಮ್ಯದ ಕಟ್ಟಡಗಳನ್ನು ಉತ್ತಮ ರೀತಿಯಲ್ಲಿ ಇಟ್ಟುಕೊಳ್ಳುವುದು ಮತ್ತಿತರ ಅಭಿವೃದ್ಧಿ ಕಾರ್ಯಗಳನ್ನು ಪಂಚಾಯಿತಿ ಸಮರ್ಪಕವಾಗಿ ಅನುಷ್ಠಾನಗೊಳಿಸಿತ್ತು. ಈಗಲೂ ಆ ಅಭಿವೃದ್ಧಿ ಕಾರ್ಯಗಳು ಮುಂದುವರಿದಿವೆ.

'ಗ್ರಾಮಸಭೆ, ಕಸ ನಿರ್ವಹಣೆಯಂತ ಕೆಲಸಗಳನ್ನು ಹಂತ ಹಂತವಾಗಿ ಮಾಡುತ್ತ ಬರಲಾಗುತ್ತಿದೆ. ಗ್ರಾಮಗಳಲ್ಲಿ ಎಲ್ಲ ರೀತಿಯ ಮೂಲ ಸೌಕರ್ಯ ಒದಗಿಸಲು ಸತತವಾಗಿ ಶ್ರಮಿಸಲಾಗುತ್ತದೆ' ಎಂದು ಆವಲಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಅಮರೇಶ ಹೇಳಿದರು.

ಪಂಚಾಯಿತಿ ವ್ಯಾಪ್ತಿಯಲ್ಲಿ ಸ್ವಚ್ಛತೆ, ನರೇಗಾ ಕಾಮಗಾರಿಗಳ ಅನುದಾನ ಬಳಕೆ, ಸರ್ಕಾರಿ ದಾಖಲೆಗಳ ನಿರ್ವಹಣೆ, ಗ್ರಾಮ ಸಭೆ, ಸ್ವಸಹಾಯ ಸಂಘಗಳಿಗೆ ಸಹಾಯಹಸ್ತ, ಎಸ್ಸಿ, ಎಸ್ಟಿ ಹಾಗೂ ಅಂಗವಿಕಲರಿಗೆ ಅಗತ್ಯ ಸೌಕರ್ಯ ಒದಗಿಸುವ ಮೂಲಕ ಜನರ ಜೀವನ ಮಟ್ಟ ಸುಧಾರಣೆ ತರಲು ಗ್ರಾಮ ಪಂಚಾಯಿತಿ ಶ್ರಮಿಸಿದೆ. ಈ ಸಾಧನೆಯನ್ನು ಪರಿಗಣಿಸಿ ಆವಲಹಳ್ಳಿ ಗ್ರಾಮ ಪಂಚಾಯಿತಿ ಯನ್ನು ಪಂಚಾಯತ್‌ರಾಜ್ ಇಲಾಖೆಯು 'ಗಾಂಧಿ ಗ್ರಾಮ ಪುರಸ್ಕಾರ'ಕ್ಕೆ ಆಯ್ಕೆ ಮಾಡಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚು ಕೆಲಸ ಮಾಡಲು ಅವಕಾಶ ಸಿಕ್ಕಿದೆ ಎಂದು ಆವಲಹಳ್ಳಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ನವೀತಾ ತೇಜಗೌಡ ಅವರು ಪ್ರತಿಕ್ರಿಯಿಸಿದರು.

ಮುಖ್ಯಾಂಶಗಳು

- ಗ್ರಾಮ ಸಭೆ, ಕಸ ನಿರ್ವಹಣೆಗೆ ಸ್ಥಳೀಯ ಆಡಳಿತ ಒತ್ತು
- ಗ್ರಾಮಗಳಿಗೆ ಅಗತ್ಯ ಮೂಲ ಸೌಕರ್ಯ ಒದಗಿಸಲು ಆದ್ಯತೆ
- ಗ್ರಾಮೀಣ ಜನರ ಜೀವನ ಮಟ್ಟದ ಸುಧಾರಣೆಗೆ ಕ್ರಮ

ಚೀಮಸಂದ್ರದಲ್ಲಿ ನಡೆದ ಗಿಡ ನೆಡುವ ಕಾರ್ಯಕ್ರಮ

ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಬೇಡಿಕೆ ತಲುಪಿಸಿ, ಕ್ರಮಕ್ಕೆ ಗಡುವು ನೀಡಲು ನಿರ್ಧಾರ

ನೈಸ್: ಭೂಮಿ ವಾಪಸ್‌ಗೆ ರೈತರ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೈಸ್ ರಸ್ತೆಗಾಗಿ ಬೆಂಗಳೂರಿನಿಂದ ಮೈಸೂರಿನವರೆಗೆ ಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿರುವ ಭೂಮಿಯನ್ನು ವಾಪಸ್ ನೀಡದಿದ್ದರೆ ರಾಜ್ಯಮಟ್ಟದಲ್ಲಿ ಹೋರಾಟ ರೂಪಿಸಲು ರೈತರು ನಿರ್ಧರಿಸಿದ್ದಾರೆ.

ನೈಸ್ ಸಂತ್ರಸ್ತ ರೈತರ ಹೋರಾಟ ಸಮಿತಿ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘ ಬುಧವಾರ ಆಯೋಜಿಸಿದ್ದ 'ದುಂಡು ಮೇಜಿನ ಸಭೆ'ಯಲ್ಲಿ ರೈತ ಮುಖಂಡರು ಚರ್ಚೆ ನಡೆಸಿದರು.

'ಮೂಲ ಒಪ್ಪಂದದ ಚೌಕಟ್ಟು ಉಲ್ಲಂಘಿಸಿ, ಕರ್ನಾಟಕ ಕೈಗಾರಿಕೆ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಜತೆ ಮಾಡಿಕೊಂಡಿರುವ ನೈಸ್ ಕಂಪನಿಯ ಎಲ್ಲ ಒಪ್ಪಂದಗಳನ್ನು ರದ್ದುಪಡಿಸಬೇಕು ಎಂದು ಆಗ್ರಹಿಸಿದರು.

ನೈಸ್ ಕಂಪನಿಯ ಬಿಎಂಐಸಿ ಯೋಜನೆಯನ್ನು ರದ್ದುಗೊಳಿಸಬೇಕು. ನೈಸ್ ಹಗರಣಕ್ಕೆ ಸಂಬಂಧಿಸಿದ ಸದನ ಸಮಿತಿ ಮತ್ತು ಸಂಪುಟ ಉಪ ಸಮಿತಿಗಳು ನೀಡಿರುವ ವರದಿಯನ್ನು ಜಾರಿಗೊಳಿಸಬೇಕು. ಟೋಲ್ ಸಂಗ್ರಹಿಸುತ್ತಿರುವ ರಸ್ತೆಗಾಗಿ ಭೂಮಿ ಕಳೆದುಕೊಂಡಿರುವ ರೈತರಿಗೆ 2013ರ ಭೂಸ್ವಾಧೀನ ಕಾಯ್ದೆಯಂತೆ ಹೆಚ್ಚಿನ ಪರಿಹಾರ ನೀಡಬೇಕು ಎಂದು ಒತ್ತಾಯಿಸಲಾಯಿತು.

ನಿವೇಶನ, ಸಭೆಯ ನಿರ್ಣಯಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತಲುಪಿಸಿ, ಸೂಕ್ತ ಕ್ರಮ ಕೈಗೊಳ್ಳಲು ಅವರಿಗೆ ಗಡುವು ನೀಡಬೇಕು. ಆ ಅವಧಿ ನಂತರವೂ ಬೇಡಿಕೆಗಳು ಈಡೇರದಿದ್ದರೆ ರಾಜ್ಯದಾದ್ಯಂತ ಹೋರಾಟ ನಡೆಸಲು ನಿರ್ಧರಿಸಲಾಯಿತು.

ನೈಸ್ ಸಂತ್ರಸ್ತ ರೈತರ ಹೋರಾಟ ಸಮಿತಿ ಅಧ್ಯಕ್ಷ ಎನ್. ವೆಂಕಟಾಚಲಯ್ಯ, ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷ ಜಿ.ಸಿ. ಬಯ್ಯಾರೆಡ್ಡಿ, ದಲಿತ ಸಂಘರ್ಷ ಸಮಿತಿ ಮುಖಂಡ ವಿ. ನಾಗರಾಜ್, ಪ್ರಾಂತ ರೈತ ಸಂಘದ ಉಪಾಧ್ಯಕ್ಷ ಯು. ಬಸವರಾಜು, ಕರ್ನಾಟಕ ಪ್ರಾಂತ ಕೃಷಿ ಕೂಲಿ ಕಾರ್ಮಿಕರ ಸಂಘದ ಅಧ್ಯಕ್ಷ ಪುಟ್ಟಮಾದು, ಜನವಾದಿ ಮಹಿಳಾ ಸಂಘಟನೆ ರಾಜ್ಯ ಪ್ರಧಾನ ಕಾರ್ಯದರ್ಶಿ ದೇವಿ, ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಟಿ. ಯಶವಂತ ಇದ್ದರು.

ದುಂಡು ಮೇಜಿನ ಸಭೆಯಲ್ಲಿ ನೈಸ್ ಸಂತ್ರಸ್ತ ರೈತರ ಹೋರಾಟ ಸಮಿತಿ ಅಧ್ಯಕ್ಷ ಎನ್. ವೆಂಕಟಾಚಲಯ್ಯ ಮಾತನಾಡಿದರು. (ಎಡದಿಂದ) ಕರ್ನಾಟಕ ಪ್ರಾಂತ ಕೃಷಿ ಕೂಲಿಗಾರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಪುಟ್ಟಮಾದು, ಕರ್ನಾಟಕ ಪ್ರಾಂತ ರೈತ ಸಂಘದ ಉಪಾಧ್ಯಕ್ಷ ಯು. ಬಸವರಾಜು, ದಲಿತ ಸಂಘರ್ಷ ಸಮಿತಿಯ ರಾಜ್ಯ ಮುಖಂಡ ವಿ. ನಾಗರಾಜ್, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷ ಜಿ.ಸಿ. ಬಯ್ಯಾರೆಡ್ಡಿ ಮತ್ತು ಜೆಡಿಎಸ್ ಶಾಸಕಾಂಗ ಪಕ್ಷದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಇದ್ದಾರೆ –ಪ್ರಜಾವಾಣಿ ಚಿತ್ರ

ನಾನು ನಿಮ್ಮೊಂದಿಗಿರುವೆ: ಎಚ್‌ಡಿಕೆ

'ನೈಸ್ ಭೂಸ್ವಾಧೀನವನ್ನು ರದ್ದುಪಡಿಸಿ, ಅದನ್ನು ರೈತರಿಗೆ ವಾಪಸ್ ನೀಡುವ ಅಧಿಕಾರ ಇದೀಗ ಸರ್ಕಾರಕ್ಕಿದೆ. ನ್ಯಾಯಾಲಯದಲ್ಲಿ ಯಾವುದೇ ವಿವಾದ ಇಲ್ಲ. ಹೀಗಾಗಿ ರೈತರೆಲ್ಲ ಒಗ್ಗಟ್ಟಾಗಿ ಹೋರಾಟ ಮಾಡಲು ಸಿದ್ಧರಾಗಿದ್ದರೆ ನಾವು ನಿಮ್ಮೊಂದಿಗೆ ಹೋರಾಡುತ್ತೇನೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

'ನೈಸ್ ಯೋಜನೆಯ ಹಗರಣಗಳ ಬಗ್ಗೆ ಜಯಚಂದ್ರ ನೇತೃತ್ವದಲ್ಲಿ 2016ರಲ್ಲಿ ಸದನ ಸಮಿತಿ ನೀಡಿದ ವರದಿಯಂತೆ ಯೋಜನೆಯನ್ನೇ ರದ್ದುಗೊಳಿಸಲು ನಿರ್ಧರಿಸಿದ್ದೆ. ಸಮ್ಮಿಶ್ರ ಸರ್ಕಾರ ಆದ್ದರಿಂದ, ನಾನು ಕೇವಲ 'ಕ್ಲರ್ಕ್' ಆಗಿದ್ದ ಆ ಅವಧಿಯಲ್ಲಿ ಏನೂ ಮಾಡಲು ಸಾಧ್ಯವಾಗಲಿಲ್ಲ' ಎಂದರು.

'ನೈಸ್ ಯೋಜನೆ ಹೆಸರಿನಲ್ಲಿ ಅಕ್ರಮವಾಗಿ ಕಬಳಿಸಿರುವ 11 ಸಾವಿರ ಎಕರೆ ಭೂಮಿಯನ್ನು ಸರ್ಕಾರ ವಾಪಸ್ ಪಡೆದು ರೈತರಿಗೆ ಕೊಡಬೇಕು. ಇಲ್ಲದಿದ್ದರೆ, ಪಶ್ಚಿಮ ಬಂಗಾಳದಲ್ಲಿ ನಡೆದ ಸಿಂಗೂರು ಮಾದರಿ ಹೋರಾಟವನ್ನು ಕೈಗೆತ್ತಿಕೊಳ್ಳಲಾಗುವುದು' ಎಂದು ಎಚ್ಚರಿಸಿದರು.

ಅ.3ಕ್ಕೆ ಸಿದ್ದರಾಮಯ್ಯಗೆ 'ರಾಷ್ಟ್ರೀಯ ಸನ್ಮಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೆಫರ್ಡ್ಸ್ ಇಂಡಿಯಾ ಇಂಟರ್‌ನ್ಯಾಷನಲ್ ಇದರ 9ನೇ ವಾರ್ಷಿಕೋತ್ಸವದ ಪ್ರಯುಕ್ತ ಬೆಳಗಾವಿಯ ಜಿಲ್ಲಾ ಕ್ರೀಡಾಂಗಣದಲ್ಲಿ ಅ.2ರಿಂದ ಎರಡು ದಿನಗಳ ಕಾಲ ರಾಷ್ಟ್ರೀಯ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ. ಅದೇ ಕಾರ್ಯಕ್ರಮದಲ್ಲಿ ಅ.3ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ 'ರಾಷ್ಟ್ರೀಯ ಸನ್ಮಾನ' ಮಾಡಲಾಗುವುದು ಎಂದು ಶೆಫರ್ಡ್ಸ್ ಇಂಡಿಯಾ ಇಂಟರ್‌ನ್ಯಾಷನಲ್ ರಾಷ್ಟ್ರೀಯ ಅಧ್ಯಕ್ಷ ಎಚ್. ವಿಶ್ವನಾಥ್ ತಿಳಿಸಿದರು.

ದೇಶದಲ್ಲಿ ಕುರುಬ, ಧನಗರ್, ಕುರುಮನ್, ಪಾಲ್, ಬಘೇಲ್, ದೇವಾಸಿ, ರಬಾರಿ ಹೀಗೆ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುವ ಈ ಸಮುದಾಯ 12 ಕೋಟಿಗೂ ಅಧಿಕ ಜನಸಂಖ್ಯೆಯನ್ನು ಹೊಂದಿದೆ. ಇವರೆಲ್ಲರನ್ನೂ ಒಂದುಗೂಡಿಸಲು 2014ರ ಅ.2ರಂದು ಶೆಫರ್ಡ್ಸ್ ಇಂಡಿಯಾ ಇಂಟರ್ ನ್ಯಾಷನಲ್ ಸಂಘ ಸ್ಥಾಪಿಸಲಾಯಿತು ಎಂದು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಎಚ್.ವಿಶ್ವನಾಥ್

ಕುರುಬ ಎನ್ನುವುದು ಒಂದು ಜಾತಿಯಲ್ಲ. ಜಗತ್ತಿನ ಮೂಲ ಸಂಸ್ಕೃತಿ. ಸಾಕ್ರೆಟಿಸ್, ಏಸುಕ್ರಿಸ್ತ, ಪ್ರವಾದಿ ಮೊಹಮ್ಮದ್ ಸಹಿತ ಎಲ್ಲರೂ ಈ ಸಂಸ್ಕೃತಿಯವರೇ ಆಗಿದ್ದಾರೆ ಎಂದು ಹೇಳಿದರು.

ಅ.2ರಂದು ಕಾರ್ಯಕಾರಿ ಸಮಿತಿ ಸಭೆ ನಡೆಯಲಿದೆ. ಕುರುಬರ ಆಶೋತ್ತರಗಳನ್ನು ರಕ್ಷಿಸುವುದಕ್ಕಾಗಿ ಕೇಂದ್ರ ಸರ್ಕಾರಕ್ಕೆ ಅಂದು ಕೆಲವು ಸಲಹೆಗಳನ್ನು ನೀಡಲಾಗುವುದು. ಅ.3ರಂದು ರಾಷ್ಟ್ರೀಯ ಸಮಾವೇಶ ನಡೆಯಲಿದೆ. ಹರಿಯಾಣದ ರಾಜ್ಯಪಾಲ ಬಂಡಾರು ದತ್ತಾತ್ರೇಯ, ಕೇಂದ್ರ ಸಚಿವರಾದ ಎಸ್.ಪಿ. ಸಿಂಗ್ ಬಘೇಲ್, ಫಾಗನ್ ಸಿಂಗ್ ಕುಲಸ್ತೆ, ಉತ್ತರ ಪ್ರದೇಶದ ಸಚಿವ ಅಜಿತ್ ಸಿಂಗ್ ಪಾಲ್, ಆಂಧ್ರದ ಸಚಿವರಾದ ಕೆ.ವಿ. ಉಷಾಶ್ರೀ ಚರಣ್ ಸಹಿತ ವಿವಿಧ ರಾಜ್ಯಗಳ ನಾಯಕರು ಭಾಗವಹಿಸಲಿದ್ದಾರೆ. ಇದೇ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸನ್ಮಾನ ನಡೆಯಲಿದೆ ಎಂದು ಶೆಫರ್ಡ್ಸ್ ಇಂಡಿಯಾ ಇಂಟರ್‌ನ್ಯಾಷನಲ್ ರಾಷ್ಟ್ರೀಯ ಉಪಾಧ್ಯಕ್ಷ ಎಚ್.ಎಂ. ರೇವಣ್ಣ ತಿಳಿಸಿದರು.

ಬೆಳೆಹಾನಿಯ ವಿವರ ನೀಡಿದ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ

ಆಹಾರ ಉತ್ಪಾದನೆ 58 ಲಕ್ಷ ಟನ್ ಕುಸಿತ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬರದ ಪರಿಣಾಮ ರಾಜ್ಯದಲ್ಲಿ ಪ್ರಸಕ್ತ ವರ್ಷದ ಮುಂಗಾರು ಹಂಗಾಮಿನಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ 58 ಲಕ್ಷ ಟನ್‌ನಷ್ಟು ಕುಸಿತವಾಗುವ ಸಾಧ್ಯತೆ ಇದೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, 'ವಾಡಿಕೆಯ ಅಂದಾಜಿನ ಪ್ರಕಾರ, ರಾಜ್ಯದಲ್ಲಿ ಮುಂಗಾರು ಹಂಗಾಮಿನಲ್ಲಿ 1.11 ಕೋಟಿ ಟನ್‌ಗಳಷ್ಟು ಆಹಾರ ಧಾನ್ಯದ ಉತ್ಪಾದನೆ ಆಗಬೇಕಿತ್ತು. ಆದರೆ, ಬರದಿಂದ ಆಹಾರ ಧಾನ್ಯಗಳ ಬೆಳೆಗಳಿಗೆ ಭಾರಿ ಪ್ರಮಾಣದಲ್ಲಿ ಹಾನಿಯಾಗಿದೆ. ಉತ್ಪಾದನೆಯಲ್ಲಿ ಶೇಕಡ 52ರಷ್ಟು ಕುಸಿತ ಆಗುವ ಸಾಧ್ಯತೆಯನ್ನು ಅಂದಾಜು ಮಾಡಲಾಗಿದೆ' ಎಂದರು.

ರಾಜ್ಯದಲ್ಲಿ ಒಟ್ಟು 40 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಬೆಳೆ ಹಾನಿಯಾಗಿದೆ. ಒಟ್ಟು ಬೆಳೆ ಪ್ರಮಾಣದಲ್ಲಿ ಶೇ 50ರಷ್ಟು ಹಾನಿಯಾಗಿರುವುದು ಸಮೀಕ್ಷೆಯಲ್ಲಿ ಕಂಡುಬಂದಿದೆ. ಭತ್ತ, ರಾಗಿ, ಜೋಳ ಸೇರಿದಂತೆ ಆಹಾರ ಧಾನ್ಯಗಳ ಬೆಳೆಗಳಿಗೆ ಭಾರಿ ಪ್ರಮಾಣದ ಹಾನಿಯಾಗಿದೆ. ಈ ಕಾರಣದಿಂದಾಗಿಯೇ ಆಹಾರ ಧಾನ್ಯಗಳ ಬೆಲೆ ಏರಿಕೆಯಾಗುವ ಸಾಧ್ಯತೆಯೂ ಇದೆ ಎಂದು ತಿಳಿಸಿದರು.

'ಕಾವೇರಿ ಕಣಿವೆಯಲ್ಲಿ ಭತ್ತ ನಾಟಿ ಮಾಡದಂತೆ ರಾಜ್ಯ ಸರ್ಕಾರವು ರೈತರಿಗೆ ಸೂಚನೆ ನೀಡಿತ್ತು. ಆದರೂ, ಕೆಲವು ರೈತರು ಭತ್ತ ನಾಟಿ ಮಾಡಿದ್ದಾರೆ. ಅಲ್ಲಿ ಬೆಳೆ ಸಂಪೂರ್ಣವಾಗಿ ಹಾನಿಯಾಗುವ ಸಾಧ್ಯತೆ ಇದೆ. ಬೆಳೆ ಹಾನಿಯಿಂದ ಕರ್ನಾಟಕಕ್ಕೆ ಹೆಚ್ಚು ಪರಿಣಾಮ ಆಗುವ ಸಾಧ್ಯತೆ ಕಡಿಮೆ. ಆದರೆ, ರಾಷ್ಟ್ರ ಮಟ್ಟದಲ್ಲಿ ತುಸು ಪರಿಣಾಮ ಬೀರುವ ಸಾಧ್ಯತೆ ಇದೆ' ಎಂದು ಸಚಿವರು ಹೇಳಿದರು.

ಹಿಂಗಾರು ಅವಧಿಯಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಏರಿಕೆಯಾಗುವ ಸಾಧ್ಯತೆ ಇದೆ. ಇದರಿಂದ ಒಟ್ಟು ಉತ್ಪಾದನೆಯಲ್ಲಿ ಸುಧಾರಣೆಯಾಗಬಹುದು ಎಂದರು.

ಅಕ್ಕಿ ವಿತರಣೆಗೆ ಮಿತಿ ಹೇರಲು ಆಗ್ರಹ

ಬೆಂಗಳೂರು: ಅನ್ನಭಾಗ್ಯ ಯೋಜನೆಯಡಿ ಪ್ರತಿ ವ್ಯಕ್ತಿಗೆ ವಿತರಿಸುವ ಅಕ್ಕಿಯ ಪ್ರಮಾಣವನ್ನು ತಿಂಗಳಿಗೆ 5 ಕೆ.ಜಿ.ಗೆ ಮಿತಿಗೊಳಿಸಿ, ಉಳಿದ ಮೊತ್ತಕ್ಕೆ ರಾಗಿ, ಜೋಳ, ಕಡಲೆಕಾಯಿ ಎಣ್ಣೆ ಮತ್ತಿತರ ಪದಾರ್ಥಗಳನ್ನು ವಿತರಿಸಬೇಕು ಎಂದು ರೈತ ಸಂಘಟನೆಗಳ ಮುಖಂಡರು ಕೃಷಿ ಸಚಿವರಿಗೆ ಮನವಿ ಮಾಡಿದರು.

ಕೃಷಿ ಕ್ಷೇತ್ರದ ಸುಧಾರಣೆಗಳ ಮೂಲಕ ರಾಜ್ಯದ ಗ್ರಾಮೀಣ ಜನರ ಸಾಮಾಜಿಕ, ಆರ್ಥಿಕ ಅಭಿವೃದ್ಧಿ ಕುರಿತು ಕೃಷಿ ಸಚಿವರ ಜತೆ ಬುಧವಾರ ಹಮ್ಮಿಕೊಂಡಿದ್ದ ಸಭೆಯಲ್ಲಿ ಈ ರೈತ ಸಂಘಟನೆಗಳ ಮುಖಂಡರು ಈ ಬೇಡಿಕೆ ಮಂಡಿಸಿದರು. ಪರಿಶೀಲಿಸಿ, ಕ್ರಮ ಕೈಗೊಳ್ಳುವುದಾಗಿ ಸಚಿವರು ಭರವಸೆ ನೀಡಿದರು.

ಎಲ್ಲ ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ನೀಡಬೇಕು. ಸಿರಿಧಾನ್ಯಗಳಿಗೆ ಶಾಶ್ವತ ಮಾರುಕಟ್ಟೆ ಕಲ್ಪಿಸಬೇಕು. ಬೀಜ ವೈವಿಧ್ಯ ಪುನಶ್ಚೇತನ, ಸಹಜ ಕೃಷಿ ಉಳಿವಿಗೆ ದೀರ್ಘಕಾಲದ ಯೋಜನೆ ರೂಪಿಸಿ, ಜಾರಿಗೊಳಿಸಬೇಕೆಂದು ರೈತ ಮುಖಂಡರು ಮನವಿ ಮಾಡಿದರು.

ಶಾಸಕ ದರ್ಶನ್ ಪುಟ್ಟಣ್ಣಯ್ಯ, ರೈತ ಸಂಘದ ನಾಯಕರಾದ ಚಾಮರಸ ಮಾಲಿ ಪಾಟೀಲ, ಬಡಗಲಪುರ ನಾಗೇಂದ್ರ, ಜಾಗೃತ ಕರ್ನಾಟಕದ ಎಚ್.ವಿ. ವಾಸು, ಬಸವರಾಜು, ಸುಸ್ಥಿರ ಕೃಷಿ ಮೈತ್ರಿ ಕೂಟದ ಕವಿತಾ ಕುರುಗಂಟಿ, ನಮ್ಮ ರೈತರ ಮಾರುಕಟ್ಟೆ ಸಂಘಟನೆಯ ಕವಿತಾ ಶ್ರೀನಿವಾಸನ್, ಸಹಜ ಆರ್ಗಾನಿಕ್ಸ್‌ನ ಸೋಮಶೇಖರ್, ಸಾವಯವ ಕೃಷಿಕರಾದ ಎಸ್. ಬೋರೇಗೌಡ, ಕರ್ನಾಟಕ ರಾಜ್ಯ ರೈತ ಸಂಘದ ಜೆ.ಎಂ. ವೀರಸಂಗಯ್ಯ, ರವಿ ಕಿರಣ್ ಪೂಣಚ್ಚ ಸಭೆಯಲ್ಲಿದ್ದರು.

ಮುತ್ತಿಗೆಗೆ ಯತ್ನ...

ಬೆಂಗಳೂರಿನಲ್ಲಿ ಬುಧವಾರ ಮುಖ್ಯಮಂತ್ರಿ ಮನೆಗೆ ಮುತ್ತಿಗೆ ಹಾಕಲು ಮುಂದಾದ ಕನ್ನಡ ಒಕ್ಕೂಟದ ಅಧ್ಯಕ್ಷ ವಾಟಾಳ್ ನಾಗರಾಜ್ ಸೇರಿದಂತೆ ಹಲವು ಸದಸ್ಯರನ್ನು ಬುಧವಾರ ಪೊಲೀಸರು ವಶಕ್ಕೆ ಪಡೆದರು. ಪ್ರಜಾವಾಣಿ ಚಿತ್ರ

ಸಂಕ್ಷಿಪ್ತ ಸುದ್ದಿ

ಊರಿನತ್ತ ಜನರು: ಪ್ರಮುಖ ಮಾರ್ಗದಲ್ಲಿ ದಟ್ಟಣೆ

ಬೆಂಗಳೂರು: ಸಾಲು ಸಾಲು ರಜೆ ಹಿನ್ನೆಲೆಯಲ್ಲಿ ನಗರದ ಜನರು ಊರುಗಳತ್ತ ಮುಖ ಮಾಡಿದ್ದಾರೆ. ಇದರಿಂದ ನಗರದ ಪ್ರಮುಖ ರಸ್ತೆಗಳಲ್ಲಿ ಬುಧವಾರ ಸಂಚಾರ ದಟ್ಟಣೆ ಕಂಡುಬಂತು. ವಾಹನ ಸವಾರರು ಪರದಾಡುವಂತಾಯಿತು.

ಗುರುವಾರ ಈದ್ ಮಿಲಾದ್ ರಜೆ ಇದೆ. ಶುಕ್ರವಾರ ರಾಜ್ಯ ಬಂದ್‌ಗೆ ಕರೆ ನೀಡಲಾಗಿದೆ. ಇನ್ನು ಭಾನುವಾರ ರಜೆಯಿದ್ದು ಊರಿನತ್ತ ಹೊರಟವರ ಸಂಖ್ಯೆ ಹೆಚ್ಚಾಗಿತ್ತು.

ಮಧ್ಯರಾತ್ರಿಯಾದರೂ ಹೆದ್ದಾರಿಗಳಲ್ಲಿ ವಾಹನಗಳು ಕಡಿಮೆಯಾಗಿರಲಿಲ್ಲ. ತುಮಕೂರು ರಸ್ತೆ, ಮೈಸೂರು ರಸ್ತೆ, ಬಳ್ಳಾರಿ ರಸ್ತೆಯಲ್ಲಿ ಸಾಲುಗಟ್ಟಿ ವಾಹನಗಳು ನಿಂತಿದ್ದವು. ಗೊರಗುಂಟೆಪಾಳ್ಯ, ಪೀಣ್ಯ, ಜಾಲಹಳ್ಳಿ ಕ್ರಾಸ್, ಎಂಟನೇ ಮೈಲಿಯಲ್ಲಿ ವಾಹನ ದಟ್ಟಣೆ ಕಂಡುಬಂತು. ಹೆಬ್ಬಾಳ ಮೇಲ್ಸೇತುವೆಯಿಂದ ಯಲಹಂಕದವರೆಗೂ ಇದೇ ಸಮಸ್ಯೆ ಕಂಡುಬಂತು. ಪರ್ಯಾಯ ಮಾರ್ಗದಲ್ಲಿ ತೆರಳಲು ಮುಂದಾದ ಸವಾರರು ಅಲ್ಲಿಯೂ ದಟ್ಟಣೆಯಲ್ಲಿ ಸಿಲುಕಿದ್ದರು.

ಅ.27ಕ್ಕೆ ಮತದಾರರ ಕರಡು ಪಟ್ಟಿ

ಬೆಂಗಳೂರು: ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ವೇಳಾಪಟ್ಟಿ ಪರಿಷ್ಕರಿಸಿದ್ದು, ಅ.27ರಂದು ಮತದಾರರ ಕರಡು ಪಟ್ಟಿ ಪ್ರಕಟವಾಗಲಿದೆ.

ಅ.27ರಿಂದ ಡಿ.9ರವರೆಗೆ ಕರಡು ಪಟ್ಟಿಗೆ ಆಕ್ಷೇಪಣೆ ಸಲ್ಲಿಸಬಹುದು. ಡಿ.26ರೊಳಗೆ ಆಕ್ಷೇಪಣೆಯನ್ನು ಸರಿಪಡಿಸಲಾಗುತ್ತದೆ. ಈ ಅವಧಿಯೊಳಗೆ ವಿಶೇಷ ಪ್ರಚಾರಾಂದೋಲನವನ್ನೂ ನಡೆಸಲಾಗುತ್ತದೆ. 2024ರ ಜ.1ರಂದು ಮತದಾರರ ಪಟ್ಟಿ ಮುದ್ರಿಸಲಾಗುತ್ತದೆ. ಜ.5ರಂದು ಮತದಾರರ ಅಂತಿಮ ಪಟ್ಟಿ ಪ್ರಕಟಿಸಲಾಗುತ್ತದೆ ಎಂದು ಬಿಬಿಎಂಪಿ ಚುನಾವಣೆ ವಿಭಾಗದ ಸಹಾಯಕ ಆಯುಕ್ತರು ತಿಳಿಸಿದ್ದಾರೆ.

ಹಿರಿಯರ ಹಬ್ಬ ಅ. 1ಕ್ಕೆ

ಬೆಂಗಳೂರು: ವಯೋ ವಿಕಾಸ್ ಸಂಸ್ಥೆಯಿಂದ ಹಿರಿಯ ನಾಗರಿಕರಿಗಾಗಿ ಅ.1ರಂದು 'ಹಿರಿಯರ ಹಬ್ಬ' ಕಾರ್ಯಕ್ರಮವನ್ನು ಸೇಂಟ್ ಜೋಸೆಫ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ಆಯೋಜಿಸಲಾಗಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥೆಯ ಜಾಯ್ಸ್ ಕುರಿಯನ್, 'ಹಿರಿಯ ನಾಗರಿಕರಿಗೆ ಸಂಬಂಧಿಸಿದಂತೆ ಸಂವಾದ, ಆರೋಗ್ಯ, ಫಿಟ್‌ನೆಸ್ ಪ್ರಾತ್ಯಕ್ಷಿಕೆಗಳು, ಮನರಂಜನೆಯ ಕಾರ್ಯಕ್ರಮಗಳು ಇರಲಿವೆ. ಈ ಮೇಳವನ್ನು ನಟ ಸಿಹಿಕಹಿ ಚಂದ್ರು, ಅಲೆಕ್ಸಾಂಡರ್ ಥಾಮಸ್ ಉದ್ಘಾಟಿಸಲಿದ್ದಾರೆ' ಎಂದು ತಿಳಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಸರ್ಕಾರಿ ಜಮೀನು ಕಬಳಿಕೆ ಪ್ರಕರಣ

₹62 ಕೋಟಿ ಆಸ್ತಿ ಇ.ಡಿ ಮುಟ್ಟುಗೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಜಮೀನನ್ನು ಕಬಳಿಸಿ, ನಿತೇಶ್ ಎಸ್ಟೇಟ್ಸ್ ಜತೆ ಪಾಲುದಾರಿಕೆ ಒಪ್ಪಂದ ಮಾಡಿಕೊಂಡಿದ್ದ ಆರೋಪ ಎದುರಿಸುತ್ತಿರುವ ಚಿತ್ರ ಪೂರ್ಣಿಮಾ ಮತ್ತು ಅವರ ಮಕ್ಕಳಿಗೆ ಸೇರಿದ ₹62.05 ಕೋಟಿ ಮೌಲ್ಯದ ಆಸ್ತಿಗಳನ್ನು ಜಾರಿ ನಿರ್ದೇಶನಾಲಯ (ಇ.ಡಿ) ಮುಟ್ಟುಗೋಲು ಹಾಕಿಕೊಂಡಿದೆ.

ಚಿತ್ರ ಪೂರ್ಣಿಮಾ ಅವರ ಪತಿ ಜಾರ್ಜ್ ತಂಗಯ್ಯ ಸರ್ಕಾರಿ ಕೆರೆ ಮತ್ತು ರಸ್ತೆಯನ್ನು ಕಬಳಿಸಿ, ನಿತೇಶ್ ಎಸ್ಟೇಟ್ಸ್ ಜತೆ ಜಂಟಿ ಪಾಲುದಾರಿಕೆ ಒಪ್ಪಂದ ಮಾಡಿಕೊಂಡಿದ್ದರು. ವಾಣಿಜ್ಯ ಸಂಕೀರ್ಣ ನಿರ್ಮಾಣ ಯೋಜನೆಗೆ ಜಮೀನನ್ನು ಬಳಸಿಕೊಳ್ಳಲು ಕಂಪನಿಯು ಜಾರ್ಜ್ ತಂಗಯ್ಯ ಅವರಿಗೆ ₹ 105.50 ಕೋಟಿ ಪಾವತಿಸಿತ್ತು. ಈ ರೀತಿ ಸರ್ಕಾರಿ ಜಮೀನನ್ನು ಕಬಳಿಸಿ, ದುರ್ಬಳಕೆ ಮಾಡಿದ ಆರೋಪದ ಮೇಲೆ ಬೆಂಗಳೂರು ಮಹಾನಗರ ಕಾರ್ಯಪಡೆ (ಬಿಎಂಟಿಎಫ್) ಹಾಗೂ ಅಶೋಕ ನಗರ ಪೊಲೀಸ್ ಠಾಣೆಗಳಲ್ಲಿ ಎರಡು ಎಫ್‌ಐಆರ್‌ಗಳನ್ನು ದಾಖಲಿಸಲಾಗಿತ್ತು.

ಪೊಲೀಸರು ದಾಖಲಿಸಿದ್ದ ಎಫ್‌ಐಆರ್‌ಗಳನ್ನು ಆಧರಿಸಿ ಜಾರಿ ನಿರ್ದೇಶನಾಲಯವು ದಿವಂಗತ ಜಾರ್ಜ್ ತಂಗಯ್ಯ, ಅವರ ಪತ್ನಿ ಚಿತ್ರ ಪೂರ್ಣಿಮಾ, ಮಕ್ಕಳಾದ ವಿಜಯ್ ಶೇಖರ್ ಮತ್ತು ಚಿತ್ರ ಪ್ರಭಾಕರ್ ವಿರುದ್ಧ ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ, ಪ್ರತ್ಯೇಕ ಪ್ರಕರಣ ದಾಖಲಿಸಿದೆ. ಚಿತ್ರ ಪೂರ್ಣಿಮಾ ಮತ್ತು ಅವರ ಮಕ್ಕಳು ಬೆಂಗಳೂರಿನ ಇಂದಿರಾನಗರದಲ್ಲಿ ಹೊಂದಿರುವ ಒಂದು ಸ್ಥಿರಾಸ್ತಿ ಹಾಗೂ ಅವರ ಬ್ಯಾಂಕ್ ಖಾತೆಗಳಲ್ಲಿದ್ದ ₹ 2.63 ಕೋಟಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಇ.ಡಿ ಅಧಿಕಾರಿಗಳು ತಿಳಿಸಿದ್ದಾರೆ.

'ತಂಗಯ್ಯ ನಕಲಿ ದಾಖಲೆಗಳನ್ನು ಸೃಷ್ಟಿಸಿ ಸರ್ಕಾರಿ ಜಮೀನುಗಳನ್ನು ಕಬಳಿಸಿದ್ದರು. ನಂತರ ಅವುಗಳನ್ನು ಸ್ವಂತದ್ದೆಂದು ಬಿಂಬಿಸಿ ಜಂಟಿ ಪಾಲುದಾರಿಕೆ ಒಪ್ಪಂದ ಮಾಡಿಕೊಂಡಿದ್ದರು. ನಿತೇಶ್ ಎಸ್ಟೇಟ್ಸ್ ಕಂಪನಿ ಪಾವತಿಸಿದ್ದ ಹಣವನ್ನು ಪತ್ನಿ ಹಾಗೂ ಮಕ್ಕಳ ಖಾತೆಗಳಿಗೆ ವರ್ಗಾವಣೆ ಮಾಡಿದ್ದರು. ಆ ಮೊತ್ತವನ್ನು ವಿದೇಶ ಪ್ರವಾಸ, ಖರೀದಿ ಹಾಗೂ ತೆರಿಗೆ ಬಾಕಿ ಪಾವತಿಗೆ ಬಳಸಲಾಗಿತ್ತು ಎಂಬುದು ತನಿಖೆಯಲ್ಲಿ ಪತ್ತೆಯಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

'ಒಂದು ಗಂಟೆ- ಸ್ವಚ್ಛತೆಗಾಗಿ ಶ್ರಮದಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾತ್ಮ ಗಾಂಧಿ ಅವರ 154ನೇ ಜನ್ಮ ವಾರ್ಷಿಕೋತ್ಸವದ ಅಂಗವಾಗಿ ಬಿಬಿಎಂಪಿ ನಗರದಲ್ಲಿ '1ನೇ ತಾರೀಖು, ಒಂದು ಗಂಟೆ- ಸ್ವಚ್ಛತೆಗಾಗಿ ಶ್ರಮದಾನ' (ಭಾನುವಾರ) ಕಾರ್ಯಕ್ರಮ ಆಯೋಜಿಸಿದೆ.

'ಸ್ವಚ್ಛ ಸರ್ವೇಕ್ಷಣ್-2023' ಅನುಸರಣೆಗಾಗಿ ಬಿಬಿಎಂಪಿಯ ಪ್ರತಿ ವಾರ್ಡ್‌ನಲ್ಲಿ ಕನಿಷ್ಠ ಎರಡು ಸ್ಥಳಗಳಲ್ಲಿ ಸ್ವಚ್ಛತಾ ಅಭಿಯಾನ ನಡೆಸಲಾಗುತ್ತದೆ. ಎನ್‌ಜಿಒ, ಎಸ್‌ಎಚ್‌ಜಿ, ಎನ್‌ಎಸ್‌ಎಸ್ ಅಥವಾ ಎನ್‌ಸಿಸಿ ಕೆಡೆಟ್‌ಗಳು, ಆರ್‌ಡಬ್ಲ್ಯುಎ, ಸ್ವಯಂ ಸೇವಕರು, ಸಾರ್ವಜನಿಕರು ಈ ಅಭಿಯಾನದಲ್ಲಿ ಭಾಗವಹಿಸಲಿದ್ದಾರೆ.

ಬೆಂಗಳೂರು ನಗರಕ್ಕಿರುವ 'ಉದ್ಯಾನ ನಗರಿ' ಎಂಬ ಖ್ಯಾತಿಯನ್ನು ಮರಳಿ ತರಲು ಸ್ವಚ್ಛ, ನೈರ್ಮಲ್ಯ ಮತ್ತು ಸುತ್ತಮುತ್ತಲಿನ ಸ್ವಚ್ಛತೆ ಮತ್ತು ಹಸಿರನ್ನು ಕಾಪಾಡಿಕೊಳ್ಳುವ ಬಗ್ಗೆ ನಾಗರಿಕರಲ್ಲಿ ಜಾಗೃತಿ ಮೂಡಿಸುವುದು ಕಾರ್ಯಕ್ರಮದ ಉದ್ದೇಶ ಎಂದು ಘನತ್ಯಾಜ್ಯ ವಿಭಾಗದ ಜಂಟಿ ಆಯುಕ್ತೆ ಪ್ರತಿಭಾ ತಿಳಿಸಿದ್ದಾರೆ.

ಬಿಬಿಎಂಪಿಯ ಘನತ್ಯಾಜ್ಯ ನಿರ್ವಹಣಾ ಕೋಶವು ನಗರದಾದ್ಯಂತ ಜಲಮೂಲಗಳು, ರೈಲ್ವೆ ಹಳಿಗಳು, ರಸ್ತೆ ಬದಿ, ಸೇತುವೆಯ ಕೆಳಗೆ, ಮೇಲ್ಸೇತುವೆ ಕೆಳಗೆ, ಕೊಳೆಗೇರಿ ಪ್ರದೇಶಗಳು, ಮಾರುಕಟ್ಟೆ ಸ್ಥಳಗಳು, ಆರಾಧನೆ ಸ್ಥಳಗಳು, ಪ್ರವಾಸಿ ಸ್ಥಳ, ಬಸ್ ನಿಲ್ದಾಣಗಳು, ಶಾಲಾ/ಕಾಲೇಜುಗಳ ಸುತ್ತಮುತ್ತಲಿನ ಪ್ರದೇಶ, ಆರೋಗ್ಯ ಸಂಸ್ಥೆಗಳ ಸ್ಥಳಗಳಲ್ಲಿ ತ್ಯಾಜ್ಯವನ್ನು ಅ.1ರಂದು ಬೆಳಿಗ್ಗೆ 10 ಗಂಟೆಗೆ ನಿರ್ಮೂಲನೆ ಮಾಡಲು ಕ್ರಿಯಾ ಯೋಜನೆ ಸಿದ್ಧಪಡಿಸಲಾಗಿದೆ ಎಂದಿದ್ದಾರೆ.

ಪ್ರತಿ ವಾರ್ಡ್‌ನಲ್ಲಿ ಜರಗುವ ಅಭಿಯಾನದ ಸ್ಥಳಗಳನ್ನು ಸ್ವಚ್ಛತಾ-ಹೀ-ಸೇವಾ (https://swachhatahiseva.com/) ವೆಬ್ ಪೋರ್ಟಲ್ ಹಾಗೂ ಪಾಲಿಕೆಯ ವೆಬ್ ಸೈಟ್ (https://bbmp.gov.in) ನಲ್ಲಿ ನಮೂದಿಸಲಾಗಿದೆ. ಪಾಲಿಕೆಯ ಸಿಬ್ಬಂದಿ ಅಭಿಯಾನದ ಮೊದಲು ಮತ್ತು ನಂತರದ ಫೋಟೊ, ವಿಡಿಯೊ ವೆಬ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುತ್ತಾರೆ ಎಂದು ತಿಳಿಸಿದ್ದಾರೆ.



ಬೆಂಗಳೂರಿನ ರಾಜಭವನದಲ್ಲಿ ಬುಧವಾರ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ಭೇಟಿ ಮಾಡಿದ ಕೋಲಾರ ಸಂಸದ ಎಸ್.ಮುನಿಸ್ವಾಮಿ, ಜನತಾ ದರ್ಶನದಲ್ಲಿ ನಡೆದ ಗಲಾಟೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ಶಾಸಕ ಎಸ್.ಎನ್. ನಾರಾಯಣಸ್ವಾಮಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ನಾರಾಯಣ ವಿರುದ್ಧ ದೂರು ಸಲ್ಲಿಸಿದರು. ವಿಧಾನ ಪರಿಷತ್ ಸದಸ್ಯರಾದ ಕೇಶವ್ ಪ್ರಸಾದ್, ಛಲವಾದಿ ನಾರಾಯಣಸ್ವಾಮಿ, ಮಾಜಿ ಶಾಸಕ ವೈ.ಸಂಪಂಗಿ, ಜಿಲ್ಲಾಧ್ಯಕ್ಷ ಡಾ.ವೇಣುಗೋಪಾಲ್, ಮುಖಂಡರಾದ ಚಂದ್ರಾರೆಡ್ಡಿ, ಆನಂದ್, ಕೃಷ್ಣಮೂರ್ತಿ, ಚಿನ್ನಸ್ವಾಮಿಗೌಡ ಇದ್ದಾರೆ

ಹೆರಿಗೆಗೆ ತವರಿಗೆ ಬಂದ ಮಹಿಳೆಯನ್ನು ಊರಾಚೆ ಕಳಿಸಿದ ಮುಖಂಡರು

ಅಂತರ್ಜಾತಿ ವಿವಾಹ: ದಂಪತಿಗೆ ಬಹಿಷ್ಕಾರ

ಪ್ರಜಾವಾಣಿ ವಾರ್ತೆ

ನಾಯಕನಹಟ್ಟಿ (ಚಿತ್ರದುರ್ಗ): ಅಂತರ್ಜಾತಿ ವಿವಾಹವಾಗಿದ್ದಕ್ಕೆ ಗ್ರಾಮಸ್ಥರು ಯುವ ದಂಪತಿಯನ್ನು ಬಹಿಷ್ಕರಿಸಿರುವ ಘಟನೆ ಸಮೀಪದ ಎನ್.ದೇವರಹಳ್ಳಿ ಗ್ರಾಮದಲ್ಲಿ ನಡೆದಿದೆ.

ಪ್ರೀತಿಸಿ ಮದುವೆಯಾಗಿರುವ ಗ್ರಾಮದ ಸಾವಿತ್ರಮ್ಮ ಮತ್ತು ಆಂಧ್ರದ ಮಣಿಕಂಠ ಅವರೇ ಬಹಿಷ್ಕಾರಕ್ಕೆ ಒಳಗಾದವರು. ಇವರಿಬ್ಬರೂ ಹುಟ್ಟುತ್ತಲೇ ಶ್ರವಣ ಮತ್ತು ವಾಕ್ ದೋಷ ಹೊಂದಿದ್ದಾರೆ.

ಘಟನೆಯ ವಿವರ: ಸಾವಿತ್ರಮ್ಮ ಎನ್. ದೇವರಹಳ್ಳಿ ಗ್ರಾಮದ ಜೋಗಿ ಜನಾಂಗಕ್ಕೆ ಸೇರಿದ್ದು, ರೆಡ್ಡಿ ಜನಾಂಗಕ್ಕೆ ಸೇರಿರುವ ಮಣಿಕಂಠ ಆಂಧ್ರಪ್ರದೇಶದ ಪೂರ್ವ ಗೋದಾವರಿ ಜಿಲ್ಲೆಯವರು. ಇಬ್ಬರೂ ಬೆಂಗಳೂರಿನಲ್ಲಿ ಖಾಸಗಿ ಕಂಪನಿಯಲ್ಲಿ ಉದ್ಯೋಗಿಗಳಾಗಿದ್ದರು. ಇಬ್ಬರ ಮಧ್ಯೆ ಪ್ರೀತಿ ಮೂಡಿ 2021ರ ಏಪ್ರಿಲ್ 7ರಂದು ಮದುವೆಯಾಗಿದ್ದರು. ಮದುವೆಯ ಬಳಿಕ ಸಾವಿತ್ರಮ್ಮ ಗಂಡನನ್ನು ತವರಿಗೆ ಕರೆತಂದಿದ್ದರು.

ಆಗಲೂ ಗ್ರಾಮದ ಜೋಗಿ ಜನಾಂಗದ ಮುಖಂಡರು, ಅನ್ಯಜಾತಿಯ ಯುವಕನನ್ನು ಮದುವೆಯಾಗಿರುವುದು ತಮ್ಮ ಸಂಪ್ರದಾಯಕ್ಕೆ ವಿರುದ್ಧದ ನಡೆ ಎಂದು ಆಕ್ಷೇಪಿಸಿದ್ದರು. ಯುವತಿಯ ಪಾಲಕರಿಗೆ ₹ 30,000 ದಂಡ ಕಟ್ಟಿಸಿಕೊಂಡು ಸಾವಿತ್ರಮ್ಮ-ಮಣಿಕಂಠ ದಂಪತಿಯನ್ನು ಗ್ರಾಮದಿಂದ ಹೊರಹೋಗುವಂತೆ ಸೂಚಿಸಿದ್ದರು. ಆಗ ದಂಪತಿ ವಾಪಸ್ ಬೆಂಗಳೂರಿಗೆ ತೆರಳಿದ್ದರು.

ಸಾವಿತ್ರಮ್ಮ ಈಚೆಗೆ ಹೆರಿಗೆಗೆಂದು ತವರಿಗೆ ಬಂದ ವಿಷಯ ತಿಳಿದ ಜೋಗಿ ಜನಾಂಗದ ಮುಖಂಡರು, ಮತ್ತೊಮ್ಮೆ ಪಾಲಕರನ್ನು ಕರೆಸಿ ಗಲಾಟೆ ಮಾಡಿದ್ದಾರೆ. 'ಮಗಳು- ಅಳಿಯನನ್ನು ಗ್ರಾಮದಿಂದ ಆಚೆ ಕಳಿಸದಿದ್ದರೆ ನಿಮ್ಮನ್ನೂ ಗ್ರಾಮದಿಂದ ಶಾಶ್ವತವಾಗಿ ಬಹಿಷ್ಕರಿಸುತ್ತೇವೆ' ಎಂದು ಬೆದರಿಕೆ ಹಾಕಿದ್ದಾರೆ.

ಇದರಿಂದ ಬೇಸತ್ತು ಸಾವಿತ್ರಮ್ಮ ಅವರು ಪತಿ ಮತ್ತು 1 ತಿಂಗಳ ಗಂಡು ಮಗುವಿನೊಂದಿಗೆ ಚಳ್ಳಕೆರೆಯ ಮೂಗ ಮತ್ತು ಕಿವುಡರ ಶಾಲೆಗೆ ತೆರಳಿ ಅಲ್ಲಿನ ಸಿಬ್ಬಂದಿಗೆ ಘಟನೆ ಕುರಿತು ವಿವರಿಸಿದ್ದಾರೆ.

ಅಲ್ಲಿನ ಶಿಕ್ಷಕರು ಅವರನ್ನು ಮಹಿಳಾ ಸಾಂತ್ವನ ಕೇಂದ್ರಕ್ಕೆ ಕರೆತಂದಿದ್ದು, ಮೇಲ್ವಿಚಾರಕರಾದ ಎನ್. ನಿರ್ಮಲಾ, ಟಿ.ಮಂಜುಳಾ, ಹೋ.ಚಿ. ಬೋರಯ್ಯ ದೂರು ಸ್ವೀಕರಿಸಿ ತಹಶೀಲ್ದಾರ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ತಿಳಿಸಿದ್ದಾರೆ.

ತಹಶೀಲ್ದಾರ್ ಭೇಟಿ: ಮಹಿಳಾ ಸಾಂತ್ವನ ಕೇಂದ್ರಕ್ಕೆ ಚಳ್ಳಕೆರೆ ತಹಶೀಲ್ದಾರ್ ರೆಹಾನ್ ಪಾಷ ಬುಧವಾರ ಭೇಟಿ ನೀಡಿ, ಗ್ರಾಮದಿಂದ ಬಹಿಷ್ಕಾರಕ್ಕೆ ಒಳಗಾಗಿರುವ ದಂಪತಿಗೆ ಧೈರ್ಯ ಹೇಳಿದ್ದಾಗಿ ತಿಳಿಸಿದ್ದಾರೆ.

'ತಾಯಿ ಮತ್ತು ಮಗುವಿಗೆ ಚಿತ್ರದುರ್ಗದ ಸ್ವಾಧಾರ ಕೇಂದ್ರದಲ್ಲಿ ತಾತ್ಕಾಲಿಕವಾಗಿ ಆಶ್ರಯ ಕಲ್ಪಿಸಲಾಗಿದೆ' ಎಂದಿದ್ದಾರೆ.

ಪ್ರಾಧ್ಯಾಪಕ ಟಿ.ಎನ್.ವಾಸುದೇವಮೂರ್ತಿ ಆಗ್ರಹ

'ಅನ್ಯ ಭಾಷಿಕರು ಕನ್ನಡ ಕಲಿಯಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಫ್ರಾನ್ಸ್ ದೇಶದಲ್ಲಿ ವಿದ್ಯಾರ್ಥಿಗಳು ವೀಸಾ ಪಡೆಯಲು ಫ್ರೆಂಚ್ ಭಾಷಾ ಪರೀಕ್ಷೆಯನ್ನು ಪಾಸು ಮಾಡಬೇಕು. ಅಂತಹ ನೀತಿ ನಮ್ಮಲ್ಲಿಯೂ ತಂದರೆ ಭಾಷೆ ಬೆಳೆಯುವ ಜತೆಗೆ ಕನ್ನಡ ಕಲಿಸುವ ಮೇಷ್ಟ್ರುಗಳಿಗೆ ಕೆಲಸ ಸಿಗುತ್ತದೆ' ಎಂದು ಆದಿಚುಂಚನಗಿರಿ ವಿಶ್ವವಿದ್ಯಾಲಯದ ಸಹ ಪ್ರಾಧ್ಯಾಪಕ ಟಿ.ಎನ್. ವಾಸುದೇವಮೂರ್ತಿ ತಿಳಿಸಿದರು.

ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ನಗರದಲ್ಲಿ ಹಮ್ಮಿಕೊಂಡ 'ಕನ್ನಡದ ನಾಳೆಗಾಗಿ ಮಾತುಕತೆ' ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು.

'ಬೆಂಗಳೂರು ಸಿಲಿಕಾನ್ ಸಿಟಿ ಆಗಿದ್ದು ನಮ್ಮಿಂದಲೇ ಎಂದು ಅನ್ಯಭಾಷೆಯ ವಲಸಿಗರು ಹೇಳುತ್ತಾರೆ. ಆದರೆ, ಅವರು ಬೆಂಗಳೂರಿನ ಮಾಲಿನ್ಯಕ್ಕೆ ಕೊಟ್ಟ ಕೊಡುಗೆ ಮರೆಯಲಾಗದು. ಕನ್ನಡಿಗರು ಕನ್ನಡದ ಕೀಳರಿಮೆಯಿಂದ ಹೊರಬರಬೇಕು. ಕುವೆಂಪು ಅವರಿಗೂ ಆರಂಭದ ದಿನಗಳಲ್ಲಿ ಕನ್ನಡದ ಬಗೆಗೆ ಕೀಳರಿಮೆಯಿತ್ತು. ಅದರಿಂದ ಹೊರಬಂದಿದ್ದರಿಂದಲೇ ಕನ್ನಡದ ಬೆಳವಣಿಗೆಗೆ ದೊಡ್ಡ ಕವಿಯಾಗಿ ಬೆಳೆದರು. ವಿಜ್ಞಾನ ಸೇರಿದಂತೆ ಎಲ್ಲಾ ವಿಷಯಗಳ ಪುಸ್ತಕಗಳು ಕನ್ನಡದಲ್ಲಿ ಲಭ್ಯವಾಗುವಂತೆ ಮಾಡಿದರು' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಟಿ.ಎನ್. ವಾಸುದೇವಮೂರ್ತಿ, ಎಂ.ಪ್ರಕಾಶಮೂರ್ತಿ, ದಾ.ಪಿ. ಆಂಜನಪ್ಪ ಹಾಗೂ ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು ಗಿಡಕ್ಕೆ ನೀರೆರೆದರು.

ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ.ಪ್ರಕಾಶಮೂರ್ತಿ, 'ಬೆಂಗಳೂರಿನಲ್ಲಿ ಕನ್ನಡ ಉಳಿದರೆ ಇಡೀ ಕರ್ನಾಟಕದಲ್ಲಿ ಕನ್ನಡ ಉಳಿಯುತ್ತದೆ' ಎಂದರು.

'ಕನ್ನಡ ಚಳವಳಿಗಾರರನ್ನು ಕಳ್ಳರಂತೆ ಕಾಣುವ ಹಾಗೂ ನಡೆಸಿಕೊಳ್ಳುವುದನ್ನು ನಿಲ್ಲಿಸಬೇಕು. ವೈದ್ಯರು, ಅಧಿಕಾರಿಗಳು ಮೊದಲಾದವರು ತಮ್ಮ ಮಕ್ಕಳನ್ನು ತಮ್ಮದೇ ವೃತ್ತಿಗೆ ಸೇರಿಸಲು ಬಯಸುತ್ತಾರೆ. ಆದರೆ, ದೇಶದ ನಾಲ್ಕು ಆಧಾರ ಸ್ತಂಭಗಳಾದ ಶಿಕ್ಷಕರು, ಕೃಷಿಕರು, ಸೈನಿಕರು ಮತ್ತು ಕಾರ್ಮಿಕರು ತಮ್ಮ ಮಕ್ಕಳನ್ನು ತಮ್ಮ ವೃತ್ತಿಗೆ ತರಲು ಬಯಸುವುದು ಕಡಿಮೆ. ಸಮಾಜದಲ್ಲಿ ಈ ವೃತ್ತಿಗಳಿಗೆ ಗೌರವ ಕುಂದಿರುವುದೇ ಇದಕ್ಕೆ ಕಾರಣ' ಎಂದು ಬೇಸರ ವ್ಯಕ್ತಪಡಿಸಿದರು.

ಕನ್ನಡ ರಕ್ಷಣಾ ವೇದಿಕೆ ರಾಜ್ಯ ಉಪಾಧ್ಯಕ್ಷ ದಾ.ಪಿ. ಆಂಜನಪ್ಪ ಇದ್ದರು.

ಹಾಲಿ ವಿದ್ಯಾರ್ಥಿವೇತನವೂ ನಾಲ್ಕೈದು ಪಟ್ಟು ಹೆಚ್ಚಳ

ವಿದ್ಯಾಚೇತನಕ್ಕೆ 4 ವಿಭಾಗ ಸೇರ್ಪಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ನಿಗಮಗಳ ಅಧಿಕಾರಿಗಳು ಮತ್ತು ಸಿಬ್ಬಂದಿಯ ಮಕ್ಕಳ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಲು ಆರಂಭಿಸಲಾಗಿರುವ ಸಾರಿಗೆ ವಿದ್ಯಾಚೇತನ ಯೋಜನೆಯಲ್ಲಿ ಮಹತ್ತರವಾದ ಬದಲಾವಣೆಗಳಾಗಿವೆ. ಈಗಾಗಲೇ ಇರುವ ವಿದ್ಯಾರ್ಥಿವೇತನವನ್ನು ನಾಲ್ಕೈದು ಪಟ್ಟು ಹೆಚ್ಚಿಸಲಾಗಿದೆ. ಜೊತೆಗೆ ನಾಲ್ಕು ಕಲಿಕಾ ವಿಭಾಗಗಳನ್ನು ಸೇರ್ಪಡೆ ಮಾಡಲಾಗಿದೆ.

ಕೈಗಾರಿಕಾ ತರಬೇತಿ (ಡಿಪ್ಲೊಮಾ), ಬಿ.ಇ, ಬಿ.ಎಸ್‌ಸಿ ಪದವಿ ಹಾಗೂ ಸ್ನಾತಕೋತ್ತರ ಪದವಿಗಳ ವ್ಯಾಸಂಗಕ್ಕೆ ಸೀಮಿತವಾಗಿದ್ದ ವಿದ್ಯಾರ್ಥಿವೇತನವನ್ನು ಪಿಯುಸಿ, ಬಿ.ಎ, ಬಿ.ಕಾಂ, ಪಿಎಚ್.ಡಿ ಮತ್ತು ವಿದೇಶದಲ್ಲಿ ವ್ಯಾಸಂಗ ಮಾಡುವ ಯಾವುದೇ ಪದವಿಗಳಿಗೆ ವಿಸ್ತರಿಸಲಾಗಿದೆ.

ಡಿಪ್ಲೊಮಾ ಮಾಡುತ್ತಿದ್ದವರಿಗೆ ₹ 900 ವಿದ್ಯಾರ್ಥಿವೇತನ ನೀಡಲಾಗುತ್ತಿತ್ತು. 2022–23ನೇ ಸಾಲಿನಿಂದ ₹ 5 ಸಾವಿರಕ್ಕೆ ಏರಿಕೆಯಾಗಿದೆ. ಇದೇ ರೀತಿ ಎಲ್ಲ ವಿದ್ಯಾರ್ಥಿವೇತನಗಳನ್ನು ಹೆಚ್ಚಳ ಮಾಡಲಾಗಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.

ಪರಿಷ್ಕೃತ ಪ್ರೋತ್ಸಾಹ ದರ (₹ ಗಳಲ್ಲಿ)

ಕೋರ್ಸ್	ಹಿಂದಿನ ಮೊತ್ತ	ಪರಿಷ್ಕೃತ ಮೊತ್ತ
ಡಿಪ್ಲೊಮಾ	900(ವರ್ಷಕ್ಕೆ)	5,000(ವರ್ಷಕ್ಕೆ)
ಬಿ.ಇ, ಬಿ.ಎಸ್‌ಸಿ	880(ವರ್ಷಕ್ಕೆ)	5,000(ವರ್ಷಕ್ಕೆ)
ವೈದ್ಯಕೀಯ ಪದವಿ	10,500 (ಪೂರ್ಣಾವಧಿಗೆ)	33,750 (ಪೂರ್ಣಾವಧಿಗೆ)
ಸ್ನಾತಕೋತ್ತರ ಪದವಿ (2 ವರ್ಷ)	3,600	14,000
ಸ್ನಾತಕೋತ್ತರ ಪದವಿ (3 ವರ್ಷ)	5,400	21,000

ಹೊಸ ವಿಭಾಗಗಳು

ಕೋರ್ಸ್	ವಿದ್ಯಾರ್ಥಿವೇತನ (₹ ಗಳಲ್ಲಿ)
ಪಿಯುಸಿ	4,000
ಬಿ.ಎ, ಬಿ.ಕಾಂ	5,000
ಪಿಎಚ್‌ಡಿ	25,000
ವಿದೇಶ ವ್ಯಾಸಂಗ	25,000

ಸ್ಪರ್ಧಾ ವಾಣಿ

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
ಮತ್ತಷ್ಟು 'ಪ್ರಚಲಿತ'ಕ್ಕಾಗಿ..
ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಚಲಿತ ವಿದ್ಯಮಾನಗಳು ಸೇರಿದಂತೆ ನಾಗರಿಕ ಸೇವಾ ಪರೀಕ್ಷೆಗಳಿಗೆ ಪೂರಕವಾದ ಲೇಖನ, ವಿಡಿಯೊಗಳಿಗಾಗಿ ಪ್ರಜಾವಾಣಿ- ಡೆಕ್ಕನ್‌ಹೆರಾಲ್ಡ್ ಎಕ್ಸಾಮ್ 'ಮಾಸ್ಟರ್‌ಮೈಂಡ್' ಇ-ಪೇಪರ್‌ಗೆ ಚಂದಾದಾರರಾಗಿ.
ಚಂದಕ್ಕಾಗಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ.
www.exammastermind.com

ಯುನೆಸ್ಕೊ ವಿಶ್ವ ಪರಂಪರೆಯ ತಾಣಗಳ ಪಟ್ಟಿಯಲ್ಲಿ

ಹೊಯ್ಸಳ ದೇವಾಲಯಗಳು

ಭಾರತದ ವಿಶ್ವಮಾನ್ಯ ಕವಿಯಾದ ರವೀಂದ್ರನಾಥ ಟ್ಯಾಗೋರ್ ಶತಮಾನದ ಹಿಂದೆ ವಿಶ್ವಭಾರತಿಯನ್ನು ನಿರ್ಮಿಸಿದ ಪ್ರದೇಶವಾದ ಪಶ್ಚಿಮ ಬಂಗಾಳದ ಶಾಂತಿನಿಕೇತನ ಮತ್ತು ಕರ್ನಾಟಕದ ಬೇಲೂರು, ಹಳೇಬೀಡು ಮತ್ತು ಸೋಮನಾಥಪುರದ ಹೊಯ್ಸಳರ ದೇವಾಲಯಗಳು ಇತ್ತೀಚೆಗೆ UNESCO ವಿಶ್ವ ಪಾರಂಪರಿಕ ಪಟ್ಟಿಯಲ್ಲಿ ಸ್ಥಾನ ಪಡೆದಿವೆ.

ವಿವರಗಳು

- ಭಾರತದ ಪ್ರಮುಖ ಸಾಂಸ್ಕೃತಿಕ ತಾಣವಾದ ಶಾಂತಿನಿಕೇತನ ಬಿರ್ಭುಮ್ ಜಿಲ್ಲೆಯಲ್ಲಿದ್ದು, ಇದನ್ನು ಯುನೆಸ್ಕೊ ಪಾರಂಪರಿಕ ಸ್ಥಾನದ ಪಟ್ಟಿಯಲ್ಲಿ ಸೇರಿಸಬೇಕೆಂದು ಭಾರತವು ಬಹಳ ಹಿಂದಿನಿಂದಲೂ ಪ್ರಯತ್ನಿಸುತ್ತಾ ಬಂದಿದೆ.
  ಕೆಲವು ತಿಂಗಳ ಹಿಂದೆ ಈ ಸಂಬಂಧ ಅಂತರರಾಷ್ಟ್ರೀಯ ಸಲಹಾ ಸಂಸ್ಥೆಯಾದ ICOMOS , ಶಾಂತಿನಿಕೇತನವನ್ನು UNESCO ವಿಶ್ವ ಪರಂಪರೆಯ ಪಟ್ಟಿಯಲ್ಲಿ ಸೇರ್ಪಡೆ ಮಾಡಬೇಕೆಂದು ಶಿಫಾರಸು ಮಾಡಿತ್ತು. ಇದು ಯುನೆಸ್ಕೊ ಪಾರಂಪರಿಕ ಪಟ್ಟಿಗೆ ಭಾರತದ 41ನೇ ಸೇರ್ಪಡೆಯಾಗಿದೆ.
- ಹೊಯ್ಸಳ ಸಾಮ್ರಾಜ್ಯದ ದೇವಾಲಯಗಳನ್ನು ಏಪ್ರಿಲ್ 15, 2014 ರಂದು ಯುನೆಸ್ಕೊದ ತಾತ್ಕಾಲಿಕ ಪಟ್ಟಿಯಲ್ಲಿ ಸೇರಿಸಲಾಗಿತ್ತು. ಈ ಸ್ಮಾರಕಗಳು ಭಾರತೀಯ ಪುರಾತತ್ವ ಸರ್ವೇಕ್ಷಣೆ (ASI) ಇಲಾಖೆಯ ರಕ್ಷಣೆಯಲ್ಲಿದ್ದು ಅವುಗಳ ಸಂರಕ್ಷಣೆ ಮತ್ತು ನಿರ್ವಹಣೆಯು ಇದರ ಜವಾಬ್ದಾರಿಯಾಗಿದೆ. ಇವು ಯುನೆಸ್ಕೊ ಪಾರಂಪರಿಕ ಪಟ್ಟಿಗೆ ಭಾರತದ 42ನೇ ಸೇರ್ಪಡೆಯಾಗಿದೆ.

UNESCO ವಿಶ್ವ ಪರಂಪರೆಯ ತಾಣಗಳು

- UNESCO ವಿಶ್ವ ಪರಂಪರೆಯ ತಾಣಗಳು ಮಾನವೀಯತೆಯ ಸಾಮೂಹಿಕ ಪರಂಪರೆಯನ್ನು ಪ್ರತಿನಿಧಿಸುತ್ತದೆ ಹಾಗೂ ಅವುಗಳು ಎತ್ತಿಹಿಡಿಯುವ ಸಾಂಸ್ಕೃತಿಕ, ಐತಿಹಾಸಿಕ, ವೈಜ್ಞಾನಿಕ ಅಥವಾ ನೈಸರ್ಗಿಕ ಪ್ರಾಮುಖ್ಯ ಜಗತ್ತಿಗೆ ಪರಿಚಯಿಸುವ ಗುರಿಯನ್ನು ಹೊಂದಿದೆ.
- ಈ ತಾಣಗಳನ್ನು ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆ (ಯುನೆಸ್ಕೊ) ಬಲು ಎಚ್ಚರಿಕೆಯಿಂದ ಆಯ್ಕೆ ಮಾಡುತ್ತದೆ. ಭವಿಷ್ಯದ ಪೀಳಿಗೆಗಾಗಿ ಜತನದಿಂದ ಕಾಪಿಡುವ ಗುರಿಯನ್ನು ಹೊಂದಿದೆ.

ಹಿನ್ನೆಲೆ ಮತ್ತು ಇತಿಹಾಸ

- ಜಗತ್ತಿನ ಸಾಂಸ್ಕೃತಿಕ ಮತ್ತು ನೈಸರ್ಗಿಕ ಪರಂಪರೆಯನ್ನು ಸಂರಕ್ಷಿಸುವ ಕಲ್ಪನೆಯು ದ್ವಿತೀಯ ವಿಶ್ವ ಸಮರದ ನಂತರ ಮುನ್ನೆಲೆಗೆ ಬಂದಿತು. 1945ರಲ್ಲಿ ಸ್ಥಾಪನೆಯಾದ ಯುನೆಸ್ಕೊ, ಮುಂದುವರಿದ ಭಾಗವಾಗಿ ವಿಶ್ವದ ಪಾರಂಪರಿಕ ಸ್ಥಳಗಳನ್ನು ರಕ್ಷಿಸುವ ಅಗತ್ಯವನ್ನು ಗುರುತಿಸಿತು.
- ವಿಶ್ವ ಸಾಂಸ್ಕೃತಿಕ ಮತ್ತು ನೈಸರ್ಗಿಕ ಪರಂಪರೆಯ ರಕ್ಷಣೆಗೆ ಸಂಬಂಧಿಸಿದ ಒಪ್ಪಂದವನ್ನು 1972ರಲ್ಲಿ ಯುನೆಸ್ಕೋ ಸಾಮಾನ್ಯ ಸಮ್ಮೇಳನದ 17ನೇ ಅಧಿವೇಶನದಲ್ಲಿ ಅಂಗೀಕರಿಸಲಾಯಿತು.
- ಈ ಅಂತರರಾಷ್ಟ್ರೀಯ ಒಪ್ಪಂದವು ವಿಶ್ವ ಪಾರಂಪರಿಕ ತಾಣಗಳ ಪಟ್ಟಿಯ ಸ್ಥಾಪನೆಗೆ ರೂಪುರೇಷೆಗಳನ್ನು ಒದಗಿಸಿದ್ದು ಇದು ಜಗತ್ತಿನ ಅತ್ಯುತ್ತಮ ಅಮೂಲ್ಯ ಸ್ಥಳಗಳನ್ನು ಒಳಗೊಂಡಿದೆ.

ಯುಪಿಎಸ್‌ಸಿ -ಪ್ರಿಲಿಮ್ಸ್ ,ಕೆಪಿಎಸ್‌ಸಿ -ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-2, ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಪ್ರಚಲಿತ ವಿದ್ಯಮಾನಗಳ ಕುರಿತು **ಯು.ಟಿ ಆಯೆಷಾ ಫರ್ಜಾನ** ಮಾಹಿತಿ ನೀಡಿದ್ದಾರೆ

● ಬೇಲೂರಿನ ಚೆನ್ನಕೇಶವ ದೇವಾಲಯ

ಪ್ರಧಾನ ಶಿಲ್ಪಿಗಳು : ದಾಸೋಜ ಮತ್ತು ಅವರ ಮಗ ಚಾವಣ.
ಇಲ್ಲಿನ ಗೋಡೆಗಳು ಶಿಲ್ಪಸಂಪತ್ತಿನ ತೆರೆದ ಗಣಿಗಳಾಗಿದ್ದು, ಗೋಡೆಯ ಕೆಳ ಸಾಲುಗಳಲ್ಲಿ ಸದೃಢತೆಯ ಸಂಕೇತವಾದ ಗಜಗಳ ಸಾಲು,ಅದರ ಮೇಲೆ ಶೌರ್ಯ ಸಂಕೇತವಾಗಿ ಸಿಂಹಗಳ ಸಾಲು, ಅದರ ಮೇಲಿನ ಪಟ್ಟಿಕೆಯಲ್ಲಿ ರಾಮಾಯಣ-ಮಹಾಭಾರತದ ಸಮರ ದೃಶ್ಯಗಳ ಸಾಲು, ಮಧ್ಯೆ ಶಾರ್ದೂಲ ಮತ್ತು ಹಂಸಗಳ ಪಟ್ಟಿಕೆಗಳು ಇರುತ್ತವೆ. ಇದರ ಮೇಲೆ ಎರಡು ಎರಡೂವರೆ ಅಡಿ ಎತ್ತರದ ಸುಂದರವಾದ ದೇವ-ದೇವತೆಗಳ ಶಿಲ್ಪಗಳಿರುತ್ತವೆ.ಈ ಚಿತ್ರ ಪಟ್ಟಿಕೆಗಳು ಮತ್ತು ಬೋದಿಗೆಗಳ ಬಳಿ ಅತಿ ಸುಂದರವಾದ 42 ಪ್ರತಿಮೆಗಳಿವೆ.
ಈ ದೇವಾಲಯವನ್ನು ಲಲಿತಕಲಾ ವಸ್ತುಸಂಗ್ರಹಾಲಯ ಎಂದು ಎಂ ಎಚ್ ಕೃಷ್ಣರವರು ಬರೆದಿರುವುದರಲ್ಲಿ ಉತ್ಪ್ರೇಕ್ಷೆಯಿಲ್ಲ.

●ಹಳೇಬೀಡಿನ ಹೊಯ್ಸಳೇಶ್ವರ ದೇಗುಲ

ಪ್ರಧಾನ ಸ್ಥಪತಿ : ಕೇದಾರೋಜ
ವಿಷ್ಣುವರ್ಧನನ ಅಧಿಕಾರಿಯಾದ ಕೇತಮಲ್ಲನು ಕೇದಾರ ಎಂಬ ಸ್ಥಪತಿಯ ಮೂಲಕ ಈ ದೇಗುಲವನ್ನು ಕಟ್ಟಿಸಿದನು. ಐದು ಅಡಿ ಎತ್ತರದ ಜಗತಿಯ ಮೇಲೆ ನಕ್ಷತ್ರಾಕಾರದ ತಳವಿನ್ಯಾಸದಲ್ಲಿ ಇದನ್ನು ನಿರ್ಮಿಸಲಾಗಿದೆ. ಇದು ದ್ವಿಕೂಟಾಚಲವಾಗಿದೆ. ಎರಡು ಭಾಗಗಳಲ್ಲಿ ಎರಡು ಗರ್ಭಗೃಹಗಳು, ಸುಖನಾಸಿ, ನವರಂಗ ಮತ್ತು ಮಹಾದ್ವಾರಗಳಿವೆ. ಎರಡು ಮಹಾದ್ವಾರಗಳ ಮುಂದೆ ಎರಡು ನಂದಿ ಮಂಟಪಗಳು ಮತ್ತು ನಂದಿ ವಿಗ್ರಹಗಳೂ ಇವೆ. ನವರಂಗಗಳಲ್ಲಿ ಕಂಬಗಳ ಕೆತ್ತನೆ ಮನಮೋಹಕವಾಗಿದ್ದು ಅವುಗಳ ಮೇಲೆ ಒಂದೊಂದು ಅಂಕಣದಲ್ಲಿಯೂ ಚಾವಣಿಯಲ್ಲಿ ಭುವನೇಶ್ವರಿಯ ವಿಗ್ರಹಗಳಿವೆ. ಬೇಲೂರಿನ ದೇವಾಲಯದಂತೆಯೇ ಇವುಗಳ ಭಿತ್ತಿಗಳಲ್ಲಿ ಹಲವು ರೀತಿಯ ಶಿಲ್ಪ ಪಟ್ಟಿಕೆಗಳು ಕಂಗೊಳಿಸುತ್ತವೆ.ಈ ದೇವಾಲಯದಲ್ಲಿ ಬೇಲೂರಿಗಿಂತಲೂ ಹೆಚ್ಚಿನ ಶಿಲ್ಪ ಸಮೃದ್ಧಿ ಕಣ್ಮನ ತಣಿಸುತ್ತದೆ. ಫರ್ಗ್ಯುಸನ್ ಅವರ ಅಭಿಪ್ರಾಯದಂತೆ ಸೂಕ್ಷ್ಮ ಕೌಶಲದ ಕೆತ್ತನೆ ಕೆಲಸದಲ್ಲಿ ಇಡೀ ಜಗತ್ತಿನ ಶಿಲ್ಪವನ್ನು ಮೀರಿಸಿದ ಅನೇಕ ಕಟ್ಟಡಗಳು ಭಾರತದಲ್ಲಿವೆ. ಆದರೆ ಬೇಲೂರು-ಹಳೇಬೀಡು ದೇವಾಲಯಗಳು ಅವೆಲ್ಲವನ್ನು ಮೀರಿಸಿದೆ.

●ಸೋಮನಾಥಪುರದ ಕೇಶವ ದೇವಾಲಯ

ಮೂರನೆಯ ಸೋಮೇಶ್ವರನ ಮಂತ್ರಿ ಸೋಮನಾಥ ಎಂಬವನು ಈ ದೇವಾಲಯವನ್ನು ಕ್ರಿಸ್ತಶಕ 1268ರಲ್ಲಿ ಕಟ್ಟಿಸಿದನು.

- ಇದು ಮೂರು ಗರ್ಭಗೃಹಗಳನ್ನುಳ್ಳ ತ್ರಿಕೂಟಾಚಲವಾಗಿದೆ. ಇದು ದೊಡ್ಡ ಪ್ರಾಕಾರದ ಒಳಗಿದೆ. ಪ್ರಾಕಾರದ ಗೋಡೆಗೆ ಸೇರಿದಂತೆ ಒಟ್ಟು 64 ಅಂಕಣಗಳ ಕೈಸಾಲೆಯ ಮಂಟಪಗಳಿವೆ. ಗರ್ಭಗುಡಿಗಳ ಹೊರಭಾಗಗಳು ನಕ್ಷತ್ರಾಕಾರವಾಗಿಯೂ ಒಳಭಾಗ ಚೌಕಾಕಾರವಾಗಿಯೂ ಇದೆ. ಮೂರು ಗರ್ಭಗುಡಿಗಳ ಮೇಲ್ಭಾಗದಲ್ಲಿಯೂ ಮೂರು ಗೋಪುರಗಳಿವೆ. ಬೇಲೂರು ಹಳೇಬೀಡು ದೇವಾಲಯಗಳಲ್ಲಿರುವಂತೆ ಇವುಗಳ ಮೇಲೂ ಹಲವು ರೀತಿಯ ಶಿಲ್ಪಪಟ್ಟಿಕೆಗಳ ಕೆತ್ತನೆಗಳಿವೆ.
- ಹೆನ್ರಿ ಕಸಿನ್ಸ್ ಅವರ ಪ್ರಕಾರ ಚಿನ್ನ-ಬೆಳ್ಳಿಯ ಕೆತ್ತನೆಯ ನುಣುಪು ಈ ದೇಗುಲದಲ್ಲಿರುವ ಕೆತ್ತನೆಗಿಂತ ಸೊಗಸಾಗಿ ಇರಲಾರದು. ಆದರೆ ಹೊಯ್ಸಳ ಸ್ಥಪತಿಗಳು ಶಿಲ್ಪಗಳ ಅಲಂಕರಣೆಯತ್ತ ಹೆಚ್ಚು ಕೇಂದ್ರೀಕರಿಸಿ ಜೀವಂತಿಕೆಯ ಅಭಿವ್ಯಕ್ತಿಯನ್ನು ಮರೆತಿದ್ದಾರೆ ಎಂಬ ಆರೋಪಗಳೂ ಇವೆ. ಮತ್ತು ಶಿಲ್ಪದಡಿಯಲ್ಲಿ ತಮ್ಮ ಹೆಸರನ್ನು ಕೆತ್ತಿರುವ ಉದಾಹರಣೆಗಳು ಹೊಯ್ಸಳ ಸ್ಥಪತಿಗಳಲ್ಲೇ ವ್ಯಾಪಕವಾಗಿ ಕಾಣಬಹುದು. ಅವರಲ್ಲಿ ಬೀರಣ,ರೇವೋಜ,ಹೊನ್ನೋಜ, ಬೈಚೋಜ ಮುಂತಾದ ಮುನ್ನೂರಕ್ಕೂ ಹೆಚ್ಚಿನ ಹೆಸರನ್ನು ಕಾಣಬಹುದು. ಇವರ ಹಸ್ತಗಳಲ್ಲಿ ಅರಳಿದ ಹೊಯ್ಸಳರ ಕಾಲದ 100ಕ್ಕೂ ಹೆಚ್ಚಿನ ದೇವಾಲಯಗಳು ಈಗಲೂ ಇವೆ. ❖

●ಶಾಂತಿನಿಕೇತನ

ಶಾಂತಿನಿಕೇತನವನ್ನು ಇತ್ತೀಚೆಗೆ ಭಾರತದ 41 ನೇ UNESCO ವಿಶ್ವ ಪರಂಪರೆಯ ತಾಣವಾಗಿ ಗೊತ್ತುಪಡಿಸಲಾಗಿದ್ದು ಇದು ಸುಂದರಬನ್ಸ್ ರಾಷ್ಟ್ರೀಯ ಉದ್ಯಾನವನ ಮತ್ತು ಡಾರ್ಜಿಲಿಂಗ್ ಮೌಂಟೇನ್ ರೈಲ್ವೆಗಳ ಬಳಿಕ ವಿಶ್ವ ಪರಂಪರೆಯ ತಾಣವಾಗಿ ಗುರುತಿಸಲ್ಪಟ್ಟ ಪಶ್ಚಿಮ ಬಂಗಾಳ ರಾಜ್ಯದ ಮೂರನೆಯ ತಾಣವಾಗಿದೆ. ಕಳೆದ ವರ್ಷ, ಪಶ್ಚಿಮ ಬಂಗಾಳದ ದುರ್ಗಾ ಪೂಜೆಯನ್ನು ಯುನೆಸ್ಕೊ ಮಾನವೀಯತೆಯ ಅಮೂರ್ತ ಸಾಂಸ್ಕೃತಿಕ ಪರಂಪರೆಯ ಪಟ್ಟಿಯಲ್ಲಿ ಸೇರಿಸಿಕೊಂಡಿತ್ತು ಎಂಬುವುದನ್ನು ಇಲ್ಲಿ ಸ್ಮರಿಸಬಹುದು.

ವಿಶ್ವ ಭಾರತಿ ವಿಶ್ವವಿದ್ಯಾಲಯ

- ಶಾಂತಿನಿಕೇತನದ ಪ್ರಾರಂಭದ ಹೆಜ್ಜೆಯನ್ನು 1901ರಲ್ಲಿ ನೊಬೆಲ್ ಪ್ರಶಸ್ತಿ ಪುರಸ್ಕೃತರಾದ ರವೀಂದ್ರನಾಥ್ ಟ್ಯಾಗೋರ್ ಅವರು ಸ್ಥಾಪಿಸಿದರು.
- 1921ರಲ್ಲಿ ಮುಂದುವರಿದು ಟ್ಯಾಗೋರ್ ಶಾಂತಿನಿಕೇತನದಲ್ಲಿ ವಿಶ್ವ ಭಾರತಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದರು.
- ಶಿಕ್ಷಣದ ಮೂಲಕ ಸಾರ್ವತ್ರಿಕ ಮಾನವೀಯ ಮೌಲ್ಯಗಳನ್ನು ಉತ್ತೇಜಿಸುವ ಗುರಿಯನ್ನು ಹೊಂದಿದ್ದ ಮಹತ್ವದ ಕಲಿಕಾ ತಾಣವಾಗಿದ್ದ ಈ ಸಂಸ್ಥೆಯನ್ನು, 1951ರಲ್ಲಿ ಸಂಸತ್ತಿನ ಕಾಯಿದೆಯ ಮೂಲಕ ಅಂತರರಾಷ್ಟ್ರೀಯ ಪ್ರಾಮುಖ್ಯತೆಯ ಸಂಸ್ಥೆಯಾಗಿ ರೂಪಿಸಲಾಯಿತು.
- ಶಾಂತಿನಿಕೇತನದಲ್ಲಿರುವ ವಿಶ್ವಭಾರತಿ ಬಂಗಾಳದ ಏಕೈಕ ಕೇಂದ್ರೀಯ ವಿಶ್ವವಿದ್ಯಾಲಯವಾಗಿದ್ದು ಪ್ರಧಾನಮಂತ್ರಿಯವರು ಈ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದಾರೆ. ಶಾಂತಿನಿಕೇತನವನ್ನು ರೂಪಿಸಿದ ರವೀಂದ್ರನಾಥ ಟ್ಯಾಗೋರ್ ಅವರ ಶೈಕ್ಷಣಿಕ ತತ್ವಶಾಸ್ತ್ರವು ಪ್ರಾಚೀನ ಭಾರತದ ಸಮಗ್ರ ಕಲಿಕೆ ಮತ್ತು ಗುರುಕುಲ ಪದ್ಧತಿಯ ಕಲ್ಪನೆಯಲ್ಲಿ ಆಳವಾಗಿ ಬೇರೂರಿರುವುದರ ಜತೆಗೆ ವಿಶ್ವಮಾನವ ಪರಿಕಲ್ಪನೆಯ ಸುಂದರ ಸಂಯೋಜನೆಯನ್ನು ಒಳಗೊಂಡಿದೆ.

ಅಧ್ಯಯನ, ತರಬೇತಿ, ಉದ್ಯೋಗಾವಕಾಶ

ಪೃಥ್ವಿರಾಜ ಎಂ.ಎಚ್.

ಕೇಂದ್ರ ಸರ್ಕಾರದ ಪರಮಾಣು ಇಲಾಖೆಯ ಅದೀನದಲ್ಲಿರುವ ಎಲೆಕ್ಟ್ರಾನಿಕ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್ 484 ಅಪ್ರೆಂಟಿಸ್‌ಗಳಿಗಾಗಿ ಅರ್ಜಿ ಆಹ್ವಾನಿಸಿದೆ.

ಆಸಕ್ತ ಅಭ್ಯರ್ಥಿಗಳು ಐಟಿಐಯಲ್ಲಿ ಪಾಸಾಗಿರಬೇಕು. ವಿವಿಧ ಟ್ರೇಡ್‌ಗಳಲ್ಲಿ ಐಟಿಐ ವಿದ್ಯಾರ್ಹತೆ ಪಡೆದವರು ಎನ್‌ಸಿವಿಟಿ ಅಥವಾ ಎಸ್‌ಸಿವಿಟಿ ಪ್ರಮಾಣ ಪತ್ರ ಪಡೆದಿರಬೇಕು.

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕನಿಷ್ಠ 18 ವರ್ಷ ಹಾಗೂ ಗರಿಷ್ಠ 25 ವರ್ಷದ ಒಳಗಿನವರಾಗಿರಬೇಕು. ಸರ್ಕಾರದ ಅನ್ವಯ ಒಬಿಸಿ, ಎಸ್‌ಸಿ, ಎಸ್‌ಟಿ ಅಭ್ಯರ್ಥಿಗಳಿಗೆ ವಯೋಮಿತಿಯಲ್ಲಿ ಸಡಿಲಿಕೆ ಇರುತ್ತದೆ.

ಅಭ್ಯರ್ಥಿಗಳು ಐಟಿಐನಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗುತ್ತದೆ. ಆಯ್ಕೆಯಾದವರಿಗೆ ಮಾಸಿಕ ಶಿಷ್ಯವೇತನ ನೀಡಲಾಗುವುದು.

ಆನ್‌ಲೈನ್ ಮೂಲಕ ಆಸಕ್ತ ಅಭ್ಯರ್ಥಿಗಳು ನೋಂದಣಿ ಮಾಡಿಕೊಳ್ಳಲು ಅಕ್ಟೋಬರ್ 10 ಕೊನೆಯ ದಿನವಾಗಿದೆ.

ಆನ್‌ಲೈನ್ ನೋಂದಣಿ ಮಾಡಲು ಈ ವೆಬ್‌ಸೈಟ್‌ಗೆ ಭೇಟಿ ನೀಡಬಹುದು: https://www.apprenticeshipindia.gov.in/

ಹೆಚ್ಚಿನ ಮಾಹಿತಿಗೆ ಈ ಜಾಣಕ್ಕೆ ಭೇಟಿ ಕೊಡಿ: https://www.ecil.co.in/jobs/Advt_ITI_16_2023.pdf

ಡಿಆರ್‌ಡಿಒ: ಜೂನಿಯರ್ ರಿಸರ್ಚ್ ಫೆಲೋಶಿಪ್‌ಗಳಿಗೆ ಅರ್ಜಿ

ಕೇಂದ್ರ ಸರ್ಕಾರದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ (ಡಿಆರ್‌ಡಿಒ) ಎರಡು ಜೂನಿಯರ್ ರಿಸರ್ಚ್ ಫೆಲೋಶಿಪ್ (ಜೆಆರ್‌ಎಫ್)ಗಳ ನೇಮಕಕ್ಕೆ ಅರ್ಜಿ ಆಹ್ವಾನಿಸಿದೆ. ಬೆಂಗಳೂರಿನ ಡಿಆರ್‌ಡಿಒ ಕಚೇರಿಗೆ ಈ ಜೆಆರ್‌ಎಫ್‌ಗಳನ್ನು ನಿಯೋಜನೆ ಮಾಡಲಾಗುವುದು.

ಬಿ.ಇ, ಬಿ.ಟೆಕ್ ಅಥವಾ ಎಂ.ಇ, ಎಂ.ಟೆಕ್ ಪಡೆದ ಅಭ್ಯರ್ಥಿಗಳು ಅರ್ಜಿಸಲ್ಲಿಸಬಹುದು.

ಜೆಆರ್‌ಎಫ್‌ಗೆ ನೇಮಕವಾದವರಿಗೆ ಮಾಸಿಕ ₹ 46,990 ವೇತನ ನೀಡಲಾಗುವುದು.

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು 28 ವರ್ಷದ ವಯಸ್ಸಿನ ಒಳಗೆ ಇರಬೇಕು. ಒಬಿಸಿ, ಎಸ್‌ಸಿ, ಎಸ್‌ಟಿ ಅಭ್ಯರ್ಥಿಗಳಿಗೆ ವಯೋಮಿತಿಯಲ್ಲಿ ಸಡಿಲಿಕೆ ಇರುತ್ತದೆ.

ಲಿಖಿತ ಪರೀಕ್ಷೆ ಮತ್ತು ಸಂದರ್ಶನದ ಮೂಲಕ ನೇಮಕಾತಿ ನಡೆಯಲಿದೆ. ಅಭ್ಯರ್ಥಿಗಳು ಅರ್ಜಿಯನ್ನು ಅಕ್ಟೋಬರ್ 10ರ ಒಳಗೆ ಸಲ್ಲಿಸಬೇಕು.

ವೆಬ್‌ಸೈಟ್: https://www.drdo.gov.in/careers

ನ್ಯಾಯ ಸಂಸ್ಥೆಯಲ್ಲಿ ವೃತ್ತಿಪರ ವಕೀಲರಿಗೆ ಉದ್ಯೋಗ

ರಾಜ್ಯದಲ್ಲಿ ನ್ಯಾಯ ಸಂಸ್ಥೆಯು ವೃತ್ತಿಪರ ವಕೀಲರಿಗಾಗಿ ಪೂರ್ಣ ಸಮಯಕ್ಕೆ ಉದ್ಯೋಗಾವಕಾಶ ನೀಡುತ್ತಿದ್ದು ಕಾನೂನು ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಪ್ರತಿಭಾವಂತರು ಈ ಅವಕಾಶ ಪಡೆಯಬಹುದಾಗಿದೆ.
ನ್ಯಾಯ ಕನ್ನಡದ ಲೀಡ್ ಸಂಸ್ಥೆಯಾಗಿದ್ದು, ಕಾನೂನಿನ ಬಗ್ಗೆ ಅರಿವು ಹೊಂದಿರುವ ಅತ್ಯಂತ ಅನುಭವಿ ಹಿರಿಯ ವಕೀಲರನ್ನು ಹುಡುಕುತ್ತಿದೆ. ಕೆಳಗಿನ ಅರ್ಹತೆಗಳನ್ನು ಹೊಂದಿರುವವರು ಈ ಉದ್ಯೋಗಾವಕಾಶ ಪಡೆಯಬಹುದು.

- ಕನಿಷ್ಠ 5 ವರ್ಷ ವಕೀಲಿಕೆಯಲ್ಲಿ ಅನುಭವ ಅಥವಾ ಬೋಧನಾ ಅನುಭವ ಹೊಂದಿರಬೇಕು.
- ನಿರರ್ಗಳವಾಗಿ ಕನ್ನಡ ಮಾತನಾಡಲು ಬರಬೇಕು. ವಿಶೇಷವಾಗಿ ಕನ್ನಡದಲ್ಲಿ ಬರವಣಿಗೆ ಕೌಶಲ್ಯ ಮತ್ತು ಸಂಶೋಧನೆ ಜ್ಞಾನ ಅತ್ಯಗತ್ಯ.
- ಸಾಮಾಜಿಕ ಮಾಧ್ಯಮಗಳ ಬಳಕೆದಾರರಾಗಿದ್ದು, ಕನ್ನಡಿಗರನ್ನು ಗುರಿಯಾಗಿಸಿಕೊಂಡು ಡಿಜಿಟಲ್ ಪ್ರಸರಣ ತಂತ್ರಗಳನ್ನು ಸೃಜಿಸಬೇಕು.
- ಟೀಮ್ ಅಥವಾ ಪ್ರಾಜೆಕ್ಟ್ ಲೀಡ್ ಮಾಡುವುದು, ಫೆಲೋಶಿಪ್‌ಗಳ ಮೇಲ್ವಿಚಾರಣೆ, ವಿವಿಧ ಕಂಪನಿ, ಸಂಸ್ಥೆಗಳೊಂದಿಗೆ ಸಂವಹನ ಮಾಡುವ ಸಾಮರ್ಥ್ಯ ಹೊಂದಿರಬೇಕು.
- ಬೆಂಗಳೂರಿನಲ್ಲಿರುವವರಿಗೆ ಅವಕಾಶ ನೀಡಲಾಗುವುದು.

ಈ ಎಲ್ಲಾ ಅರ್ಹತೆಗಳನ್ನು ಹೊಂದಿರುವವರಿಗೆ ಸಂಸ್ಥೆಯು ಆಕರ್ಷಕ ವೇತನ ನೀಡಲಾಗುತ್ತದೆ. ಆಸಕ್ತರು ಈಗಲೇ ಅರ್ಜಿ ಸಲ್ಲಿಸಬಹುದು.
ಹೆಚ್ಚಿನ ಮಾಹಿತಿಗೆ ಈ ವೆಬ್‌ಸೈಟ್ ಸಂಪರ್ಕಿಸಬಹುದು: https://kannada.nyaaya.org/
ಅರ್ಜಿ ಸಲ್ಲಿಸುವ ವೆಬ್ ವಿಳಾಸ: https://vclp.keka.com/careers/jobdetails/46255
ಇ-ಮೇಲ್: contact@nyaaya.in

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ENGLISH

Second Language ENGLISH

Unit-1 Prose : A Hero

34. Suppose you are the Swami of the story. Write a brief letter to your friend describing how you helped to catch a burglar in your house

Answer: My Dear ………..

Hope you are doing fine and have received my last mail. I am eagerly waiting for your reply. Meanwhile something exciting happened with me and hence this mail.

My father and I had a difference of opinion on the news report as to whether courage or strength is important to fight a tiger. I said it is strength and my father said that it is courage. Then he challenged me to sleep alone in the office room without even a light and with the door closed to prove my courage. I had a nightmare. Then in the dark I saw some creature approaching me. I held it tightly and bit it with such a force that it screamed with pain. Everyone at home rushed to see what happened. To my astonishment you know what, I had helped the police in catching one of the most notorious house-breakers of the district. Next day I was showered with congratulations. The headmaster called me a true scout and police inspector invited me to join the police! I am happy that I have proved my courage.

Please reply soon to both the mails.

Thank you

Yours sincerely

………………

35. Some words describing the characters of the story 'A Hero' are given in brackets: (Caring, protective, innocent, tricky, authoritative, disciplined, helpless, and nervous). Put them in appropriate columns

Swami's father	Mother	Granny	Swami

Answer:

Swami's father	Mother	Granny	Swami
Authoritative, Disciplined	Caring, Protective	Helpless	Innocent, Nervous, Tricky

Enrich your vocabulary

Task 1: Homophones: Homophones are the words that sound same but have different meanings and different spellings. Fill in the blanks with appropriate word.

1) We had …………many apples to carry. (too/two)
2) I …………a horse at Marina beach. (road/rode)
3) Did you have a ……….……for lunch? (pear/pair)
4) The books are over……..on the shelf. (their/there)

Answer: (1) too, (2) rode, (3) pear, (4) there

Task 2: Fill in the blanks with choosing the appropriate word and complete the story.

This is a 1___(Storey/Story) told by a 2___(night/knight). Once he received a letter. When he 3___(red/read) it 4___(through/ threw), he could not believe his own eyes. 5___(Far/For), it was written 6___(buy/by) none other than Queen of the land. She asked him to meet her 7___(at/yet) a secret place. The knight was in a fix. But he thought 8___(of/off) a plan to tide over this problem. He 9___(vent/went) to the meeting place, not alone, but along with his 10___(fair/fare) wife. Can you guess what happened then?

Ans:- 1. story, 2. knight, 3. read, 4. through, 5. for, 6. by, 7. at, 8. of, 9. went, 10. fair

Task 3: Scramble the letters to form words. See the meaning clues in brackets

1. atrtefl………………..(praise),
2. boudt………………..(suspect),
3. ragtedy………………(unhappy ending),
4. ragfenmt………………(a piece),
5. raetl……………………(careful),
6. cacsriyt………………(short supply),
7. ymtsathpeic……………(not cruel)

Answer: 1. Flatter, 2. Doubt, 3. Tragedy, 4. Fragment, 5. Alert, 6. Scarcity, 7. Sympathetic

Dialogue writing:

Imagine that Swami receives advice by his father and granny how would Swami say that he accepts or refuses it? Write a dialogue using the expressions given below:

Accepting:

a) That's a very good idea. Thank you.
b) Of course! I didn't think of it that. Many thanks.
c) Thank you for suggesting it. I think I will.
d) I think I must do that
e) Yes, I will. It's very good of you to make the offer.
f) That's very kind of you. I will.

Answer:

Father: Swami, can you think of learning and going on trekking during this summer vacation?
Swami: That's a very good idea. Thank you.
Father: You can start with practicing at rock climbing club in town sports complex during weekends.
Swami: Of course! I didn't think of that. Many thanks.
Father: You may also learn map reading with the help of your school NCC officer.
Swami: Thank you for suggesting it. I think I will.
Father: You may also request him to teach you about using electronic map reading using GPS equipments.
Swami: I think I must do that.
Father: If you master the electronic map reading, I will buy you a GPS navigator.
Swami: Yes, I will. It's very good of you to make the offer.
Father: I will accompany you on your first trek. But for successful trekking, you need good physical strength. Can you start morning exercise and running with me from tomorrow?
Swami: That's very kind of you. I will

Imagine that Swami receives advice by his father and granny how would Swami say that he accepts or refuses it? Write a dialogue using the expressions given below:

Refusing:

a) Thank you for the suggestion. I will certainly think about it.
b) That may be a good idea. Let me think about it.
c) I think, on the whole, I'd rather not. Thank you all the same.

(Contd……)

II PUC MATHEMATICS

MATRICES

Problems:-

7. If $A=\begin{bmatrix}3&1\\2&5\end{bmatrix}$ prove that $A^2-8A+13I=0$

(……Contd)

Soln :– Given, $A=\begin{bmatrix}3&1\\2&5\end{bmatrix}$

$$A^2=A\times A=\begin{bmatrix}3&1\\2&5\end{bmatrix}\begin{bmatrix}3&1\\2&5\end{bmatrix}$$

$$=\begin{bmatrix}9+2&3+5\\6+10&2+25\end{bmatrix}=\begin{bmatrix}11&8\\16&27\end{bmatrix}$$

$$8A=8\begin{bmatrix}3&1\\2&5\end{bmatrix}=\begin{bmatrix}24&8\\16&40\end{bmatrix}$$

$$13I=13\begin{bmatrix}1&0\\0&1\end{bmatrix}=\begin{bmatrix}13&0\\0&13\end{bmatrix}$$

$$\therefore A^2-8A+13I$$

$$=\begin{bmatrix}11&8\\16&27\end{bmatrix}-\begin{bmatrix}24&8\\16&40\end{bmatrix}+\begin{bmatrix}13&0\\0&13\end{bmatrix}$$

$$=\begin{bmatrix}11-24+13&8-8+0\\16-16+0&27-40+13\end{bmatrix}=\begin{bmatrix}0&0\\0&0\end{bmatrix}$$

Hence $A^2-8A+13I=0$

8. If $A=\begin{bmatrix}a&b\\c&d\end{bmatrix}$ and I is the unit matrix of the order 2, show that $A^2-(a+d)A=(bc-ad)I$

Soln :– 1st consider $A^2=\begin{bmatrix}a&b\\c&d\end{bmatrix}\begin{bmatrix}a&b\\c&d\end{bmatrix}$

$$=\begin{bmatrix}a^2+bc&ab+bd\\ac+dc&bc+d^2\end{bmatrix}$$

Now, consider $(a+d)A=\begin{bmatrix}a^2+ad&ab+bd\\ac+dc&ad+d^2\end{bmatrix}$

$$\Rightarrow A^2-(a+d)A=\begin{bmatrix}a^2+bc&ab+bd\\ac+dc&bc+d^2\end{bmatrix}-\begin{bmatrix}a^2+ad&ab+bd\\ac+dc&ad+d^2\end{bmatrix}$$

$$=\begin{bmatrix}bc-ad&0\\0&bc-ad\end{bmatrix}$$

$$=(bc-ad)\begin{pmatrix}1&0\\0&1\end{pmatrix}=(bc-ad)I$$

Hence, $A^2-(a+d)A=(bc-ad)I$ is proved.

9. If $A=\begin{bmatrix}3&2\\1&0\end{bmatrix}$, $B=\begin{bmatrix}4&5&6\\0&1&2\end{bmatrix}$ and $C=\begin{bmatrix}1&-4&1\\-2&5&-3\\3&6&5\end{bmatrix}$ verify $(AB)C=A(BC)$.

Soln :– Consider, $A=\begin{bmatrix}3&2\\1&0\end{bmatrix}$ & $B=\begin{bmatrix}4&5&6\\0&1&2\end{bmatrix}$

$$\therefore AB=\begin{bmatrix}3&2\\1&0\end{bmatrix}\begin{bmatrix}4&5&6\\0&1&2\end{bmatrix}$$

$$=\begin{bmatrix}3\times4+0&3\times5+2&3\times6+4\\1\times4+0&1\times5+0&1\times6+0\end{bmatrix}$$

$$=\begin{bmatrix}12&17&22\\4&5&6\end{bmatrix}$$

Hence, $(AB)C=\begin{bmatrix}12&17&22\\4&5&6\end{bmatrix}\begin{bmatrix}1&-4&1\\-2&5&-3\\3&6&5\end{bmatrix}$

$$\Rightarrow\begin{bmatrix}12-34+66&-48+85+132&-12-51+110\\4-10+18&-16+25+36&-4-15+30\end{bmatrix}$$

$$\Rightarrow\begin{bmatrix}44&169&47\\12&45&11\end{bmatrix}$$

Now, $BC=\begin{bmatrix}4&5&6\\0&1&2\end{bmatrix}\begin{bmatrix}1&-4&1\\-2&5&-3\\3&6&5\end{bmatrix}$

$$\Rightarrow\begin{bmatrix}4-10+18&-16+25+36&-4-15+30\\0-2+6&0+5+12&0-3+10\end{bmatrix}$$

$$\Rightarrow\begin{bmatrix}12&45&11\\4&17&7\end{bmatrix}$$

Hence, $A(BC)=\begin{bmatrix}3&2\\1&0\end{bmatrix}\begin{bmatrix}12&45&11\\4&17&7\end{bmatrix}$

$$=\begin{bmatrix}36+8&135+34&33+14\\12+0&45+0&11+0\end{bmatrix}$$

$$=\begin{bmatrix}44&169&47\\12&45&11\end{bmatrix}$$

$\therefore (AB)C=A(BC)$ is verified

10. If p, q, r satisfies the eqn $p^2+q^2+r^2=1$, Show that $A=\begin{bmatrix}0&r&q\\-r&0&p\\-q&-p&0\end{bmatrix}$ satisfies the eqn $A^3+A=0$

Soln :– $A^2=A.A=\begin{bmatrix}0&r&q\\-r&0&p\\-q&-p&0\end{bmatrix}\begin{bmatrix}0&r&q\\-r&0&p\\-q&-p&0\end{bmatrix}$

$$=\begin{bmatrix}-r^2-q^2&-pq&pr\\-pq&-r^2-p^2&-qr\\pr&-qr&-q^2-p^2\end{bmatrix}$$

(as $p^2+q^2+r^2=1$; $-r^2-q^2=p^2-1$; $-r^2-p^2=q^2-1$ and $-q^2-p^2=r^2-1$)

$$A^3=\begin{bmatrix}p^2-1&-pq&pr\\-pq&q^2-1&-qr\\pr&-qr&r^2-1\end{bmatrix}\begin{bmatrix}0&r&q\\-r&0&p\\-q&-p&0\end{bmatrix}$$

$$\begin{bmatrix}pqr-pqr&(p^2-1)r-p^2r&(p^2-1)q-p^2q\\-r(q^2-1)+q^2r&-pqr+pqr&-p^2q+p(q^2-1)\\q^2r-q(r^2-1)&pr^2-p(r^2-1)&pqr-pqr\end{bmatrix}$$

$$\Rightarrow\begin{bmatrix}0&-r&-q\\r&0&-p\\q&p&0\end{bmatrix}=\begin{bmatrix}0&r&q\\-r&0&p\\-q&-p&0\end{bmatrix}=-A$$

$$\Rightarrow\therefore A^3+A=0$$

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಲಾಂಗ್ ತೋರಿಸಿ ಮತಪತ್ರ ಕದ್ದರು

ಮಾಗಡಿ: ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆ ವೇಳೆ ಕೃತ್ಯ

ಪ್ರಜಾವಾಣಿ ವಾರ್ತೆ

ಮಾಗಡಿ (ರಾಮನಗರ): ತಾಲ್ಲೂಕಿನ ಹುಳ್ಳೇನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆ ನಡೆಸಲು ಹೊರಟಿದ್ದ ಚುನಾವಣಾಧಿಕಾರಿ ಮತ್ತು ಸಿಬ್ಬಂದಿ ಕಾರನ್ನು ಬುಧವಾರ ಬೆಳಿಗ್ಗೆ ಅಡ್ಡಗಟ್ಟಿದ ನಾಲ್ವರ ಗುಂಪು, ಮಾರಕಾಸ್ತ್ರದಿಂದ ಬೆದರಿಸಿ ಲ್ಯಾಪ್‌ಟ್ಯಾಪ್, ಮೊಬೈಲ್ ಹಾಗೂ ಚುನಾವಣಾ ಸಾಮಗ್ರಿಯನ್ನು ದೋಚಿದೆ.

ಮಾಗಡಿ– ಕುಣಿಗಲ್ ರಸ್ತೆ ಹೊಸಪಾಳ್ಯದ ಬಳಿ ಘಟನೆ ನಡೆದಿದೆ. ಕೃತ್ಯಕ್ಕೆ ಕುಮ್ಮಕ್ಕು ನೀಡಿದ ಆರೋಪದ ಮೇಲೆ ಹುಳ್ಳೇನಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಅರವಿಂದ ಅಲಿಯಾಸ್ ಬಲರಾಮ, ಕೃತ್ಯ ಎಸಗಿದ ರಾಮನಗರದ ದಾಸೇಗೌಡ, ಹೇಮಂತ, ಮನು ಹಾಗೂ ಶ್ರೀನಿವಾಸ್ ಅಲಿಯಾಸ್

ಮಾಗಡಿ ತಾಲ್ಲೂಕಿನ ಹೊಸಪಾಳ್ಯದ ಬಳಿ ಚುನಾವಣಾಧಿಕಾರಿ ಮತ್ತು ಸಿಬ್ಬಂದಿಯ ಕಾರನ್ನು ತಡೆದ ಗುಂಪು ಚುನಾವಣಾ ಸಾಮಗ್ರಿ ದೋಚಿತು

ಸೀನ ವಿರುದ್ಧ ಮಾಗಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಳಿಗ್ಗೆ 10ಗಂಟೆ ಸುಮಾರಿಗೆ ಚುನಾವಣಾಧಿಕಾರಿ ಉಮೇಶ್ ಕೆ.ಟಿ, ಸಿಬ್ಬಂದಿ ಮೋಹನ್ ಹಾಗೂ ರಾಜೇಶ್ ಅವರು ಕಾರಿನಲ್ಲಿ ಚುನಾವಣಾ ಕರ್ತವ್ಯಕ್ಕೆ ಹೋಗುತ್ತಿದ್ದರು. ಈ ವೇಳೆ ರಾಜೇಶ್ ಅವರ ಪತ್ನಿ ಉಷಾ ಕೂಡ ಜತೆಗಿದ್ದರು. ಹೊಸಪಾಳ್ಯದ ಬಳಿ ಕಾರಿನಲ್ಲಿ ಇವರನ್ನು ಹಿಂಬಾಲಿಸಿ ಬಂದ ನಾಲ್ವರು, ಕಾರು ತಡೆದಿದ್ದಾರೆ.

ನಂತರ ಚಾಕು ಮತ್ತು ಲಾಂಗ್ ತೋರಿಸಿ ಬೆದರಿಸಿ ಹಲ್ಲೆ ನಡೆಸಲು ಯತ್ನಿಸಿದರು. 'ಹೆಂಗೊ ಚುನಾವಣೆ ಮಾಡ್ತೀಯಾ' ಎನ್ನುತ್ತಾ ಇವರ ಬಳಿ ಇದ್ದ ಲ್ಯಾಪ್‌ಟಾಪ್, ಮೊಬೈಲ್, 1000 ಮತಪತ್ರ, ನಾಮಪತ್ರ ವಾಪಸ್ ಪತ್ರ ಹಾಗೂ ಇತರ ಚುನಾವಣಾ ಸಾಮಗ್ರಿಗಳನ್ನು ಕಿತ್ತುಕೊಳ್ಳಲು ಮುಂದಾದರು.

ಕಾರು ಹತ್ತಿಸಲು ಯತ್ನ: ಅಧಿಕಾರಿಗಳ ಕೂಗಾಟ ಕೇಳಿದ ಸ್ಥಳೀಯರು ನೆರವಿಗೆ ಬರುವಷ್ಟರಲ್ಲಿ, ಆರೋಪಿಗಳು ಕಾರು ಚಾಲನೆ ಮಾಡಿ ಮುಂದಕ್ಕೆ ಸಾಗಿದರು. ತಡೆಯಲು ಬಂದ ಉಷಾ ಅವರಿಗೆ ಡಿಕ್ಕಿ ಹೊಡೆದು ಪರಾರಿಯಾದರು. ಈ ಕುರಿತು ಉಮೇಶ್ ಅವರು ನೀಡಿದ ದೂರಿನ ಮೇರೆಗೆ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ.

ಕಾವೇರಿಗಾಗಿ ರಾಜ್ಯ ಬಂದ್ ನಾಳೆ

ಒಂದನೇ ಪುಟದಿಂದ...

ಅಂಗಡಿ, ಮಾಲ್ ಸಿಬ್ಬಂದಿ, ಬಸ್, ಆಟೊ, ಕ್ಯಾಬ್ ಚಾಲಕರಲ್ಲಿ ಬಂದ್ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ರಾಜ್ಯ ಹಾಗೂ ರಾಷ್ಟ್ರೀಯ ಹೆದ್ದಾರಿಗಳಲ್ಲಿ ವಾಹನ ಸಂಚಾರ ಬಂದ್ ಮಾಡಿಸಲು ಸಂಘಟನೆಗಳು ತೀರ್ಮಾನಿಸಿವೆ. ಬೆಂಗಳೂರು–ಹೊಸೂರು ಮುಖ್ಯರಸ್ತೆ, ಬೆಂಗಳೂರು–ಹೈದರಾಬಾದ್ ಹೆದ್ದಾರಿ, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆ, ಬೆಂಗಳೂರು–ಮೈಸೂರು ಹೆದ್ದಾರಿ, ತುಮಕೂರು ರಸ್ತೆ, ಬೆಂಗಳೂರು–ಕನಕಪುರ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗಲಿದೆ. ಶಾಲಾ–ಕಾಲೇಜುಗಳಿಗೆ ರಜೆ ನೀಡುವ ಕುರಿತು ತೀರ್ಮಾನ ಕೈಗೊಂಡಿಲ್ಲ. ಕೆಲವು ವಿಶ್ವವಿದ್ಯಾಲಯಗಳು, ಶಾಲಾ–ಕಾಲೇಜುಗಳಲ್ಲಿ ಅಂದು ನಡೆಯಬೇಕಿದ್ದ ಪರೀಕ್ಷೆಗಳನ್ನು ಮುಂದೂಡಿವೆ.

ಮುಖ್ಯಮಂತ್ರಿ ಮನೆಗೆ ಮುತ್ತಿಗೆ ಪ್ರಯತ್ನ: ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಚಲನಚಿತ್ರ ವಾಣಿಜ್ಯ ಮಂಡಳಿ ಕಚೇರಿಯಲ್ಲಿ ನಡೆದ ಸಭೆ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಮನೆಗೆ ಮುತ್ತಿಗೆ ಹಾಕಲು ಹೋರಾಟಗಾರರು ಮುಂದಾಗಿದ್ದರು. ಆಗ ಅವರನ್ನು ವಶಕ್ಕೆ ಪಡೆದುಕೊಳ್ಳಲಾಯಿತು.

ತಮಿಳುನಾಡಿನ ಗಡಿಪ್ರದೇಶದಲ್ಲಿ ಬಂದೋಬಸ್ತ್ ಹೆಚ್ಚಿಸಲಾಗಿದೆ. ನಗರದ ಸೂಕ್ಷ್ಮಪ್ರದೇಶದಲ್ಲೂ ಪೊಲೀಸರು ಗಸ್ತು ತಿರುಗುತ್ತಿದ್ದಾರೆ. ಗುರುವಾರ ಮಧ್ಯರಾತ್ರಿಯಿಂದ ಶುಕ್ರವಾರ ಮಧ್ಯರಾತ್ರಿ ತನಕ ಕೆಲವು ಜಿಲ್ಲೆಗಳಲ್ಲಿ ನಿಷೇಧಾಜ್ಞೆ ಜಾರಿಗೊಳಿಸುವ ಸಾಧ್ಯತೆಯಿದೆ.

ರಾಜ್ಯದಾದ್ಯಂತ ಬಂದೋಬಸ್ತ್

ಕಾವೇರಿ ಹೋರಾಟಗಾರರು ಇದೇ 29ಕ್ಕೆ ಬಂದ್ ಮಾಡಲು ನಿರ್ಧರಿಸಿದ್ದು ರಾಜ್ಯದಾದ್ಯಂತ ಅಗತ್ಯ ಬಂದೋಬಸ್ತ್ ಕೈಗೊಳ್ಳುವಂತೆ ಎಲ್ಲ ವಲಯ ಐಜಿಪಿಗಳಿಗೆ ಸೂಚನೆ ನೀಡಲಾಗಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ಇಲ್ಲಿ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಬಂದ್ ಕೈಬಿಡುವಂತೆ ಹೋರಾಟಗಾರರಲ್ಲಿ ಮನವಿ ಮಾಡಲಾಗಿದೆ. ಒಂದು ವೇಳೆ ಬಂದ್ ನಡೆದರೆ ಭದ್ರತಾ ದೃಷ್ಟಿಯಿಂದ ಎಲ್ಲ ಕ್ರಮ ಕೈಗೊಳ್ಳಲಾಗುವುದು. ಎಲ್ಲ ನಗರ ಪೊಲೀಸ್ ಕಮಿಷನರ್‌ಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೂ ಮುನ್ನೆಚ್ಚರಿಕೆ ವಹಿಸಲು ಸೂಚಿಸಲಾಗಿದೆ' ಎಂದು ಹೇಳಿದರು.

ಸೆ.29ಕ್ಕೆ ಚಿತ್ರರಂಗ ಸಂಪೂರ್ಣ ಸ್ತಬ್ಧ

ಬೆಂಗಳೂರು: ಕನ್ನಡ ಸಂಘಟನೆಗಳ ಒಕ್ಕೂಟ ಶುಕ್ರವಾರ(ಸೆ.29)ದಂದು ನಡೆಸಲಿರುವ ಕರ್ನಾಟಕ ಬಂದ್‌ಗೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ(ಕೆಎಫ್‌ಸಿಸಿ) ಬೆಂಬಲ ನೀಡಿದೆ.

ಬುಧವಾರ(ಸೆ.27) ಮಂಡಳಿಯ ಕಚೇರಿಯಲ್ಲಿ ಚಿತ್ರರಂಗದ ವಿವಿಧ ಸಂಘಗಳ ಜೊತೆಗೆ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೆಎಫ್‌ಸಿಸಿ ಅಧ್ಯಕ್ಷ ಎನ್.ಎಂ. ಸುರೇಶ್, 'ಬಂದ್‌ಗೆ ಸಂಪೂರ್ಣ ಬೆಂಬಲ ನೀಡಲಿದ್ದೇವೆ. ಸೆ.29ರಂದು ಚಿತ್ರಮಂದಿರಗಳು ತೆರೆಯುವುದಿಲ್ಲ. ಜೊತೆಗೆ ಚಿತ್ರರಂಗದ ಚಟುವಟಿಕೆಗಳೂ ಸ್ತಬ್ಧವಾಗಲಿದೆ. ಕನ್ನಡ ಸಂಘಟನೆಗಳು ನಡೆಸುವ ರ‍್ಯಾಲಿಯಲ್ಲಿ ಕಲಾವಿದರೂ ಜೊತೆಯಾಗಲಿದ್ದಾರೆ. ಮಂಡಳಿ ಆವರಣದಲ್ಲಿ ಎಲ್ಲರೂ ಸೇರಿಕೊಂಡು ನಂತರ ಜೊತೆಯಾಗಿ ರ‍್ಯಾಲಿಯಲ್ಲಿ ಹೆಜ್ಜೆ ಹಾಕುತ್ತೇವೆ' ಎಂದಿದ್ದಾರೆ.

ಕಾವೇರಿ: ಬಿಜೆಪಿ–ಜೆಡಿಎಸ್ ಪ್ರತಿಭಟನೆ

ಒಂದನೇ ಪುಟದಿಂದ

'ರಾಜ್ಯ ಸರ್ಕಾರವು ಕಾವೇರಿ ನೀರಿನ ವಿಚಾರದಲ್ಲಿ ರಾಜ್ಯದ ಹಿತಾಸಕ್ತಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿದೆ. ಈ ಧೋರಣೆ ಖಂಡನೀಯ' ಎಂದರು.

'ಕಾವೇರಿ ನೀರಿನ ವಿಚಾರದಲ್ಲಿ ರಾಜ್ಯದ ಜನರು ಬೀದಿಗಿಳಿದು ಹೋರಾಟ ನಡೆಸುತ್ತಿದ್ದಾರೆ. ಜನರ ಹೋರಾಟಕ್ಕೆ ಬಿಜೆಪಿ ಮತ್ತು ಜೆಡಿಎಸ್ ಎಲ್ಲ ರೀತಿಯ ಬೆಂಬಲ ನೀಡಲಿವೆ. ಸರ್ಕಾರ ಈ ಹಂತದಲ್ಲಾದರೂ ತನ್ನ ನಿಲುವನ್ನು ಬದಲಿಸಿಕೊಳಬೇಕು. ಇಲ್ಲವಾದರೆ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಡುವ ಅಪಾಯವಿದೆ. ಅದಕ್ಕೆ ರಾಜ್ಯ ಸರ್ಕಾರವೇ ಹೊಣೆಯಾಗಬೇಕಾಗುತ್ತದೆ' ಎಂದು ಹೇಳಿದರು.

ನಳಿನ್ ಕುಮಾರ್ ಕಟೀಲ್ ಮಾತನಾಡಿ, 'ರಾಜ್ಯ ಸರ್ಕಾರವು ಡಿಎಂಕೆ ಪ್ರಮುಖರು ಹಾಗೂ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಜತೆ ಮಾತುಕತೆ ನಡೆಸುತ್ತಿಲ್ಲ. ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಮತ್ತು ಸ್ಟಾಲಿನ್ ಮನವೊಲಿಸಿದರೆ ಸಮಸ್ಯೆ ಇತ್ಯರ್ಥವಾಗುತ್ತದೆ. ಅವರಿಬ್ಬರ ಜತೆ ಮಾತನಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಗೆ ಧೈರ್ಯವಿಲ್ಲ' ಎಂದು ಟೀಕಿಸಿದರು.

'ಇವರು ಯಾವ ರಾಜ್ಯದ ಡಿಸಿಎಂ?'

'ತಮಿಳುನಾಡಿಗೆ ನಿತ್ಯ 3,000 ಕ್ಯೂಸೆಕ್ ನೀರು ಹರಿಸಬೇಕೆಂಬ ತೀರ್ಮಾನದಿಂದ ಸಂತೋಷವಾಗಿದೆ ಎಂದು ನಮ್ಮ ಜಲ ಸಂಪನ್ಮೂಲ ಸಚಿವರು ಹೇಳಿದ್ದಾರೆ. ಇವರು ಕರ್ನಾಟಕದ ಉಪ ಮುಖ್ಯಮಂತ್ರಿಯೋ? ಅಥವಾ ತಮಿಳುನಾಡಿನ ಏಜೆಂಟರಾ' ಎಂದು ಡಿ.ಕೆ. ಶಿವಕುಮಾರ್ ಅವರನ್ನು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದರು.

'ಬಹುಪಾಲು ನೀರನ್ನು ತಮಿಳುನಾಡಿಗೆ ಹರಿಸಲಾಗಿದೆ. ಆದರೂ ನಮ್ಮ ಸಚಿವರು ಸಂತೋಷಪಡುತ್ತಿದ್ದಾರೆ. ರಾಜ್ಯದ ಜನರಿಗೆ ಅನ್ಯಾಯ ಮಾಡಿರುವ ಬಗ್ಗೆ ಅವರಿಗೆ ಕಿಂಚಿತ್ತೂ ಪಶ್ಚಾತ್ತಾಪವಿಲ್ಲ' ಎಂದು ವಾಗ್ದಾಳಿ ನಡೆಸಿದರು.

ಜೆಡಿಎಸ್ ಬಾವುಟ ಹಿಡಿದ ಮುನಿರತ್ನ

ರಾಜ್ಯ ಸರ್ಕಾರದ ವಿರುದ್ಧ ನಡೆದ ಜಂಟಿ ಪ್ರತಿಭಟನೆಯಲ್ಲಿ ಬಿಜೆಪಿ ಶಾಸಕ ಮುನಿರತ್ನ ಅವರು ಜೆಡಿಎಸ್ ಪಕ್ಷದ ಬಾವುಟ ಹಿಡಿದು ಭಾಗಿಯಾಗಿದ್ದು ಗಮನ ಸೆಳೆಯಿತು.

ಮಂತ್ರಾಲಯ: ₹3.82 ಕೋಟಿ ದೇಣಿಗೆ ಸಂಗ್ರಹ

ರಾಯಚೂರು: ಮಂತ್ರಾಲಯದಲ್ಲಿರುವ ರಾಘವೇಂದ್ರ ಸ್ವಾಮಿಗಳ ಮಠಕ್ಕೆ 34 ದಿನಗಳಲ್ಲಿ ಭಕ್ತರಿಂದ ₹3.82 ಕೋಟಿ ನಗದು ಕಾಣಿಕೆ ಬಂದಿದೆ.

ಸೋಮವಾರ, ಮಂಗಳವಾರ ಹಣ ಲೆಕ್ಕ ಮಾಡಲಾಯಿತು. ಒಟ್ಟು ₹3,74,85,859 ಮೊತ್ತದ ನೋಟು, ₹ 7,73,98 ಮೊತ್ತದ ನಾಣ್ಯಗಳು, 53 ಗ್ರಾಂ ಚಿನ್ನ, 1,200 ಗ್ರಾಂ ಬೆಳ್ಳಿ ಸಂಗ್ರಹವಾಗಿದೆ. ರಾಘವೇಂದ್ರ ಸ್ವಾಮಿಗಳ 352ನೇ ಆರಾಧಾನಾ ಮಹೋತ್ಸವ ಆ.29ರಿಂದ ಸೆ. 4ರವರೆಗೆ ನಡೆದಿತ್ತು. ಅಪಾರ ಸಂಖ್ಯೆಯ ಭಕ್ತರು ಮಠಕ್ಕೆ ಆಗಮಿಸಿದ್ದರು.

ಮೈಸೂರು ಅರಮನೆ ಮಂಡಳಿ, ಮೈಸೂರು

ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಮೈಸೂರು. ದೂ:0821–2421051 ಇಮೇಲ್: ddmysorepalace@gmail.com

ಸಂಖ್ಯೆ:EO/MPB/DD/AEE/ELEC/T.NO-09/2023-24 ದಿನಾಂಕ:25.09.2023

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿಲಕೋಟೆ ಪದ್ಧತಿಯಲ್ಲಿ)
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಉಪ–ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು ರವರು, "ಪೊಲೀಸ್ ಇಲಾಖೆಯ ಕೆ.ಎ.ಆರ್.ಪಿ ಮೌಂಟೆಡ್ ಕಂಪನಿ, ಮೈಸೂರು ಘಟಕದ ವಾದ್ಯವೃಂದಕ್ಕೆ ಅರಮನೆ ಮಂಡಳಿಯ ವತಿಯಿಂದ ವಾದ್ಯೋಪಕರಣಗಳು ಮತ್ತು ಸಂಬಂಧಿತ ಪರಿಕರಗಳನ್ನು ಒದಗಿಸುವ" ಸಂಬಂಧ ನೊಂದಾಯಿತ ಅರ್ಹ ಗುತ್ತಿಗೆದಾರರು / ಏಜೆನ್ಸಿ / ಸಂಸ್ಥೆಯವರಿಂದ ಟೆಂಡರ್ ಅನ್ನು ದ್ವಿಲಕೋಟೆ ಪದ್ಧತಿಯಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ ಆಹ್ವಾನಿಸಲಾಗಿದೆ. (1) ವಿದ್ಯುನ್ಮಾನ (ಇ–ಟೆಂಡರ್) ವ್ಯವಸ್ಥೆ ಮುಖಾಂತರ ಮಾತ್ರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **03–10–2023 ಸಂಜೆ 6.00** ಗಂಟೆಯವರೆಗೆ. (2) ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : **05–10–2023 ಬೆಳಿಗ್ಗೆ 11.30** ಗಂಟೆಯ ನಂತರ (3) ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : **06–10–2023 ಬೆಳಿಗ್ಗೆ 11.30ರ** ನಂತರ ಅಥವಾ ನಂತರ ದಿನಗಳಲ್ಲಿ ತೆರೆಯಲಾಗುವುದು. (4) ಟೆಂಡರಿಗಿಟ್ಟ ಒಟ್ಟು ಮೊತ್ತ : ರೂ. 20,00,545/– ಗಳು. (5) ಇ.ಎಂ.ಡಿ ಮೊತ್ತ : ರೂ. 50,500/–ಗಳು. ಹೆಚ್ಚಿನ ವಿವರಗಳಿಗೆ **http://www.kppp.karnataka.gov.in** ಅಂತರ್ಜಾಲದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯ ಎಲ್ಲಾ ದಿನಗಳಂದು ಪಡೆಯಬಹುದು. ಒಂದು ವೇಳೆ ಮೇಲೆ ನೀಡಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳಾಗಿದ್ದಲ್ಲಿ ಅನಂತರದ ದಿನಗಳನ್ನು ಪರಿಗಣಿಸಲಾಗುವುದು.

ಸಹಿ/– ಉಪ ನಿರ್ದೇಶಕರು
ಮೈಸೂರು ಅರಮನೆ ಮಂಡಳಿ, ಮೈಸೂರು

DIPR/MYS/KAVITA/433/23-24

The Printers (Mysore) Pvt. Ltd
Publishers of DECCAN HERALD, PRAJAVANI, SUDHA & MAYURA
No.7-12, Kumbalgodu Indl. Area, Mysore Road, Bangalore - 74

NEWSPRINT WASTE FOR SALE

Sealed Tenders are invited for the disposal of the following Newsprint wastes from our Press at Bangalore, Dharwad, Mangalore, Harihara, Mysore, Gulbarga and Hospet. For the period Oct - Dec 2023

Details	Location-wise quantity in MT per month						
	Bangalore	Dharwad	Mangalore	Harihara	Mysore	Gulbarga	Hospet
DH &PV Print waste & unsolds (Voucher & Office Copies)	15	9	3.5	3	4	3	3
Mixed Print & Folded waste	3	1.5	0.2	0.3	0.2	0.3	0.2
DH,PV, Sudha & Mayura White cut Peel waste	2.5	0.6	0.3	0.5	0.4	0.4	0.3
White Reel ends including core DH,PV, Sudha & Mayura	8	2.5	0.6	1	0.7	1	1
DH, PV, Sudha & Mayura Reel Wrappers/Miscellaneous sweep/Bale pattie waste	10	2	0.9	1.2	0.4	0.9	0.9
Sudha & Mayura Print waste & unsolds-Magazine	1	0.6	0.9	0.6	0.6	0.9	0.05
Miscellaneous Tissue/Mixed White waste/ Carton boxes	2.5	0.8	0.3	0.4	0.2	0.5	0.2

For clarification, contact Procurement Head at **25880340/430**. Sealed Tenders/mail may be addressed to Procurement Head and sent to the above address **within 7 days** from the date of this advertisement.

ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

ಚಾಪ್ಟರ್ ಕಟ್ಟಡ, ನಂ. 16/ಜೆ, 1ನೇ ಮಹಡಿ, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು–560 052.
ವೆಬ್‌ಸೈಟ್: https://kmcdc.karnataka.gov.in ಇ–ಮೇಲ್: mdmarathanigama@gmail.com

ಸಂಖ್ಯೆ: ಕ.ಮ.ಸ.ಅ.ನಿ/ಸಿಆರ್–53/2023–24 **ಪ್ರಕಟಣೆ** ದಿನಾಂಕ:27.09.2023

2023–24ನೇ ಸಾಲಿಗೆ ಸಾಲ–ಸೌಲಭ್ಯ ಒದಗಿಸಲು ಅರ್ಜಿಗಳ ಆಹ್ವಾನ

ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದಿಂದ 2023–24ನೇ ಸಾಲಿನಲ್ಲಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ ಹಾಗೂ ಈ ಯೋಜನೆಗಳಡಿ ಸಾಲ–ಸೌಲಭ್ಯವನ್ನು ಪಡೆಯಲು ಇಚ್ಛಿಸುವವರು ಕಡ್ಡಾಯವಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕಾಗಿರುತ್ತದೆ. **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30.10.2023. (ಶೈಕ್ಷಣಿಕ ಸಾಲ ಯೋಜನೆಗಳಿಗೆ ಕೊನೆ ದಿನಾಂಕ ಇರುವುದಿಲ್ಲ).**

ಅರ್ಜಿ ಸಲ್ಲಿಸಲು ಇರಬೇಕಾದ ಸಾಮಾನ್ಯ ಅರ್ಹತೆಗಳು

1) ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ (ನಿ.) ದ ವತಿಯಿಂದ ಎಲ್ಲಾ ಯೋಜನೆಗಳಿಗೆ ಅರ್ಜಿ ಸಲ್ಲಿಸಲು ಪ್ರವರ್ಗ–3–ಬಿ ಅಡಿಯಲ್ಲಿ 2(ಎ) ಯಿಂದ 2(ಎಫ್)ವರೆಗೆ ಬರುವ ಸಮುದಾಯಕ್ಕೆ ಸೇರಿರಬೇಕು, 2) ಜಾತಿ ಮತ್ತು ಆದಾಯ ಪ್ರಮಾಣ ಪತ್ರ ನಮೂನೆ–3ಬಿ ಯಲ್ಲಿ ಪಡೆದಿರಬೇಕು (ಪ್ರಮಾಣ ಪತ್ರವು ಚಾಲ್ತಿಯಲ್ಲಿರಬೇಕು), 3) ಅರ್ಜಿದಾರರು ಕರ್ನಾಟಕ ರಾಜ್ಯದವರಾಗಿರಬೇಕು ಹಾಗೂ ಅವರ ಖಾಯಂ ವಿಳಾಸವು ಕರ್ನಾಟಕ ರಾಜ್ಯದಲ್ಲಿರಬೇಕು, 4) **ಅರ್ಜಿದಾರರು ತಮ್ಮ ಆಧಾರ್ ಸಂಖ್ಯೆಗೆ ತಮ್ಮ ಮೊಬೈಲ್ ಸಂಖ್ಯೆಯನ್ನು ಜೋಡಣೆ ಮಾಡಿರಬೇಕು, 5) ಸರ್ಕಾರಿ ಸೌಲಭ್ಯವನ್ನು (ಸಾಲ–ಸಹಾಯಧನ) ಪಡೆಯುವ ಸಂಬಂಧ ಅರ್ಜಿದಾರರು ತಮ್ಮ ಬ್ಯಾಂಕ್ ಖಾತೆಗೆ ಆಧಾರ್ ಸಂಖ್ಯೆಯನ್ನು ಸೀಡ್ ಮಾಡಿಸಿರಬೇಕು.** 6) ಆಯ್ಕೆ ಮಾಡುವಾಗ ಮಹಿಳೆಯರಿಗೆ ಶೇ.33%, ವಿಕಲಚೇತನರಿಗೆ ಶೇ.5% ಹಾಗೂ ತೃತೀಯ ಲಿಂಗಳಿಗೆ ಶೇ.1% ಮೀಸಲಾತಿ ಇರಿಸಿದೆ. 7) ಒಂದು ಕುಟುಂಬದಲ್ಲಿ ಒಬ್ಬರು ಮಾತ್ರ ಸಾಲ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ. (ಅರಿವು ಶೈಕ್ಷಣಿಕ ಸಾಲ ಯೋಜನೆಯಲ್ಲಿ ಮಾತ್ರ ಇಬ್ಬರಿಗೆ ಅವಕಾಶವಿರುತ್ತದೆ.)

1. ಶ್ರೀ ಶಹಜೀರಾಜೇ ಸಮೃದ್ಧಿ ಯೋಜನೆ (ಸ್ವಯಂ ಉದ್ಯೋಗ ನೇರ ಸಾಲ ಮತ್ತು ಸಹಾಯಧನ) ಯೋಜನೆಯ ಅರ್ಹತೆಗಳು:

1) ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ರೂ.98,000/– ಮತ್ತು ನಗರ ಪ್ರದೇಶದವರಿಗೆ ರೂ. 1,20,000/–ಗಳ ಮಿತಿಯೊಳಗಿರಬೇಕು. 2) ಅರ್ಜಿದಾರರು 18 ವರ್ಷ ಮೇಲ್ಪಟ್ಟು 55 ವರ್ಷದ ಒಳಗಿನವರಾಗಿರಬೇಕು. 3) ಕನಿಷ್ಠ 10ನೇ ತರಗತಿ ಉತ್ತೀರ್ಣರಾಗಿರಬೇಕು 4) ಈ ಯೋಜನೆಯಲ್ಲಿ ಕನಿಷ್ಠ ರೂ.1,00,000/–ಗಳಿಂದ ಗರಿಷ್ಠ ರೂ.2,00,000/–ಗಳ ಸಾಲ ಒದಗಿಸಲಾಗುವುದು. ಈ ಮೊತ್ತದಲ್ಲಿ ಶೇ.15 ರಷ್ಟು ಕನಿಷ್ಠ ರೂ. 20,000/– ಗಳಿಂದ ಗರಿಷ್ಠ ರೂ.30,000/–ಗಳವರೆಗೆ ಸಹಾಯಧನ ಹಾಗೂ ಶೇ.85ರಷ್ಟು ಸಾಲವನ್ನು ವಾರ್ಷಿಕ ಶೇ.4 ರ ಬಡ್ಡಿ ದರದಲ್ಲಿ ಮಂಜೂರು ಮಾಡಲಾಗುವುದು, 2 ತಿಂಗಳ ವಿರಾಮ ಅವಧಿ ಇರುತ್ತದೆ ನಂತರ ಸಾಲವನ್ನು 34 ಮಾಸಿಕ ಕಂತುಗಳಲ್ಲಿ ಮರುಪಾವತಿಸಬೇಕು.

2. ಜೀಜಾವು–ಜಲಭಾಗ್ಯ ಯೋಜನೆಯ (ಗಂಗಾ ಕಲ್ಯಾಣ ನೀರಾವರಿ ಯೋಜನೆ) ಅರ್ಹತೆಗಳು

1) ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ರೂ.98,000/– ಗಳ ಮಿತಿಯೊಳಗಿರಬೇಕು. 2) ಅರ್ಜಿದಾರರು 18 ವರ್ಷ ಮೇಲ್ಪಟ್ಟಿರಬೇಕು. 3) ಒಂದೇ ಸ್ಥಳದಲ್ಲಿ ಹೊಂದಿಕೊಂಡಂತೆ ಕನಿಷ್ಠ 2 ಎಕರೆ ಹಾಗೂ ಗರಿಷ್ಠ 5 ಎಕರೆ ಜಮೀನು ಹೊಂದಿರಬೇಕು 4) ಉಡುಪಿ, ದಕ್ಷಿಣ ಕನ್ನಡ, ಕೊಡಗು, ಉತ್ತರ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳಲ್ಲಿ ಕನಿಷ್ಠ 1 ಎಕರೆ ಜಮೀನು ಹೊಂದಿರಬೇಕು 5) ಯಾವುದೇ ಮೂಲದಿಂದ ನೀರಾವರಿ ಸೌಲಭ್ಯ ಹೊಂದಿಲ್ಲದೆ ಇರುವ ಸಣ್ಣ ಮತ್ತು ಅತಿ ಸಣ್ಣ ರೈತರಾಗಿರಬೇಕು. 6) ಈ ಯೋಜನೆಯಲ್ಲಿ ಘಟಕ ವೆಚ್ಚ ರೂ.3.75 ಲಕ್ಷಗಳು (ವಿದ್ಯುದ್ದೀಕರಣ ಸೇರಿ) ಹಾಗೂ ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬೆಂಗಳೂರು ಗ್ರಾ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಘಟಕ ವೆಚ್ಚ ರೂ.4.75 ಲಕ್ಷಗಳು. (ವಿದ್ಯುದ್ದೀಕರಣ ಸೇರಿ) ಹಾಗೂ ಅವಶ್ಯವಿದ್ದಲ್ಲಿ ರೂ.50,000/–ಗಳ ಸಾಲವನ್ನು ಶೇ.4 ಬಡ್ಡಿದರದಲ್ಲಿ ಮಂಜೂರು ಮಾಡಲಾಗುವುದು.

3. ಶೈಕ್ಷಣಿಕ ಸಾಲ ಯೋಜನೆಗಳು: Fresh Students

- **ಅರಿವು ಶೈಕ್ಷಣಿಕ ಸಾಲ ಯೋಜನೆಯ (Fresh Students) ಅರ್ಹತೆಗಳು:** ಈ ಯೋಜನೆಯಲ್ಲಿ ಸಿ.ಇ.ಟಿ./ಎನ್.ಇ.ಇ.ಟಿ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ವೃತ್ತಿಪರ ಕೋರ್ಸ್ ಹಾಗೂ ಪಿ.ಹೆಚ್.ಡಿನಲ್ಲಿ ವ್ಯಾಸಂಗ ಮಾಡುವ ಮರಾಠ ಸಮುದಾಯಗಳ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ.1,00,000/–ಗಳ ಸಾಲವನ್ನು ಶೇ.2ರ ಬಡ್ಡಿದರದಲ್ಲಿ ಶೈಕ್ಷಣಿಕ ಸಾಲ ನೀಡಲಾಗುವುದು. ವ್ಯಾಸಂಗ ಪೂರ್ಣಗೊಂಡ ನಂತರ 04 ತಿಂಗಳ ವಿರಾಮಾವಧಿ ಇರುತ್ತದೆ. ನಂತರ ಸಾಲವನ್ನು 36 ಮಾಸಿಕ ಕಂತುಗಳಲ್ಲಿ ಮರುಪಾವತಿಸಬೇಕು. 1) ಅರ್ಜಿದಾರರು 18 ವರ್ಷ ಮೇಲ್ಪಟ್ಟು 35 ವರ್ಷದ ಒಳಗಿನವರಾಗಿರಬೇಕು. 2) ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಮತ್ತು ನಗರ ಪ್ರದೇಶದವರಿಗೆ ರೂ.3.50ಲಕ್ಷಗಳ ಮಿತಿಯೊಳಗಿರಬೇಕು
- **ಅರಿವು ಶೈಕ್ಷಣಿಕ ಸಾಲ ಯೋಜನೆಯ (Renewals): ಅರ್ಹತೆಗಳು:** 2022–23ನೇ ಸಾಲಿನಲ್ಲಿ ಸಾಲ ಪಡೆದ ವಿದ್ಯಾರ್ಥಿಗಳಿಗೆ 2023–24 ನೇ ಸಾಲಿಗೆ 2ನೇ ಕಂತಿನ ನವೀಕರಣ ಸಾಲ ಮಂಜೂರು ಮಾಡಲು 2ನೇ ವರ್ಷದ ವ್ಯಾಸಂಗ ದೃಢೀಕರಣ ಮತ್ತು ಮೊದಲನೇ ವರ್ಷದ ಅಂಕಪಟ್ಟಿಯೊಂದಿಗೆ ಅರ್ಜಿ ಸಲ್ಲಿಸುವುದು.
- **ರಾಜಶ್ರೀ ಶಾಹುಮಹಾರಾಜ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗ ಸಾಲ ಯೋಜನೆ (Fresh Students):** 1) ವಿದೇಶ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗ ಸಾಲ ಯೋಜನೆ ಮರಾಠ ಸಮುದಾಯದ ವಿದ್ಯಾರ್ಥಿಗಳು ವಿದೇಶದಲ್ಲಿನ **QS World Ranking** 500 ರೊಳಗೆ ಬರುವ ವಿಶ್ವವಿದ್ಯಾಲಯಗಳಲ್ಲಿ ಪೋಸ್ಟ್ ಡಾಕ್ಟೋರಲ್ ಪಿಹೆಚ್‌ಡಿ, ಮಾಸ್ಟರ್ ಡಿಗ್ರಿ, ಕೋರ್ಸುಗಳಲ್ಲಿ ಉನ್ನತ ವ್ಯಾಸಂಗಕ್ಕೆ ಪ್ರವೇಶ ಪಡೆಯುವ ಅಭ್ಯರ್ಥಿಗಳಿಗೆ ವಾರ್ಷಿಕ ಗರಿಷ್ಟ ರೂ.10.00 ಲಕ್ಷ ಅಥವಾ ವಿದ್ಯಾರ್ಥಿಗಳ ಕೋರ್ಸ್‌ನ ಪೂರ್ಣ ಅವಧಿಗೆ ಗರಿಷ್ಠ ರೂ.20.00 ಲಕ್ಷಗಳವರೆಗೆ ಶೂನ್ಯ ಬಡ್ಡಿದರದಲ್ಲಿ ಸಾಲ ಮಂಜೂರು ಮಾಡಲು ಅರ್ಜಿಗಳನ್ನು ಅಹ್ವಾನಿಸಿದೆ. 2) ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಮತ್ತು ನಗರ ಪ್ರದೇಶದವರಿಗೆ ರೂ.8.00ಲಕ್ಷಗಳ ಮಿತಿಯೊಳಗಿರಬೇಕು.
- **ರಾಜಶ್ರೀ ಶಾಹುಮಹಾರಾಜ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗ ಸಾಲ ಯೋಜನೆ (Renewals) ಅರ್ಹತೆಗಳು:** 2022–23ನೇ ಸಾಲಿನಲ್ಲಿ ಸಾಲ ಪಡೆದ ವಿದ್ಯಾರ್ಥಿಗಳಿಗೆ 2023–24 ನೇ ಸಾಲಿಗೆ 2ನೇ ಕಂತಿನ ನವೀಕರಣ ಸಾಲ ಮಂಜೂರು ಮಾಡಲು 2ನೇ ವರ್ಷದ ವ್ಯಾಸಂಗ ದೃಢೀಕರಣ ಮತ್ತು ಮೊದಲನೇ ವರ್ಷದ ಅಂಕಪಟ್ಟಿಯೊಂದಿಗೆ ಅರ್ಜಿ ಸಲ್ಲಿಸುವುದು.

4. ಮರಾಠ ಮಿಲ್ಟ್ರಿ ಹೋಟೆಲ್ ಯೋಜನೆಯ ಅರ್ಹತೆಗಳು:

1) ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಗ್ರಾಮೀಣ ಪ್ರದೇಶ ಮತ್ತು ನಗರ ಪ್ರದೇಶದವರಿಗೆ ರೂ.8.00 ಲಕ್ಷಗಳು ಮೀರತಕ್ಕದಲ್ಲ. 2) ಅರ್ಜಿದಾರರ ವಯಸ್ಸು ಕನಿಷ್ಠ 18 ವರ್ಷಗಳು ಹಾಗೂ ಗರಿಷ್ಠ 55 ವರ್ಷಗಳನ್ನು ಮೀರಿರತಕ್ಕದ್ದಲ್ಲ. 3) ಈ ಯೋಜನೆಯ ಘಟಕ ವೆಚ್ಚ ಗರಿಷ್ಠ ರೂ.5.00 ಲಕ್ಷ ಸಾಲ, ರೂ.40,000/– ಸಹಾಯಧನ ಆಗಿರುತ್ತದೆ. 4) ಸಾಲವನ್ನು ವಾರ್ಷಿಕ ಶೇ.4ರ ಬಡ್ಡಿ ದರದಲ್ಲಿ ಮಂಜೂರು ಮಾಡಲಾಗುವುದು 5) 03 ವರ್ಷಗಳಲ್ಲಿ ಮಾಸಿಕ ಕಂತುಗಳಲ್ಲಿ ಮಂಜೂರಾತಿ ಆದೇಶದಲ್ಲಿ ನಿಗದಿ ಪಡಿಸಿರುವಂತೆ ಅಸಲು ಮತ್ತು ಬಡ್ಡಿಯನ್ನು ಮರುಪಾವತಿಸುವುದು.

5. ಸ್ವಯಂ ಉದ್ಯೋಗ ಸಾಲ ಯೋಜನೆಯ (ವಾಣಿಜ್ಯ ಬ್ಯಾಂಕ್‌ಗಳ ಸಹಯೋಗದೊಂದಿಗೆ) ಅರ್ಹತೆಗಳು:

1) ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ರೂ.98,000/– ಮತ್ತು ನಗರ ಪ್ರದೇಶದವರಿಗೆ ರೂ.1,20,000/–ಗಳ ಮಿತಿಯೊಳಗಿರಬೇಕು. 2) ಅರ್ಜಿದಾರರು 18 ವರ್ಷ ಮೇಲ್ಪಟ್ಟು 55 ವರ್ಷದ ಒಳಗಿನವರಾಗಿರಬೇಕು. 3) ಈ ಯೋಜನೆಯಡಿ ಉದ್ಯೋಗ ಪ್ರಾರಂಭಿಸಲು ಬ್ಯಾಂಕ್/ಸಹಕಾರಿ ಸಂಘಗಳಿಂದ ಸಾಲ ಪಡೆಯಬೇಕು ಹಾಗೂ ನಿಗಮದಿಂದ ಶೇ.20ರಷ್ಟು ಅಥವಾ ಗರಿಷ್ಠ ರೂ.1.00 ಲಕ್ಷಗಳನ್ನು ನಿಗಮದಿಂದ ಸಹಾಯಧನ ಮಂಜೂರು ಮಾಡಲಾಗುವುದು. 4) ಬ್ಯಾಂಕ್‌ಗಳು ಮಂಜೂರು ಮಾಡುವ ಸಾಲಕ್ಕೆ ಬ್ಯಾಂಕ್‌ಗಳು ಚಾಲ್ತಿಯಲ್ಲಿರುವ ಬಡ್ಡಿಯನ್ನು ವಿಧಿಸಲಾಗುತ್ತದೆ.

6. ಸ್ವಾವಲಂಬಿ ಸಾರಥಿ ಯೋಜನೆಯ ಅರ್ಹತೆಗಳು:

1) ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ರೂ.98,000/– ಮತ್ತು ನಗರ ಪ್ರದೇಶದವರಿಗೆ ರೂ.1,20,000/–ಗಳ ಮಿತಿಯೊಳಗಿರಬೇಕು. 2) ಅರ್ಜಿದಾರರು 21 ವರ್ಷ ಮೇಲ್ಪಟ್ಟು 45 ವರ್ಷದ ಒಳಗಿನವರಾಗಿರಬೇಕು. 3) ಈ ಯೋಜನೆಯಲ್ಲಿ ಆರ್ಥಿಕ ಸಹಾಯ ಪಡೆಯಲು ಇಚ್ಛಿಸುವ ಅರ್ಜಿದಾರರು ಲಘುವಾಹನ ಚಾಲನಾ ಪರವಾನಿಗೆಯನ್ನು ಹೊಂದಿರಬೇಕು 4) ಅರ್ಜಿದಾರರು ನಿರುದ್ಯೋಗಿಯಾಗಿರಬೇಕು 5) ಈ ಯೋಜನೆಯಲ್ಲಿ ಸೌಲಭ್ಯ ಪಡೆಯುವ ಫಲಾನುಭವಿಯು ಸ್ವಯಂ ಟ್ಯಾಕ್ಸಿ ಚಾಲನೆ (Yellow Board) ಉದ್ದೇಶಕ್ಕೆ ವಾಹನವನ್ನು ನೋಂದಾಯಿಸತಕ್ಕದ್ದು. 6) ಸ್ವಾವಲಂಬಿ ಸಾರಥಿ ಯೋಜನೆಯಡಿ ನಾಲ್ಕು ಚಕ್ರಗಳ ವಾಹನವನ್ನು (ಟ್ಯಾಕ್ಸಿ, ಟಾಟಾ ಎಸಿ, ಗೂಡ್ಸ್ ವಾಹನ ಇತ್ಯಾದಿ ನಾಲ್ಕು ಚಕ್ರಗಳ ವಾಹನ) ಖರೀದಿಸಲು ಬ್ಯಾಂಕ್ / ಹಣಕಾಸು ಸಂಸ್ಥೆಗಳು ಮಂಜೂರು ಮಾಡಿದ ಸಾಲದ ಶೇ.50ರಷ್ಟು ಅಥವಾ ಗರಿಷ್ಟ ರೂ.3.00 ಲಕ್ಷಗಳವರೆಗೆ ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಸಹಾಯಧನವನ್ನು ನಿಗಮದಿಂದ ಮಂಜೂರು ಮಾಡುವುದು. ಉಳಿದ ಮೊತ್ತವನ್ನು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲದ ರೂಪದಲ್ಲಿ ಪಡೆಯುವುದು ಈ ಸಾಲಕ್ಕೆ ಬ್ಯಾಂಕ್ / ಹಣಕಾಸು ಸಂಸ್ಥೆಗಳು ನಿಗದಿಪಡಿಸುವ ಬಡ್ಡಿಯನ್ನು ಪಾವತಿಸಬೇಕು.

7. ಸ್ವಾತಂತ್ರ್ಯ ಅಮೃತ್ ಮಹೋತ್ಸವ ಮುನ್ನಡೆ ಯೋಜನೆಯ ಅರ್ಹತೆಗಳು:

ಮರಾಠ ಸಮುದಾಯದ ಯುವಜನತೆಯನ್ನು ಕೌಶಲ್ಯ ಅಭಿವೃದ್ಧಿಪಡಿಸಿ ಉದ್ಯೋಗಮುಖಿಗಳನ್ನಾಗಿಸಲು ಸರ್ಕಾರದ ಸಂಸ್ಥೆಗಳಾದ ITIs, GTTCs, KGTTIs ಇತ್ಯಾದಿಗಳಲ್ಲಿ ಅಲ್ಪಾವಧಿ ಕೋರ್ಸುಗಳ ಮೂಲಕ ಕೌಶಲ್ಯ ಅಭಿವೃದ್ಧಿ ತರಬೇತಿ ನೀಡಲು ಕೌಶಲ್ಯ ಕರ್ನಾಟಕ ತಂತ್ರಾಂಶದ (https://www.kaushalkar.com) ಮೂಲಕ ಅರ್ಜಿಗಳನ್ನು ಅಹ್ವಾನಿಸಿದೆ.

ವಿಶೇಷ ಸೂಚನೆ

- ಕ್ರಮ ಸಂಖ್ಯೆ 01 ರಿಂದ 06 ರ ವರೆಗಿನ ಎಲ್ಲಾ ಯೋಜನೆಗಳಿಗೆ ಅರ್ಜಿಗಳನ್ನು ಸೇವಾಸಿಂಧು ಪೋರ್ಟಲ್ ಮುಖಾಂತರ ಗ್ರಾಮ ಒನ್, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಸೇವಾಕೇಂದ್ರಗಳಲ್ಲಿ ಆನ್‌ಲೈನ್ ಮೂಲಕವೇ ಸಲ್ಲಿಸಬೇಕಾಗಿರುತ್ತದೆ.
- ನಿರ್ದೇಶಕರ ಮಂಡಳಿಯ ವಿವೇಚನಾ ಕೋಟಾದಡಿ ಸೌಲಭ್ಯ ಪಡೆಯಬಯಸುವವರೂ ಸಹ ಆನ್ ಲೈನ್ ನಲ್ಲಿ ಪ್ರತ್ಯೇಕವಾಗಿ ಅರ್ಜಿಯನ್ನು ಸಲ್ಲಿಸುವುದು, ಒಂದು ಕುಟುಂಬದ ಒಬ್ಬ ಸದಸ್ಯರು ಮಾತ್ರ ಮೇಲ್ಕಂಡ ಯಾವುದಾದರೂ ಒಂದು ಯೋಜನೆಯಲ್ಲಿ ಸೌಲಭ್ಯ ಪಡೆಯಲು ಅರ್ಜಿ ಸಲ್ಲಿಸುವುದು.
- ಅರ್ಜಿದಾರರು, ಸರ್ಕಾರದ ಹಾಗೂ ನಿಗಮದ ನಿರ್ದೇಶಕ ಮಂಡಳಿಯು ಕಾಲಕಾಲಕ್ಕೆ ವಿಧಿಸುವ ಇನ್ನಿತರ ಅರ್ಹತೆ/ನಿಬಂಧನೆಗಳನ್ನು ಹೊಂದಿದವರಾಗಿರಬೇಕು.

ಸಂಪರ್ಕ ವಿವರ: ನಿಗಮದ ಸಹಾಯವಾಣಿ: 8867537799/ ದೂ.ಸಂ:080–29903994
(ಬೆಳಿಗ್ಗೆ:10.00 ರಿಂದ ಸಂಜೆ:5.30 ವರೆಗೆ ಸಂಪರ್ಕಿಸಬಹುದಾಗಿದೆ).
ಯೋಜನೆಗಳ ಮಾರ್ಗಸೂಚಿಗಳು, ಸಲ್ಲಿಸಬೇಕಾದ ದಾಖಲೆಗಳು, ಜಿಲ್ಲಾ ವ್ಯವಸ್ಥಾಪಕರ ಕಛೇರಿ ವಿಳಾಸಗಳನ್ನು ಹಾಗೂ ಹೆಚ್ಚಿನ ವಿವರಗಳನ್ನು
https://kmcdc.karnataka.gov.in ಇಲ್ಲಿ ತಿಳಿಯಬಹುದಾಗಿದೆ.

ಸಹಿ/–
(ಡಾ. ಪ್ರಕಾಶ್ ಆರ್ ಪಾಗೋಜಿ)
ವ್ಯವಸ್ಥಾಪಕ ನಿರ್ದೇಶಕರು.

ವಾಸಾಸಂಇ/ವಾಪ್ರ/ಜಿಎ/1447/2023–24

ಹಿಂಸಾಕೃತ್ಯದಲ್ಲಿ ಭಾಗಿಯಾದವರ ವಿರುದ್ಧ ಕಠಿಣ ಕ್ರಮ: ಮುಖ್ಯಮಂತ್ರಿ ಬಿರೇನ್ ಸಿಂಗ್ ಭರವಸೆ

ವಿದ್ಯಾರ್ಥಿಗಳ ಹತ್ಯೆ: ತನಿಖೆ ಆರಂಭಿಸಿದ ಸಿಬಿಐ

ಪ್ರಜಾವಾಣಿ ವಾರ್ತೆ

ಗುವಾಹಟಿ: ಮೈತೇಯಿ ಸಮುದಾಯಕ್ಕೆ ಸೇರಿದ ಇಬ್ಬರು ವಿದ್ಯಾರ್ಥಿಗಳ ಹತ್ಯೆಯ ಬಗ್ಗೆ ಕೇಂದ್ರೀಯ ತನಿಖಾ ದಳದ (ಸಿಬಿಐ) ವಿಶೇಷ ತಂಡವು ಮಣಿಪುರದಲ್ಲಿ ಬುಧವಾರ 'ಸ್ಥಳ ತನಿಖೆ' ಆರಂಭಿಸಿದೆ. ಈ ನಡುವೆ ಇಂಫಾಲ್ ಕಣಿವೆಯಲ್ಲಿ ಪ್ರತಿಭಟನೆ ಕೂಡ ತೀವ್ರವಾಗಿದೆ. ಅಲ್ಲಿನ ಆಡಳಿತವು ಹಿಂಸಾಚಾರ ತಡೆಯಲು ಕರ್ಫ್ಯೂ ಜಾರಿಗೊಳಿಸಿದೆ.

ಸಿಬಿಐ ವಿಶೇಷ ನಿರ್ದೇಶಕ ಅಜಯ್ ಭಟ್ನಾಗರ್ ನೇತೃತ್ವದ ಸಿಬಿಐ ತಂಡವು ವಿಶೇಷ ವಿಮಾನದಲ್ಲಿ ಇಂಫಾಲ್‌ಗೆ ಬಂದಿದೆ. ಈ ತಂಡದಲ್ಲಿ ಐವರು ಸದಸ್ಯರು ಇದ್ದಾರೆ. ಇಂಫಾಲ್‌ಗೆ ಬಂದ ತಂಡವು ಅಲ್ಲಿಂದ ನೇರವಾಗಿ, ವಿದ್ಯಾರ್ಥಿಗಳು ನಾಪತ್ತೆಯಾಗಿದ್ದರು ಎನ್ನಲಾದ ಸ್ಥಳಕ್ಕೆ ಧಾವಿಸಿತು.

ಇಬ್ಬರು ವಿದ್ಯಾರ್ಥಿಗಳ ಶವದ ಚಿತ್ರವು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ನಂತರದಲ್ಲಿ ಇಂಫಾಲ್ ಕಣಿವೆಯಲ್ಲಿ ಮಂಗಳವಾರ ತೀವ್ರ ಪ್ರತಿಭಟನೆಗಳು ನಡೆದಿದ್ದವು.

ಕುಕಿ ಸಮುದಾಯಕ್ಕೆ ಸೇರಿದ 'ಶಸ್ತ್ರಸಜ್ಜಿತ ದುಷ್ಕರ್ಮಿಗಳು' ಈ ಇಬ್ಬರು ವಿದ್ಯಾರ್ಥಿಗಳನ್ನು ಅಪಹರಿಸಿ, ಹತ್ಯೆ ಮಾಡಿದ್ದಾರೆ ಎಂದು ಶಂಕಿಸಲಾಗಿದೆ.

ವಿದ್ಯಾರ್ಥಿಗಳು ಬುಧವಾರ ಹಲವು ರಸ್ತೆಗಳಲ್ಲಿ ಸಂಚಾರಕ್ಕೆ ಅಡ್ಡಿ ಉಂಟುಮಾಡಲು ಯತ್ನಿಸಿದಾಗ, ಅವರನ್ನು ಚದುರಿಸಲು ಭದ್ರತಾ ಪಡೆಗಳು ಅಶ್ರುವಾಯು ಶೆಲ್ ಸಿಡಿಸಬೇಕಾಯಿತು. ಈ ಸಂದರ್ಭದಲ್ಲಿ ಹಲವು ವಿದ್ಯಾರ್ಥಿಗಳಿಗೆ ಗಾಯಗಳಾಗಿವೆ.

ಮೈತೇಯಿ ಸಮುದಾಯದ ಪ್ರಾಬಲ್ಯ ಇರುವ ಥೌಬಲ್ ಜಿಲ್ಲೆಯಲ್ಲಿ ಉದ್ರಿಕ್ತ ಗುಂಪೊಂದು ಬಿಜೆಪಿ ಕಚೇರಿಗೆ ಬೆಂಕಿ ಹಚ್ಚಿದೆ ಎಂಬ ವರದಿಗಳಿವೆ.

ನಾಪತ್ತೆಯಾಗಿದ್ದ ವಿದ್ಯಾರ್ಥಿಗಳನ್ನು ಪತ್ತೆ ಮಾಡಲು ಬಿಜೆಪಿ ನೇತೃತ್ವದ ಸರ್ಕಾರವು ವಿಫಲವಾಗಿದೆ ಎಂದು ಆರೋಪಿಸಿ ಮಣಿಪುರದ ಜನಪ್ರಿಯ ಚಿತ್ರನಟ ರಾಜ್‌ಕುಮಾರ್ ಸೋಮೋರೇಂದ್ರ ಅವರು ಬಿಜೆಪಿಗೆ ರಾಜೀನಾಮೆ ನೀಡಿದ್ದಾರೆ. ಭದ್ರತಾ ಪಡೆಗಳು ಪ್ರತಿಭಟನಕಾರರ ವಿರುದ್ಧ ಮಂಗಳವಾರ ಹಾಗೂ ಬುಧವಾರ ಕೈಗೊಂಡ ಕ್ರಮಗಳನ್ನು ಕೂಡ ಅವರು ಖಂಡಿಸಿದ್ದಾರೆ.

ಸರ್ಕಾರದ ಮೇಲೆ ಒತ್ತಡ ಹೆಚ್ಚಿದ ನಂತರ, ಹಿಂಸಾ ಕೃತ್ಯದಲ್ಲಿ ಭಾಗಿಯಾದವರ ವಿರುದ್ಧ ಅತ್ಯಂತ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಭರವಸೆ ನೀಡಿದ್ದಾರೆ. 'ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೊಂದಿಗೆ ಸಂಪರ್ಕದಲ್ಲಿದ್ದೇನೆ. ಅವರು ಪರಿಸ್ಥಿತಿಯ ಮೇಲೆ ಗಮನ ಇರಿಸಿದ್ದಾರೆ' ಎಂದು ಸಿಂಗ್ ತಿಳಿಸಿದ್ದಾರೆ.

ರಾಜ್ಯ ಸರ್ಕಾರವು ಇಂಫಾಲ್ ಕಣಿವೆಯ 19 ಪೊಲೀಸ್ ಠಾಣೆಗಳ ವ್ಯಾಪ್ತಿ ಹೊರತುಪಡಿಸಿ ಇತರ ಕಡೆಗಳಲ್ಲಿ ಸಶಸ್ತ್ರ ಪಡೆಗಳ (ವಿಶೇಷ ಅಧಿಕಾರ) ಕಾಯ್ದೆಯನ್ನು ಅಕ್ಟೋಬರ್ 1ರಿಂದ ಅನ್ವಯವಾಗುವಂತೆ ಇನ್ನೂ ಆರು ತಿಂಗಳ ಅವಧಿಗೆ ವಿಸ್ತರಿಸಿದೆ.

ಇಬ್ಬರು ವಿದ್ಯಾರ್ಥಿಗಳ ಹತ್ಯೆಯಿಂದ ಆಕ್ರೋಶಗೊಂಡ ವಿದ್ಯಾರ್ಥಿಗಳು ಇಂಫಾಲ್‌ನಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು. (ಎಎಫ್‌ಪಿ ಚಿತ್ರ)

ಆರೋಪ ಅಲ್ಲಗಳೆದ ಆರ್‌ಎಎಫ್

ಇಂಫಾಲ್ (ಪಿಟಿಐ): ಇಬ್ಬರು ವಿದ್ಯಾರ್ಥಿಗಳ ಹತ್ಯೆಯಿಂದ ಆಕ್ರೋಶಿತರಾಗಿ ಪ್ರತಿಭಟನೆ ನಡೆಸುತ್ತಿದ್ದವರನ್ನು ಉದ್ದೇಶಿಸಿ ಜಾತಿ, ಸಮುದಾಯ ಆಧಾರಿತ ಹೇಳಿಕೆಗಳನ್ನು ತನ್ನ ಸಿಬ್ಬಂದಿ ನೀಡಿಲ್ಲ ಎಂದು ಸಿಆರ್‌ಪಿಎಫ್/ಆರ್‌ಎಎಫ್ ಸ್ಪಷ್ಟಪಡಿಸಿದೆ.

ಸಾಮಾಜಿಕ ಜಾಲತಾಣಗಳ ಮೂಲಕ ಹಂಚಿಕೊಳ್ಳಲಾಗಿರುವ ವಿಡಿಯೊ ಒಂದರಲ್ಲಿ ಆರ್‌ಎಎಫ್ ಸಿಬ್ಬಂದಿಯು, 'ನಮ್ಮ ಜಾತಿಯವರಲ್ಲ, ಏನಾದರೂ ಮಾಡಿ' ಎಂದು ಹೇಳಿದ್ದಾರೆ ಎಂಬ ಆರೋಪ ಇದೆ. ಈ ದೃಶ್ಯವನ್ನು ವೀಕ್ಷಿಸಿದವರು ಸಾಮಾಜಿಕ ಜಾಲತಾಣಗಳ ಮೂಲಕ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಹಿಂಸಾಕೃತ್ಯದಲ್ಲಿ ತೊಡಗಿದ್ದ ಗುಂಪನ್ನು ನಿಭಾಯಿಸುವ ಸಂದರ್ಭದಲ್ಲಿ ಆರ್‌ಎಎಫ್ ಸಿಬ್ಬಂದಿ, ಜಾತಿವಾದಿ ಮಾತುಗಳನ್ನು ಆಡಿರುವಂತೆ ತೋರಿಸುವ ವಿಡಿಯೊ ಒಂದು ವಾಟ್ಸ್‌ಆ್ಯಪ್ ಗುಂಪುಗಳಲ್ಲಿ ಹಾಗೂ ಟ್ವಿಟರ್ ಮೂಲಕ ಹರಿದಾಡುತ್ತಿದೆ. ಆದರೆ ಅಲ್ಲಿರುವ ಧ್ವನಿ ಆರ್‌ಎಎಫ್ ಸಿಬ್ಬಂದಿಯದ್ದಲ್ಲ. ವಿಡಿಯೊ ಸೃಷ್ಟಿ ಮಾಡಿದವರು ಉದ್ದೇಶಪೂರ್ವಕವಾಗಿ ಜಾತಿವಾದಿ ಮಾತುಗಳನ್ನು ತಮ್ಮದೇ ಧ್ವನಿಯಲ್ಲಿ ದಾಖಲಿಸಿ, ಆರ್‌ಎಎಫ್ ಹೆಸರು ಹಾಳುಮಾಡಲು ಯತ್ನಿಸಿರುವಂತೆ ಕಾಣುತ್ತಿದೆ. ಅತ್ಯುನ್ನತ ಮಟ್ಟದ ಪ್ರಾಮಾಣಿಕತೆ ಹಾಗೂ ಬದ್ಧತೆಯಿಂದ ಕರ್ತವ್ಯ ನಿರ್ವಹಿಸುತ್ತಿರುವ ಆರ್‌ಎಎಫ್ ಸಿಬ್ಬಂದಿಯ ಹೆಸರು ಕೆಡಿಸಲು ಹಾಗೂ ಅವರನ್ನು ಅಧೀರರನ್ನಾಗಿಸಲು ಈ ವಿಡಿಯೊ ಸೃಷ್ಟಿಸಲಾಗಿದೆ' ಎಂದು ಪೊಲೀಸರು 'ಎಕ್ಸ್' ವೇದಿಕೆಯ ಮೂಲಕ ಹೇಳಿಕೆ ನೀಡಿದ್ದಾರೆ.

ಮಣಿಪುರ ಮುಖ್ಯಮಂತ್ರಿ ವಜಾಕ್ಕೆ ಖರ್ಗೆ ಒತ್ತಾಯ

ನವದೆಹಲಿ (ಪಿಟಿಐ): 'ಹಿಂಸಾಚಾರವು ಇನ್ನೂ ನಡೆಯದಂತೆ ನೋಡಿಕೊಳ್ಳುವ ಮೊದಲ ಹೆಜ್ಜೆಯಾಗಿ, ಮಣಿಪುರದ ಅಸಮರ್ಥ ಮುಖ್ಯಮಂತ್ರಿಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಅಧಿಕಾರದಿಂದ ಕಿತ್ತುಹಾಕಬೇಕು' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಒತ್ತಾಯಿಸಿದ್ದಾರೆ.
ಮಣಿಪುರದ ಪರಿಸ್ಥಿತಿಯನ್ನು ಉಲ್ಲೇಖಿಸಿ ಖರ್ಗೆ ಅವರು ಪ್ರಧಾನಿ ವಿರುದ್ಧವೂ ಟೀಕಾಪ್ರಹಾರ ನಡೆಸಿದ್ದಾರೆ.

'ಮಣಿಪುರದ ಜನ 147 ದಿನಗಳಿಂದ ನೋವು ಅನುಭವಿಸುತ್ತಿದ್ದಾರೆ. ಆದರೆ ಪ್ರಧಾನಿ ಮೋದಿ ಅವರಿಗೆ ಮಣಿಪುರಕ್ಕೆ ಭೇಟಿ ನೀಡಲು ಸಮಯವಿಲ್ಲ. ಹಿಂಸಾಚಾರದಲ್ಲಿ ವಿದ್ಯಾರ್ಥಿಗಳನ್ನು ಗುರಿಯಾಗಿಸಿಕೊಂಡಿರುವುದನ್ನು ತೋರಿಸುವ ಭೀಭತ್ಸ ಚಿತ್ರಗಳು ದೇಶವನ್ನು ಮತ್ತೆ ಆಘಾತಗೊಳಿಸಿವೆ' ಎಂದು ಖರ್ಗೆ ಅವರು ಸಾಮಾಜಿಕ ಜಾಲತಾಣ 'ಎಕ್ಸ್' ವೇದಿಕೆಯಲ್ಲಿ ಬರೆದಿದ್ದಾರೆ.

'ಈ ಸಂಘರ್ಷದಲ್ಲಿ, ಮಹಿಳೆಯರು ಮತ್ತು ಮಕ್ಕಳ ವಿರುದ್ಧದ ಹಿಂಸಾಚಾರವನ್ನು ಒಂದು ಅಸ್ತ್ರದಂತೆ ಬಳಸಿಕೊಳ್ಳಲಾಗಿದೆ ಎಂದು ಈಗ ಅನಿಸುತ್ತಿದೆ. ಸುಂದರ ಮಣಿಪುರ ರಾಜ್ಯವು ಕದನಭೂಮಿಯಂತೆ ಆಗಿದೆ. ಇವೆಲ್ಲದಕ್ಕೂ ಬಿಜೆಪಿ ಕಾರಣ' ಎಂದು ಆರೋಪಿಸಿದ್ದಾರೆ.

ಸುದ್ದಿ 2 ನಿಮಿಷ

ಆಸ್ಕರ್‌ಗೆ '2018– ಎವರಿ ಒನ್ ಇಸ್ ಎ ಹೀರೊ' ಪ್ರವೇಶ

ಚೆನ್ನೈ (ಪಿಟಿಐ): ಮಲಯಾಳಂನ '2018– ಎವರಿ ಒನ್ ಇಸ್ ಎ ಹೀರೊ' ಸಿನಿಮಾ 2024ರ ಆಸ್ಕರ್ ಪ್ರಶಸ್ತಿಗೆ ಅಧಿಕೃತವಾಗಿ ಪ್ರವೇಶ ಪಡೆದಿರುವ ಭಾರತೀಯ ಚಲನಚಿತ್ರವಾಗಿದೆ ಎಂದು ಭಾರತೀಯ ಚಲನಚಿತ್ರ ಒಕ್ಕೂಟ ಬುಧವಾರ ಪ್ರಕಟಿಸಿದೆ.

2018ರ ಕೇರಳದ ಪ್ರವಾಹವನ್ನು ಆಧರಿಸಿದ ಸಿನಿಮಾ ಇದಾಗಿದ್ದು, ಪ್ರಾಕೃತಿಕ ವಿಕೋಪದ ಸಂದರ್ಭದಲ್ಲಿ ಸಮುದಾಯದ ಪಾತ್ರದ ಮೇಲೆ ಬೆಳಕು ಚೆಲ್ಲುತ್ತದೆ.

16 ಸದಸ್ಯರ ತೀರ್ಪುಗಾರರ ತಂಡವು ಅವಿರೋಧವಾಗಿ ಈ ಸಿನಿಮಾವನ್ನು ಆಯ್ಕೆ ಮಾಡಿದೆ ಎಂದು ಆಯ್ಕೆ ಸಮಿತಿ ಅಧ್ಯಕ್ಷರಾದ ಚಲನಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

2024ರ ಅಕಾಡೆಮಿ ಪ್ರಶಸ್ತಿಗಳಿಗೆ ಭಾರತವನ್ನು ಪ್ರತಿನಿಧಿಸಲು '2018– ಎವರಿ ಒನ್ ಇಸ್ ಎ ಹೀರೊ' ಸಿನಿಮಾ ಆಯ್ಕೆ ಮಾಡುವುದಕ್ಕೂ ಮುನ್ನ ತೀರ್ಪುಗಾರರ ತಂಡ ಸುದೀರ್ಘ ಚರ್ಚೆ ನಡೆಸಿದೆ ಎಂದರು.

'16 ಸದಸ್ಯರು ವಾರದಲ್ಲಿ 22 ಸಿನಿಮಾಗಳನ್ನು ನೋಡಿ ಅಂತಿಮವಾಗಿ ಈ ಸಿನಿಮಾವನ್ನು ಆಯ್ಕೆ ಮಾಡಲು ನಿರ್ಧರಿಸಿದೆವು' ಎಂದು ವಿವರಿಸಿದರು.

ಟೊವಿನೋ ಥಾಮಸ್ ಪ್ರಮುಖ ಪಾತ್ರದಲ್ಲಿ ಅಭಿನಯಿಸಿರುವ ಈ ಚಿತ್ರವನ್ನು ಜೂಡ್ ಆಂಟನಿ ಜೋಸೆಫ್ ನಿರ್ದೇಶಿಸಿದ್ದಾರೆ. ಇದೇ ಸಿನಿಮಾದ ನಟನೆಗಾಗಿ ಆಮ್‌ಸ್ಟರ್‌ಡ್ಯಾಂನಲ್ಲಿ ಅತ್ಯುತ್ತಮ ಏಷ್ಯಾ ನಟ ಪ್ರಶಸ್ತಿಯನ್ನು ಪಡೆದಿರುವ ಥಾಮಸ್ ಅವರು ಸಂತಸ ಇಮ್ಮಡಿಸಿದೆ ಎಂದು ಪ್ರತಿಕ್ರಿಯಿಸಿದ್ದಾರೆ.

ಎಚ್ಚರಿಸಿದ ಇಂಟರ್‌ಪೋಲ್: ಆತ್ಮಹತ್ಯೆಯಿಂದ ಯುವಕ ಪಾರು

ಮುಂಬೈ (ಪಿಟಿಐ): ಇಂಟರ್‌ಪೋಲ್ ನೀಡಿದ ಎಚ್ಚರಿಕೆಯಿಂದಾಗಿ ಆತ್ಮಹತ್ಯೆಗೆ ಮುಂದಾಗಿದ್ದ ಯುವಕನನ್ನು ಮುಂಬೈ ಪೊಲೀಸರು ರಕ್ಷಿಸಿದ್ದಾರೆ.

ಆತ್ಮಹತ್ಯೆಯ ಅತ್ಯುತ್ತಮ ವಿಧಾನಗಳ ಕುರಿತು ಗೂಗಲ್‌ನಲ್ಲಿ ಈ ಯುವಕ ಹುಡುಕಾಟ ನಡೆಸುತ್ತಿದ್ದ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

'ರಾಜಸ್ಥಾನದ 28 ವರ್ಷದ ಈ ಯುವಕ, ಮಾಲಾಡ್ ವೆಸ್ಟ್‌ನ ಮಾಲವಾನಿಯ ನಿವಾಸಿ. ಆತ್ಮಹತ್ಯೆ ವಿಧಾನಗಳ ಕುರಿತು ಅನೇಕ ಬಾರಿ ಗೂಗಲ್‌ನಲ್ಲಿ ಶೋಧಿಸಿದ್ದ. ಇದು ಇಂಟರ್‌ಪೋಲ್ ಅಧಿಕಾರಿಗಳ ಗಮನ ಸೆಳೆದಿತ್ತು. ಕೂಡಲೇ ಅವರು ಯುವಕನ ಮೊಬೈಲ್ ಸಂಖ್ಯೆ ಸಹಿತ ಮುಂಬೈ ಪೊಲೀಸರಿಗೆ ಇ–ಮೇಲ್ ಕಳುಹಿಸಿದ್ದರು. ಮೊಬೈಲ್ ಸಂಖ್ಯೆ ಆಧಾರದ ಮೇಲೆ ಮುಂಬೈ ಪೊಲೀಸರು ಆತನನ್ನು ಮಂಗಳವಾರ ಪತ್ತೆ ಮಾಡಿದ್ದಾರೆ' ಎಂದರು.

'ಯುವಕನನ್ನು ವಶಕ್ಕೆ ಪಡೆದು, ತಜ್ಞರಿಂದ ಆಪ್ತ ಸಮಾಲೋಚನೆ ನಡೆಸಲಾಗಿದೆ. ಆತನಿಗೆ ತನ್ನ ಸಂಬಂಧಿಕರ ಮನೆಯಲ್ಲಿ ವಾಸಿಸಲು ಸೂಚಿಸಲಾಗಿದೆ' ಎಂದು ವಿವರಿಸಿದರು.

ಖಿನ್ನತೆಯಲ್ಲಿದ್ದ ಯುವಕ: 'ಎರಡು ವರ್ಷಗಳ ಹಿಂದೆ ಅಪರಾಧ ಪ್ರಕರಣವೊಂದರಲ್ಲಿ ಯುವಕನ ತಾಯಿ ಜೈಲು ಶಿಕ್ಷೆಗೆ ಒಳಗಾಗಿದ್ದರು. ತನ್ನ ತಾಯಿ ಬಿಡುಗಡೆ ಮಾಡಿಸಲು ಸಾಧ್ಯವಾಗುತ್ತಿಲ್ಲವೆಂಬ ಚಿಂತೆಯು ಯುವಕನನ್ನು ಖಿನ್ನತೆಗೆ ದೂಡಿತ್ತು. ಜತೆಗೆ ಈತನೂ ಕಳೆದ ಆರು ತಿಂಗಳಿಂದ ನಿರುದ್ಯೋಗಿಯಾಗಿದ್ದ. ಇದರಿಂದಾಗಿ ಆತ್ಮಹತ್ಯೆ ಮಾಡಿಕೊಳ್ಳುವುದೇ ಮಾರ್ಗವೆಂದು ತಿಳಿದು, ಆತ ಗೂಗಲ್‌ನಲ್ಲಿ ಶೋಧ ನಡೆಸಿದ್ದ' ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ವೈದ್ಯಕೀಯ ಕಾಲೇಜು: ದಕ್ಷಿಣದ ರಾಜ್ಯಗಳ ಅಧಿಕಾರ ಮೊಟಕು

ಪ್ರಜಾವಾಣಿ ವಾರ್ತೆ

ಚೆನ್ನೈ: ಪದವಿ ಕೋರ್ಸ್‌ಗಳಿಗೆ ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ರೂಪಿಸಿರುವ ಮಾರ್ಗಸೂಚಿಗಳು ಮುಂದಿನ ಶೈಕ್ಷಣಿಕ ವರ್ಷದಿಂದ ಜಾರಿಗೆ ಬಂದಲ್ಲಿ ದಕ್ಷಿಣ ಭಾರತದ ಐದು ರಾಜ್ಯಗಳ ಪೈಕಿ ಯಾವ ರಾಜ್ಯವೂ ಹೊಸ ವೈದ್ಯಕೀಯ ಕಾಲೇಜು ತೆರೆಯಲು ಅಥವಾ ಇರುವ ಕಾಲೇಜುಗಳಲ್ಲಿ ಹೆಚ್ಚುವರಿಯಾಗಿ ಎಂಬಿಬಿಎಸ್ ಸೀಟುಗಳನ್ನು ನೀಡಲು ಸಾಧ್ಯವಾಗುವುದಿಲ್ಲ.

ಹೊಸ ಮಾರ್ಗಸೂಚಿಗಳನ್ನು ಕೇಂದ್ರ ಸರ್ಕಾರವು ಆಗಸ್ಟ್ 16ರಂದು ಅಧಿಸೂಚನೆಯಲ್ಲಿ ಪ್ರಕಟಿಸಿದೆ. ಇದು ಹಾಲಿ ಇರುವ ಖಾಸಗಿ ಹಾಗೂ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿನ ಎಂಬಿಬಿಎಸ್ ಸೀಟುಗಳ ಸಂಖ್ಯೆಗೆ ಮಿತಿ ಹೇರುವುದಷ್ಟೇ ಅಲ್ಲದೆ, ರಾಜ್ಯಗಳಲ್ಲಿ ಪ್ರತಿ 10 ಲಕ್ಷ ಜನಸಂಖ್ಯೆಗೆ 100 ಎಂಬಿಬಿಎಸ್ ಸೀಟುಗಳು ಇರಬೇಕು ಎಂಬ ನಿಯಮವೊಂದನ್ನು ಜಾರಿಗೆ ತರುತ್ತದೆ.

ದಕ್ಷಿಣ ಭಾರತದ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶವಾಗಿರುವ ಪುದುಚೇರಿಯು ಈ ಅನುಪಾತಕ್ಕಿಂತ (10 ಲಕ್ಷ ಜನಸಂಖ್ಯೆಗೆ 100 ಎಂಬಿಬಿಎಸ್ ಸೀಟುಗಳು) ಹೆಚ್ಚಿನ ಸೀಟುಗಳನ್ನು ಈಗಾಗಲೇ ಹೊಂದಿವೆ.

ಕರ್ನಾಟಕ 11,695 ಸೀಟುಗಳನ್ನು (6.76 ಕೋಟಿ ಜನಸಂಖ್ಯೆಗೆ) ಈಗಾಗಲೇ ಹೊಂದಿದೆ. ಹೊಸ ಮಾರ್ಗಸೂಚಿಗಳ ಅನ್ವಯ ಕರ್ನಾಟಕವು 6,770 ಸೀಟುಗಳನ್ನು ಮಾತ್ರ ಹೊಂದಲು ಅವಕಾಶವಿದೆ.

ಕರ್ನಾಟಕ, ತಮಿಳುನಾಡು ರಾಜ್ಯಗಳು ಪ್ರತಿ ಜಿಲ್ಲೆಗೆ ಒಂದು ವೈದ್ಯಕೀಯ ಕಾಲೇಜು ಆರಂಭಿಸುವ ಉದ್ದೇಶ ಹೊಂದಿವೆ. ಈ ಉದ್ದೇಶಕ್ಕೆ ಹೊಸ ಮಾರ್ಗಸೂಚಿ ಅಡ್ಡಿಯಾಗಲಿದೆ.

'ಮಾರ್ಗಸೂಚಿ ಒಪ್ಪಲಾಗದು. ಕೇಂದ್ರಕ್ಕೆ ಪತ್ರ ಬರೆಯಲಾಗುವುದು' ಎಂದು ರಾಜ್ಯದ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ ಪಾಟೀಲ ಹೇಳಿದ್ದಾರೆ.

'ಇಂಡಿಯಾ' ಕೂಟದಲ್ಲಿ ಅಸಮಾಧಾನ

ವಿವಿಧ ಸಮಿತಿಗಳು ಕೈಗೊಂಡ ತೀರ್ಮಾನಗಳ ಅನುಷ್ಠಾನ ವಿಳಂಬ

• ಶೆಮಿನ್ ಜಾಯ್

ನವದೆಹಲಿ: 'ಇಂಡಿಯಾ' ಮೈತ್ರಿಕೂಟದ ವಿವಿಧ ಹಂತಗಳಲ್ಲಿ ಸಮನ್ವಯ ತರುವ ಉದ್ದೇಶದಿಂದ ರಚಿಸಲಾಗಿರುವ ಸಮಿತಿಗಳು ಸಕ್ರಿಯವಾಗಿ ಕೆಲಸ ಮಾಡುತ್ತಿಲ್ಲ ಎಂದು ಗುಂಪಿನ ಪಕ್ಷಗಳಲ್ಲಿ ಅತೃಪ್ತಿ ಶುರುವಾಗಿದೆ. ರಚನೆಯಾಗಿರುವ ಬಹುತೇಕ ಸಮಿತಿಗಳು ಕೈಗೊಂಡ ತೀರ್ಮಾನಗಳು ಅನುಷ್ಠಾನಕ್ಕೆ ಬರುತ್ತಿಲ್ಲ, ಸಮಿತಿಗಳು ತ್ವರಿತವಾಗಿ ಕೆಲಸ ಮಾಡುತ್ತಿಲ್ಲ ಎಂಬುದು ಅತೃಪ್ತಿಗೆ ಮುಖ್ಯ ಕಾರಣ.

'ಇಂಡಿಯಾ' ಗುಂಪಿನ ಸಮನ್ವಯ ಸಮಿತಿಯು ಸೆಪ್ಟೆಂಬರ್ 13ರಂದು ನಡೆದ ಸಭೆಯಲ್ಲಿ, ಭೋಪಾಲ್‌ನಲ್ಲಿ ರ್‍ಯಾಲಿಯೊಂದನ್ನು ಆಯೋಜಿಸುವ ಹಾಗೂ ಜಾತಿ ಗಣತಿ ನಡೆಸುವಂತೆ ಒಕ್ಕೊರಲಿನಿಂದ ಒತ್ತಾಯಿಸುವ ತೀರ್ಮಾನವನ್ನು ಕೈಗೊಂಡಿತ್ತು. ಆದರೆ, ಈ ಎರಡೂ ತೀರ್ಮಾನಗಳು ಅನುಷ್ಠಾನಕ್ಕೆ ಬಂದಿಲ್ಲ. ಈ ತೀರ್ಮಾನದ ವಿಚಾರವಾಗಿ ಗುಂಪಿನ ಒಳಗೆ ವ್ಯಕ್ತವಾಗಿರುವ ವಿರೋಧವೇ ಇವು ಅನುಷ್ಠಾನಕ್ಕೆ ಬಾರದೆ ಇರುವುದಕ್ಕೆ ಕಾರಣ.

ವಿವಿಧ ಮಾಧ್ಯಮ ಸಂಸ್ಥೆಗಳ 14 ಮಂದಿ ನಿರೂಪಕರು ನಡೆಸಿಕೊಡುವ ಕಾರ್ಯಕ್ರಮಗಳಿಗೆ ತನ್ನ ಪ್ರತಿನಿಧಿಗಳನ್ನು ಕಳಿಸಿಕೊಡುವುದಿಲ್ಲ ಎಂದು 'ಇಂಡಿಯಾ' ಗುಂಪಿನ ಕಾರ್ಯಕಾರಿ ಸಮಿತಿಯ ಒತ್ತಾಯದ ಕಾರಣಕ್ಕೆ ತೆಗೆದುಕೊಂಡಿರುವ ತೀರ್ಮಾನ ಕೂಡ ಗುಂಪಿನ ಎಲ್ಲರಿಗೂ ಸರಿಕಂಡಿಲ್ಲ. ಇದು ವರೆಗೆ ಭೋಪಾಲ್‌ನ ರ್‍ಯಾಲಿಯ ಬದಲಿಗೆ ಯಾವ ಕಾರ್ಯಕ್ರಮ ಆಯೋಜಿಸಬೇಕು ಎಂಬ ಬಗ್ಗೆ ತೀರ್ಮಾನ ಆಗಿಲ್ಲ. ಇದು ಗುಂಪಿನ ಕೆಲವು ಪಕ್ಷಗಳ ಅಸಮಾಧಾನಕ್ಕೆ ಕಾರಣವಾಗಿದೆ.

ಆರಂಭದ ಸಭೆಗಳ ನಂತರ ಗುಂಪಿನ ಅತಿಮುಖ್ಯ ಸಮಿತಿಯಾಗಿರುವ ಸಮನ್ವಯ ಸಮಿತಿ ಸೇರಿದಂತೆ ಬೇರೆ ಬೇರೆ ಸಮಿತಿಗಳು ತೀರಾ ಅಪರೂಪಕ್ಕೆ ಸಭೆ ಸೇರುತ್ತಿರುವ ಕಾರಣ ಅವು ಅಪ್ರಸ್ತುತ ಆಗುವ ಅಪಾಯ ಇದೆ ಎಂದು ವಿರೋಧ ಪಕ್ಷದ ಹಿರಿಯ ನಾಯಕರೊಬ್ಬರು ಹೇಳುತ್ತಾರೆ.

'ಇಂಡಿಯಾ'ದ ಸಂಘಟನಾತ್ಮಕ ರಚನೆಯು, ಗುಂಪಿನ ಕಾರ್ಯಾಚರಣೆಗೆ ಅಡ್ಡಿ ಉಂಟುಮಾಡುತ್ತಿದೆ ಎಂದು ಸಿಪಿಎಂ ಈಗಾಗಲೇ ಹೇಳಿದೆ. ಸಮನ್ವಯ ಸಮಿತಿಗೆ ತನ್ನ ಪ್ರತಿನಿಧಿಯನ್ನು ನೇಮಕ ಮಾಡಲು ಅದು ನಿರಾಕರಿಸಿದೆ. ನಿರ್ಣಯ ಕೈಗೊಳ್ಳುವ ವೇಳೆ ಪಕ್ಷಗಳ ಪ್ರಮುಖ ನಾಯಕರು ಭಾಗಿಯಾಗದೆ ಇದ್ದರೆ ಆ ನಿರ್ಣಯಗಳು ಅನುಷ್ಠಾನಕ್ಕೆ ಬರುವುದಿಲ್ಲ ಎಂಬುದನ್ನು ಭೋಪಾಲ್ ರ್‍ಯಾಲಿಯನ್ನು ರದ್ದುಪಡಿಸಿರುವ ನಡೆಯು ತೋರಿಸುತ್ತಿದೆ ಎಂದು ನಾಯಕರೊಬ್ಬರು ಹೇಳಿದ್ದಾರೆ.

ಸಮಿತಿಗಳು ತೆಗೆದುಕೊಳ್ಳುವ ನಿರ್ಣಯಗಳನ್ನು ಪಕ್ಷಗಳ ಪ್ರಮುಖರು ಪಕ್ಕಕ್ಕೆ ಸರಿಸುವುದಾದರೆ ಸಮಿತಿಗಳು ಸಭೆ ನಡೆಸುವುದಕ್ಕೇ ಅರ್ಥವಿಲ್ಲ ಎಂದು ನ್ಯಾಷನಲ್ ಕಾನ್ಫರೆನ್ಸ್‌ನ ಮುಖಂಡ ಒಮರ್ ಅಬ್ದುಲ್ಲಾ ಅವರು ಹೇಳಿದ್ದಾರೆ ಎಂದು ಗೊತ್ತಾಗಿದೆ.

ಸೆಪ್ಟೆಂಬರ್ 13ರಂದು ನಡೆದ ಸಮನ್ವಯ ಸಮಿತಿಯ ಸಭೆಯಲ್ಲಿ, 'ಇಂಡಿಯಾ'ದ ಮೊದಲ ರ್‍ಯಾಲಿಯನ್ನು ಭೋಪಾಲ್‌ನಲ್ಲಿ ಆಯೋಜಿಸುವ ತೀರ್ಮಾನ ಆಯಿತು. ಹಾಗೆಯೇ, ಜಾತಿ ಗಣತಿಗೆ ಸಂಬಂಧಿಸಿದ ವಿಚಾರವನ್ನು ಕೈಗೆತ್ತಿಕೊಳ್ಳಲು ಸಭೆಯಲ್ಲಿ ಪಾಲ್ಗೊಂಡಿದ್ದ ಪಕ್ಷಗಳು ಒಪ್ಪಿದ್ದವು.

ಆದರೆ ರ್‍ಯಾಲಿ ನಡೆಸುವ ತೀರ್ಮಾನ ಕೈಗೊಂಡ ಕೆಲವೇ ದಿನಗಳಲ್ಲಿ, ಕಾಂಗ್ರೆಸ್ಸಿನ ಹಿರಿಯ ಮುಖಂಡ ಕಮಲ್ ನಾಥ್ ಅವರು ಭೋಪಾಲ್‌ನಲ್ಲಿ ಅದನ್ನು ಆಯೋಜಿಸುವುದು ಆಗದ ಕೆಲಸ ಎಂದರು. ರ್‍ಯಾಲಿ ಆಯೋಜಿಸಲು ನಿರ್ಧರಿಸಿರುವ ಸಮಯವು ರಾಜಕೀಯ ಲೆಕ್ಕಾಚಾರಗಳ ದೃಷ್ಟಿಯಿಂದ ಮತ್ತು ಪ್ರಯಾಣದ ದೃಷ್ಟಿಯಿಂದ ಪಕ್ಷಕ್ಕೆ ಅನುಕೂಲಕರವಾಗಿಲ್ಲ ಎಂದರು. ಮಧ್ಯಪ್ರದೇಶದಲ್ಲಿ ವಿಧಾನಸಭಾ ಚುನಾವಣೆ ಹತ್ತಿರವಾಗುತ್ತಿದೆ.

ಆದರೆ ಕಮಲ್ ನಾಥ್ ಅವರ ಮುಖ್ಯ ಸಮಸ್ಯೆ ಇದ್ದಿದ್ದು ಡಿಎಂಕೆ ನಾಯಕರ ಜೊತೆ ವೇದಿಕೆ ಹಂಚಿಕೊಳ್ಳುವಲ್ಲಿ. ಪಕ್ಷದ ನಾಯಕ ಉದಯನಿಧಿ ಸ್ಟಾಲಿನ್ ಅವರು 'ಸನಾತನ ಧರ್ಮ'ದ ವಿಚಾರವಾಗಿ ನೀಡಿರುವ ಹೇಳಿಕೆಯು ವಿವಾದ ಸೃಷ್ಟಿಸಿದೆ.

ಕಮಲ್ ನಾಥ್ ಅವರು ಮೃದು ಹಿಂದುತ್ವದ ನೆಲೆಗಟ್ಟಿನಲ್ಲಿ ತಮ್ಮ ಚುನಾವಣಾ ಅಭಿಯಾನ ರೂಪಿಸಿದ್ದಾರೆ. ಜಾತಿ ಸಮೀಕ್ಷೆಯನ್ನು ಮುನ್ನೆಲೆಗೆ ತರಬೇಕು ಎಂಬ ಪ್ರಸ್ತಾವವನ್ನು ತೃಣಮೂಲ ಕಾಂಗ್ರೆಸ್ ವಿರೋಧಿಸಿದೆ.

'ಇಸ್ಕಾನ್‌ನಿಂದ ಕಟುಕರಿಗೆ ಹಸುಗಳ ಮಾರಾಟ'

ನವದೆಹಲಿ (ಪಿಟಿಐ): 'ಇಸ್ಕಾನ್ ಸಂಸ್ಥೆಯು ತನ್ನ ಗೋಶಾಲೆಗಳಲ್ಲಿರುವ ಹಸುಗಳನ್ನು ಕಟುಕರಿಗೆ ಮಾರಾಟ ಮಾಡುತ್ತಿದೆ. ಇಸ್ಕಾನ್ ದೊಡ್ಡ ವಂಚಕ ಸಂಸ್ಥೆ' ಎಂಬುದಾಗಿ ಬಿಜೆಪಿ ಸಂಸದೆ ಮೇನಕಾ ಗಾಂಧಿ ಅವರು ಹೇಳಿದ್ದಾರೆ ಎನ್ನಲಾದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

ಆದರೆ, ಈ ಆರೋಪಗಳನ್ನು ಬಲವಾಗಿ ತಳ್ಳಿಹಾಕಿರುವ ಅಂತರರಾಷ್ಟ್ರೀಯ ಕೃಷ್ಣ ಪ್ರಜ್ಞೆ ಸಂಘವು (ಇಸ್ಕಾನ್), 'ಸಂಸ್ಥೆಯ ವಿರುದ್ಧ ಈ ಆರೋಪಗಳು ನಿರಾಧಾರ ಹಾಗೂ ಸುಳ್ಳು' ಎಂದು ಹೇಳಿದೆ.

'ಇಸ್ಕಾನ್ ಗೋಶಾಲೆಗಳನ್ನು ಸ್ಥಾಪಿಸಿ, ಭಾರಿ ಪ್ರಮಾಣದ ಜಮೀನು ರೂಪದಲ್ಲಿ ಸರ್ಕಾರದಿಂದ ಸಾಕಷ್ಟು ಪ್ರಯೋಜನಗಳನ್ನು ಪಡೆದುಕೊಳ್ಳುತ್ತದೆ' ಎಂದು ಮೇನಕಾ ಗಾಂಧಿ ಅವರು ಹೇಳುತ್ತಿರುವುದು ಈ ವಿಡಿಯೊದಲ್ಲಿದೆ. ಅವರು ಯಾವ ದಿನದಂದು ಈ ಮಾತುಗಳನ್ನಾಡಿದ್ದಾರೆ ಎಂಬ ಮಾಹಿತಿ ಇಲ್ಲ.

'ಇಸ್ಕಾನ್ ತನ್ನ ಗೋಶಾಲೆಗಳಲ್ಲಿರುವ ಹಸುಗಳನ್ನು ಕಟುಕರಿಗೆ ಮಾರಾಟ ಮಾಡುತ್ತದೆ. ಅವರಷ್ಟು ಹಸುಗಳನ್ನು ಮಾರಾಟ ಮಾಡುವವರು ಯಾರೂ ಇಲ್ಲ. ಇನ್ನೊಂದೆಡೆ, ತಮ್ಮ ಇಡೀ ಜೀವನವೇ ಹಾಲಿನ ಮೇಲೆ ಅವಲಂಬಿತ ಎಂದು ಹೇಳಿಕೊಳ್ಳುವ ಅವರು 'ಹರೇ ರಾಮ ಹರೇ ಕೃಷ್ಣ' ಎಂದು ಜಪಿಸುತ್ತಾ ರಸ್ತೆಗಳಲ್ಲಿ ಸಂಚರಿಸುತ್ತಾರೆ' ಎಂಬುದಾಗಿ ಅವರು ಹೇಳಿದ್ದಾರೆ ಎನ್ನಲಾಗಿದೆ.

ಮೇನಕಾ ಗಾಂಧಿ

'ಆಂಧ್ರಪ್ರದೇಶದ ಅನಂತಪುರದಲ್ಲಿರುವ ಇಸ್ಕಾನ್‌ಗೆ ಸೇರಿದ ಗೋಶಾಲೆಗೆ ಇತ್ತೀಚೆಗೆ ಭೇಟಿ ನೀಡಿದ್ದೆ. ಉತ್ತಮ ಸ್ಥಿತಿಯಲ್ಲಿದ್ದ ಒಂದೇ ಒಂದು ಹಸು ನನಗೆ ಕಾಣಿಸಲಿಲ್ಲ. ಅಂದರೆ, ಎಲ್ಲ ಹಸುಗಳನ್ನು ಮಾರಾಟ ಮಾಡಲಾಗಿದೆ ಎಂಬುದು ಇದರರ್ಥ' ಎಂದು ಅವರು ಆರೋಪಿಸಿದ್ದಾರೆ.

ಮೇನಕಾ ಗಾಂಧಿ ಅವರ ಆರೋಪಗಳಿಗೆ ಪ್ರತಿಕ್ರಿಯಿಸಿರುವ ಇಸ್ಕಾನ್, 'ಗೋಮಾಂಸವೇ ಪ್ರಮುಖ ಆಹಾರವಾಗಿರುವ ವಿಶ್ವದ ಅನೇಕ ಭಾಗಗಳಲ್ಲಿ ಗೋವುಗಳ ರಕ್ಷಣೆ ಕಾರ್ಯವನ್ನು ಪ್ರಾರಂಭಿಸಿದ್ದೇ ಇಸ್ಕಾನ್' ಎಂದಿದೆ.

ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಇಸ್ಕಾನ್, 'ದೇಶದ ವಿವಿಧ ಭಾಗಗಳಲ್ಲಿ ಇಸ್ಕಾನ್ 60ಕ್ಕೂ ಹೆಚ್ಚು ಗೋಶಾಲೆಗಳನ್ನು ನಡೆಸುತ್ತಿದ್ದು, ಸಾವಿರಾರು ಹಸುಗಳು, ಎತ್ತುಗಳ ರಕ್ಷಣೆ ಮಾಡುತ್ತಿದೆ. ಬದುಕಿರುವವರೆಗೂ ಅವುಗಳ ಆರೈಕೆ ಮಾಡಲಾಗುತ್ತಿದೆ' ಎಂದು ತಿಳಿಸಿದೆ.

'ಸಾಕದೇ ಬಿಟ್ಟಿರುವ, ಗಾಯಗೊಂಡಿರುವ ಅಥವಾ ಕಸಾಯಿಖಾನೆಗಳಿಂದ ರಕ್ಷಣೆ ಮಾಡಿರುವಂತಹ ಹಸುಗಳಿಗೆ ಸಂಸ್ಥೆ ನಡೆಸುತ್ತಿರುವ ಗೋಶಾಲೆಗಳಲ್ಲಿ ರಕ್ಷಣೆ ನೀಡಲಾಗುತ್ತಿದೆ' ಎಂದೂ ಇಸ್ಕಾನ್ ತಿಳಿಸಿದೆ.

ಮಹೇಶ್ ರಾವುತ್ ಜಾಮೀನಿಗೆ ತಡೆ ವಿಸ್ತರಣೆ

ನವದೆಹಲಿ: ಭೀಮಾ ಕೋರೆಗಾಂವ್ ಪ್ರಕರಣದ ಆರೋಪಿ ಮಹೇಶ್ ರಾವುತ್ ಅವರಿಗೆ ಬಾಂಬೆ ಹೈಕೋರ್ಟ್ ನೀಡಿದ್ದ ಜಾಮೀನನ್ನು ವಿರೋಧಿಸಿ ರಾಷ್ಟ್ರೀಯ ತನಿಖಾ ಸಂಸ್ಥೆ (ಐಎನ್‌ಎ) ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಬುಧವಾರ ಪುರಸ್ಕರಿಸಿದೆ ಮತ್ತು ಜಾಮೀನಿಗೆ ನೀಡಿದ್ದ ತಡೆಯನ್ನು ವಿಸ್ತರಿಸಿ ಆದೇಶ ನೀಡಿದೆ.

ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಅನಿರುದ್ಧ ಬೋಸ್ ಮತ್ತು ಬೇಲಾ ಎಂ. ತ್ರಿವೇದಿ ಅವರಿದ್ದ ನ್ಯಾಯಪೀಠವು, ಮುಂದಿನ ವಿಚಾರಣೆಯನ್ನು ಅಕ್ಟೋಬರ್ 5ಕ್ಕೆ ನಿಗದಿಪಡಿಸಿತು ಮತ್ತು ಅಲ್ಲಿಯವರೆಗೆ ಜಾಮೀನಿಗೆ ತಡೆ ನೀಡಿರುವುದಾಗಿ ಹೇಳಿತು. ರಾವುತ್ ಅವರನ್ನು 2018ರ ಜೂನ್ 6ರಂದು ಬಂಧಿಸಲಾಗಿತ್ತು. ಸದ್ಯ ಅವರನ್ನು ನವಿ ಮುಂಬೈನ ತಾಲೋಜ ಜೈಲಿನಲ್ಲಿ ಇರಿಸಲಾಗಿದೆ.

ನಾಯ್ಡು ಅರ್ಜಿ: ಅ. 3ಕ್ಕೆ ವಿಚಾರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೌಶಲ ಅಭಿವೃದ್ಧಿ ನಿಗಮದ ಹಗರಣಕ್ಕೆ ಸಂಬಂಧಿಸಿದಂತೆ ತಮ್ಮನ್ನು ಪೊಲೀಸರ ವಶಕ್ಕೆ ನೀಡಿರುವುದನ್ನು ಪ್ರಶ್ನಿಸಿ ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರು ಸಲ್ಲಿಸಿರುವ ಅರ್ಜಿಯನ್ನು ಸುಪ್ರೀಂಕೋರ್ಟ್ ಬುಧವಾರ ತಳ್ಳಿ ಹಾಕಿದೆ.

ಆದರೆ ಎಫ್‌ಐಆರ್ ರದ್ದತಿ ಕೋರಿ ನಾಯ್ಡು ಅವರು ಸಲ್ಲಿಸಿರುವ ಅರ್ಜಿಯನ್ನು ಅ. 3ರಂದು ವಿಚಾರಣೆಗೆ ತೆಗೆದುಕೊಳ್ಳುವುದಾಗಿ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠ ಹೇಳಿದೆ.

'ನಮ್ಮ ಸರ್ಕಾರ ಲಕ್ಷಾಂತರ ಮಹಿಳೆಯರಿಗೆ ಮನೆ ನೀಡಿದೆ'

ನನ್ನ ಹೆಸರಲ್ಲಿ ಮನೆ ಇಲ್ಲ: ಮೋದಿ

ಬೋಡೇಲಿ/ ಅಹಮದಾಬಾದ್ (ಪಿಟಿಐ/ಪ್ರಜಾವಾಣಿ ವಾರ್ತೆ): 'ನನ್ನ ಹೆಸರಿನಲ್ಲಿ ಮನೆಯಿಲ್ಲ. ಆದರೆ, ನಮ್ಮ ಸರ್ಕಾರ ದೇಶದ ಲಕ್ಷಾಂತರ ಮಹಿಳೆಯರನ್ನು ಮನೆ ಮಾಲೀಕರನ್ನಾಗಿ ಮಾಡಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

'ದಲ್ಲಾಳಿಗಳ ಮಧ್ಯಪ್ರವೇಶವಿಲ್ಲದೇ ಬಡವರಿಗೆ ಅಗತ್ಯ ಮನೆಗಳನ್ನು ನಾವು ನಿರ್ಮಿಸುತ್ತಿದ್ದೇವೆ. ಲಕ್ಷಾಂತರ ಮನೆಗಳು ಮಹಿಳೆಯರ ಹೆಸರಿನಲ್ಲಿ ನೋಂದಣಿಯಾಗಿವೆ. ಇಲ್ಲಿ ಮಧ್ಯವರ್ತಿಗಳಿಗೆ ಅವಕಾಶ ಇಲ್ಲ' ಎಂದು ಹೇಳಿದರು.

ಗುಜರಾತ್‌ನ ಛೋಟಾ ಉದಯಪುರ ಜಿಲ್ಲೆಯ ಬೋಡೇಲಿಯಲ್ಲಿ ಶಿಕ್ಷಣ ಕ್ಷೇತ್ರದ ₹ 4,500 ಕೋಟಿ ಮೊತ್ತದ ಯೋಜನೆಗಳು ಸೇರಿ ₹ 5 ಸಾವಿರ ಕೋಟಿ ಮೊತ್ತದ ವಿವಿಧ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿದ ಅವರು, 'ನನಗೆ ಬಡವರ ಕಷ್ಟ ತಿಳಿದಿದೆ. ಅವುಗಳನ್ನು ಪರಿಹರಿಸಲು ಪ್ರಯತ್ನಿಸುತ್ತೇನೆ' ಎಂದರು.

ನಿರ್ದಿಷ್ಟ ಕಾರ್ಯಸೂಚಿ'ಯ ಜನರಿಂದ ಅಪಪ್ರಚಾರ': '2001ರಲ್ಲಿನ ಭೂಕಂಪ, ಆರ್ಥಿಕ ಸಂಕಷ್ಟ, 2002ರ ಭುಗಿಲೆದ್ದ ಹಿಂಸಾಚಾರದಿಂದಾಗಿ ಗುಜರಾತ್ ತತ್ತರಿಸಿ ಹೋಗಿತ್ತು. ಯುವಕರು, ಉದ್ಯಮಿಗಳು ರಾಜ್ಯ ತೊರೆಯುವ ಕಾರಣ ಗುಜರಾತ್ ನಾಶವಾಗುವುದು, ದೇಶಕ್ಕೇ ಹೊರೆಯಾಗುವುದು ಎಂದು 'ನಿರ್ದಿಷ್ಟ ಕಾರ್ಯಸೂಚಿ' ಹೊಂದಿದ್ದ ಕೆಲವರು ಹೇಳಿದ್ದರು' ಎಂದು ಪ್ರಧಾನಿ ಮೋದಿ ಬುಧವಾರ ಹೇಳಿದ್ದಾರೆ.

'ವೈಬ್ರಂಟ್ ಗುಜರಾತ್ ಗ್ಲೋಬಲ್ ಸಮಿಟ್'ನ 20ನೇ ವಾರ್ಷಿಕೋತ್ಸವ ಅಂಗವಾಗಿ ನಗರದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ತಾವು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ದಿನಗಳಲ್ಲಿ ಎದುರಿಸಿದ ಸಮಸ್ಯೆಗಳು, ಅವುಗಳನ್ನು ಮೆಟ್ಟಿನಿಂತ ಬಗೆಯನ್ನು ವಿವರಿಸಿದ್ದಾರೆ.


ಗುಜರಾತ್‌ನ ಛೋಟಾ ಉದಯಪುರ ಜಿಲ್ಲೆಯ ಬೋಡೇಲಿಯಲ್ಲಿ ನಡೆದ ವಿವಿಧ ಯೋಜನೆಗಳ ಶಂಕುಸ್ಥಾಪನಾ ಕಾರ್ಯಕ್ರಮಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭವ್ಯವಾಗಿ ಸ್ವಾಗತಿಸಿದ ಜನಸ್ತೋಮ –ಪಿಟಿಐ ಚಿತ್ರ

ಪಾತಕಿಗಳ ಜಾಲ ಭೇದಿಸುವ ನಿಟ್ಟಿನಲ್ಲಿ ಕ್ರಮ: ಹಲವು ಶಂಕಿತರು ವಶಕ್ಕೆ

53 ಸ್ಥಳದಲ್ಲಿ ಎನ್‌ಐಎ ದಾಳಿ

ನವದೆಹಲಿ (ಪಿಟಿಐ): ಪಾತಕಿಗಳು, ಭಯೋತ್ಪಾದಕರು ಮತ್ತು ಮಾದಕವಸ್ತು ಮಾರಾಟಗಾರರ ಜಾಲ ಭೇದಿಸುವ ನಿಟ್ಟಿನಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ವಿವಿಧ ರಾಜ್ಯಗಳಲ್ಲಿ ಕಾರ್ಯಾಚರಣೆ ಕೈಗೊಂಡಿದ್ದು, ಹಲವು ಶಂಕಿತರನ್ನು ವಶಕ್ಕೆ ತೆಗೆದುಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಟ್ಟಿ ಮಾಡಲಾದ ಉಗ್ರ ಅರ್ಶ್ ದಲ್ಲಾ ಮತ್ತಿತರ ಗ್ಯಾಂಗ್‌ಸ್ಟರ್‌ಗಳಿಗೆ ಸಂಬಂಧಿಸಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಈ ದಾಳಿ ಕೈಗೊಳ್ಳಲಾಗಿತ್ತು.

ಪಂಜಾಬ್, ಹರಿಯಾಣ, ರಾಜಸ್ಥಾನ, ಉತ್ತರಾಖಂಡ, ಉತ್ತರ ಪ್ರದೇಶ ಮತ್ತು ಕೇಂದ್ರಾಡಳಿತ ಪ್ರದೇಶಗಳಾದ ದೆಹಲಿ ಹಾಗೂ ಚಂಡೀಗಢದ ಒಟ್ಟು 53 ಸ್ಥಳಗಳ ಮೇಲೆ ದಾಳಿ ನಡೆಸಲಾಯಿತು. ಆಯಾ ರಾಜ್ಯಗಳ ಪೊಲೀಸರು ದಾಳಿ ನಡೆಸಲು ಸಹಕಾರ ನೀಡಿದರು.

ಪಿಸ್ತೂಲ್‌ಗಳು, ಮದ್ದುಗುಂಡುಗಳು, ಭಾರಿ ಸಂಖ್ಯೆಯಲ್ಲಿ ಡಿಜಿಟಲ್ ಸಾಧನಗಳು ಮತ್ತು ಹಲವಾರು ದಾಖಲೆಗಳನ್ನು ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ ಎಂದು ಎನ್‌ಐಎ ವಕ್ತಾರರು ತಿಳಿಸಿದ್ದಾರೆ.

ಗ್ಯಾಂಗ್‌ಸ್ಟರ್‌ಗಳಿಗೆ ಶಸ್ತ್ರಾಸ್ತ್ರ ಪೂರೈಕೆ, ಹಣಕಾಸು ನೆರವು, ಸರಕು ಸಾಗಣೆಯಲ್ಲಿ ನೆರವು ನೀಡುತ್ತಿರುವವರನ್ನು ಪತ್ತೆ ಮಾಡುವುದು ಬುಧವಾರ ನಡೆಸಿರುವ ದಾಳಿಯ ಮುಖ್ಯ ಗುರಿಯಾಗಿತ್ತು. ಪಾಕಿಸ್ತಾನ, ಅರಬ್ ಸಂಯುಕ್ತ ಸಂಸ್ಥಾನ, ಕೆನಡಾ, ಪೋರ್ಚುಗಲ್ ಮತ್ತಿತರ ದೇಶಗಳಲ್ಲಿ ನೆಲೆನಿಂತು ಭಾರತದಲ್ಲಿ ಭಯೋತ್ಪಾದನೆ ಕಾರ್ಯಾಚರಿಸುತ್ತಿರುವ ಹಾಗೂ ದೇಶಕ್ಕೆ ಮಾದಕವಸ್ತು ಸಾಗಣೆ ಮಾಡುತ್ತಿರುವ ಸಂಘಟನೆಗಳ ಜೊತೆ ಈ ಗ್ಯಾಂಗ್‌ಸ್ಟರ್‌ಗಳು ಕೈಜೋಡಿಸಿದ್ದಾರೆ.

ಪಾತಕಿಗಳಾದ ಲಾರೆನ್ಸ್ ಬಿಷ್ಣೋಯಿ, ಸುಖ ದುನೇಕೆ, ಹ್ಯಾರಿ ಮೌರ್, ನರೇಂದ್ರ, ಕಾಲಾ ಜತೇರಿ ಮತ್ತು ದೀಪಕ್ ಟಿನು ಅವರನ್ನೂ ಗುರಿಯಾಗಿಸಿಕೊಂಡು ದಾಳಿ ನಡೆದಿದೆ ಎಂದು ಅಧಿಕಾರಿ ಹೇಳಿದ್ದಾರೆ.

ಏಳನೇ ಬಾರಿಗೆ ದಾಳಿ: ಗ್ಯಾಂಗ್‌ಸ್ಟರ್‌ಗಳಿಗೆ ಸಂಬಂಧಿಸಿದಂತೆ 2022ರ ಆಗಸ್ಟ್‌ನಲ್ಲಿ ಐದು ಪ್ರಕರಣಗಳನ್ನು ಎನ್‌ಐಎ ದಾಖಲಿಸಿಕೊಂಡಿತ್ತು. ಆಗ ದಾಳಿ ನಡೆಸಲು ಆರಂಭಿಸಿತ್ತು. ಬಳಿಕ, ಈ ವರ್ಷ ಜುಲೈನಲ್ಲಿ ಮತ್ತೆ ಎರಡು ಪ್ರಕರಣ ದಾಖಲಿಸಿಕೊಂಡಿತ್ತು. ಈ ಸರಣಿಯಲ್ಲಿ ಇದು ಏಳನೇ ದಾಳಿಯಾಗಿದೆ.

ಹತ್ಯೆ ನಡೆಸಲು ಸಂಚು, ಖಾಲಿಸ್ತಾನಿ ಪರ ಸಂಘಟನೆಗಳಿಗೆ ಹಣಕಾಸು ನೆರವು, ಸುಲಿಗೆಯಂಥ ಕೃತ್ಯಗಳಲ್ಲಿ ಭಾಗಿಯಾಗಿರುವ ಗ್ಯಾಂಗ್‌ಸ್ಟರ್‌ಗಳಿಗೆ ಸಂಬಂಧಿಸಿದ ಪ್ರಕರಣಗಳು ಇವಾಗಿವೆ. ಮಹಾರಾಷ್ಟ್ರದ ಕಟ್ಟಡ ನಿರ್ಮಾಣಗಾರ ಸಂಜಯ್ ಬಿಯಾನಿ, ಗಣಿ ಉದ್ಯಮಿ ಮೆಹಲ್ ಸಿಂಗ್ ಮತ್ತು ಅಂತರರಾಷ್ಟ್ರೀಯ ಕಬಡ್ಡಿ ಆಟಗಾರ ಸಂದೀಪ್ ನಂಗಲ್ ಅಂಬಿಯ ಹತ್ಯೆಗೆ ನಡೆಸಿದ ಸಂಚುಗಳನ್ನು ಕೂಡ ಜೈಲುಗಳಲ್ಲಿಯೇ ರೂಪಿಸಿದ್ದು ಎಂದು ಅವರು ಹೇಳಿದ್ದಾರೆ.

ಉತ್ತರಾಖಂಡದ ಡೆಹ್ರಾಡೂನ್‌ನ ಮನೆಯೊಂದರ ಮೇಲೆ ಎನ್‌ಐಎ ಬುಧವಾರ ದಾಳಿ ನಡೆಸಿತು –ಪಿಟಿಐ ಚಿತ್ರ

ಪುರಾವೆ ಒದಗಿಸಿದರೆ ಪರಿಗಣನೆ

ನಿಜ್ಜರ್ ಹತ್ಯೆಯಲ್ಲಿ ಕೈವಾಡ– ಕೆನಡಾ ಆರೋಪಕ್ಕೆ ಜೈಶಂಕರ್ ಪ್ರತಿಕ್ರಿಯೆ

ನ್ಯೂಯಾರ್ಕ್ (ಪಿಟಿಐ): 'ನಿಜ್ಜರ್ ಹತ್ಯೆ ಕುರಿತು ನಿರ್ದಿಷ್ಟ ಮತ್ತು ನಂಬಲರ್ಹ ಮಾಹಿತಿ ಇದ್ದರೆ ತಿಳಿಸಿ. ಅದನ್ನು ಪರಿಗಣಿಸಲು ನಾವು ಮುಕ್ತರಾಗಿದ್ದೇವೆ ಎಂದು ಕೆನಡಾಕ್ಕೆ ಭಾರತ ಈಗಾಗಲೇ ತಿಳಿಸಿರುವುದಾಗಿ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಮಂಗಳವಾರ ಹೇಳಿದ್ದಾರೆ.

ಆದರೆ, ಈ ಕುರಿತು ಕೆನಡಾದಿಂದ ಯಾವುದೇ ಮಾಹಿತಿ ಬಂದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಬಳಿಕ, ನ್ಯೂಯಾರ್ಕ್‌ನ 'ವಿದೇಶಾಂಗ ವ್ಯವಹಾರಗಳ ಮಂಡಳಿ'ಯಲ್ಲಿ ನಡೆದ ಚರ್ಚೆ ವೇಳೆ ಅವರು ಹೀಗೆ ಹೇಳಿದರು.

ಹರದೀಪ್ ಸಿಂಗ್ ನಿಜ್ಜರ್ ಹತ್ಯೆಗೆ ಸಂಬಂಧಿಸಿ ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಅವರು ಭಾರತದ ವಿರುದ್ಧ ಮಾಡಿರುವ ಆರೋಪ ಕುರಿತು ಭಾರತದ ಅಮೆರಿಕ ರಾಯಭಾರಿ ಕೆನ್ನೆತ್ ಜಸ್ಟರ್ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಇಂತಹ ಕೃತ್ಯದಲ್ಲಿ ತೊಡಗುವುದು ಭಾರತದ ನೀತಿಯಲ್ಲ ಎಂದು ಕೂಡ ಭಾರತವು ಕೆನಡಾಗೆ ತಿಳಿಸಿದೆ' ಎಂದರು.

ಹತ್ಯೆ ಕುರಿತು ಮಾಹಿತಿ ನೀಡಿದರೆ ಕೆನಡಾಕ್ಕೆ ಭಾರತ ಸಹಕಾರ ನೀಡಲಿದೆಯೇ ಎಂಬ ಪ್ರಶ್ನೆಗೆ, ನಿರ್ದಿಷ್ಟ ಮಾಹಿತಿಯನ್ನು ಯಾರು ನೀಡಿದರೂ ಭಾರತ ಅದನ್ನು ಪರಿಗಣಿಸುತ್ತದೆ. ಅದು ಕೆನಡಾಕ್ಕೆ ಮಾತ್ರ ಸಂಬಂಧಿಸಿದ ವಿಷಯ ಆಗಬೇಕಾಗಿಲ್ಲ. ಯಾವುದೇ ವಿವಾದಿತ ಘಟನೆ ಕುರಿತು ಯಾರಾದರೂ ನಿರ್ದಿಷ್ಟ ಮಾಹಿತಿ ನೀಡಿದರೆ ಖಂಡಿತಾ ಪರಿಗಣಿಸಲಾಗುವುದು ಎಂದರು.

ಕೆನಡಾ ಸಂಸತ್ತಿನಲ್ಲಿ ಸನ್ಮಾನಿಸಿರುವ ಉಕ್ರೇನ್ ನಾಜಿ ಯಾರೊಸ್ಲಾವ್ ಹುಂಕಾ ಅವರನ್ನು ಕಾನೂನು ಕ್ರಮಕ್ಕೆ ಗುರಿಪಡಿಸಬೇಕು

ಡಿಮಿಟ್ರಿ ಪೆಸ್ಕೋವ್, ರಷ್ಯಾ ವಕ್ತಾರ

ಯುವಕರ ಸೆಳೆಯಲು ಯತ್ನ

ನವದೆಹಲಿ (ಪಿಟಿಐ): ಪಂಜಾಬ್‌ನ ಸಿಖ್ ಯುವಕರಿಗೆ ಕೆನಡಾದಲ್ಲಿ ಉದ್ಯೋಗ ದೊರಕಿಸುವ ಆಮಿಷ ತೋರಿ, ಅವರಿಗೆ ವೀಸಾ ಒದಗಿಸುವ ಕೆಲಸವನ್ನು ಖಾಲಿಸ್ತಾನ ಪರ ಹೋರಾಟಗಾರರು ಮಾಡುತ್ತಿದ್ದಾರೆ. ಹೀಗೆ ಉದ್ಯೋಗ ಅರಸಿ ಬರುವ ಯುವಕರನ್ನು ಕೆನಡಾದ ನೆಲದಿಂದಲೇ ಖಾಲಿಸ್ತಾನಿ ಪರ ಕಾರ್ಯಸೂಚಿ ಜಾರಿಗೊಳಿಸುವ ಉದ್ದೇಶಕ್ಕೆ ಬಳಸಿಕೊಳ್ಳುತ್ತಾರೆ ಎಂದು ಮೂಲಗಳು ತಿಳಿಸಿವೆ.

ಖಾಲಿಸ್ತಾನ ಪರ ಹೋರಾಟಗಾರರಾದ ಮೋನಿಂದರ್ ಸಿಂಗ್ ಬೌಲ್, ಪರ್ಮಿಂದರ್ ಪಂಗ್ಲಿ, ಭಗತ್ ಸಿಂಗ್ ಬ್ರಾರ್ ಅವರು ಸಿಖ್ ಯುವಕರನ್ನು ಖಾಲಿಸ್ತಾನ ಪರ ಹೋರಾಟದ ಕಾರ್ಯಸೂಚಿಗೆ ಬಳಸಿಕೊಳ್ಳುತ್ತಿದ್ದಾರೆ. ಆದರೆ, ಅವರು ನಿರೀಕ್ಷಿಸಿದಷ್ಟು ಬೆಂಬಲವು ಸಿಖ್ ಸಮುದಾಯದಿಂದ ವ್ಯಕ್ತವಾಗದ ಕಾರಣ ಕಾಲಾಳುಗಳ ಕೊರತೆ ಅನುಭವಿಸುತ್ತಿದ್ದಾರೆ.

ಪ್ಲಂಬರ್, ಟ್ರಕ್ ಚಾಲಕರು ಅಥವಾ ಖಾಲಿಸ್ತಾನಿ ಸಂಘಟನೆಗಳ ನಿಯಂತ್ರಣದಲ್ಲಿರುವ ಗುರುದ್ವಾರಗಳಲ್ಲಿ 'ಸೇವಾದಾರ', ಇನ್ನಿತರ ಕೆಲಸ ಕೊಡಿಸುವುದಾಗಿ ಯುವಕರನ್ನು ಕೆನಡಾಕ್ಕೆ ಕರೆ ತರಲಾಗುತ್ತದೆ ಎಂದು ತಿಳಿಸಿವೆ.

ಭಾರತಕ್ಕೆ ಉತ್ತರ ಆಫ್ರಿಕಾ ಚೀತಾ ತರಲು ಚಿಂತನೆ

ನವದೆಹಲಿ (ಪಿಟಿಐ): ನಮೀಬಿಯಾ ಮತ್ತು ದಕ್ಷಿಣ ಆಫ್ರಿಕಾದ ಚೀತಾಗಳು ಭಾರತದ ಹವಾಗುಣಕ್ಕೆ ಹೊಂದಿಕೊಳ್ಳುವಲ್ಲಿ ಸವಾಲು ಎದುರಿಸುತ್ತಿರುವುದರಿಂದ ಇಲ್ಲಿನ ಪರಿಸರಕ್ಕೆ ಸೂಕ್ತವಾಗಿ ಒಗ್ಗಿಕೊಳ್ಳಬಹುದಾದ ಉತ್ತರ ಆಫ್ರಿಕಾದ ಚೀತಾಗಳ ಆಮದಿಗೆ ಭಾರತ ಮುಂದಾಗುವ ಸಾಧ್ಯತೆ ಇದೆ ಎಂದು ಅರಣ್ಯ ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಭಾರತದಲ್ಲಿ ಬೇಸಿಗೆ ಮತ್ತು ಮಾನ್ಸೂನ್ ಇದ್ದಾಗ ನಮೀಬಿಯಾ ಮತ್ತು ದಕ್ಷಿಣ ಆಫ್ರಿಕಾದ ಚೀತಾಗಳು ಚಳಿಗಾಲದ ನಿರೀಕ್ಷೆಯಲ್ಲಿ ದೇಹದ ಮೇಲೆ ದಪ್ಪನೆಯ ಪದರವನ್ನು (ವಿಂಟರ್ ಕೋಟ್) ಅನಿರೀಕ್ಷಿತವಾಗಿ ಬೆಳೆಸಿಕೊಂಡು ಸೋಂಕಿಗೆ ತುತ್ತಾಗುತ್ತಿರುವುದು ಕಳವಳಕ್ಕೆ ಕಾರಣವಾಗಿದೆ. ಇದಕ್ಕೆ ಪರ್ಯಾಯವಾಗಿ ಉತ್ತರ ಆಫ್ರಿಕಾದಿಂದ ಚೀತಾಗಳ ಆಮದು ಮಾಡಿಕೊಳ್ಳುವುದನ್ನು ಭಾರತ ಪರಿಶೀಲಿಸುತ್ತಿದೆ ಎಂದು ಹೇಳಿದ್ದಾರೆ.

ಉತ್ತರ ಮತ್ತು ಈಶಾನ್ಯ ಆಫ್ರಿಕಾದ ಚೀತಾಗಳು ಭಾರತದ ಪರಿಸರಕ್ಕೆ ಹೆಚ್ಚು ಸೂಕ್ತವಾಗಿ ಹೊಂದಿಕೊಳ್ಳಬಹುದೆಂಬ ನಿಟ್ಟಿನಲ್ಲಿ ಚರ್ಚೆ ನಡೆಯುತ್ತಿದೆ. ಆದರೆ, ಆಫ್ರಿಕಾದ ಈ ಭಾಗದಲ್ಲಿರುವ ಚಿರತೆಗಳ ಸ್ಥಿತಿಯನ್ನು ಇನ್ನಷ್ಟೇ ನಾವು ಪರಿಶೀಲಿಸಬೇಕಾಗಿದೆ ಎಂದು ಅವರು ವಿವರಿಸಿದ್ದಾರೆ.

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ದಾವಣಗೆರೆ.

ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ದಾವಣಗೆರೆ.

44, ಎ ಬ್ಲಾಕ್, 2ನೇ ಮಹಡಿ, ಜಿಲ್ಲಾಡಳಿತ ಭವನ, ಕರೂರು ಕ್ರಾಸ್, ದಾವಣಗೆರೆ.
E-mail:domdvg1@gmail.com, ದೂ. ಸಂಖ್ಯೆ: 08192–250022

ಸಂ.ಜಿಅಸಂಕಇ/ದಾ/ವಿ/ವಿ.ಮೊ/ಆಹಾರ ಸರಬರಾಜು/ಸಿಆರ್–2/23–24 ದಿ:22.09.2023

ಇ–ಟೆಂಡರ್ ಪ್ರಕಟಣೆ

2023–24ನೇ ಶೈಕ್ಷಣಿಕ ಸಾಲಿನ ದಾವಣಗೆರೆ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ/ಉದ್ಯೋಗಸ್ಥ ಮಹಿಳಾ ವಸತಿನಿಲಯ/ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ/ಮೊರಾರ್ಜಿ ದೇಸಾಯಿ ವಸತಿಶಾಲೆ/ಕಾಲೇಜುಗಳಿಗೆ ಆಹಾರ ಪದಾರ್ಥಗಳು ಮತ್ತು ಇತರೆ ಸಾಮಾಗ್ರಿಗಳ ಪೂರೈಕೆಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. **ಟೆಂಡರ್ ವಿವರ:–** (1) ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ:– ರೂ. 3,10,00,000/– (2) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ:– 22.09.2023. (3) ಟೆಂಡರ್ ಪ್ರಕ್ರಿಯೆಯಲ್ಲಿ ಸಂಭಾವ್ಯ ಬಿಡ್ಡುದಾರರೊಂದಿಗೆ ಬಿಡ್ ಪೂರ್ವಭಾವಿ ಸಭೆ ನಡೆಯುವ ದಿನಾಂಕ:– 04.10.2023 ಬೆಳಿಗ್ಗೆ 11.00 ಗಂಟೆಗೆ (4) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ:–21.10.2023 ಸಮಯ 17.00 (5) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ:–26.10.2023 ಬೆಳಿಗ್ಗೆ: 11.00 ಗಂಟೆಗೆ, ಸ್ಥಳ:– ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಜಿಲ್ಲಾಡಳಿತ ಭವನ, ಕೊಠಡಿ ನಂ.44, ಕರೂರು ಕೈಗಾರಿಕಾ ಪ್ರದೇಶ ವಲಯ, ದಾವಣಗೆರೆ–06. (6) ಹಣಕಾಸಿನ ಲಕೋಟೆಯನ್ನು ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ:– ತಾಂತ್ರಿಕ ಬಿಡ್‌ನಲ್ಲಿ ಯಶಸ್ವಿಯಾದ ಸಂಸ್ಥೆಗಳಿಗೆ ನಂತರ ತಿಳಿಸಲಾಗುವುದು. ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಜಿಲ್ಲಾಡಳಿತ ಭವನ, ಕೊಠಡಿ ನಂ.44, ಕರೂರು ಕೈಗಾರಿಕಾ ಪ್ರದೇಶ ವಲಯ, ದಾವಣಗೆರೆ–06. (7) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ:– ರೂ. 4,65,000/– ಹೆಚ್ಚಿನ ಮಾಹಿತಿಗಾಗಿ ಈ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ವಾಸಾಇ/ಡಿವಿಜಿ/256 /ಕೆಎಸ್‌ಎಂಸಿಎ/2023–24

ಸಹಿ/–ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ದಾವಣಗೆರೆ.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ

4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು – 560 041
ದೂ: 080–26961928 ಫ್ಯಾಕ್ಸ್–080–26961929

No:RGU/Proc/Fire Wall/ 45/2023-24 ದಿನಾಂಕ: 26.09.2023

ಇ–ಟೆಂಡರ್ ಪ್ರಕಟಣೆ (ಆರ್‌ಎಫ್‌ಪಿ)

ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ Renewal/Upgrade of Licence for Sophos Xstream Protection with HA mode, with Extensive Local Service Support to RGUHSಗಾಗಿ ಟೆಂಡರನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಳನ್ನು ಲಗತ್ತಿಸಿರುವ ಷರತ್ತುಗಳ ಉಲ್ಲೇಖದಲ್ಲಿ ನೀಡಲಾಗಿದೆ.

ಟೆಂಡರ್ ದಾಖಲೆಗಳು ಡೌನ್‌ಲೋಡ್ ಮಾಡಲು ಲಭ್ಯತೆ	26/09/2023
ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ	11/10/2023 ಸಂಜೆ 5:30 ಗಂಟೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	13/10/2023 ಬೆಳಿಗ್ಗೆ 11:00 ಗಂಟೆಗೆ
ಆರ್ಥಿಕ ಬಿಡ್ ತೆರೆಯುವ ದಿನಾಂಕ	16/10/2023 ಬೆಳಿಗ್ಗೆ 11:00 ಗಂಟೆಗೆ
ಟೆಂಡರ್ ತೆರೆಯುವ ಸ್ಥಳ	ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು

ಹೆಚ್ಚಿನ ಮಾಹಿತಿಗಳನ್ನು https://kppp.karnataka.gov.in ನಿಂದ ಪಡೆದುಕೊಳ್ಳಬಹುದು.

ವಾ.ಸಾ.ಸಂ.ಇ/1465/2023–24

ಸಹಿ/– ಕುಲಸಚಿವರು

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ನಂ. 8, "ಸಂಪರ್ಕ ಸೌಧ", ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು–560010. ಟೆಲಿಫ್ಯಾಕ್ಸ್: 080–22024000
ಇ–ಮೇಲ್: cekrdcl@gmail.com ವೆಬ್‌ಸೈಟ್: http://www.krdcl.in

ಟೆಂಡರ್ ಪ್ರಕಟಣೆ

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು (ಕೆ.ಆರ್.ಡಿ.ಸಿ.ಎಲ್) ಈ ಕೆಳಕಂಡ ಕಾಮಗಾರಿಗಳಿಗೆ **ಸಮಾಲೋಚಕರ ಸೇವೆಯ ನೇಮಕಕ್ಕಾಗಿ ಗುಣಮಟ್ಟ ಮತ್ತು ವೆಚ್ಚ ಆಧಾರಿತ ಆಯ್ಕೆ (QCBS)** ಆಧಾರದ ಮೇಲೆ ಟೆಂಡರ್ ಆಹ್ವಾನಿಸಿದೆ.

I. ಟೆಂಡರ್ ಅಧಿಸೂಚನೆ ಸಂಖ್ಯೆ: ಕರಅನಿನಿ/ಐಎಫ್‌ಬಿ/2023–24/13, ದಿನಾಂಕ: 27.09.2023 – ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲ್ಲೂಕು, ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ತೂದೂರು–ಮುಂಡುವಳ್ಳಿ ಗ್ರಾಮಗಳ ನಡುವೆ ತುಂಗಾ ನದಿಗೆ ಹೊಸ ಸೇತುವೆ ನಿರ್ಮಾಣ ಮತ್ತು ಶಿವಮೊಗ್ಗ ಜಿಲ್ಲೆ, ಹೊಸನಗರ ತಾಲ್ಲೂಕು, ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಾರಣಗಿರಿ–ಬಪ್ಪನಮನೆ ಸಂಪರ್ಕ ರಸ್ತೆಗೆ ಶರಾವತಿ ಹಿನ್ನೀರಿಗೆ ಸೇತುವೆ ನಿರ್ಮಾಣ ಕಾಮಗಾರಿಗೆ **ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್, ಕನ್‌ಸ್ಟ್ರಕ್ಷನ್ ಸೂಪರ್‌ವಿಷನ್ ಮತ್ತು ಕ್ವಾಲಿಟಿ ಕಂಟ್ರೋಲ್ ಸೇವೆಗಳಿಗಾಗಿ ಸಮಾಲೋಚಕರನ್ನು ನೇಮಿಸುವುದು.**

II. ಟೆಂಡರ್ ಅಧಿಸೂಚನೆ ಸಂಖ್ಯೆ: ಕರಅನಿನಿ/ಐಎಫ್‌ಬಿ/2023–24/14, ದಿನಾಂಕ: 27.09.2023 – ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕಿನ ವರುಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಕಬಿನಿ ನದಿಗೆ ಅಡ್ಡಲಾಗಿ ಸರಗೂರು ಮತ್ತು ಹದಿನಾರು ಗ್ರಾಮವನ್ನು ಸೇರುವ ರಸ್ತೆಗೆ ಸೇತುವೆ ನಿರ್ಮಾಣ ಕಾಮಗಾರಿಗೆ **ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್, ಕನ್‌ಸ್ಟ್ರಕ್ಷನ್ ಸೂಪರ್‌ವಿಷನ್ ಮತ್ತು ಕ್ವಾಲಿಟಿ ಕಂಟ್ರೋಲ್ ಸೇವೆಗಳಿಗಾಗಿ ಸಮಾಲೋಚಕರನ್ನು ನೇಮಿಸುವುದು.**

ಪ್ರಸ್ತಾಪಿತ ಟೆಂಡರ್‌ಗಳಲ್ಲಿ ಭಾಗವಹಿಸಲು ಇಚ್ಛಿಸುವವರು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದ್ದು, https://kppp.karnataka.gov.in ವೆಬ್‌ಸೈಟ್ ಮೂಲಕ ಡಾಕ್ಯುಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ: **10.10.2023ರ 17.30 ಗಂಟೆ ವರೆಗೆ ಇರುತ್ತದೆ.** ತಾಂತ್ರಿಕ ಬಿಡ್‌ಗಳನ್ನು ದಿನಾಂಕ: **12.10.2023ರ 11.30 ಗಂಟೆಗೆ ತೆರೆಯಲಾಗುತ್ತದೆ.**

ಗಮನಿಸಿ : ಇನ್ನು ಮುಂದೆ ಪ್ರಕಟಣೆಯಲ್ಲಿನ ಯಾವುದೇ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾವಣೆಗಳಿದ್ದಲ್ಲಿ ಕೇವಲ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in / ಕರಅನಿನಿ ವೆಬ್‌ಸೈಟ್ http://www.krdcl.in ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.

ಸಹಿ/– ಮುಖ್ಯ ಅಭಿಯಂತರರು, ಕರಅನಿನಿ ಬೆಂಗಳೂರು

DIPR/CP/YC/1454/2023-24

ಶಾಲಾ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ, ಕೆ.ಆರ್ ವೃತ್ತ, ನೃಪತುಂಗ ರಸ್ತೆ, ಬೆಂಗಳೂರು–01 ದೂರವಾಣಿ: 080-22291847

ಸಂಖ್ಯೆ: ದೈ.ಶಿ/ಕ್ರೀಡಾ.ಸಮವಸ್ತ್ರ.ಟೆಂಡರ್/2023–24 ದಿನಾಂಕ: 27.09.2023

ಟೆಂಡರ್ ಪ್ರಕಟಣೆ

ಶಾಲಾ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು–01 ಇವರು ಕೆ.ಟಿ.ಪಿ.ಪಿ ಕಾಯ್ದೆ 1999ರ ಅನ್ವಯ ದ್ವಿ–ಲಕೋಟೆ ಪದ್ಧತಿಯಲ್ಲಿ (ತಾಂತ್ರಿಕ ಬಿಡ್‌ಗಳು) 2023–24ನೇ ಸಾಲಿಗೆ ಸ್ಪೋರ್ಟ್ಸ್ ಡ್ರೆಸ್ ಮೆಟೀರಿಯಲ್‌ನ ತಯಾರಕರು/ಡೀಲರ್/ ಪೂರೈಕೆದಾರರ ಸಂಸ್ಥೆಗಳಿಂದ ವಿದ್ಯಾರ್ಥಿಗಳಿಗೆ ಕ್ರೀಡಾ ಉಡುಪುಗಳ ಸರಬರಾಜಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ https://kppp.karnataka.gov.in ಮೂಲಕ ಟೆಂಡರ್ ಆಹ್ವಾನಿಸಿದೆ. ಈ ಟೆಂಡರ್‌ನಲ್ಲಿ ನೋಂದಾಯಿತ ಸಂಸ್ಥೆಗಳು ಭಾಗವಹಿಸಬಹುದು. ವಿವರವಾದ ಟೆಂಡರ್ ದಾಸ್ತಾವೇಜುಗಳನ್ನು ವೆಬ್‌ಸೈಟ್ https://kppp.karnataka.gov.in ಹಾಗೂ www.schooleducation.kar.nic.in ಮೂಲಕ ಡೌನ್‌ಲೋಡ್ ಮಾಡಿಕೊಂಡು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಲ್ಲಿಸಬೇಕು.

ಸಹಿ/- ಬಿ.ಎಸ್.ರಘುವೀರ್, ನಿರ್ದೇಶಕರು (ಮೈನಾರಿಟಿ), ಶಾಲಾ ಶಿಕ್ಷಣ ಇಲಾಖೆ

ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪೌರಾಡಳಿತ ನಿರ್ದೇಶನಾಲಯ

9ನೇ ಮಹಡಿ, ವಿಶ್ವೇಶ್ವರಯ್ಯ ಟವರ್, ಡಾ|| ಬಿ. ಆರ್ ಅಂಬೇಡ್ಕರ್ ವೀಧಿ, ಬೆಂಗಳೂರು–560001. ದೂರವಾಣಿ: 080–22867172/22866302
ಫ್ಯಾಕ್ಸ್: 080–22863576 /22861665
ಇ–ಮೇಲ್: sedmatech@gmail.com Website: www.municipaladmn.gov.in

ಸಂಖ್ಯೆ: 1078344 DMA/TECH/MISC 36/2023 ದಿನಾಂಕ: 26.09.2023

ಟೆಂಡರ್ ಪ್ರಕಟಣೆ

ಸ್ವಚ್ಛ ಭಾರತ್ ಮಿಷನ್–2.0 ಯೋಜನೆಯಡಿ ಅನುಷ್ಠಾನಗೊಳಿಸುವ ಪ್ಯಾಕೇಜ್ ಸಂಖ್ಯೆ: 5 ಮತ್ತು 6ರ 2ನೇ ಕರೆಯ ಘನತ್ಯಾಜ್ಯ ವಸ್ತು ವಿಲೇವಾರಿ ಕಾಮಗಾರಿಗಳಿಗೆ ಯೋಜನಾ ಸಮಾಲೋಚಕರನ್ನು ನೇಮಕಮಾಡಲು ಯೋಜನಾ ಸಮಾಲೋಚಕರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ್ನು LCS ಆಧಾರದ ಮೇಲೆ ಇ–ಪೋರ್ಟಲ್ ಮುಖಾಂತರ ಜಿಲ್ಲಾವಾರು ಪ್ರಚುರಪಡಿಸಲಾಗಿದ್ದು, ಇ–ಪೋರ್ಟಲ್‌ನಲ್ಲಿ ಸೂಚಿಸಿರುವ ದಿನಾಂಕದೊಳಗೆ ಅಪ್‌ಲೋಡ್ ಮಾಡಲು ಕೋರಲಾಗಿದೆ. ಯಾವುದೇ ಮಾಹಿತಿಯನ್ನು ಇ– ಪೋರ್ಟಲ್ ಮುಖಾಂತರವೇ ಪಡೆಯುವುದು.

ಸಹಿ/– ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು

DIPR/CP/1463/Zen/2023-24

ಮೈಸೂರು ಸಕ್ಕರೆ ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಕ್ಕರೆ ನಗರ, ಮಂಡ್ಯ–571 402.
MSCo/ADM/199/2023-24 26-09-2023
ಇ– ಮೇಲ್: gm_msco@yahoo.co.in (or) caomsco2020@gmail.com

ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ MSCO/2023-24/SE0002

ಮೈಸೂರು ಸಕ್ಕರೆ ಕಂಪನಿ ನಿಯಮಿತ, ಮಂಡ್ಯ ಇಲ್ಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸರಬರಾಜು ಮಾಡಲು ಟೆಂಡರ್ ಅನ್ನು ಆಹ್ವಾನಿಸಲಾಗಿದೆ.

ಸೂಚನೆ: (1) ಗುತ್ತಿಗೆದಾರರು ಮೈಸೂರು ಸಕ್ಕರೆ ಕಂಪನಿಯ, ಮಂಡ್ಯದ ಇಲ್ಲಿಗೆ ಹೊರಗುತ್ತಿಗೆ ಆಧಾರ ಮೇಲೆ ಅವಶ್ಯವಿರುವ ಮಾನವ ಸಂಪನ್ಮೂಲವನ್ನು ಪರಿಶೀಲಿಸಿಕೊಂಡು ನಂತರ ದರವನ್ನು ನಮೂದಿಸುವುದು. (2) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ನ್ನು **(https://Kppp.Karnataka.gov.in)** ತುಂಬುವುದು.
ಟೆಂಡರ್‌ನ ವೇಳಾ ಪಟ್ಟಿ ಈ ರೀತಿ ಇದೆ. (3) ಇ– ಪೋರ್ಟಲ್ ಟೆಂಡರ್‌ಗೆ ಸಂಬಂಧಿಸಿದಂತೆ ಯಾವುದೇ ಪ್ರಶ್ನೆಗಳಿದ್ದರೆ **ದಿನಾಂಕ:03.102023 ರ ಬೆಳಿಗ್ಗೆ 11.00 ಯೊಳಗೆ** ಸಲ್ಲಿಸತಕ್ಕದ್ದು. (4) ಇ– ಪೋರ್ಟಲ್ ಟೆಂಡರ್‌ನ್ನು ತುಂಬಲು ಪ್ರಾರಂಭದ ದಿನಾಂಕ: **27.09.2023 ಮತ್ತು ಕೊನೆಯ ದಿನಾಂಕ:04.10.2023 ರ ಸಂಜೆ 04.00 ಗಂಟೆ ಆಗಿರುತ್ತದೆ.** (5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **06.10.2023 ರ ಬೆಳ್ಳಿಗ್ಗೆ 10.30 ಕ್ಕೆ** ತೆರೆಯಲಾಗುತ್ತದೆ. (6) ಆರ್ಥಿಕ ಬಿಡ್ ತೆರೆಯುವ **ದಿನಾಂಕ:07.10.2023 ರ ಬೆಳ್ಳಿಗ್ಗೆ 10.30** ಕ್ಕೆ ತೆರೆಯಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ: 8762904161. ಟೆಂಡರ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರವರ ತೀರ್ಮಾನವೇ ಅಂತಿಮವಾಗಿರುತ್ತದೆ.

ದಿ:26.09.2023 ಸಹಿ/– ಪ್ರಧಾನ ವ್ಯವಸ್ಥಾಪಕರು.

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/221/2023–24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆ ವಿಭಾಗ (ಪಶ್ಚಿಮ)
ಜಂಟಿ ಆಯುಕ್ತರು (ಪಶ್ಚಿಮ) ಕಚೇರಿ ಆವರಣ,
2ನೇ ಮಹಡಿ, ಸಂಪಿಗೆ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020.
ಸಂಖ್ಯೆ:ಕಾಪಾಅ/ಯೋಪಶ್ಚಿಮ/ಟೆಂಡರ್/05/2023–24 ದಿನಾಂಕ: 27.09.2023

ಅಲ್ಪಾವಧಿ ಟೆಂಡರ್ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಪದ್ಧತಿ)

(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯೋಜನೆ ವಿಭಾಗ, ಪಶ್ಚಿಮ ವಲಯ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು, ಇವರು ಈ ಕೆಳಕಂಡ ಕಾಮಗಾರಿಗೆ ಅರ್ಹ ಟೆಂಡರುದಾರರಿಂದ ಟೆಂಡರನ್ನು ಆಹ್ವಾನಿಸಿದ್ದಾರೆ. (ಸ್ಟ್ಯಾಂಡರ್ಡ್ ಬಿಡ್ ದಾಖಲೆ ಕೆಡಬ್ಲ್ಯೂ–3)

ಕಾಮಗಾರಿಯ ಹೆಸರು	ಅಂದಾಜು ಮೊತ್ತ (₹.ಲಕ್ಷಗಳಲ್ಲಿ)	ಇಎಂಡಿ (₹.ಗಳಲ್ಲಿ)
ವಾರ್ಡ್ ಸಂಖ್ಯೆ–76, ಹರಿಶ್ಚಂದ್ರ ಘಾಟ್‌ನ ವಿದ್ಯುತ್ ಚಿತಾಗಾರದಲ್ಲಿ 120 ಅಡಿ ಎತ್ತರದ ಚಿಮಣಿಯನ್ನು ಸರಬರಾಜು ಮತ್ತು ಎರೆಕ್ಷನ್ ಮಾಡುವುದು. (4ನೇ ಕರೆ)	90.00	1,80,000/-

ಟೆಂಡರ್ ವೇಳಾಪಟ್ಟಿ

1.	ಟೆಂಡರ್ ದಾಖಲೆಗಳನ್ನು ಇ–ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡುವ ದಿನಾಂಕ	30.09.2023 ರಿಂದ
2.	ಬಿಡ್ ಪೂರ್ವಭಾವಿ ಸಭೆಯ ದಿನಾಂಕ:	03.10.20233ರ ಮಧ್ಯಾಹ್ನ 3:30 ಗಂಟೆಗೆ
3.	ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ	13.10.2023ರ ಸಂಜೆ 4:00 ಗಂಟೆಯವರೆಗೆ
4.	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	16.10.2023ರ ಸಂಜೆ 4:30 ಗಂಟೆಗೆ
5.	ಆರ್ಥಿಕ ಬಿಡ್ ತೆರೆಯುವ ದಿನಾಂಕ	18.10.2023ರ ಸಂಜೆ 4:30 ಗಂಟೆಗೆ (ಸಾಧ್ಯವಾದಲ್ಲಿ)

ಈ ಟೆಂಡರ್ ಪ್ರಕಟಣೆಯನ್ನು ಬೃ.ಬೆಂ.ಮ.ಪಾಲಿಕೆ ವೆಬ್‌ಸೈಟ್ www.bbmp.gov.in. ನಲ್ಲಿಯು ಕೂಡ ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನೆ ವಿಭಾಗ (ಪಶ್ಚಿಮ)

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಕಾಮಗಾರಿ ವಿಭಾಗ, ಬೆಂಗಳೂರು.

ಸಂಖ್ಯೆ: ಕರಾಸಾ/ಕಾನಿಅ/ಬೆಂ/ಕಿಅ/324/2023–24 ದಿನಾಂಕ: 27–09–2023

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ: 06/2023–24

ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿ ಕೆಲಸಕ್ಕೆ ಟೆಂಡರನ್ನು ಆಹ್ವಾನಿಸಲಾಗಿದ್ದು, ಆಸಕ್ತರು ಸದರಿ ಟೆಂಡರಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್: https://www.kppp.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ.

ಕೆಲಸದ ಹೆಸರು	ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಮುಂಗಡ ಠೇವಣಿ ಹಣ (ರೂ.ಗಳಲ್ಲಿ)
ಬೆಂಗಳೂರು ಕೇಂದ್ರೀಯ ವಿಭಾಗದ ಬಸ್ ಘಟಕ 06 ರಲ್ಲಿ ಕೊಳಚೆ ನೀರು ಸಂಸ್ಕರಣಾ ಘಟಕವನ್ನು ಸ್ಥಾಪಿಸುವುದು.	17.00	43,000.00

ಕಾಲಾವಧಿ (ಮಳೆಗಾಲ ಸೇರಿ) : 02 ತಿಂಗಳು

ಹೆಚ್ಚಿನ ವಿವರಗಳನ್ನು ವೆಬ್‌ಸೈಟ್: http://www.kppp.karnataka.gov.in ಗೆ ಲಾಗ್‌ಆನ್ ಮಾಡಿ ಪಡೆದುಕೊಳ್ಳಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕ.ರಾ.ರ.ಸಾ. ನಿಗಮ, ಕಾಮಗಾರಿ ವಿಭಾಗ, ಬೆಂಗಳೂರು.

ವಾಸಾಸಂಇ/ವಾ.ಪ್ರ/1467/ ಅಡ್ವಟೋರ್/2023–24

ಕೃಷಿ ವಿಶ್ವವಿದ್ಯಾಲಯ ಧಾರವಾಡ

ಕುಲಸಚಿವರ ಕಾರ್ಯಾಲಯ, ಕೃಷಿನಗರ, ಧಾರವಾಡ–5.

ಸಂಖ್ಯೆ:ಕುಸ:ನೇವಿ:ಜಾಹಿ–62:2023 ದಿನಾಂಕ: 26.9.2023.

ಸಂಕ್ಷಿಪ್ತ ಅಧಿಸೂಚನೆ

ವಿಷಯ: ಧಾರವಾಡ ಕೃವಿವಿಯಡಿಯ ಕೃಷಿ ವಿಜ್ಞಾನ ಕೇಂದ್ರಗಳಲ್ಲಿನ ವಿವಿಧ ಖಾಲಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಕುರಿತು.
ಉಲ್ಲೇಖ: ವಿಶ್ವವಿದ್ಯಾಲಯದ ಅಧಿಸೂಚನೆ ಸಂಖ್ಯೆ:ಕುಸ:ನೇವಿ:ಜಾಹಿ–62/2023, ದಿ.26.9.2023.

ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಖಾಲಿ ಇರುವ ಸಬ್ಜೆಕ್ಟ್ ಮ್ಯಾಟರ್ ಸ್ಪೇಶಾಲಿಷ್ಟ್ (ವಿವಿಧ ವಿಷಯಗಳಲ್ಲಿ), ಪ್ರೋಗ್ರಾಮ್ ಅಸಿಸ್ಟಂಟ್ (ಕಂಪ್ಯೂಟರ್), ಪ್ರೋಗ್ರಾಮ್ ಅಸಿಸ್ಟಂಟ್ (ಲ್ಯಾಬ್ ಟೆಕ್ನಿಶಿಯನ್), ಸ್ಟೆನೋಗ್ರಾಫರ್ (ಗ್ರೇಡ್–III) ಮತ್ತು ಡ್ರೈವರ್(ಟಿ–1) ಹುದ್ದೆಗಳಿಗೆ ನೇರನೇಮಕಾತಿಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಅಂತಿಮ ದಿನಾಂಕದಂದು ಅರ್ಹರಿರುವ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸದರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಯಸುವ ಅಭ್ಯರ್ಥಿಗಳು ಹುದ್ದೆಗಳಿಗೆ ನಿಗದಿತ ವೇತನಶ್ರೇಣಿ, ವಿದ್ಯಾರ್ಹತೆ, ಮೀಸಲಾತಿ, ಸೇವಾ ಷರತ್ತುಗಳು, ವಯೋಮಿತಿ, ಅರ್ಜಿ ಶುಲ್ಕ ಇತ್ಯಾದಿ ಮಾಹಿತಿಯೊಂದಿಗೆ ಸಂಬಂಧಿತ ಇತರೇ ಎಲ್ಲಾ ವಿವರಗಳನ್ನು ವಿವಿಯ ಅಧಿಕೃತ ಜಾಲತಾಣ (http://www.uasd.edu)ನಲ್ಲಿ ಪಡೆಯಬಹುದು. ಅರ್ಜಿ ಸಲ್ಲಿಸಲು ಅಂತಿಮ ದಿನಾಂಕವು 25.10.2023 ರಂದು 5.00 ಗಂಟೆಯೊಳಗಾಗಿ ಇರುತ್ತದೆ.

ಆದೇಶದ ಮೇರೆಗೆ, ಸಹಿ/– ಕುಲಸಚಿವರು

ವಾ.ಸಾ.ಇ/ಧಾರವಾಡ/320/2023–24/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ಬಳ್ಳಾರಿ

ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ.

ಸಂ:ಕಾನಿಅ/ಗ್ರಾಕುನೀ&ನೈ/ವಿಬ/ಜೆಇ–2/JJM/Ten.Nofi/2023–24/1103 ದಿನಾಂಕ:25.09.2023

ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ –2000 ರಂತೆ)

ಕರ್ನಾಟಕ ರಾಜ್ಯ ಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ ರವರು ಜಲ ಜೀವನ್ ಮಿಷನ್ ಯೋಜನೆಯಡಿ ಅನುಮೋದನೆಗೊಂಡ ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮುಖಾಂತರ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ದಿನಾಂಕ:**25.09.2023** ರಿಂದ **05.10.2023** ರಂದು ಸಂಜೆ 4.00 ರವರೆಗೆ ಸಲ್ಲಿಸಬಹುದಾಗಿರುತ್ತದೆ, ತಾಂತ್ರಿಕ ಬಿಡ್ ದಿನಾಂಕ:**06.10.2023** ರಂದು ಸಂಜೆ 5.00 ಗಂಟೆಗೆ ತೆರೆಯಲಾಗುವುದು ಹಾಗೂ ದಿನಾಂಕ: **29.09.2023** ರಂದು ಬೆಳಿಗ್ಗೆ 11.00 ಗಂಟೆಗೆ ಪೂರ್ವಭಾವಿ ಸಭೆಯನ್ನು, ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ, ಎಸ್.ಬಿ.ಐ ಬ್ಯಾಂಕ್‌ನ ಮೇಲ್ಮಹಡಿ ಕಟ್ಟಡ, ಸುಧಾ ಕ್ರಾಸ್, ಕಂಟೋನ್‌ಮೆಂಟ್, ಬಳ್ಳಾರಿ ಕಛೇರಿಯಲ್ಲಿ ಕರೆಯಲಾಗಿದೆ, ಕಾಮಗಾರಿಗಾಗಿ ಟೆಂಡರ್ ಸಲ್ಲಿಸಲು ನಿಗದಿ ಪಡಿಸಿದ ಅರ್ಹತೆ, ಷರತ್ತುಗಳು, ಕಾಮಗಾರಿ ವಿವರ ಇತ್ಯಾದಿಗಳನ್ನು ದಿ:**29.09.2023** ರ ಸಂಜೆ 4.00 ಗಂಟೆಯವರೆಗೆ ವಿಭಾಗ, ಕಛೇರಿಯಲ್ಲಿ ಅಥವಾ "ಇ–ಪ್ರೊಕ್ಯೂರಮೆಂಟ್" ಹೆಲ್ಪ್ ಡೆಸ್ಕನಿಂದ ಪಡೆಯಬಹುದು. ಇನ್ನೂ ಹೆಚ್ಚಿನ ಮಾಹಿತಿಗಾಗಿ ಈ ವಿಭಾಗ ಕಛೇರಿ ಸಮಯದಲ್ಲಿ ಭೇಟಿ ನೀಡಿ ಮಾಹಿತಿಯನ್ನು ಪಡೆಯ ಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಕುನೀ&ನೈ. ವಿಭಾಗ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/ 316 /ಕೆಎಸ್‌ಎಂಸಿಎ/2023–24

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ,

ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು.

ಸಂಖ್ಯೆ: ಕಾಇಂ/ಪಂರಾಇವಿ/ತುಮ/ಎಇ–1/ಟೆಂಡರ್/2023–24 ದಿನಾಂಕ: 25.09.2023

ಟೆಂಡರ್ ಪ್ರಕಟಣೆ ಸಂಖ್ಯೆ–03/2023–24

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ–ಏಕಲಕೋಟೆ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW–4, (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಹಾಗೂ ಕೆ.ಪಿ.ಪಿ.ಪಿ ಪೋರ್ಟಲ್ ಸಪೋರ್ಟ್‌ಗಾಗಿ 1/1, ಸನ್‌ಬೀಮ್ ಬಿಲ್ಡಿಂಗ್, ಈಗಲ್ ಸ್ಟ್ರೀಟ್, ಲಾಂಗ್‌ಫೋರ್ಡ್ ರೋಡ್, ಲಾಂಗ್‌ಫೋರ್ಡ್ ಟೌನ್, ಬೆಂಗಳೂರು–560 025, ದೂರವಾಣಿ: 080–22485867, 080–22485927 ರಲ್ಲಿ ನೊಂದಾಯಿಸಿದ ಅರ್ಹ (ಸಿವಿಲ್) ಗುತ್ತಿಗೆದಾರುಗಳಿಂದ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು ವಿಭಾಗ ವ್ಯಾಪ್ತಿಯ 2022–23ನೇ ಸಾಲಿನ CEPMIZ ಯೋಜನೆಯಡಿಯ ಕಾಮಗಾರಿಗಳಿಗೆ ಟೆಂಡರ್‌ನ್ನು ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ದ್ವಿ ಲಕೋಟೆ ಮೂಲಕ ಮಾತ್ರ ಆಹ್ವಾನಿಸಲಾಗಿದೆ.

ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಗುತ್ತಿಗೆದಾರರು ಕಾಮಗಾರಿಗಳ ಸಂಪೂರ್ಣ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ಮುಖಾಂತರ ದಿನಾಂಕ: 26.09.2023 ರಿಂದ 25.10.2023. ಸಂಜೆ 5.00 ಗಂಟೆವರೆಗೆ ಫಾರಂ ಫೀ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ (ಹಿಂತಿರುಗಿಸಲಾಗುವುದಿಲ್ಲ) ಸಲ್ಲಿಸಿ ನಿಗದಿತ ಇ.ಎಂ.ಡಿ. ಪಾವತಿಸಿ ಟೆಂಡರ್‌ಗಳನ್ನು ಪಡೆಯಬಹುದಾಗಿದೆ ಹಾಗೂ ಸಲ್ಲಿಸಬಹುದಾಗಿದೆ ಹಾಗೂ ಈ ಕೆಳ ಸಹಿದಾರರಿಂದ ಕಛೇರಿ ಕೆಲಸದ ಅವಧಿಯಲ್ಲಿ ಪಡೆಯ ಬಹುದಾಗಿರುತ್ತದೆ. (ದೂರವಾಣಿ ಸಂಖ್ಯೆ: 0816–2272620) ಟೆಂಡರ್‌ಗೆ ಯಾವುದೇ ಮಾರ್ಪಾಡು, ತಿದ್ದುಪಡಿಗಳ ಮಾಹಿತಿಗಳನ್ನು ಇ–ಪೋರ್ಟಲ್ ಮುಖಾಂತರವೇ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ. ವಿಭಾಗ, ತುಮಕೂರು.

DIPR/TUM/204/KSMCA/2023-24

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ನಂ. 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ಫೋನ್: 080–22268677/78/79 ಫ್ಯಾಕ್ಸ್: 080–22268667
ಇ–ಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ಸಂಖ್ಯೆ:ಕವಿನಿಆ–5/ಉನಿ(ಜಕಾತಿ)/2023–24/ಎಫ್.ಟಿ.ಎಸ್.1345/649 ದಿನಾಂಕ: 26–09–2023

ಪ್ರಕಟಣೆ

ವಿಷಯ: ಕೆ.ಇ.ಆರ್.ಸಿ (ಬಹು ವಾರ್ಷಿಕ ಪ್ರಸರಣೆ, ವಿತರಣೆ ಮತ್ತು ಸಗಟು ಮಾರಾಟ ಜಕಾತಿ) ವಿನಿಯಮಗಳು, 2023 ಇದರ ಕರಡನ್ನು ಹೊರಡಿಸಲಾಗಿದ್ದು ಆಸಕ್ತರಿಂದ ಅಭಿಪ್ರಾಯ / ವಿಮರ್ಶೆ / ಸಲಹೆ / ಆಕ್ಷೇಪಣೆಗಳನ್ನು ಆಹ್ವಾನಿಸಿರುವ ಬಗ್ಗೆ.

ಮೇಲಿನ ವಿಷಯದ ಬಗ್ಗೆ ಮಾಡಲಾದ ಕರಡು ನಿಯಮಗಳನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: **22–09–2023 ರಂದು** ಪ್ರಕಟಿಸಲಾಗಿದೆ. ಸದರಿ ಕರಡು ನಿಯಮಗಳು ಆಯೋಗದ ಅಂತರ್‌ಜಾಲ ತಾಣ: **https://kerc.karnataka.gov.in** ರಲ್ಲಿ ಲಭ್ಯವಿರುತ್ತದೆ.

ಆಸಕ್ತರು, ಸದರಿ ಕರಡು ನಿಯಮಗಳ ಬಗ್ಗೆ ಏನಾದರು ಅಭಿಪ್ರಾಯ / ವಿಮರ್ಶೆ / ಸಲಹೆ / ಆಕ್ಷೇಪಣೆಗಳು ಇದ್ದಲ್ಲಿ **ಕಾರ್ಯದರ್ಶಿ, ಕೆ.ಇ.ಆರ್.ಸಿ., ಸಂ.16, ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು – 560052** ಈ ವಿಳಾಸಕ್ಕೆ ರಾಜ್ಯ ಪತ್ರದಲ್ಲಿ ಪ್ರಕಟಿಸಲಾದ ದಿನಾಂಕದಿಂದ 15 (ಹದಿನೈದು) ದಿವಸಗಳೊಳಗಾಗಿ ಲಿಖಿತ ರೂಪದಲ್ಲಿ ಸಲ್ಲಿಸಬಹುದು.

ಸಹಿ/– ಕಾರ್ಯದರ್ಶಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

ವಾಸಾಸಂಇ/ವಾ.ಪ್ರ/1471/2023–24

ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
4ನೇ ಮಹಡಿ, ಟಿಟಿಎಂಸಿ "ಎ" ಬ್ಲಾಕ್, ಬಿಎಂಟಿಸಿ ಕಟ್ಟಡ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು–560027. ದೂ: 080–22483636/38/39, ಇಮೇಲ್: jmsg@ksbcl.com

ಸಂಖ್ಯೆ: KSBCL/MI/RFP/ERP/Tender-001/2023-24 ದಿನಾಂಕ: 27.09.2023

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತವು ಕೆಟಿಪಿಪಿ ಕಾಯಿದೆ 1999, ನಿಯಮಗಳು 2000ರಂತೆ **"ಕೆಎಸ್‌ಬಿಸಿಎಲ್‌ಗಾಗಿ ಇಆರ್‌ಪಿ ಅಪ್ಲಿಕೇಷನ್‌ಗಳ ಅಭಿವೃದ್ಧಿ ಮತ್ತು ಅನುಷ್ಠಾನಕ್ಕೆ ಪ್ರಸ್ತಾವನೆಗಾಗಿ ಮನವಿ"ಯನ್ನು ತಯಾರಿಸಲು ಮತ್ತು ಸಲ್ಲಿಸಲು** ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ಮೂಲಕ ಅರ್ಹ ಬಿಡ್‌ದಾರರಿಂದ ಆನ್‌ಲೈನ್ ಅಲ್ಪಾವಧಿ ಟೆಂಡರ್ ಆಹ್ವಾನಿಸಿದೆ. ವಿವರವಾದ ಮಾಹಿತಿಯನ್ನು ವೆಬ್‌ಸೈಟ್ https://kppp.karnataka.gov.in ನಿಂದ ಹಾಗೂ ನಿಗಮದ ವೆಬ್‌ಸೈಟ್ https://www.ksbcl.com ನಿಂದ what's new ಅಡಿಯಲ್ಲಿ ಡೌನ್‌ಲೋಡ್ ಮಾಡಬಹುದಾಗಿದೆ.

(1) ಟೆಂಡರ್ ಪ್ರಕಟಣೆ ದಿನಾಂಕ: **27.09.2023.** (2) ಆಫರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **09.10.2023, 17:30 ಗಂಟೆವರೆಗೆ.** (3) ಆಫರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **11.10.2023, 11:30 ಗಂಟೆಗೆ.**

ಇತರೆ ಸ್ಪಷ್ಟೀಕರಣಗಳಿಗೆ ಮೇಲೆ ತಿಳಿಸಲಾದ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಸಹಿ/– ಕಾರ್ಯಕಾರಿ ನಿರ್ದೇಶಕರು (ಎಫ್&ಎ)

DIPR/CP/YC/1448/2023-24

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ವಿಭಾಗ ಕಾರ್ಯಾಲಯ, ಹಬ್ಬುವಾಡಾ–ಕಾರವಾರ, ಉತ್ತರ ಕನ್ನಡ ಜಿಲ್ಲೆ –581301.

ದೂರವಾಣಿ: 08382–228935 ಫ್ಯಾಕ್ಸ್: 229735 E-mail: eerdwsd.uk@gmail.com
ನಂ.: ಕಾನಿಇಂ/ಗ್ರಾಕುನಿ&ನೈವಿ/ಕಾರವಾರ/ಪಿಬಿ–1/ಅಲ್ಪಾವಧಿ ಟೆಂಡರ/JJM/2023–24/1285 ದಿನಾಂಕ: 25.09.2023

ಇ–ಪ್ರೊಕ್ಯೂರಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಾರವಾರ ಇವರಿಂದ ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆಯಲ್ಲಿ/ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಹಾಗೂ ಇ–ಪ್ರೊಕ್ಯೂರಮೆಂಟ್ ಸಂಸ್ಥೆಯಿಂದ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಕುಡಿಯುವ ನೀರು ಸರಬರಾಜು ಯೋಜನೆಯಡಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ **Standard Tender Document KW-4** ನಂತೆ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ್ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ **kppp.karnataka.gov.in** ನಲ್ಲಿ ಪ್ರಕಟಿಸಿದಂತೆ. ಟೆಂಡರ್ ವಿವರಗಳು ಈ ಕೆಳಗಿನಂತಿದೆ.

ಕಾಮಗಾರಿ ಹೆಸರು: (1) INDENT2428

(1) Downloading of document through e-proc portal: **26.09.2023 to 03.10.2023 up to 16.30 Hrs.** 2) Time & date of Pre-Bid Conference: **30.09.2023 Time: 11.30 Hrs.** Venue: O/o. Executive Engineer, Rural Drinking Water & Sanitation Division, Po: Habbuwada, Karwar- Uttara Kannada Dist. (3) Last Date & Time for Receipt of Bids: **03.10.2023 Time: 16.30 Hrs.** (4) Date & Time of Technical Bid Opening: **04.10.2023 Time: 17:00 Hrs.** (5) Date & Time of Financial Bid Opening: Will be informed technically qualified bidders after approval of Technical Bid.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಾರವಾರ (ಉ. ಕ. ಜಿಲ್ಲೆ)

DIPR/ADK/KSMCA/234/23-24 dt.26.09.2023

ಕೃಷಿ ಇಲಾಖೆ

ಕೃಷಿ ಆಯುಕ್ತರ ಕಾರ್ಯಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು–01

ಸಂ.: AD/2023-24/SE0064 ದಿನಾಂಕ: 22.09.2023

ಅಲ್ಪಾವಧಿ Request for Proposal

ಕೃಷಿ ಇಲಾಖೆಯ ಸಹಾಯಧನ ಕಾರ್ಯಕ್ರಮಗಳಡಿ ಮತ್ತು ಕೃಷಿ ಯಂತ್ರಧಾರೆ ಕೇಂದ್ರಗಳಿಗೆ, ಕೃಷಿ ಯಂತ್ರೋಪಕರಣಗಳು ಮತ್ತು ಕೃಷಿ ಸಂಸ್ಕರಣಾ ಘಟಕಗಳನ್ನು ಸರಬರಾಜು ಮಾಡಲು ಕೃಷಿ ಯಂತ್ರೋಪಕರಣಗಳ ಮೂಲ ಉಪಕರಣ ತಯಾರಕರು / ತಯಾರಕರು / ಆಮದುದಾರರು / ಎಂ.ಓ.ಯು ಹೊಂದಿರುವ ಸಂಸ್ಥೆಗಳನ್ನು, ಎಂಪ್ಯಾನಲ್ ಮಾಡಲು Request for Proposal (RfP) ಯನ್ನು ಕರೆಯಲಾಗಿರುತ್ತದೆ. ಸದರಿ Request for Proposal ನಡಿ ಭಾಗವಹಿಸಲು ಇಚ್ಛಿಸುವ ಮೂಲ ಉಪಕರಣ ತಯಾರಕರು / ತಯಾರಕರು / ಆಮದುದಾರರು / ಎಂ.ಓ.ಯು ಹೊಂದಿರುವ ಸಂಸ್ಥೆಗಳು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ **(https://www.kppp.karnataka.gov.in)** ದಾಖಲಾತಿಗಳನ್ನು ಸಲ್ಲಿಸಬಹುದಾಗಿದೆ.

ಆಸಕ್ತ, ಕೃಷಿ ಯಂತ್ರೋಪಕರಣಗಳು ಮತ್ತು ಕೃಷಿ ಸಂಸ್ಕರಣಾ ಘಟಕಗಳ ಮೂಲ ಉಪಕರಣ ತಯಾರಕರು / ತಯಾರಕರು / ಆಮದುದಾರರು / ಎಂ.ಓ.ಯು ಹೊಂದಿರುವ ಸಂಸ್ಥೆಗಳು RfP ಡಾಕ್ಯೂಮೆಂಟನ್ನು **https://www.kppp.karnataka.gov.in** ನಿಂದ, ಇ–ಪ್ರೊಕ್ಯೂರ್‌ಮೆಂಟ್ ಪ್ರೊಸೆಸಿಂಗ್ ಶುಲ್ಕ ಮತ್ತು ಇಲಾಖೆಯು ನಿಗದಿಪಡಿಸಿರುವ ಇ.ಎಂ.ಡಿ ಮೊತ್ತವನ್ನು, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಪಾವತಿಸಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಖಾಲಿ ಅರ್ಜಿಗಳನ್ನು ದಿ. **27.09.2023** ರಿಂದ ದಿ. **11.10.2023** ವರೆಗೆ **https://www.kppp.karnataka.gov.in** ವೆಬ್‌ಸೈಟ್‌ನಿಂದ ಪಡೆಯಬಹುದು. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ **11.10.2023, ಅಪರಾಹ್ನ 4:30 ಗಂಟೆ.** ತಾಂತ್ರಿಕ ಬಿಡ್‌ಗಳನ್ನು ದಿನಾಂಕ **13.10.2023**ರಂದು **ಪೂರ್ವಾಹ್ನ 11:00 ಗಂಟೆಗೆ ಸಮೃದ್ಧಿ ಸಭಾಂಗಣ, ಕೃಷಿ ಆಯುಕ್ತರ ಕಾರ್ಯಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು–01** ಇಲ್ಲಿ ತೆರೆಯಲಾಗುವುದು.

RFP ಷರತ್ತುಗಳನ್ವಯ ತಾಂತ್ರಿಕ ಮತ್ತು ಆರ್ಥಿಕ ಪ್ರಸ್ತಾವನೆಗಳ ದಾಖಲಾತಿಗಳನ್ನು (Hard Copy / Physical deposition) ಉಪ ಕೃಷಿ ನಿರ್ದೇಶಕರ ಕಛೇರಿ, ಕೃಷಿ ಯಾಂತ್ರೀಕರಣ ಮತ್ತು ಸೂಕ್ಷ್ಮ ನೀರಾವರಿ ವಿಭಾಗ, ಕೃಷಿ ಆಯುಕ್ತರ ಕಾರ್ಯಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು–560001 ಇಲ್ಲಿ ದಿನಾಂಕ **12.10.2023 ಅಪರಾಹ್ನ 4:30**ರ ವರೆಗೆ ಸ್ವೀಕರಿಸಲಾಗುವುದು.

ಈ ಪ್ರಕ್ರಿಯೆಯಲ್ಲಿ ಭಾಗವಹಿಸಲು DSC Key / e-Token ಗಳನ್ನು ಪರಿಗಣಿಸಿರುವ ಏಜನ್ಸಿಗಳ ಮುಖಾಂತರ ಪಡೆಯಬಹುದಾಗಿದೆ. ಈ ಕುರಿತು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾಗದ ವಿಳಾಸ ಇ–ಪ್ರೊಕ್ಯೂರ್‌ಮೆಂಟ್ ಸೆಲ್, ಇ–ಆಡಳಿತ ಕೇಂದ್ರ, 4ನೇ ಮಹಡಿ, ಶ್ರೀ ಅರವಿಂದ ಭವನ, ಮಿಥಿಕ್ ಸೊಸೈಟಿ ಕಾಂಪೌಂಡ್, ನೃಪತುಂಗ ರಸ್ತೆ, ಬೆಂಗಳೂರು–560001 **(Helpdesk: 080-46010000 / 68948777).**

ಸೂಚನೆ: e-procurement ಸೇವಾ ಶುಲ್ಕವನ್ನು ವಾಪಸ್ಸು ಮಾಡಲಾಗುವುದಿಲ್ಲ ಹಾಗೂ RFP ದಾಖಲೆಗಳನ್ನು ಬೇರೆಯವರಿಗೆ ವರ್ಗಾಯಿಸಲು ಅವಕಾಶವಿರುವುದಿಲ್ಲ.

ಸಹಿ/–, ಕೃಷಿ ನಿರ್ದೇಶಕರು ಮತ್ತು ಟೆಂಡರ್ ಆಹ್ವಾನ ಅಧಿಕಾರಿಗಳು

ವಾಸಾಸಂಇ/ವಾಪ್ರ/ಎಲ್‌ಸಿ/1420/2023–24

ಸುಭಾಷಿತ

ಎಷ್ಟು ಕೊಡುತ್ತೀಯ ಎನ್ನುವುದು ಮುಖ್ಯವಲ್ಲ; ಕೊಡುವುದರಲ್ಲಿ ಎಷ್ಟು ಪ್ರೀತಿ ತುಂಬಿಸಿದ್ದೀಯ ಎನ್ನುವುದು ಮುಖ್ಯ.

–ಮದರ್ ತೆರೇಸಾ

ಪಠ್ಯ ಪರಿಷ್ಕರಣೆಯಷ್ಟೇ ಸಾಲದು ಸಮಗ್ರ ಶಿಕ್ಷಣನೀತಿಯೂ ಅಗತ್ಯ

ಆರಂಭದ ಹತ್ತನೇ ತರಗತಿಯವರೆಗಿನ 'ರಾಜ್ಯ ಪಠ್ಯಕ್ರಮ'ದ ಪಠ್ಯಪುಸ್ತಕಗಳ ಪರಿಷ್ಕರಣೆಗೆ ಸಂಬಂಧಿಸಿದಂತೆ ಸರ್ಕಾರ ಐದು ಸಮಿತಿಗಳನ್ನು ರಚಿಸಿದೆ. ಈ ಮೂಲಕ, ಚುನಾವಣಾ ಪ್ರಣಾಳಿಕೆ ಹಾಗೂ ಬಜೆಟ್‌ನಲ್ಲಿ ಪ್ರಸ್ತಾಪಿಸಿದ್ದ ಪ್ರಮುಖ ಅಂಶವೊಂದನ್ನು ಕಾರ್ಯರೂಪಕ್ಕೆ ತರುವ ದಿಸೆಯಲ್ಲಿ ಮಹತ್ವದ ಹೆಜ್ಜೆಯನ್ನಿಟ್ಟಿದೆ. ಕನ್ನಡ ಪ್ರಥಮ ಭಾಷೆ, ಕನ್ನಡ ದ್ವಿತೀಯ ಭಾಷೆ, ಕನ್ನಡ ತೃತೀಯ ಭಾಷೆ ಹಾಗೂ ಸಮಾಜ ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದಂತೆ ಸಮಿತಿಗಳನ್ನು ರಚಿಸಲಾಗಿದೆ. ಈ ಸಮಿತಿಗಳು ಮೂರು ತಿಂಗಳ ಅವಧಿಯಲ್ಲಿ ತಮ್ಮ ಶಿಫಾರಸುಗಳನ್ನು ಸಲ್ಲಿಸಲಿವೆ, ಅವುಗಳನ್ನು 2024–25ನೇ ಸಾಲಿನಿಂದ ಜಾರಿಗೆ ತರಲಾಗುವುದು ಎಂದು ಶಿಕ್ಷಣ ಇಲಾಖೆ ಹೇಳಿದೆ. ಬಿಜೆಪಿ ನೇತೃತ್ವದ ಈ ಹಿಂದಿನ ಸರ್ಕಾರದ ಅವಧಿಯಲ್ಲಿ ನಡೆದ ಪಠ್ಯಪುಸ್ತಕಗಳ ಪರಿಷ್ಕರಣೆಯು ವಿವಾದಕ್ಕೆ ಕಾರಣವಾಗಿತ್ತು. ಪರಿಷ್ಕೃತ ಪಠ್ಯಭಾಗಗಳ ವಿರುದ್ಧ ವಿವಿಧ ಸಮುದಾಯಗಳು ಧ್ವನಿಯೆತ್ತಿದ್ದವು. ಸಾಹಿತಿಗಳು, ಮಠಾಧೀಶರು ಹಾಗೂ ಶಿಕ್ಷಣ ತಜ್ಞರು ಕೂಡ ತಮ್ಮ ಭಿನ್ನಾಭಿಪ್ರಾಯಗಳನ್ನು ದಾಖಲಿಸಿದ್ದರು. ಪರಿಷ್ಕರಣೆ ನೆಪದಲ್ಲಿ ಅವೈಜ್ಞಾನಿಕ, ಅಸಾಂವಿಧಾನಿಕ ಹಾಗೂ ಇತಿಹಾಸದ ವಿಷಯಗಳ ಬಗ್ಗೆ ತಪ್ಪು ಅಭಿಪ್ರಾಯ ಮೂಡಿಸುವಂತಹ ಸಂಗತಿಗಳನ್ನು ಮಕ್ಕಳ ಪಠ್ಯಗಳಲ್ಲಿ ಸೇರಿಸಲಾಗಿದೆ ಎಂದು ಆರೋಪಿಸಿದ್ದ ಕಾಂಗ್ರೆಸ್, ತಾನು ಅಧಿಕಾರಕ್ಕೆ ಬಂದಲ್ಲಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವುದಾಗಿ ಹೇಳಿತ್ತು. ಆ ಮಾತಿಗೆ ತಕ್ಕಂತೆ ಅಧಿಕಾರಕ್ಕೆ ಬಂದ ನಂತರ, ಪಠ್ಯಪುಸ್ತಕಗಳಲ್ಲಿನ ಕೆಲವು ಭಾಗಗಳಿಗೆ ಬದಲಾವಣೆ ಸೂಚಿಸಿ ತಿದ್ದೋಲೆ ಹೊರಡಿಸಿತ್ತು. ಆ ಸಮಯದಲ್ಲೇ ಪರಿಷ್ಕರಣ ಸಮಿತಿ ರಚಿಸುವುದಾಗಿ ಹೇಳಿದ್ದ ಸರ್ಕಾರವು ವಿಳಂಬ ಮಾಡದೆ ತನ್ನ ಮಾತನ್ನು ಕಾರ್ಯರೂಪಕ್ಕೆ ತರುವ ಕೆಲಸ ಮಾಡಿದೆ. ಸಮಿತಿಗಳನ್ನು ನೇಮಿಸಿದ ಮಾತ್ರಕ್ಕೆ ಸರ್ಕಾರದ ಹೊಣೆಗಾರಿಕೆ ಪೂರ್ಣಗೊಳ್ಳುವುದಿಲ್ಲ. ಯಾವುದೇ ಹಸ್ತಕ್ಷೇಪ ಮಾಡದೆ, ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ಅವಕಾಶವನ್ನು ಸಮಿತಿಗಳಿಗೆ ಕಲ್ಪಿಸಿದಾಗಷ್ಟೇ ಗುಣಮಟ್ಟದ ಪಠ್ಯ ರೂಪುಗೊಳ್ಳಲು ಸಾಧ್ಯ. ಮಕ್ಕಳಲ್ಲಿ ವೈಜ್ಞಾನಿಕ ಹಾಗೂ ವೈಚಾರಿಕ ಮನೋಭಾವ ರೂಢಿಸಲು ಪೂರಕವಾಗುವ ಹಾಗೂ ಸಂವಿಧಾನದ ಆಶಯಗಳನ್ನು ಪ್ರತಿಫಲಿಸುವ ಪಠ್ಯಗಳು ರೂಪುಗೊಳ್ಳಬೇಕು. ಅದೇ ಕಾಲಕ್ಕೆ ಈ ಪಠ್ಯ ಗಳು ನಾಡು-ನುಡಿಗೆ ಸಂಬಂಧಿಸಿದಂತೆ ಮಕ್ಕಳಲ್ಲಿ ಪ್ರೀತಿ ಹುಟ್ಟಿಸುವಂತಿರಬೇಕು. ಪಠ್ಯಪುಸ್ತಕಗಳು ಆಡಳಿತ ಪಕ್ಷದ ಮರ್ಜಿಗೆ ತಕ್ಕಂತಿರದೆ, ಮಕ್ಕಳ ಮನೋವಿಕಾಸದ ಸಾಧ್ಯತೆಯನ್ನೇ ಮುಖ್ಯವಾಗಿಟ್ಟುಕೊಂಡಿರಬೇಕು. ಮಕ್ಕಳಲ್ಲಿ ಗೊಂದಲ ಮೂಡಿಸುವಂತಹ ಅಂಶಗಳು ಪಠ್ಯದಲ್ಲಿ ನುಸುಳದಂತೆ ನೋಡಿಕೊಳ್ಳುವುದು ಸಮಿತಿಯ ಕರ್ತವ್ಯ.

ಪಠ್ಯಪುಸ್ತಕಗಳು ಆಡಳಿತ ಪಕ್ಷದ ಮರ್ಜಿಗೆ ತಕ್ಕಂತಿರದೆ, ಮಕ್ಕಳ ಮನೋವಿಕಾಸದ ಸಾಧ್ಯತೆಯನ್ನೇ ಮುಖ್ಯವಾಗಿ ಇಟ್ಟುಕೊಂಡಿರಬೇಕು

ಪಠ್ಯಪುಸ್ತಕ ಪರಿಷ್ಕರಣ ಸಮಿತಿಯ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಒಂದಷ್ಟು ಗೊಂದಲಗಳೂ ಇವೆ. ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಒಪ್ಪಿಕೊಳ್ಳುವುದಿಲ್ಲ ಎಂದು ಮುಖ್ಯಮಂತ್ರಿ ಸೇರಿದಂತೆ ಸರ್ಕಾರದ ಹಲವು ಪ್ರತಿನಿಧಿಗಳು ಬೇರೆ ಬೇರೆ ಸಂದರ್ಭಗಳಲ್ಲಿ ಹೇಳಿದ್ದಾರೆ. ಆದರೆ, ಈ ನಿರಾಕರಣೆ ಈವರೆಗೆ ಮಾತಿನ ಮಟ್ಟದಲ್ಲೇ ಇದೆ. ಹಾಗಾಗಿ, 2005ರ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟಿನಲ್ಲಿ ಪಠ್ಯಪುಸ್ತಕಗಳ ಪರಿಷ್ಕರಣೆ ನಡೆಸುವುದು ಎಷ್ಟು ಸರಿ ಎನ್ನುವ ಜಿಜ್ಞಾಸೆಯಿದೆ. ಪ್ರಸಕ್ತ ಪಠ್ಯ ಪರಿಷ್ಕರಣೆಗೆ ಮೊದಲು ರಾಜ್ಯ ತನ್ನದೇ ಆದ ಶಿಕ್ಷಣ ನೀತಿಯೊಂದನ್ನು ರೂಪಿಸಬೇಕಿತ್ತು ಎನ್ನುವ ಅಭಿಪ್ರಾಯವಿದೆ. ಈಗ ಅಸ್ತಿತ್ವದಲ್ಲಿರುವ ಪಠ್ಯಕ್ರಮದ ಚೌಕಟ್ಟಿನಲ್ಲೇ ಪರಿಷ್ಕರಣೆ ನಡೆಯುತ್ತಿದ್ದು ಪಠ್ಯಕ್ರಮ ಪರಿಷ್ಕರಣೆ ಇಲ್ಲ ಎನ್ನುವ ಮಾತುಗಳೂ ಇವೆ. ಈ ಅಭಿಪ್ರಾಯಗಳಲ್ಲಿ ಹುರುಳಿಲ್ಲದಿಲ್ಲ. ಆದರೆ, ಹೊಸ ಶಿಕ್ಷಣ ನೀತಿ ರೂಪಿಸಲು ಸಂಬಂಧಿಸಿದ ಆಯೋಗ ಅಥವಾ ಸಮಿತಿ ನೇಮಕ, ಶಿಫಾರಸುಗಳು, ಪಠ್ಯಕ್ರಮ ಕರಡು, ಚರ್ಚೆ, ಇವೆಲ್ಲದರ ನಂತರ ಹೊಸ ಪಠ್ಯಕ್ರಮ ರಚನೆಯಾಗುವುದಕ್ಕೆ ಬಹಳಷ್ಟು ಸಮಯ ಹಿಡಿಯಲಿದೆ. ಅಲ್ಲಿಯವರೆಗೆ ಹಿಂದಿನ ಸರ್ಕಾರದ ಅವಧಿಯ ಪಠ್ಯಪುಸ್ತಕಗಳನ್ನೇ ಮುಂದುವರಿಸುವುದು ಸಮರ್ಥನೀಯವಲ್ಲ. ಹಾಗಾಗಿ, ಈಗಿನ ಪರಿಷ್ಕರಣೆ ತಾತ್ಕಾಲಿಕವಾದುದಾದರೂ ಅಗತ್ಯವಾದುದು ಎಂದು ಭಾವಿಸಬಹುದು. ಸದ್ಯದ ಪರಿಷ್ಕರಣಾ ಸಮಿತಿಗಳು ಸಮಗ್ರ ಪರಿಷ್ಕರಣೆಗೆ ಕೈಹಾಕದೆ, ಪಠ್ಯಗಳಲ್ಲಿನ ಸಾಮಾಜಿಕ, ಶೈಕ್ಷಣಿಕ ಹಾಗೂ ಪ್ರಾದೇಶಿಕ ಅಸಮತೋಲನವನ್ನು ಸರಿ ಮಾಡುವ ಕೆಲಸ ಮಾಡಲಿವೆ ಹಾಗೂ ವಿವಾದ ಉಂಟುಮಾಡುವ ವಿವರ ಗಳಿದ್ದರೆ ತಿದ್ದಲಿವೆ ಎಂದು ಹೇಳಲಾಗುತ್ತಿದೆ. ಪರಿಷ್ಕರಣೆಯ ಸ್ವರೂಪ ಯಾವುದೇ ಇರಲಿ, ಹೊಸ ವಿವಾದಗಳಿಗೆ ಆಸ್ಪದ ಕಲ್ಪಿಸದಂತೆ ಹಾಗೂ ವಿದ್ಯಾರ್ಥಿಗಳು ಮತ್ತು ಪೋಷಕರನ್ನು ಗೊಂದಲಕ್ಕೀಡು ಮಾಡದಂತೆ ಸಮಿತಿಗಳು ಕಾರ್ಯನಿರ್ವಹಿಸಬೇಕಾಗಿದೆ. ಶಿಕ್ಷಣನೀತಿಯನ್ನು ಬದಲಿಸುವ ಹುಮ್ಮಸ್ಸಿನಲ್ಲಿರುವ ಸರ್ಕಾರ, ತನ್ನ ಉತ್ಸಾಹವನ್ನು ಮಾತುಗಳಿಗೆ ಸೀಮಿತಗೊಳಿಸದೆ, ರಾಜ್ಯ ಶಿಕ್ಷಣ ನೀತಿಯನ್ನು ರೂಪಿಸುವುದಕ್ಕಾಗಿ ತಜ್ಞರ ಸಮಿತಿಯನ್ನೋ ಅಥವಾ ಆಯೋಗವನ್ನೋ ವಿಳಂಬವಿಲ್ಲದೆ ರಚಿಸಬೇಕಾಗಿದೆ. ಇದು ಮುಂದಕ್ಕೆ ಹೋದಷ್ಟೂ ಗೊಂದಲಗಳು ಹೆಚ್ಚುತ್ತಲೇ ಹೋಗುತ್ತವೆ.

ದಿನದ ಟ್ವೀಟ್

ಸಂಚಾರ ದಟ್ಟಣೆಗೆ ಪರಿಹಾರ...

ಪೊಲೀಸರು ಅಥವಾ ಬಸ್‌ಗಳಿಂದ ಸಂಚಾರ ದಟ್ಟಣೆ ಉಂಟಾಗುವುದಿಲ್ಲ ಎನ್ನುವುದನ್ನು ನೆನಪಿಸುವುದಕ್ಕೆ ಇಷ್ಟಪಡುತ್ತೇನೆ. ನಮ್ಮಿಂದ, ಅಂದರೆ ಜನರಿಂದಲೇ ಸಂಚಾರ ದಟ್ಟಣೆ ಉಂಟಾಗುತ್ತದೆ. ಬೆಂಗಳೂರಿನಲ್ಲಿರುವ 1 ಕೋಟಿ ವಾಹನಗಳಲ್ಲಿ ಬಿಎಂಟಿಸಿ ಬಸ್‌ಗಳ ಸಂಖ್ಯೆ 6,500 ಮಾತ್ರ. ಕಾರು ಬಳಕೆದಾರರಲ್ಲಿ ಶೇ 25ರಷ್ಟು ಮಂದಿ ಬಸ್‌ಗಳನ್ನು ಬಳಸಿದರೆ, ನಗರದಲ್ಲಿ ಸಂಚಾರ ದಟ್ಟಣೆಯ ಸಮಸ್ಯೆಯೇ ಇರುವುದಿಲ್ಲ.

ಶ್ರೀನಿವಾಸ ಅಲವಿಲ್ಲಿ

ಕಿಡಿನುಡಿ

ಸಂಪೂರ್ಣ ಜಾತ್ಯತೀತ ಎನ್ನುವ ಯಾವ ಪಕ್ಷವೂ ದೇಶದಲ್ಲಿ ಇಲ್ಲ. ಎಲ್ಲವೂ ಒಂದಲ್ಲ ಒಂದು ಸಮಯದಲ್ಲಿ ಬಿಜೆಪಿ ಸಂಪರ್ಕಕ್ಕೆ ಬಂದಿವೆ. ಮಮತಾ ಬ್ಯಾನರ್ಜಿ ಅವರನ್ನು ಸೋಲಿಸಲು ಎಡಪಕ್ಷಗಳ ಕೆಲ ನಾಯಕರು ಬಿಜೆಪಿಗೆ ಸಹಕರಿಸಿದ್ದು ಗುಟ್ಟಾಗಿ ಉಳಿದಿಲ್ಲ.



ಎಚ್.ಡಿ.ದೇವೇಗೌಡ, ಜೆಡಿಎಸ್ ವರಿಷ್ಠ

25 ವರ್ಷಗಳ ಹಿಂದೆ

ಸೋಮವಾರ, 28-9-1998

● **ಸಿಂಹಾಸನ ವೀಕ್ಷಣೆಗೆ ಒಡೆಯರ್ ಅಡ್ಡಿ, ಬಾರದ ಪ್ರವಾಸಿಗರು**

ಮೈಸೂರು, ಸೆ. 27– ಮೈಸೂರು ಅರಮನೆಯ ಚಿನ್ನದ ಅಂಬಾರಿ ವಿವಾದ ಮುಗಿದರೂ ರತ್ನಖಚಿತ ಸಿಂಹಾಸನ ವಿವಾದ ಬಗೆಹರಿದಂತೆ ಕಾಣುತ್ತಿಲ್ಲ.

ದಸರಾ ಸಂದರ್ಭದಲ್ಲಿ ಅರಮನೆಗೆ ಭೇಟಿ ನೀಡುವ ಪ್ರೇಕ್ಷಕರಿಗೆ ವಿಜಯನಗರ ಕಾಲದ ಮನಮೋಹಕ ಸಿಂಹಾಸನ ನೋಡುವ ಕುತೂಹಲ ಸಹಜವಾಗಿರುತ್ತದೆ. ಖಾಸಗಿ ದರ್ಬಾರಿಗಾಗಿ ರಾಜವಂಶಸ್ಥ ಶ್ರೀಕಂಠದತ್ತ ಒಡೆಯರ್ ಅವರ ವಶಕ್ಕೆ ಸರ್ಕಾರ ಸಿಂಹಾಸನವನ್ನು ಕೊಟ್ಟಿದೆ. ಆದರೆ ಒಡೆಯರ್ ಅವರು ಅದನ್ನು ಸಾರ್ವಜನಿಕ ವೀಕ್ಷಣೆಗೆ ತೆರೆದಿಟ್ಟಿಲ್ಲ. ಇದು ಪ್ರವಾಸಿಗರಿಗೆ ಬೇಸರ ತರಿಸಿದೆ. ಪ್ರವಾಸಿಗರು ಸಿಂಹಾಸನದ ಮೇಲಿನ ಛತ್ರಿ ನೋಡಿ ತೃಪ್ತಿಪಡಬೇಕಾಗಿ ಬಂದಿದೆ.

ಖಾಸಗಿ ದರ್ಬಾರಿನ ಸಂದರ್ಭದಲ್ಲಿ ಒಡೆಯರ್ ಸಿಂಹಾಸನವನ್ನು ಬಳಸಿಕೊಳ್ಳುತ್ತಾರೆ. ದರ್ಬಾರಿನ ನಂತರ ಅರಮನೆ ಸಿಬ್ಬಂದಿ ಸಿಂಹಾಸನದ ಮೇಲೆ ಬಿಳಿಬಟ್ಟೆ ಹೊದಿಸುತ್ತಾರೆ. ಒಡೆಯರ್ ಅವರ ಸೂಚನೆ ಮೇರೆಗೇ ಹೀಗೆ ಮಾಡಲಾಗುತ್ತಿದೆ ಎನ್ನಲಾಗಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 28-9-1973

● **ಮಾನವರಿರುವ ರಷ್ಯಾದ ಅಂತರಿಕ್ಷನೌಕೆ ಪ್ರಯೋಗ**

ಮಾಸ್ಕೋ, ಸೆ. 27– ಮಾನವರಿರುವ ಅಂತರಿಕ್ಷ ನೌಕೆ ಸೋಯುಜ್ ಅನ್ನು ರಷ್ಯಾ ಇಂದು ಹಾರಿಬಿಟ್ಟಿತೆಂದು ತಾಸ್ ವಾರ್ತಾ ಸಂಸ್ಥೆ ಪ್ರಕಟಿಸಿದೆ.

ನೌಕೆಯಲ್ಲಿ ಎಷ್ಟು ಜನರಿದ್ದಾರೆಂಬುದನ್ನು ಪ್ರಕಟಣೆ ತಿಳಿಸಲಿಲ್ಲವಾದರೂ, ಯಾತ್ರಿಗಳ ನಾಯಕತ್ವವನ್ನು ಕರ್ನಲ್ ವಾಸಿಲಿ ಲಾಜರೆವ್ ವಹಿಸಿದ್ದಾರೆಂದು ತಿಳಿಸಿತು.

● **ಕನಕಪುರದ ಬಳಿ ಕೆರೆ ಒಡೆದು ಇಬ್ಬರ ಜಲಸಮಾಧಿ**

ಕನಕಪುರ, ಸೆ. 27– ನಿನ್ನೆ ರಾತ್ರಿ ಬಿದ್ದ ಭಾರಿ ಮಳೆಯಿಂದಾಗಿ ಕನಕಪುರದ ಬಳಿಯ ಮಾವತ್ತೂರು ಕೆರೆಯ ಕಟ್ಟೆ ಇಂದು ಬೆಳಿಗ್ಗೆ ಒಡೆದು, ಇಬ್ಬರು ಮಹಿಳೆಯರು ಜಲಸಮಾಧಿ ಹೊಂದಿದರಲ್ಲದೆ, ಹಾರೋಹಳ್ಳಿ ಮತ್ತು ಕನಕಪುರದ ಸುತ್ತಮುತ್ತ ಲಕ್ಷಾಂತರ ರೂಪಾಯಿ ಬೆಲೆಯ ಬೆಳೆಗಳಿಗೆ ನಷ್ಟ ಉಂಟಾಗಿದೆಯೆಂದು ತಿಳಿದು ಬಂದಿದೆ.

ಕೆರೆ ಒಡೆದು ನೀರಿನ ಪ್ರವಾಹ, ಸಮೀಪದಲ್ಲಿದ್ದ ಗುಡಿಸಲೊಂದನ್ನು ಕೊಚ್ಚಿಕೊಂಡು ಹೋಯಿತೆಂದೂ, ಗುಡಿಸಲಲ್ಲಿ ಇದ್ದ 8 ಮಂದಿಯಲ್ಲಿ ಇತರರು ತೆಂಗಿನ ಮರವನ್ನು ಏರಿದ್ದರೆಂದೂ, ಸಣ್ಣಮ್ಮ (55) ಮತ್ತು ಅವರ ಪುತ್ರಿ ಲಕ್ಷಮ್ಮ (30) ಎಂಬ ಇಬ್ಬರು ಮಹಿಳೆಯರನ್ನು ನೀರಿನ ಪ್ರವಾಹ ಸೆಳೆದುಕೊಂಡು ಹೋಯಿತೆಂದೂ ವರದಿಯಾಗಿದೆ.

● **ಕಚ್ಚಾ ರೇಷ್ಮೆ ರಫ್ತು ನಿಷೇಧ**

ನವದೆಹಲಿ, ಸೆ. 27– ಈ ವರ್ಷದ ಅಂತ್ಯದವರೆಗೆ ಕಚ್ಚಾ ರೇಷ್ಮೆ ರಫ್ತನ್ನು ಸರ್ಕಾರ ನಿಷೇಧಿಸಿದೆ. ಕೈಮಗ್ಗದ ನೇಕಾರರು ಮತ್ತು ರಫ್ತು ಉತ್ಪಾದಕರು ಮಾಡಿಕೊಂಡ ಮನವಿಯ ನಂತರ ಸರ್ಕಾರವು ಈ ಕ್ರಮವನ್ನು ಕೈಗೊಂಡಿತು.

ಈ ಮೈತ್ರಿಯಿಂದಾಗಿ ಯಾವ ಪಕ್ಷಕ್ಕೆ ಹೆಚ್ಚಿನ ಲಾಭ ಆಗಬಹುದು?

ಬಿಜೆಪಿ–ಜೆಡಿಎಸ್ ಮೈತ್ರಿಯ ಲೆಕ್ಕಾಚಾರ

ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

ಬಿಜೆಪಿಯು ಕರ್ನಾಟಕದಲ್ಲಿ ಜೆಡಿಎಸ್ ಜೊತೆ ಮೈತ್ರಿ ಮಾಡಿಕೊಂಡಿದೆ. 2024ರ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ಸಿಗೆ ಎನ್‌ಡಿಎ ಎದುರಾಳಿ ಆಗಲಿದೆ. ಮೇಲ್ನೋಟಕ್ಕೆ ಹೇಳುವುದಾದರೆ, ಬಿಜೆಪಿ ಮತ್ತು ಜೆಡಿಎಸ್ ತಮ್ಮಿಬ್ಬರ ಎದುರಾಳಿ ಕಾಂಗ್ರೆಸ್ಸನ್ನು ಹಣಿಯಲು ಒಂದಾಗಿವೆ. ಆದರೆ, ಜೆಡಿಎಸ್ ಹಾಗೂ ಬಿಜೆಪಿ ಒಂದಾಗುವುದಕ್ಕೆ ಹಲವು ಅನಿವಾರ್ಯ ಕಾರಣಗಳು ಇವೆ ಎಂಬುದು ಆಳವಾದ ಅವಲೋಕನದಿಂದ ಗೊತ್ತಾಗುತ್ತದೆ.

ಆರಂಭದಲ್ಲಿ ಬಿಜೆಪಿ ಕುರಿತು ಗಮನ ಹರಿಸೋಣ. ಬಿಜೆಪಿಯು ಜೆಡಿಎಸ್ ಜೊತೆ ಹೊಂದಾಣಿಕೆ ಮಾಡಿಕೊಳ್ಳಲು ತೀರ್ಮಾನಿಸಿರುವುದು ನಾಲ್ಕು ವಿಷಯಗಳನ್ನು ಸ್ಪಷ್ಟಪಡಿಸುತ್ತದೆ. ಮೊದಲನೆಯದಾಗಿ, 2019ರಲ್ಲಿ ಇದ್ದಂತಹ ಬಲ ಈಗ ತನಗೆ ಇಲ್ಲ ಎಂಬುದನ್ನು ಬಿಜೆಪಿ ಒಪ್ಪಿಕೊಂಡಿದೆ. 2019ರಲ್ಲಿ ಬಿಜೆಪಿಯು ರಾಜ್ಯದ 28 ಲೋಕಸಭಾ ಸ್ಥಾನಗಳ ಪೈಕಿ 25ರಲ್ಲಿ ಗೆಲುವು ಕಂಡಿತ್ತು. ಈಗ ಪಕ್ಷವು ಗರಿಷ್ಠ 24 ಸ್ಥಾನಗಳಲ್ಲಿ (ಅಂದರೆ, ಜೆಡಿಎಸ್‌ಗೆ ನಾಲ್ಕು ಸ್ಥಾನಗಳನ್ನು ಬಿಟ್ಟುಕೊಡಲಾಗುತ್ತದೆ ಎಂಬ ಅಂದಾಜಿನೊಂದಿಗೆ) ಸ್ಪರ್ಧಿಸಬಹುದು. ಅಂದರೆ ಬಿಜೆಪಿಯು ಹಿಂದಿನ ಚುನಾವಣೆಯಲ್ಲಿ ಗೆದ್ದುಕೊಂಡಿದ್ದಕ್ಕಿಂತ ಕಡಿಮೆ ಸ್ಥಾನಗಳಲ್ಲಿ ಈ ಬಾರಿ ಸ್ಪರ್ಧಿಸಲಿದೆ. ಈಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿನ ಸೋಲು, ಬಿಜೆಪಿಗೆ ಪುನರ್ ಅವಲೋಕನಕ್ಕೆ ಕಾರಣವಾಗಿರಬಹುದು. ಈಗ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿರುವ ಕಾರಣ, ತನ್ನ ಹಿಂದಿನ ಸಾಧನೆಗೆ ಹತ್ತಿರವಾಗಲು ಬಿಜೆಪಿಯು ಎಲ್ಲ ಕಾಂಗ್ರೆಸ್ ವಿರೋಧಿ ಮತಗಳನ್ನು ಒಗ್ಗೂಡಿಸಬೇಕಾಗಿದೆ.

ದಕ್ಷಿಣ ಭಾರತದಲ್ಲಿ ತನ್ನ ಅಸ್ತಿತ್ವ ಬಲಪಡಿಸಿಕೊಳ್ಳುವ ಕೆಲಸವನ್ನು ಬಿಜೆಪಿಯು ಕರ್ನಾಟಕದಿಂದ ಆರಂಭಿಸಿತು. ತಮಿಳುನಾಡಿನಲ್ಲಿ ಬಿಜೆಪಿ ಹೊಂದಿದ್ದ ಮೈತ್ರಿಯೊಂದು ಮುರಿದುಬಿದ್ದಿದೆ. ಕರ್ನಾಟಕದಲ್ಲಿ ಒಳ್ಳೆಯ ಸಾಧನೆ ತೋರಬೇಕಿರುವುದು ಬಿಜೆಪಿ ಪಾಲಿಗೆ ಮಹತ್ವದ್ದು.

ಎರಡನೆಯ ವಿಷಯ, ಮೈತ್ರಿಕೂಟ ರಾಜಕಾರಣದಲ್ಲಿ ಬಿಜೆಪಿಯ ತಂತ್ರಗಾರಿಕೆಯು ದೀರ್ಘಾವಧಿಯಲ್ಲಿ ಎರಡು ಪಕ್ಷಗಳ ನಡುವೆ ಮಾತ್ರ ಹಣಾಹಣಿ ಇರುವಂತಹ ಪರಿಸ್ಥಿತಿಯನ್ನು ಸೃಷ್ಟಿಸುವತ್ತ ಗಮನ ಹರಿಸಿದೆ. ಆ ಎರಡು ಪಕ್ಷ–ಗುಂಪುಗಳ ಪೈಕಿ ಒಂದು ತಾನೇ ಆಗಿರಬೇಕು ಎಂಬುದು ಕೂಡ ಬಿಜೆಪಿಯ ತಂತ್ರಗಾರಿಕೆಯ ಭಾಗ. ಕರ್ನಾಟಕದಲ್ಲಿ ಎರಡು ಪಕ್ಷಗಳ ನಡುವಣ ಹಣಾಹಣಿಯನ್ನು (ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ) ಸೃಷ್ಟಿಸುವುದು ತನಗೆ ಅನುಕೂಲಕರ ಎಂದು ಬಿಜೆಪಿಗೆ ಅನ್ನಿಸಿದೆ. ಇದನ್ನು ಸಾಧ್ಯವಾಗಿಸುವ ಅತ್ಯುತ್ತಮ ಮಾರ್ಗವೆಂದರೆ, ಜೆಡಿಎಸ್ ಜೊತೆ ಹೊಂದಾಣಿಕೆ ಮಾಡಿಕೊಳ್ಳುವುದು, ಆ ಪಕ್ಷದ ಮತಗಳು ತನ್ನತ್ತ ವರ್ಗಾವಣೆ ಆಗುವಂತೆ ನೋಡಿಕೊಳ್ಳುವುದು ಹಾಗೂ ದೀರ್ಘಾವಧಿಯಲ್ಲಿ ಮೈತ್ರಿ ಪಕ್ಷವನ್ನು ದುರ್ಬಲಗೊಳಿಸುವುದು. ಇದು ಮುಂದೊಂದು ದಿನ ಕರ್ನಾಟಕದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಮಾತ್ರ ನೇರ ಹಣಾಹಣಿ ಇರುವಂತೆ ಸಂದರ್ಭವನ್ನು ಸೃಷ್ಟಿಸುತ್ತದೆ.

ಮೂರನೆಯ ವಿಚಾರ, ಕರ್ನಾಟಕದಲ್ಲಿ ಹೊಂದಾಣಿಕೆಯ ವಿಚಾರವಾಗಿ ಬಿಜೆಪಿ ಈ ಹಿಂದೆ ಅನುಸರಿಸಿದ ತಂತ್ರಗಳು ಕುತೂಹಲಕಾರಿ ಅಂಶಗಳನ್ನು ಹೇಳುತ್ತವೆ. 1998ರಲ್ಲಿ ಬಿಜೆಪಿಯು ರಾಮಕೃಷ್ಣ ಹೆಗಡೆ ಅವರ ಲೋಕಶಕ್ತಿ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಂಡಿತು. ಈ ಮೈತ್ರಿಯ ಉದ್ದೇಶವು ಆಡಳಿತಾರೂಢ ಜನತಾದಳದ ಮತಗಳನ್ನು ಸೆಳೆಯುವುದಾಗಿತ್ತು. ಅದರಲ್ಲೂ ಮುಖ್ಯವಾಗಿ, ಉತ್ತರ ಕರ್ನಾಟಕದಲ್ಲಿನ ಲಿಂಗಾಯತ ಸಮುದಾಯದ ಮತಗಳನ್ನು ಕ್ರೋಡೀಕರಿಸಲು ಬಿಜೆಪಿಯು ಈ ಅವಕಾಶವನ್ನು ಬಳಸಿಕೊಂಡಿತು. ಹೆಗಡೆ ಅವರು ಲಿಂಗಾಯತ ಸಮುದಾಯದ ನಡುವೆ ಗಣನೀಯ ಮಟ್ಟದಲ್ಲಿ ಸ್ವೀಕಾರಾರ್ಹ ನಾಯಕ ಆಗಿದ್ದರು. ಈ ಚುನಾವಣೆಯಲ್ಲಿ ಲಿಂಗಾಯತ ಸಮುದಾಯದ ಮತಗಳು ಗಣನೀಯ ಪ್ರಮಾಣದಲ್ಲಿ ವರ್ಗಾವಣೆ ಆದವು. 1998ರ ಚುನಾವಣೆಯಲ್ಲಿ ಬಿಜೆಪಿಯು ತನ್ನ ಅದುವರೆಗಿನ ಅತ್ಯುತ್ತಮ ಸಾಧನೆ (13 ಸ್ಥಾನಗಳು ಬಿಜೆಪಿಗೆ, ಮೈತ್ರಿಕೂಟಕ್ಕೆ ಒಟ್ಟು 16 ಸ್ಥಾನಗಳು) ತೋರಿತು. 1999ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಕಾರ್ಯಕರ್ತರಿಗೆ (ಅಂದರೆ ಪಕ್ಷದ ರಾಜ್ಯ ಘಟಕಕ್ಕೆ) ಜೆಡಿ(ಯು) ಜೊತೆ ಹೊಂದಾಣಿಕೆ ಮಾಡಿಕೊಳ್ಳುವ ಮನಸ್ಸು ಇರಲಿಲ್ಲ. ಆಗ ಜೆಡಿ(ಯು)ನಲ್ಲಿ ಲೋಕಶಕ್ತಿ ವಿಲೀನ ಆಗಿತ್ತು. ಹೀಗಿದ್ದರೂ ಪಕ್ಷದ ರಾಷ್ಟ್ರೀಯ ನಾಯಕತ್ವದ ಒತ್ತಾಯಕ್ಕೆ ಮಣಿದು ಮೈತ್ರಿ ಮುಂದುವರಿಯಿತು. ಆದರೆ ಆ ಚುನಾವಣೆಯಲ್ಲಿ ಬಿಜೆಪಿಯ ಸಂಖ್ಯಾಬಲ ಏಳಕ್ಕೆ ಇಳಿಯಿತು.

ಇದರ ನಡುವೆಯೂ, ಲಿಂಗಾಯತ ಸಮುದಾಯದ ಮತಗಳ ಕ್ರೋಡೀಕರಣ ಆಗಿತ್ತು. 2004ರಲ್ಲಿ ಬಿಜೆಪಿ ಲೋಕಸಭಾ ಚುನಾವಣೆಯನ್ನು ಏಕಾಂಗಿಯಾಗಿ ಎದುರಿಸಿ 18 ಸ್ಥಾನಗಳಲ್ಲಿ ಗೆಲುವು ಸಾಧಿಸಿತು. ಈ ಬಾರಿಯೂ ಇದೇ ಮಾದರಿಯ ಮತಗಳ ಧ್ರುವೀಕರಣದ ಆಲೋಚನೆಯನ್ನು ಬಿಜೆಪಿ ಹೊಂದಿದೆಯೇ? ಜೆಡಿಎಸ್ ಜೊತೆ ಹೊಂದಾಣಿಕೆ ಮಾಡಿಕೊಂಡು ಬಿಜೆಪಿಯು ಹಳೆ ಮೈಸೂರು ಪ್ರದೇಶದಲ್ಲಿ ಒಕ್ಕಲಿಗ ಸಮುದಾಯದ ಮತಗಳನ್ನು ತನ್ನತ್ತ ಸೆಳೆದುಕೊಳ್ಳುವ ಆಸೆಯಲ್ಲಿ ಇದೆಯೇ? ಈ ಪ್ರದೇಶದಲ್ಲಿ ಬಿಜೆಪಿಯು ದುರ್ಬಲವಾಗಿಯೇ ಇದೆ. ಒಕ್ಕಲಿಗ ಸಮುದಾಯದ ಮತಗಳನ್ನು ಜೆಡಿಎಸ್‌ನಿಂದ ತನ್ನ ಕಡೆಗೆ ಸೆಳೆದು, ಭವಿಷ್ಯದ ಚುನಾವಣೆಗಳಲ್ಲಿ ಕಾಂಗ್ರೆಸ್ ಜೊತೆ ನೇರ ಹಣಾಹಣಿಗೆ ಇಳಿದಾಗ ಆ ಮತಗಳ ಕ್ರೋಡೀಕರಣವನ್ನು ಬಳಸಿಕೊಳ್ಳಬಹುದು ಎಂಬ ಆಲೋಚನೆ ಬಿಜೆಪಿಗೆ ಇರಬಹುದು.

ನಾಲ್ಕನೆಯ ವಿಚಾರ, ರಾಜ್ಯದಲ್ಲಿ ಮೈತ್ರಿಗೆ ಮುಂದಾಗಿರುವುದು ರಾಜ್ಯ ಬಿಜೆಪಿ ಘಟಕದ ಬಗ್ಗೆ ಕೇಂದ್ರ ನಾಯಕತ್ವಕ್ಕೆ ಇರುವ ಅವಿಶ್ವಾಸವನ್ನು ಸ್ಪಷ್ಟವಾಗಿ ತೋರಿಸುತ್ತಿದೆ. ಬಿ.ಎಸ್. ಯಡಿಯೂರಪ್ಪ ಅವರೊಬ್ಬರನ್ನು ಹೊರತುಪಡಿಸಿದರೆ ರಾಜ್ಯ ಘಟಕದ ಬೇರೆ ಯಾವ ಪ್ರಮುಖರಿಗೂ ಮೈತ್ರಿಯ ಸೂಚನೆ ಇದ್ದಂತಿರಲಿಲ್ಲ. ಅಲ್ಲದೆ, ಈ ಮೈತ್ರಿಯ ಬಗ್ಗೆ ಅವರು ಹೆಚ್ಚು ಉತ್ಸುಕರಾಗಿದ್ದಂತೆಯೂ ಕಾಣಲಿಲ್ಲ. ವಿರೋಧ ಪಕ್ಷದ ನಾಯಕ ಯಾರು ಎಂಬುದನ್ನು ಇನ್ನೂ ತೀರ್ಮಾನಿಸದೆ ಇರುವುದು ಹಾಗೂ ಪಕ್ಷದ ರಾಜ್ಯ ಘಟಕಕ್ಕೆ ಹೊಸ ಅಧ್ಯಕ್ಷರ ಘೋಷಣೆ ಆಗದಿರುವುದು ಕೇಂದ್ರ ನಾಯಕತ್ವ ಹೊಂದಿರುವ ಅವಿಶ್ವಾಸವನ್ನು ತೋರಿಸುತ್ತಿದೆ.

ಜೆಡಿಎಸ್ ಈ ಮೈತ್ರಿಗೆ ಹತಾಶ ಮನಃಸ್ಥಿತಿಯಿಂದ ಒಪ್ಪಿಕೊಂಡಿರುವಂತಿದೆ. 1996ರ ನಂತರದಲ್ಲಿ ಪಕ್ಷವು ಲೋಕಸಭಾ ಚುನಾವಣೆ ವಿಚಾರದಲ್ಲಿ ಹೆಚ್ಚು ಆಸಕ್ತಿ ತೋರಿಸುತ್ತಿಲ್ಲ. 2019ರಲ್ಲಿ ಕಾಂಗ್ರೆಸ್ ಜೊತೆ ಮೈತ್ರಿ ಮಾಡಿಕೊಂಡಿದ್ದ ಜೆಡಿಎಸ್, ತನಗೆ ಸಿಕ್ಕಿದ್ದ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಹುಡುಕುವುದಕ್ಕೇ ಕಷ್ಟಪಟ್ಟಿತ್ತು.

ಜೆಡಿಎಸ್ ಪಕ್ಷವು ಎರಡು ವಿಚಾರಗಳ ಬಗ್ಗೆ ಹೆಚ್ಚು ಜಾಗರೂಕವಾಗಿ ಇರಬೇಕು. ಮೊದಲನೆಯದು, ಮತಗಳ ವರ್ಗಾವಣೆಗೆ ಸಂಬಂಧಿಸಿದ ವಿಚಾರ. ನಾಯಕರ ಮಟ್ಟದಲ್ಲಿ ಮೈತ್ರಿ ಆಗಿರುವಾಗ, ಕಾರ್ಯಕರ್ತರು ಹಾಗೂ ಬೆಂಬಲಿಗರ ಮಟ್ಟದಲ್ಲಿ ಅದು ಮತಗಳ ವರ್ಗಾವಣೆಯಾಗಿ ಪರಿಣಮಿಸಲಿದೆಯೇ? ಲೋಕನೀತಿ–ಸಿಎಸ್‌ಡಿಎಸ್ ನಡೆಸಿದ ಚುನಾವಣೋತ್ತರ ಸಮೀಕ್ಷೆಯ ಪ್ರಕಾರ, ಜೆಡಿ(ಯು) 1999ರಲ್ಲಿ ಶೇ 50ರಷ್ಟು ಮತಗಳನ್ನು ಮಾತ್ರ ಬಿಜೆಪಿ ಕಡೆ ವರ್ಗಾವಣೆ ಆಗುವಂತೆ ಮಾಡಿತ್ತು ಹಾಗೂ ಇನ್ನುಳಿದ ಶೇ 50ರಷ್ಟು ಮತಗಳು ಕಾಂಗ್ರೆಸ್ ಕಡೆ ವರ್ಗಾವಣೆಯಾಗಿದ್ದವು. ಬಿಜೆಪಿಯು ಕಾರ್ಯಕರ್ತರನ್ನು ಆಧರಿಸಿದ ಪಕ್ಷವಾದ ಕಾರಣ, ಜೆಡಿ(ಯು) ಸ್ಪರ್ಧಿಸಿದ್ದ ಕ್ಷೇತ್ರಗಳಲ್ಲಿ ಮತಗಳ ವರ್ಗಾವಣೆ ಬಹಳ ಕಡಿಮೆ ಇತ್ತು. ಜೆಡಿಎಸ್ ಪಾಲಿಗೂ ಇದೇ ಆಗಬಹುದೇ?

ಎರಡನೆಯ ವಿಚಾರ, ಈ ಮೈತ್ರಿಯ ಮೂಲಕ ಜೆಡಿಎಸ್ ಪಕ್ಷವು ಬಿಜೆಪಿಗೆ ಹಳೆ ಮೈಸೂರು ಪ್ರದೇಶದಲ್ಲಿ ಪ್ರವೇಶ ಪಡೆಯಲು, ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಅವಕಾಶ ಮಾಡಿಕೊಡಲಿದೆಯೇ? ಈ ಮೈತ್ರಿಯಿಂದಾಗಿ ಹೆಚ್ಚಿನ ಲಾಭ ಆಗುವುದು ಬಿಜೆಪಿಗೆ ಎಂಬುದು ಸ್ಪಷ್ಟ. ಈ ಮೈತ್ರಿಕೂಟದ ರಚನೆಯು ಕಾಂಗ್ರೆಸ್ಸಿಗೆ ಗುರಿ ಮುಟ್ಟುವ ಕೆಲಸವನ್ನು ಕಷ್ಟವಾಗಿಸಲಿದೆ. ಈ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಒಳ್ಳೆಯ ಸಾಧನೆ ತೋರಬೇಕಿರುವುದು ರಾಜ್ಯ ಸರ್ಕಾರದ ಭವಿಷ್ಯದ ದೃಷ್ಟಿಯಿಂದ ಮಹತ್ವದ್ದು. ಪಕ್ಷವು ತಳಮಟ್ಟದಲ್ಲಿ ಪ್ರದರ್ಶಿಸುವ ಒಗ್ಗಟ್ಟಿನ ಸ್ವರೂಪದ ಮೇಲೆ ಹಲವು ಸಂಗತಿಗಳು ತೀರ್ಮಾನವಾಗಲಿವೆ. ಅಲ್ಲದೆ, ರಾಜ್ಯ ಸರ್ಕಾರ ಜಾರಿಗೆ ತಂದಿರುವ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನ ಹಾಗೂ ಅವುಗಳ ಯಶಸ್ಸು ಖಂಡಿತವಾಗಿಯೂ ಪರಿಣಾಮ ಉಂಟುಮಾಡಲಿದೆ. ಚುನಾವಣಾಪೂರ್ವ ಹಣಾಹಣಿ ಕೂಡ ಚುನಾವಣಾ ಹಣಾಹಣಿಯಷ್ಟೇ ಕುತೂಹಲಕಾರಿ ಆಗಿರಲಿದೆ.

ಚುರುಮುರಿ

ಸ್ಕೂಲೋ, ಬಾರೋ?

• ಗುರು ಪಿ.ಎಸ್.

'ನಡೆದರೆ ವಾಕಿಂಗು ಸ್ಟೆಡಿ ಆಗಿರಬೇಕು, ಕುಡಿದರೆ ವಾಸನೆ ಕಡಿಮೆ ಬರಬೇಕು...' ಯೋಗರಾಜ್ ಭಟ್ರು ಬರೆದಿರೋ ಹಾಡನ್ನ ಹೇಳ್ಕೊಂಡ್ ಮನೆಯೊಳಗೆ ಹೋದೆ.

'ಮತ್ತೆ ಕುಡ್ಕೊಂಡು ಬಂದ್ರೇನ್ರೀ.. ನನ್ ಮರ್ಯಾದೆ ತೆಗೆಯೋಕೆ ಇದೀರಿ' ಹೆಂಡ್ತಿ ಬೈಯತೊಡಗಿದಳು.

'ಟೀಚರ್ ಆದ ನಿನಗೆ ಸೊಸೈಟೀಲಿ ಎಷ್ಟ್ ರೆಸ್ಪೆಕ್ಟ್ ಇದೆಯೋ, ನನಗೂ ಅಷ್ಟೇ ಗೌರವ ಇದೆ ಗೊತ್ತಾ...' ತೂರಾಡುತ್ತಲೇ ಹೇಳಿದೆ.

'ಪಾಠ ಹೇಳೋರಿಗಿಂತ, ಕುಡಿಯೋರಿಗೇ ಮರ್ಯಾದೆ ಜಾಸ್ತಿ ಇರುತ್ತಾ?' ಸಿಟ್ಟಲ್ಲೇ ಕೇಳಿದಳು ಹೆಂಡ್ತಿ.

'ಹೂಂ ಮತ್ತೆ. ಉದಾಹರಣೆ ಸಮೇತ ಹೇಳ್ತೀನಿ ಕೇಳು. ನೀನು ಪ್ರೈವೇಟ್ ಸ್ಕೂಲ್ ಟೀಚರ್ ಅಲ್ವಾ? ನಿಮ್ ಸ್ಕೂಲ್‌ನಲ್ಲಿ ಎಷ್ಟು ಜನ ಸ್ಟೂಡೆಂಟ್ಸ್‌ಗೆ ಒಬ್ಬರು ಟೀಚರ್ ಇದೀರಿ?'

'80 ಜನ ವಿದ್ಯಾರ್ಥಿಗಳಿಗೆ ಒಬ್ಬರಿದೀವಿ'.

'ಯಾವತ್ತಾದರೂ ಸರ್ಕಾರ 1:30 ಅನುಪಾತದಂತೆ ಶಿಕ್ಷಕರನ್ನ ನೇಮಕ ಮಾಡಿದಿಯಾ?'... 'ಇಲ್ಲವೇ ಇಲ್ಲ'.

'ಈಗೊಂದು ಕೆಲಸ ಮಾಡೋಣ. ನಾನು ಬಾರ್ ಓಪನ್ ಮಾಡೋಕೆ ಲೈಸೆನ್ಸ್‌ಗೆ ಅಪ್ಲೈ ಮಾಡ್ತೀನಿ. ನೀನು ಸ್ಕೂಲ್ ಓಪನ್ ಮಾಡೋಕೆ ಪರ್ಮಿಷನ್‌ಗಾಗಿ ಅರ್ಜಿ ಹಾಕು ನೋಡೋಣ' ಎಂದು ಸವಾಲು ಹಾಕಿದೆ.

15 ದಿನದಲ್ಲೇ ಬಾರ್‌ಗೆ ಲೈಸೆನ್ಸ್ ಸಿಕ್ಕಿತು. ಅದೂ ನಮ್ಮೂರಲ್ಲಿರೋ ಜನಸಂಖ್ಯೆಗೆ ಅನುಗುಣವಾಗಿ! ಆದರೆ, ಹೆಂಡ್ತಿಯ ಅರ್ಜಿ ಇನ್ನೂ ಪರಿಗಣನೆಗೂ ಹೋಗಿರಲಿಲ್ಲ.

'ಏನ್ರೀ ಇದು, ಕಾವೇರಿ ನೀರಿಗಿಂತಲೂ ಸುಲಭವಾಗಿ ನಿಮಗೆ ಎಣ್ಣೆ ಸಿಗೋ ಹಾಗಾಯ್ತಲ್ಲ' ಅಚ್ಚರಿಯಿಂದ ಹೇಳಿದಳು ಹೆಂಡ್ತಿ.

'ಅದಕ್ಕೇ ಟೀಚರಮ್ಮ ಹೇಳೋದು, ಈಗ ಅತ್ಯಂತ ಪ್ರಭಾವಶಾಲಿಗಳೆಂದರೆ ಎಣ್ಣೆ ಹಾಕೋರೇ ಅಂತ' ನಕ್ಕೆ.

ಭಟ್ರು ಬರೆದ ಅದೇ ಹಾಡಿನ ಮೊದಲ ಸಾಲು ಹೇಳುತ್ತಾ ಒಳಹೋದಳು ಟೀಚರಮ್ಮ, 'ಹಾಲು ಕುಡಿದ ಮಕ್ಕಳೇ ಬದುಕಲ್ಲ, ಇನ್ನು ಎಣ್ಣೆ ಹೊಡದೋವ್ ಉಳೀತಾವ, ಅಂಥ ದೇವದಾಸೇ ಉಳೀಲಿಲ್ಲ, ಇನ್ನು ಬಾರ್ ಓನರ್ ಉಳೀತಾನ...'

ಸಂಗತ

ಮದ್ಯದಂಗಡಿ: ಭಾವುಕ ನೈತಿಕತೆಯಾಚೆಗೆ...

ಮದ್ಯದ ಅಂಗಡಿಗಳಿಗೆ ಹೊಸದಾಗಿ ಪರವಾನಗಿ ನೀಡುವ ಪ್ರಸ್ತಾವವನ್ನು ನೀತಿ ನಿರೂಪಣೆಯ ಮಸೂರದಲ್ಲಿ ಕಾಣಲು ಪ್ರಯತ್ನಿಸಿದರೆ ಇಲ್ಲಿರುವ ನಿಜ ಸಂಗತಿ ಅರ್ಥವಾದೀತು

• ಎನ್.ಎ.ಎಂ. ಇಸ್ಮಾಯಿಲ್

ಮದ್ಯ ಮಾರಾಟ ನೀತಿಗೆ ಸಂಬಂಧಿಸಿದ ಸುಧಾರಣೆಗಳ ಪ್ರಸ್ತಾಪವಾದ ತಕ್ಷಣ ಅದಕ್ಕೆ ಬರುವ ಬಹುತೇಕ ಪ್ರತಿಕ್ರಿಯೆಗಳು ಮುಗ್ಧ ಮತ್ತು ಭಾವುಕ ಮೇಲರಿಮೆಯಿಂದಲೇ ಹುಟ್ಟಿರುತ್ತವೆ. ಇದು ಹೊಸ ವಿಚಾರವೇನೂ ಅಲ್ಲ. 1948ರಷ್ಟು ಹಿಂದೆಯೇ ಈ ವಿದ್ಯಮಾನವನ್ನು ಮಾನವಶಾಸ್ತ್ರಜ್ಞ ಎಂ.ಎನ್.ಶ್ರೀನಿವಾಸ್ ಅವರು ಗುರುತಿಸಿ 'ಮದ್ಯಪಾನ ನಿಷೇಧದಂಥ ಪರಿಕಲ್ಪನೆಯೇ ಸಂಸ್ಕೃತೀಕರಣದ ಉತ್ಪನ್ನ' ಎಂದಿದ್ದರು. ಈಗಲೂ ಆ ಪರಿಸ್ಥಿತಿ ಏನೂ ಭಿನ್ನವಲ್ಲ. ಸರ್ಕಾರವು ಮದ್ಯ ಮಾರಾಟದ ಹೊಸ ಅಂಗಡಿಗಳಿಗೆ ಪರವಾನಗಿ ನೀಡುವ ವಿಷಯ ಪ್ರಸ್ತಾಪಿಸಿದ ತಕ್ಷಣವೇ ಮದ್ಯಪಾನದ ದುಷ್ಪರಿಣಾಮಗಳ ಬಗ್ಗೆ ಚಿಂತಿತರಾಗಿರುವ ದೊಡ್ಡ ವರ್ಗವೇ ಸರ್ಕಾರದ ಮೇಲೆ ಮುಗಿಬಿದ್ದಿದೆ.

ಮದ್ಯದ ಅಂಗಡಿಗಳಿಗೆ ಹೊಸದಾಗಿ ಪರವಾನಗಿ ನೀಡುವ ವಿಚಾರವನ್ನು ನೀತಿ ನಿರೂಪಣೆಯ ಮಸೂರದಲ್ಲಿ ಕಾಣಲು ಪ್ರಯತ್ನಿಸಿದರೆ ಇಲ್ಲಿರುವ ನಿಜ ಸಂಗತಿ ಅರ್ಥವಾದೀತು. ಹೊಸದಾಗಿ ಮದ್ಯದಂಗಡಿಗಳಿಗೆ ಪರವಾನಗಿ ನೀಡದೇ ಇದ್ದರೂ ರಾಜ್ಯದಲ್ಲಿ ಮದ್ಯ ಮಾರಾಟದ ಪ್ರಮಾಣ ಹೆಚ್ಚುತ್ತಲೇ ಬಂದಿದೆ. ಕರ್ನಾಟಕ ಸರ್ಕಾರವೇ ನೀಡಿರುವ ಅಂಕಿ-ಅಂಶಗಳಂತೆ 2015ರ ನಂತರ ಮದ್ಯ ಮಾರಾಟದ ಜಿಲ್ಲಾವಾರು ಪ್ರಮಾಣ ವಾರ್ಷಿಕ ಸರಾಸರಿ ಶೇಕಡ 8ರಿಂದ 24ರ ತನಕ ಏರಿಕೆ ಕಂಡಿದೆ. ಕುತೂಹಲಕಾರಿ ಸಂಗತಿಯೆಂದರೆ 1992ರ ನಂತರ ಮದ್ಯದ ಅಂಗಡಿಗಳು (ಸಿಎಲ್-2) ಮತ್ತು ಬಾರ್ ಅಂಡ್ ರೆಸ್ಟೋರೆಂಟ್ (ಸಿಎಲ್-9) ಪರವಾನಗಿಗಳನ್ನು ಸರ್ಕಾರ ನೀಡಿಯೇ ಇಲ್ಲ. ಮೂವತ್ತು ವರ್ಷಗಳ ಕಾಲ ಹೊಸ ಪರವಾನಗಿಗಳನ್ನು ನೀಡದೇ ಇದ್ದುದರಿಂದ ಮದ್ಯದಂಗಡಿ ಪರವಾನಗಿಗಳ ಮರು ಮಾರಾಟವೇ ಬೃಹತ್ ಉದ್ದಿಮೆಯಾಯಿತು. ಈ ಒಂದು ಮದ್ಯದಂಗಡಿ ಪರವಾನಗಿಯ ಬೆಲೆ ₹ 50 ಲಕ್ಷದಿಂದ ₹ 1 ಕೋಟಿಯಷ್ಟಿದೆ. ಇಡೀ ವ್ಯವಹಾರದಲ್ಲಿ ಬಳಕೆಯಾಗುವ ಲಂಚದ ಪ್ರಮಾಣವೂ ಇಷ್ಟೇ ದೊಡ್ಡದು. ಈ ಬಗೆಯ ಪರವಾನಗಿಗಳ ನವೀಕರಣದ ಮೂಲಕ ಸರ್ಕಾರಕ್ಕೆ ಸಿಗುವ ಮೊತ್ತ ಬಹಳ ಕಡಿಮೆ. ಸಿಎಲ್-2 ನವೀಕರಣಕ್ಕೆ ₹ 4 ಲಕ್ಷದಿಂದ ₹ 6 ಲಕ್ಷದವರೆಗೆ ಶುಲ್ಕ ಸರ್ಕಾರಕ್ಕೆ ದೊರೆತರೆ, ಸಿಎಲ್-9 ನವೀಕರಣದಲ್ಲಿ ₹ 4 ಲಕ್ಷದಿಂದ ₹ 7.5 ಲಕ್ಷದವರೆಗೆ ಶುಲ್ಕ ದೊರೆಯುತ್ತದೆ.

ಮದ್ಯದ ಅಂಗಡಿಗಳು ಮತ್ತು ಬಾರ್ ಅಂಡ್ ರೆಸ್ಟೋರೆಂಟ್‌ಗಳಿಗೆ ಹೊಸದಾಗಿ ಪರವಾನಗಿ ದೊರೆಯುವುದಿಲ್ಲ ಎಂಬ ಕಾರಣಕ್ಕೆ ಅದನ್ನು ಪಡೆಯುವ ಹೊಸ ಉಪಾಯಗಳೂ ಹುಟ್ಟಿಕೊಂಡಿವೆ. ನಿರ್ದಿಷ್ಟ ಸಂಖ್ಯೆಯ ವಸತಿ ಕೋಣೆಗಳಿರುವ ಹೊಟೇಲುಗಳಿಗೆ ಮದ್ಯ ಮಾರಾಟದ ಪರವಾನಗಿ ದೊರೆಯುತ್ತದೆ. ಅದನ್ನೇ ಬಳಸಿಕೊಂಡು ರಾಜ್ಯವ್ಯಾಪಿಯಾಗಿ ಹೆದ್ದಾರಿಗಳ ಬದಿಯಲ್ಲಿ 'ಲಾಡ್ಜ್ ಅಂಡ್ ಬಾರ್'ಗಳು ಆರಂಭವಾಗಿವೆ. ಮದ್ಯದ ಅಂಗಡಿಗಳ ಪರವಾನಗಿಗಳ ವಿರುದ್ಧ ಕ್ರುದ್ಧರಾಗುವವರು ಈ ವಿಷಯದಲ್ಲಿ ಮಾತನಾಡಿದ್ದೇ ಇಲ್ಲ. ಈಗಿರುವ ಮದ್ಯಮಾರಾಟ ನೀತಿಯನ್ನು ಸುಧಾರಣೆಗೆ ಒಳಪಡಿಸುವ ಪ್ರಯತ್ನವನ್ನು ಕೇವಲ ಮದ್ಯಪಾನದ ಒಳಿತು– ಕೆಡುಕುಗಳ ದೃಷ್ಟಿಯಿಂದಷ್ಟೇ ನೋಡಲು ಸಾಧ್ಯವಿಲ್ಲ. ಇದನ್ನೊಂದು ಆಡಳಿತಾತ್ಮಕ ವಿಷಯವಾಗಿಯೂ ಗಮನಿಸಬೇಕಾದ ಅಗತ್ಯ ಹಿಂದೆಂದಿಗಿಂತಲೂ ಹೆಚ್ಚಾಗಿದೆ.

ಅಬಕಾರಿ ಇಲಾಖೆಯು ಇರುವ ಮದ್ಯದ ಅಂಗಡಿಗಳಿಗೆ ಮಾರಾಟದ ಗುರಿಯನ್ನು ನಿಗದಿಪಡಿಸುವುದು ಗುಟ್ಟಿನ ವಿಷಯವೇನೂ ಅಲ್ಲ. ಹಿಂದೆಲ್ಲಾ ಅನಧಿಕೃತ ಮದ್ಯ ಮಾರಾಟ ತಮ್ಮ ವ್ಯಾಪಾರಕ್ಕೆ ಧಕ್ಕೆ ಉಂಟುಮಾಡುತ್ತದೆ ಎಂದು ಮದ್ಯದ ಅಂಗಡಿ ಮಾಲೀಕರು ಭಾವಿಸಿದ್ದರು. ಈಗ ಅವರೇ ಮುಂದೆ ನಿಂತು ಅನಧಿಕೃತ ಮದ್ಯ ಮಾರಾಟದ ಉಸ್ತುವಾರಿ ನೋಡಿಕೊಂಡು ಅಬಕಾರಿ ಇಲಾಖೆ ಕೊಡುವ ಮಾರಾಟದ ಗುರಿಯನ್ನು 'ಸಾಧಿಸುತ್ತಿದ್ದಾರೆ'. ಪರಿಣಾಮವಾಗಿ ಹಳ್ಳಿ ಹಳ್ಳಿಗಳ ಕಿರಾಣಿ ಅಂಗಡಿಗಳಲ್ಲೂ ಮದ್ಯ ಲಭ್ಯವಿದೆ!

ಕಳೆದ ಮೂರು ದಶಕಗಳಿಂದ ಮದ್ಯದಂಗಡಿಗಳಿಗೆ ಹೊಸದಾಗಿ ಪರವಾನಗಿಗಳನ್ನು ನೀಡದೇ ಇದ್ದದ್ದು ಪರವಾನಗಿ ಮಾರಾಟವೇ ಒಂದು ದಂಧೆಯಾಗಿ ಬೆಳೆಯಲು ಕಾರಣವಾಗಿದೆ. ಇದರಿಂದ ಭ್ರಷ್ಟಾಚಾರಿಗಳಿಗೆ ಅನುಕೂಲವಾಗಿದೆಯೇ ಹೊರತು ಸರ್ಕಾರದ ಬೊಕ್ಕಸಕ್ಕೇನೂ ಪ್ರಯೋಜನವಾಗಿಲ್ಲ. ಹಾಗೆ ನೋಡಿದರೆ ಸರ್ಕಾರದ ಬೊಕ್ಕಸಕ್ಕೆ ಹಾನಿಯಾಗಿರುವುದೇ ಹೆಚ್ಚು. ಸಿಎಲ್-2 ಮತ್ತು ಸಿಎಲ್-9 ಪರವಾನಗಿಗಳ ಶುಲ್ಕವನ್ನು ಅವುಗಳ ವ್ಯವಹಾರದ ಪ್ರಮಾಣಕ್ಕೆ ಅನುಗುಣವಾಗಿ ನಿಗದಿಪಡಿಸಬೇಕು ಮತ್ತು ಈ ಪರವಾನಗಿಗಳನ್ನು ನಿರ್ದಿಷ್ಟ ಭೌಗೋಳಿಕ ಮಿತಿಯೊಳಗಷ್ಟೇ ಬಳಸುವಂಥ ನಿಯಮಗಳನ್ನು ತರಬೇಕು.

1920ರಲ್ಲಿ ಅಮೆರಿಕದಲ್ಲಿ ಜಾರಿಗೆ ತರಲು ಉದ್ದೇಶಿಸಿದ ಮದ್ಯ ನಿಷೇಧದಿಂದ ತೊಡಗಿ ಸ್ವಾತಂತ್ರ್ಯೋತ್ತರ ಭಾರತದಲ್ಲಿ ವಿವಿಧ ರಾಜ್ಯಗಳು ಜಾರಿಗೆ ತಂದ ಮದ್ಯ ನಿಷೇಧಗಳೆಲ್ಲವೂ ಹೀನಾಯ ವೈಫಲ್ಯ ಕಂಡಿವೆ. ಈ ವಿಷಯದಲ್ಲಿ ಭಾವುಕ ನೈತಿಕತೆಯನ್ನು ಬದಿಗಿಟ್ಟು ಪ್ರಾಯೋಗಿಕವಾಗಿ ಆಲೋಚಿಸುವುದು ಅಗತ್ಯ. ಮದ್ಯದ ಅಂಗಡಿ ತೆರೆಯಲು ಪರವಾನಗಿ ನೀಡುವುದನ್ನು ವಿರೋಧಿಸುವವರು ನೈತಿಕವೆಂದು ಭಾವಿಸುತ್ತಿರುವ ನಿಲುವೇ ದೊಡ್ಡ ಮಟ್ಟದ ಭ್ರಷ್ಟಾಚಾರ ಮತ್ತು ಕಾಳಸಂತೆಯ ದಂಧೆಗೆ ಕಾರಣವಾಗುತ್ತಿರುವ ವಿಪರ್ಯಾಸವನ್ನು ಅರ್ಥಮಾಡಿಕೊಳ್ಳಬೇಕು.

ವಾಚಕರ ವಾಣಿ

ಹೊಸ ಮದ್ಯದಂಗಡಿಗಳ ಪ್ರಸ್ತಾವ ಹಿಂಪಡೆಯಿರಿ

ಈ ಬಾರಿ ತೀವ್ರ ಮಳೆ ಕೊರತೆಯಿಂದಾಗಿ ಕೃಷಿಗಿರಲಿ, ಜನ-ಜಾನುವಾರುಗಳ ಕುಡಿಯುವ ನೀರಿಗೂ ತತ್ವಾರ ಉಂಟಾಗಿದೆ. ಸರ್ಕಾರವು ರಾಜ್ಯದ 161 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಿದೆ. ಇದರ ಬೆನ್ನಲ್ಲೇ ನೀರಿಗಾಗಿಯೇ ಕಾವೇರಿ ವಿವಾದವು ಮತ್ತೆ ಭುಗಿಲೆದ್ದಿದೆ. ಬಹುಶಃ ಸರ್ಕಾರವು ನೀರಿನ ಕೊರತೆಯ ಈ ಯಾತನೆಗಳನ್ನೆಲ್ಲಾ ಸಮೃದ್ಧವಾಗಿ ಮದ್ಯ 'ಕುಡಿಸಿ' ಮರೆಸಲು ಪ್ರಯತ್ನಿಸುತ್ತಿರಬಹುದೇ? ರಾಜ್ಯದಾದ್ಯಂತ ಹೊಸದಾಗಿ ಸಾವಿರ ಮದ್ಯದಂಗಡಿಗಳ ಪ್ರಾರಂಭಕ್ಕೆ ಅಬಕಾರಿ ಇಲಾಖೆಯಿಂದ ಸಿದ್ಧತೆ ನಡೆದಿರುವ ಸುದ್ದಿ (ಪ್ರ.ವಾ., ಸೆ.25) ಓದಿದ ಮೇಲೆ ಇಂತಹದೊಂದು ಅನುಮಾನ ಮೂಡುತ್ತದೆ.

ಹೊಸದಾಗಿ ಮದ್ಯದಂಗಡಿ ಪ್ರಾರಂಭಿಸಲು ಮುಖ್ಯ ಕಾರಣ 'ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಆಗುತ್ತಿರುವುದು ಮತ್ತು ಜನಸಂಖ್ಯಾಧಾರಿತವಾಗಿ ಮದ್ಯದಂಗಡಿಗಳು ಇಲ್ಲದಿರುವುದು ಹಾಗೂ ಹೆದ್ದಾರಿಗಳಲ್ಲಿ ಮದ್ಯದಂಗಡಿಗೆ ಪರವಾನಗಿ ನೀಡಲು ಸಾಧ್ಯವಿಲ್ಲದ್ದರಿಂದ ಅಲ್ಲಿ ಅನಧಿಕೃತವಾಗಿ ಮದ್ಯ ಮಾರಾಟವಾಗುತ್ತಿರುವುದು' ಎಂಬ ಅಬಕಾರಿ ಸಚಿವರ ಹೇಳಿಕೆ ಹಾಸ್ಯಾಸ್ಪದವಾಗಿದೆ. ಅಕ್ರಮವಾಗಿ ಮದ್ಯ ಮಾರಾಟವಾಗುತ್ತಿದ್ದರೆ ಅದನ್ನು ನಿಯಂತ್ರಿಸುವ ಜವಾಬ್ದಾರಿ ಇಲಾಖೆ ಮೇಲಿದೆ. ಮದ್ಯ ಅಕ್ರಮ ಮಾರಾಟ ನಿಯಂತ್ರಣಕ್ಕೆ ಸರ್ಕಾರ ತುರ್ತು ಕ್ರಮ ಕೈಗೊಳ್ಳಬೇಕು ಎಂದು 2020ರ ಡಿಸೆಂಬರ್‌ನಲ್ಲೇ ಹೈಕೋರ್ಟ್ ಆದೇಶಿಸಿದೆ. ಆದರೆ ಅದಕ್ಕೆ ಬದಲಾಗಿ ಅಲ್ಲೆಲ್ಲಾ ಹೆಚ್ಚಿನ ಮದ್ಯದಂಗಡಿಗಳನ್ನು ತೆರೆದು ತಾನೇ ಅದರ ಸಂಪೂರ್ಣ ಲಾಭ ಪಡೆಯುವುದು ಉದ್ದೇಶವೆಂದಾದರೆ, ಸಾಮಾಜಿಕ– ಕೌಟುಂಬಿಕ ಸ್ವಾಸ್ಥ್ಯ, ಜನರ ಆರೋಗ್ಯದ ಕುರಿತು ಸರ್ಕಾರಕ್ಕೆ ಹೊಣೆಗಾರಿಕೆಯೇ ಇಲ್ಲವೇ?

ಈಗಿನ ಸರ್ಕಾರವು ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಪೂರಕವಾಗಿ ಹಲವು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದ ಬಗ್ಗೆ ನಾಡಿನ ಹೆಂಗಳೆಯರು ಹೆಮ್ಮೆಪಡುತ್ತಿದ್ದಾರೆ. ಮದ್ಯವಿರೋಧಿ ಆಂದೋಲನವು ಹಂತಹಂತವಾಗಿ ಮದ್ಯನಿಯಂತ್ರಣಕ್ಕೆ, ನಿಷೇಧಕ್ಕೆ ಮುಂದಾಗಬೇಕೆಂದು ಒಂದು ದಶಕದಿಂದ ರಾಜ್ಯದಾದ್ಯಂತ ಚಳವಳಿಯನ್ನು ರೂಪಿಸಿ ಹೋರಾಟ ಮಾಡುತ್ತಿದೆ. ಆದರೆ ಸರ್ಕಾರವು ಅದಕ್ಕೆ ಬದಲಿಗೆ ಹೊಸದಾಗಿ ಸಾವಿರ ಮದ್ಯ-ದಂಗಡಿಗಳನ್ನು ಪ್ರಾರಂಭಿಸಲು ಮುಂದಾಗಿರುವುದು ಖಂಡನೀಯ. ಸರ್ಕಾರಕ್ಕೆ ನಿಜವಾಗಿ ಸಾಮಾಜಿಕ, ಜನಪರ, ಮಹಿಳಾಪರ ಕಾಳಜಿ ಇದ್ದರೆ ಪ್ರಸ್ತಾವವನ್ನು ತಕ್ಷಣವೇ ಹಿಂದಕ್ಕೆ ಪಡೆಯಬೇಕು.

ರೂಪ ಹಾಸನ, ಹಾಸನ, **ಸ್ವರ್ಣ ಭಟ್,** ಮಂಗಳೂರು, **ಶಾರದಾ ಗೋಪಾಲ,** ಧಾರವಾಡ
ನಂದಿನಿ ಜಯರಾಂ, ಮಂಡ್ಯ, **ಡಿ.ನಾಗಲಕ್ಷ್ಮಿ,** ಬಳ್ಳಾರಿ

ಕಾವೇರಿ ನೀರು: ವಿವರಣೆ ನೀಡಿ

ತಮಿಳುನಾಡಿಗೆ ಕಾವೇರಿ ನೀರು ಹರಿಸುವುದರ ವಿರುದ್ಧ ಕರ್ನಾಟಕದಲ್ಲಿ ಪ್ರತಿಭಟನೆ, ಬಂದ್ ನಡೆಯುತ್ತಿರುವಾಗಲೇ ಅತ್ತ ಕಾವೇರಿ ನೀರು ನಿಯಂತ್ರಣ ಸಮಿತಿಯು ಮತ್ತೆ 18 ದಿನ ನಿತ್ಯವೂ ತಮಿಳುನಾಡಿಗೆ ಮೂರು ಸಾವಿರ ಕ್ಯೂಸೆಕ್ ನೀರು ಹರಿಸುವಂತೆ ಶಿಫಾರಸು ಮಾಡಿದೆ. ಕರ್ನಾಟಕದ ಕಾವೇರಿ ಜಲಾನಯನ ಪ್ರದೇಶದ ಅಣೆಕಟ್ಟುಗಳಲ್ಲಿ ನೀರಿನ ತೀವ್ರ ಕೊರತೆಯಿದ್ದಾಗ್ಯೂ ಅದು ಇಂತಹ ಶಿಫಾರಸು ಮಾಡಿದೆ. ಕರ್ನಾಟಕದ ಅಣೆಕಟ್ಟುಗಳಲ್ಲಿ ನೀರಿನ ಸಂಗ್ರಹದ ಸ್ಥಿತಿಗತಿ ಗೊತ್ತಿದ್ದರೂ ಸಂಬಂಧಿಸಿದ ಸಮಿತಿ ಮತ್ತು ಪ್ರಾಧಿಕಾರವು ಮತ್ತೆ ಮತ್ತೆ ನೀರು ಹರಿಸಲು ಆದೇಶ ಮಾಡುತ್ತಿರುವುದಕ್ಕೆ ಕಾರಣಗಳೇನು? ಇದಕ್ಕೆ ಸಂಬಂಧಿಸಿದ ವಿವರ ಮಾಧ್ಯಮಗಳಲ್ಲಿ ಸಿಗುತ್ತಿಲ್ಲ. ಹೀಗಾಗಿ ಇವು ಏಕಮುಖ ನಿರ್ಣಯಗಳನ್ನು ತೆಗೆದುಕೊಳ್ಳುತ್ತಿವೆ ಎಂಬ ಭಾವನೆ ಕರ್ನಾಟಕದ ಜನರಲ್ಲಿ ಉಂಟಾಗುತ್ತಿದೆ. ನೀರು ಹರಿಸುವ ಪ್ರಾಧಿಕಾರದ ಪ್ರತಿ ನಿರ್ಣಯದ ನಂತರ ಅದು ತನ್ನ ಆದೇಶಕ್ಕೆ ವಿವರವಾದ ಕಾರಣಗಳನ್ನು ಸಾರ್ವಜನಿಕರಿಗೆ ಬಿಡುಗಡೆ ಮಾಡಬೇಕು.

ವಸ್ತುಸ್ಥಿತಿಯನ್ನು ಆಮೂಲಾಗ್ರವಾಗಿ ವಿವರಿಸಿ ಹೇಳುವ ಕೆಲಸವನ್ನು ಪ್ರಾಧಿಕಾರವಾಗಲೀ, ಸರ್ಕಾರವಾಗಲೀ, ರಾಜಕೀಯ ಪಕ್ಷಗಳಾಗಲೀ ಮಾಡುತ್ತಿಲ್ಲ. ಜನರ ಭಾವನೆಗಳನ್ನು ಉದ್ರೇಕಿಸಿ ಅವುಗಳೊಂದಿಗೆ ಚೆಲ್ಲಾಟವಾಡುವ ಕೆಲಸವನ್ನು ರಾಜಕೀಯ ಪಕ್ಷಗಳು ಮಾಡುತ್ತಿವೆ. ಕಾವೇರಿ ನೀರು ಹರಿಸಲು ಸಂಕಷ್ಟ ಸೂತ್ರ ಇರದಿದ್ದರೆ ಅದಕ್ಕಾಗಿ ಪಕ್ಷಭೇದ ಮರೆತು ಒಕ್ಕೊರಲಿನಿಂದ ಎಲ್ಲರೂ ಒತ್ತಾಯಿಸಬೇಕು. ಅನುಕೂಲಸಿಂಧು ರಾಜಕೀಯ ಹೇಳಿಕೆಗಳಿಂದ ಯಾವ ಸಾಧನೆಯೂ ಆಗದು. ಬಂದ್‌ನಂತಹ ಕ್ರಮಗಳಿಂದ ನಮಗೆ ನಾವೇ ಹಾನಿ ಮಾಡಿಕೊಂಡಂತೆ ಆಗುತ್ತದೆ.

ವೆಂಕಟೇಶ ಮಾಚಕನೂರ, ಧಾರವಾಡ

ಸರ್ಕಾರಿ ಜಮೀನು ಕಬಳಿಕೆ: ಕಠಿಣ ಕ್ರಮ ಅಗತ್ಯ

'ಸರ್ಕಾರಿ ಜಮೀನು ಲೆಕ್ಕಪರಿಶೋಧನೆ ರಾಜ್ಯದಾದ್ಯಂತ ನಡೆಯಲಿ' ಶೀರ್ಷಿಕೆಯ ಸಂಪಾದಕೀಯ (ಪ್ರ.ವಾ., ಸೆ.27) ಮೌಲಿಕವಾಗಿದೆ. ಅರಣ್ಯ ಪ್ರದೇಶ, ಕೆರೆ ಅಂಗಳ, ಗೋಮಾಳಗಳ ಒತ್ತುವರಿ ಹಲವಾರು ವರ್ಷಗಳಿಂದ ನಡೆದಿದೆ. ಬಲಿಷ್ಠ ಕೈಗಳು ಹಣ ಮತ್ತು ಅಧಿಕಾರ ಬಳಸಿಕೊಂಡು ಬೆಲೆಬಾಳುವ ಆಸ್ತಿಗಳನ್ನು ಕಬಳಿಸಿದ್ದಾರೆ. 'ಮೂಗು ಹಿಡಿದರೆ ಬಾಯಿ ಬಿಡುವಂತೆ' ಇವರನ್ನು ನಿಯಂತ್ರಿಸಲು ಕಠಿಣವಾದ ಕ್ರಮಗಳು ಅಗತ್ಯ. ಅದಕ್ಕೆ ಇಚ್ಛಾಶಕ್ತಿ ಇರಬೇಕಷ್ಟೇ. ಕಾಟಾಚಾರಕ್ಕೆ ಎಂಬಂತೆ ಲ್ಯಾಂಡ್ ಆಡಿಟ್ ಮಾಡಿದರೆ ಅದರಿಂದ ಏನೂ ಪ್ರಯೋಜನವಿಲ್ಲ!

ಎಚ್.ಎನ್.ಕಿರಣ್‌ಕುಮಾರ್ ಹಳೇಹಳ್ಳಿ, ಗೌರಿಬಿದನೂರು

ವಂದೇ ಭಾರತ್: ವಿನ್ಯಾಸವೊಂದೇ ಹೆಗ್ಗಳಿಕೆ

ಅಬ್ಬರದ ಪ್ರಚಾರದ ನಡುವೆ ಜನ ಏನೇನೋ ಭ್ರಮಿಸಿಕೊಂಡಿರಲು ಸಾಕು. ಇತ್ತೀಚೆಗೆ ಬೆಂಗಳೂರಿನಿಂದ ಧಾರವಾಡಕ್ಕೆ ನನ್ನ ಶ್ರೀಮತಿಯೊಂದಿಗೆ 'ವಂದೇ ಭಾರತ್' ಮೂಲಕ ಮರಳಿದೆ. ಆದರೆ ಅನುಭವ ಮಾತ್ರ ಕಹಿಯಾಗಿತ್ತು. ಬೆಳಿಗ್ಗೆ 5.45ಕ್ಕೆ ಹೊರಟ ಈ ಐಷಾರಾಮಿ ರೈಲು ಸೂಪರ್ ಫಾಸ್ಟ್ ಎಂದೇ ಭ್ರಮಿಸಿದ್ದೆ. 490 ಕಿ.ಮೀ. ಅಂತರವನ್ನು ಈ ಮಂದಗಮನೆ ಕ್ರಮಿಸಿದ್ದು ಅಖಂಡ ಆರೂವರೆ ತಾಸು. ಅಂದರೆ, ಸರಾಸರಿ 80 ಕಿ.ಮೀ. ವೇಗ! ಧಾರವಾಡ ತಲುಪಿದಾಗ ಮಧ್ಯಾಹ್ನ 12.10. ಕಣ್ಣಿಗೆ ಹಬ್ಬವೆನಿಸುವ ವಿನ್ಯಾಸವೊಂದೇ ಇದರ ಹೆಗ್ಗಳಿಕೆ. ಮೊದಲೇ ಚಳಿ, ಮೇಲೆ ಥರಗುಟ್ಟುವಷ್ಟು ಎ.ಸಿ. ಗಡಗಡ ನಡುಗುವ ಪಾಡು ವೃದ್ಧರದ್ದು. ಮಾಮೂಲಿ ಚಹಾ, ಕಾಫಿ ವ್ಯವಸ್ಥೆ ಕೂಡಾ ಇಲ್ಲ. ಒಂದಿಷ್ಟು ಬಿಸಿನೀರು, ಜೊತೆಗೆ ಏಲಕ್ಕಿ ಪುಡಿಯ ಸ್ಯಾಸೆ. ಉಪಾಹಾರ ಮತ್ತೊಂದು ಅಧ್ವಾನ. ಕಾಯಿ ಚಟ್ನಿ, ಗಟ್ಟಿ ಐಸ್‌ಕ್ರಿಂ! ತಣ್ಣನೆಯ ನಿಸ್ಸಾರ ಸಾಂಬಾರ್, ರಾಗಿ ಮುದ್ದೆಯಂಥ ಉಪ್ಪಿಟ್ಟು... ಒಟ್ಟಾರೆ ಆರೂವರೆ ತಾಸಿನ ಶಿಕ್ಷೆ! ಟಿಕೆಟ್ ದರ ಮಾತ್ರ ಒಬ್ಬರಿಗೆ ₹ 1,300ಕ್ಕೂ ಹೆಚ್ಚು. ಇಂಥದ್ದೊಂದು ಬಿಳಿಯಾನೆ ನಮಗೆ ಬೇಕಿತ್ತೇ?

ರಾಮಚಂದ್ರ ಎಸ್.ಕುಲಕರ್ಣಿ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ನಾಯಿಗಳೇ ಮೂಲ...

ನಾಯಿಗಳಲ್ಲಿ ರೇಬಿಸ್ ವೈರಾಣು ಇರುತ್ತದೆ. ಅವುಗಳಲ್ಲಿ ರೇಬಿಸ್ ವೈರಾಣು ಸಾಂದ್ರತೆ ಹೆಚ್ಚಾದಾಗ ಅವುಗಳಿಗೆ ರೇಬಿಸ್ ರೋಗ ಬರುತ್ತದೆ. ಅಂತಹ ನಾಯಿ–ಬೆಕ್ಕುಗಳ ಕಡಿತಕ್ಕೆ ಒಳಗಾದ ಮತ್ತು ಅವುಗಳ ಜೊಲ್ಲಿನ ಸಂಪರ್ಕಕ್ಕೆ ಬಂದ ಮನುಷ್ಯರಿಗೆ ರೇಬಿಸ್ ರೋಗ ಬರುವ ಅಪಾಯವಿರುತ್ತದೆ. ನಾಯಿ, ಬೆಕ್ಕುಗಳು ಮಾತ್ರವಲ್ಲದೆ, ಕುದುರೆ, ಮುಂಗುಸಿ ಮತ್ತು ಬಾವಲಿಗಳಲ್ಲೂ ಈ ವೈರಾಣು ಇರುತ್ತದೆ. ಆದರೆ, ನಾಯಿಗಳಿಂದಲೇ ಮನುಷ್ಯನಿಗೆ ರೇಬಿಸ್ ತಗಲುವ ಸಾಧ್ಯತೆ ಹೆಚ್ಚು

99% ವಿಶ್ವದಲ್ಲಿ ಸಂಭವಿಸುವ ರೇಬಿಸ್ ಸಾವುಗಳಲ್ಲಿ, ನಾಯಿಕಡಿತದಿಂದ ರೇಬಿಸ್ ಬಂದ ಪ್ರಕರಣಗಳ ಪ್ರಮಾಣ

ಭಾರತದಲ್ಲೇ ಹೆಚ್ಚು

59,000 ಭಾರತವೂ ಸೇರಿ ವಿಶ್ವದ 151 ದೇಶಗಳಲ್ಲಿ ಪ್ರತಿ ವರ್ಷ ನಾಯಿಕಡಿತದ ರೇಬಿಸ್‌ನಿಂದ ಮೃತಪಡುವವರ ಸಂಖ್ಯೆ

38,000-39,000 ಭಾರತವನ್ನು ಬಿಟ್ಟು ವಿಶ್ವದ 150 ದೇಶಗಳಲ್ಲಿ ಪ್ರತಿ ವರ್ಷ ನಾಯಿಕಡಿತದ ರೇಬಿಸ್‌ನಿಂದ ಮೃತಪಡುವವರ ಸಂಖ್ಯೆ

50ಕ್ಕೂ ಹೆಚ್ಚು ದೇಶಗಳಿಂದ ನಾಯಿಕಡಿತದ ರೇಬಿಸ್ ಸಾವುಗಳನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲಾಗಿದೆ

20,000-21,000 ಭಾರತದಲ್ಲಿ ಪ್ರತಿ ವರ್ಷ ನಾಯಿಕಡಿತದ ರೇಬಿಸ್‌ನಿಂದ ಮೃತಪಡುವವರ ಸಂಖ್ಯೆ. ಆದರೆ, ಭಾರತದಲ್ಲಿನ ರೇಬಿಸ್ ಸಾವುಗಳು ದಾಖಲಾಗದೇ ಹೋಗುತ್ತದೆ. ಈ ಕಾರಣದಿಂದ ಸರ್ಕಾರಿ ದಾಖಲೆಗಳಲ್ಲಿ ಉಲ್ಲೇಖಿಸಿರುವ ರೇಬಿಸ್ ಸಾವುಗಳ ಸಂಖ್ಯೆ ತೀರಾ ಕಡಿಮೆ ಇದೆ ಎನ್ನುತ್ತದೆ ಡಬ್ಲ್ಯುಎಚ್‌ಒ. (ಭಾರತ ಸರ್ಕಾರದ ಲೆಕ್ಕಾಚಾರದ ಪ್ರಕಾರ 2012ರಿಂದ 2020ರ ಮಧ್ಯೆ ದೇಶದಾದ್ಯಂತ ಸಂಭವಿಸಿದ ನಾಯಿಕಡಿತ ರೇಬಿಸ್ ಸಾವುಗಳ ಸಂಖ್ಯೆ 6,644 ಮಾತ್ರ)

ವಿಶ್ವ ರೇಬಿಸ್ ದಿನ

70% ನಾಯಿಗಳಿಗೆ ರೇಬಿಸ್ ಲಸಿಕೆ ಹಾಕುವುದರಿಂದ, ಯಾವುದೇ ಪ್ರದೇಶದಲ್ಲಿ ನಾಯಿಕಡಿತದ ರೇಬಿಸ್ ರೋಗವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಬಹುದು. ಒಂದು ಪ್ರದೇಶದಲ್ಲಿನ ಒಟ್ಟು ನಾಯಿಗಳಲ್ಲಿ ಕನಿಷ್ಠ ಶೇ 70ರಷ್ಟು ನಾಯಿಗಳು ಸದಾ ರೇಬಿಸ್ ಲಸಿಕೆಗೆ ಒಳಗಾಗಿರುವಂತೆ ನೋಡಿಕೊಳ್ಳಬೇಕು

ರೇಬಿಸ್ ನಿರ್ಮೂಲನೆಗೆ ಬೇಕು ಇಚ್ಛಾಶಕ್ತಿ

ರೇಬಿಸ್ ರೋಗಕ್ಕೆ ಲಸಿಕೆ ಅಭಿವೃದ್ಧಿಪಡಿಸಿದ ಲೂಯಿಸ್ ಪಾಶ್ಚರ್ ಅವರ ಸ್ಮರಣೆಯ ದಿನವಾದ ಸೆಪ್ಟೆಂಬರ್ 28ಅನ್ನು, 2007ರಿಂದ 'ವಿಶ್ವ ರೇಬಿಸ್ ದಿನ'ವನ್ನಾಗಿ ಆಚರಿಸಲಾಗುತ್ತಿದೆ. ರೇಬಿಸ್ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ರೇಬಿಸ್ ನಿರ್ಮೂಲನೆಯಲ್ಲಿ ಈವರೆಗಿನ ಸಾಧನೆಯನ್ನು ಗುರುತಿಸಿವುದು ಈ ಆಚರಣೆಯ ಉದ್ದೇಶ

● ಸುಕೃತ ಎಸ್.

'ರೇಬಿಸ್' ಎಂಬುದು ಬಡವರ ರೋಗ. ಅದಕ್ಕಾಗಿಯೇ ಈ ರೋಗವನ್ನು ನಿಯಂತ್ರಿಸಲು, ನಿವಾರಿಸಲು ಸರ್ಕಾರಗಳಿಗೆ ಇಚ್ಛಾಶಕ್ತಿ ಇರುವುದಿಲ್ಲ' ಎಂದು 'ಭಾರತದಲ್ಲಿ ರೇಬಿಸ್ ನಿಯಂತ್ರಣ ಮತ್ತು ತಡೆ ಸಂಸ್ಥೆ'ಯ ಸ್ಥಾಪಕ ಡಾ. ಎಂ.ಕೆ. ಸುದರ್ಶನ್ ಅವರು ಅಭಿಪ್ರಾಯಪಟ್ಟಿದ್ದರು. 2020ರಲ್ಲಿ ದೇಶದಲ್ಲಿಯೇ ಮೊದಲ ಬಾರಿಗೆ ದೆಹಲಿಯಲ್ಲಿ ನಡೆದ ರೇಬಿಸ್ ಜಾಗೃತಿ ಸಭೆಯಲ್ಲಿ ಅವರು ಈ ರೀತಿ ಹೇಳಿದ್ದರು. 'ಬಡವರಿಗೆ, ಸಮಾಜದಲ್ಲಿ ಮೂಲೆಗುಂಪು ಮಾಡಲಾದ ಸಮುದಾಯದವರಿಗೆ ಮಾತ್ರವೇ ಈ ರೋಗವು ಹೆಚ್ಚಿನ ಪ್ರಮಾಣದಲ್ಲಿ ಬಾಧಿಸುತ್ತದೆ' ಎಂದು ವಿಶ್ವ ಆರೋಗ್ಯ ಸಂಸ್ಥೆ ಕೂಡ ಹೇಳಿದೆ. ಜೊತೆಗೆ, ರೇಬಿಸ್‌ವೊಂದು ನಿರ್ಲಕ್ಷಿಸಲಾದ ರೋಗ ಎಂದೂ ಅದು ಹೇಳಿದೆ.

ಭಾರತದ ಮಟ್ಟಿಗೆ ಈ ಎರಡೂ ಅಭಿಪ್ರಾಯಗಳು ಹೊಂದಾಣಿಕೆಯಾಗುತ್ತವೆ. ಜಗತ್ತಿನಾದ್ಯಂತ ಪ್ರತಿವರ್ಷ ಸುಮಾರು 59 ಸಾವಿರ ಜನರು ರೇಬಿಸ್‌ನಿಂದ ಮೃತಪಡುತ್ತಿದ್ದರೆ, ಭಾರತದಲ್ಲಿ ಈ ಸಂಖ್ಯೆ ಸುಮಾರು 20 ಸಾವಿರದಷ್ಟಿದೆ. ಅಂದರೆ, ಭಾರತವೊಂದರಿಂದಲೇ ಶೇ 36ರಷ್ಟು ಜನರು ರೇಬಿಸ್‌ನಿಂದ ಸಾಯುತ್ತಿದ್ದಾರೆ. 2030ರ ಹೊತ್ತಿಗೆ ಜಗತ್ತು ರೇಬಿಸ್ ಮುಕ್ತವಾಗಬೇಕು ಎಂಬ ಗುರಿಯನ್ನು ವಿಶ್ವಸಂಸ್ಥೆ 2015ರಲ್ಲಿ ಹಾಕಿಕೊಂಡಿದೆ. ಆದರೆ ಭಾರತದಲ್ಲಿನ ಸಾವಿನ ಪ್ರಮಾಣ, ಈ ಗುರಿ ತಲುಪುವುದನ್ನು ಅಸಾಧ್ಯವಾಗಿಸುತ್ತದೆಯೇ ಎಂಬ ಅನುಮಾನವನ್ನು ತಜ್ಞರು ವ್ಯಕ್ತಪಡಿಸುತ್ತಿದ್ದಾರೆ.

40% ನಾಯಿಕಡಿತದ ರೇಬಿಸ್ ರೋಗದಿಂದ ಮೃತಪಡುವವರಲ್ಲಿ 15 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಪ್ರಮಾಣ

ರೇಬಿಸ್ ರೋಗ ಪತ್ತೆ, ಇದಕ್ಕೆ ಲಸಿಕೆಯ ಸಂಶೋಧನೆಯಿಂದ ಹಿಡಿದು ಸೂಕ್ತವಾದಂತಹ ಕಾರ್ಯಯೋಜನೆ ಸಿದ್ಧಪಡಿಸುವವರೆಗೂ ಭಾರತವು ನಿಯಂತ್ರಣದಲ್ಲಿ ನಿಧಾನಗತಿಯನ್ನೇ ಪ್ರದರ್ಶನ ಮಾಡಿದೆ. 11ನೇ ಪಂಚವಾರ್ಷಿಕ ಯೋಜನೆಯಲ್ಲಿ (2007–2012) ಮೊದಲ ಬಾರಿಗೆ ರೇಬಿಸ್ ನಿಯಂತ್ರಣಕ್ಕೆ ಸರ್ಕಾರವು ಕ್ರಮ ತೆಗೆದುಕೊಂಡಿತ್ತು. ಇದಕ್ಕಾಗಿ ₹8.65 ಕೋಟಿ ಅನುದಾನವನ್ನು ಮೀಸಲಿಟ್ಟಿತ್ತು. ಭಾರತೀಯ ಪಶು ಕಲ್ಯಾಣ ಮಂಡಳಿಗೆ ಈ ಎಲ್ಲ ನಿರ್ವಹಣೆಯ ಜವಾಬ್ದಾರಿಯನ್ನು ನೀಡಲಾಯಿತು. ದೆಹಲಿ, ಅಹಮದಾಬಾದ್, ಪುಣೆ, ಬೆಂಗಳೂರು ಹಾಗೂ ಮದುರೆ ನಗರಗಳನ್ನು ಆಯ್ಕೆ ಮಾಡಿಕೊಂಡು ಇಲ್ಲಿ 'ಮಾನವನಲ್ಲಿ ರೇಬಿಸ್ ನಿಯಂತ್ರಣಕ್ಕೆ ಪ್ರಾಯೋಗಿಕ ಯೋಜನೆ'ಯನ್ನು ಜಾರಿ ಮಾಡಲಾಯಿತು. ಈ ಪ್ರಾಯೋಗಿಕ ಯೋಜನೆಯ ಫಲಿತಾಂಶವನ್ನೇ ಇಟ್ಟುಕೊಂಡು, 12ನೇ ಪಂಚವಾರ್ಷಿಕ ಯೋಜನೆಯಲ್ಲಿ ರಾಷ್ಟ್ರೀಯ ರೇಬಿಸ್ ನಿಯಂತ್ರಣ ಯೋಜನೆ (ಎನ್‌ಆರ್‌ಸಿಪಿ) ಸ್ಥಾಪನೆಗೆ ಕೇಂದ್ರ

ಸರ್ಕಾರ ಒಪ್ಪಿಗೆ ನೀಡಿತು. 2030ರ ಹೊತ್ತಿಗೆ ರೇಬಿಸ್ ನಿರ್ಮೂಲನೆ ಮಾಡಬೇಕು ಎಂದು 2015ರಲ್ಲಿ ವಿಶ್ವಸಂಸ್ಥೆ ಗುರಿ ಹಾಕಿದ ನಂತರವಷ್ಟೇ ಭಾರತದಲ್ಲಿ ರೇಬಿಸ್ ನಿಯಂತ್ರಣಕ್ಕೆ ಗತಿ ದೊರೆಯಿತು. ಇನ್ನೂ ಮುಖ್ಯವಾಗಿ ರೇಬಿಸ್ ರೋಗವನ್ನು 'ಗಣನೀಯ ರೋಗ' ಎಂದು ಭಾರತ ಪರಿಗಣಿಸಿದ್ದೇ 2021ರಲ್ಲಿ.

ರೇಬಿಸ್ ರೋಗ ಉಲ್ಬಣಗೊಳ್ಳಲು ಸರಣಿ ಕಾರಣಗಳಿವೆ ಮತ್ತು ಇವುಗಳು ಒಂದಕ್ಕೊಂದು ಹೆಣೆದುಕೊಂಡಿವೆ. ದೇಶದಲ್ಲಿ ಬೀದಿ ನಾಯಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಲೇ ಇದೆ. ಪ್ರಮುಖ ಸಮಸ್ಯೆಗಳಲ್ಲಿ ಬೀದಿನಾಯಿಗಳ ಹಾವಳಿಯೂ ಒಂದು. ಇವುಗಳ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಮಾಡಬೇಕು ಎಂಬ ನೀತಿಯನ್ನು ಮಾಡಿಕೊಂಡಿದ್ದೇವೆಯಾದರೂ ನೀತಿ ಜಾರಿಯಲ್ಲಿ ಸೋತಿದ್ದೇವೆ. ವೃದ್ಧರು, ಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿ ಬೀದಿ ನಾಯಿಗಳ ಹಾವಳಿಯಿಂದ ಮೃತಪಡುತ್ತಿದ್ದಾರೆ. ದೆಹಲಿ, ಹೈದರಾಬಾದ್ ಸೇರಿದಂತೆ ಮಹಾನಗರಗಳಲ್ಲಿ ಪುಟ್ಟ ಮಕ್ಕಳ ಮೇಲೆ ಬೀದಿ ನಾಯಿಗಳು ದಾಳಿ ಮಾಡುತ್ತಿರುವ ವಿಡಿಯೊಗಳು, ಸುದ್ದಿಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಲೇ ಇವೆ. ಆದರೂ ಬೀದಿ ನಾಯಿಗಳ ನಿಯಂತ್ರಣಕ್ಕೆ ಸರ್ಕಾರಗಳು, ಸ್ಥಳೀಯ ಸಂಸ್ಥೆಗಳು ವಹಿಸಬೇಕಾದ ಇಚ್ಛಾಶಕ್ತಿಯನ್ನು ವಹಿಸುತ್ತಲೇ ಇಲ್ಲ.

ರೇಬಿಸ್ ನಿಯಂತ್ರಣಕ್ಕಾಗಿ ಸರ್ಕಾರ ಹಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ನಿಜ. ಆದರೆ, ಈ ಕಾರ್ಯಕ್ರಮ ನಿರ್ವಹಣೆಯು ಯಾವುದೇ ಒಂದು ಇಲಾಖೆಯ ಅಡಿಯಲ್ಲಿ ಬರುವುದಿಲ್ಲ. ಇದೂ ಕೂಡ ರೋಗ ನಿಯಂತ್ರಣಕ್ಕೆ ಇರುವ ಬಹು ದೊಡ್ಡ ಅಡ್ಡಿ. ಕೇಂದ್ರ ಸರ್ಕಾರದ ಹಲವು ಇಲಾಖೆಗಳು, ಸ್ಥಳೀಯ ಸಂಸ್ಥೆಗಳು, ಅಧಿಕಾರಿಗಳು ಹೀಗೆ ಹಲವು ವಿಭಾಗಗಳು ಕೆಲಸ ಮಾಡಬೇಕಾಗುತ್ತದೆ. ಇವುಗಳ ಪ್ರಥಮ ಆದ್ಯತೆ ಬೇರೆ ಬೇರೆ ಇರುತ್ತದೆ. ಈ ಕಾರಣದಿಂದ ರೇಬಿಸ್ ನಿಯಂತ್ರಣ ಕೆಲಸಗಳು ಹಿಂದೆ ಬೀಳುತ್ತಿವೆ.

ಗೋವಾ ಮಾದರಿ

ಹಾಗಾದರೆ, ರೇಬಿಸ್‌ನಿಂದ ಮುಕ್ತಿ ಸಿಗುವುದೇ ಇಲ್ಲವೇ ಎಂದರೆ, ಖಂಡಿತ ಮುಕ್ತಿ ಇದೆ ಎನ್ನುವುದನ್ನು ಗೋವಾ ತೋರಿಸಿಕೊಟ್ಟಿದೆ. 2017ರಿಂದ ಇಲ್ಲಿಯವರೆಗೆ ಗೋವಾದಲ್ಲಿ ರೇಬಿಸ್‌ನಿಂದ ಒಂದೇ ಒಂದು ಸಾವು ಸಂಭವಿಸಿಲ್ಲ. ಇದಕ್ಕೆ ಮುಖ್ಯ ಕಾರಣ ಸರ್ಕಾರದ ಇಚ್ಛಾಶಕ್ತಿ. ಜೊತೆಗೆ ಈ ಯಶಸ್ಸಿನ ಹಿಂದಿರುವುದು 'ಮಿಷನ್ ರೇಬಿಸ್' ಎನ್ನುವ ಅಂತರರಾಷ್ಟ್ರೀಯ ಸ್ವಯಂ ಸೇವಾ ಸಂಸ್ಥೆ.

2013ರಲ್ಲಿ ಈ ಸಂಸ್ಥೆಯು ಗೋವಾವನ್ನು ತನ್ನ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಳ್ಳುತ್ತದೆ. ಬೀದಿ ನಾಯಿಗಳಿಗೆ ಸಾಮೂಹಿಕ ಲಸಿಕೆ ಕಾರ್ಯಕ್ರಮ, ರೇಬಿಸ್ ಕುರಿತು ಸಮುದಾಯ ಜಾಗೃತಿ ಕಾರ್ಯಕ್ರಮ ಹಾಗೂ ರೇಬಿಸ್ ರೋಗ ತಡೆ ಕುರಿತು ನಿಗಾವಣೆ ಮಾಡುವುದು– ಈ ಮೂರು ಅಂಶಗಳನ್ನು ಪ್ರಮುಖವಾಗಿ ಇಟ್ಟುಕೊಂಡು ಗೋವಾದಲ್ಲಿ ರೇಬಿಸ್ ರೋಗ ತಡೆಯನ್ನು ಸಾಧಿಸಲಾಗಿದೆ. 2013ರಿಂದ ಇಲ್ಲಿಯವರೆಗೆ 4 ಲಕ್ಷ ಬೀದಿ ನಾಯಿಗಳಿಗೆ ಮಿಷನ್ ರೇಬಿಸ್ ಸಂಸ್ಥೆ ಲಸಿಕೆ ಹಾಕಿದೆ.

ಗೋವಾದ ಕುಗ್ರಾಮಗಳನ್ನೂ ಬಿಡದೆ, ಈ ಸಂಸ್ಥೆ ಬೀದಿನಾಯಿಗಳು ಪತ್ತೆಮಾಡಿ ಲಸಿಕೆ ನೀಡಿದೆ. ಬಲೆಗಳ ಮೂಲಕ ಬೀದಿನಾಯಿಗಳನ್ನು ಹಿಡಿಯುವುದು, ನಂತರ ಅವುಗಳಿಗೆ ಲಸಿಕೆ ನೀಡಿವುದು. ಲಸಿಕೆ ನೀಡಿದ ನಾಯಿಗೆ ವಿಷಯಕಾರಿ ಅಲ್ಲದ ಹಸಿರು ಬಣ್ಣವನ್ನು ಬಳಿಯುವುದು. ನಂತರ ಅವುಗಳನ್ನು ಮತ್ತೆ ಬೀದಿಗೆ ಬಿಡುವುದು. ಎಲ್ಲೆಲ್ಲಿ ಬೀದಿನಾಯಿಗಳು ಇವೆ, ಎಷ್ಟು ಪ್ರದೇಶವನ್ನು ಇಲ್ಲಿಯವರೆಗೆ ಸುತ್ತಾಡಲಾಗಿದೆ, ಎಷ್ಟು ನಾಯಿಗಳಿಗೆ ಲಸಿಕೆ ನೀಡಲಾಗಿದೆ ಎಂಬ ಮಾಹಿತಿಯನ್ನು ಆ್ಯಪ್‌ವೊಂದರಲ್ಲಿ ದಾಖಲು ಮಾಡುವುದು. ಇಂತಹ ಕ್ರಮಗಳನ್ನು ಈ ಸಂಸ್ಥೆಯು ಇಲ್ಲಿಯವರೆಗೂ ಮುಂದುವರಿಸಿಕೊಂಡು ಬಂದಿದೆ. ಇದೇ ಕಾರಣದಿಂದ ಗೋವಾದಲ್ಲಿ ರೇಬಿಸ್ ಅನ್ನು ತಡೆಗಟ್ಟಲಾಗಿದೆ. ಈಗ ಬೀದಿ ನಾಯಿಗಳ ಉಪಟಳದಿಂದ ಕಂಗೆಟ್ಟಿರುವ ಕೇರಳ ಕೂಡ ಇದೇ ಸಂಸ್ಥೆ ಜೊತೆಯಲ್ಲಿ ಕೆಲಸ ಮಾಡಲು ಮುಂದಾಗಿದೆ.

ರೇಬಿಸ್ ತಡೆಯಲು...

ನಾಯಿ ಕಚ್ಚಿದಾಗ, ನಾಯಿ ಕಚ್ಚಿದ ಜಾಗವನ್ನು ತಕ್ಷಣವೇ ನೀರು–ಸೋಪು ಮತ್ತು ಸೋಂಕುನಿವಾರಕ ದ್ರಾವಣ ಬಳಸಿ ತೊಳೆಯಬೇಕು

ಮನೆಮದ್ದು ಎಂದು ಎಣ್ಣೆ, ಖಾರದ ಪುಡಿ, ಗಿಡಮೂಲಿಕೆ ಪುಡಿಗಳನ್ನು ಹಚ್ಚಬಾರದು

ನಾಯಿಕಚ್ಚಿ ಆದ ಗಾಯಕ್ಕೆ ಬಟ್ಟೆ ಅಥವಾ ಬ್ಯಾಂಡೇಜ್ ಹಾಕಬಾರದು

ವಿಳಂಬ ಮಾಡದೇ ವೈದ್ಯರನ್ನು ಕಾಣಬೇಕು. ಚಿಕಿತ್ಸೆ ಪಡೆಯಬೇಕು

ವೈದ್ಯರು ಸೂಚಿಸುವ ಔಷಧಗಳನ್ನು ಪೂರ್ಣ ಪ್ರಮಾಣದಲ್ಲಿ ತೆಗೆದುಕೊಳ್ಳಬೇಕು. ಲಸಿಕೆ ಮತ್ತು ಚುಚ್ಚುಮದ್ದಿನ ಎಲ್ಲಾ ಡೋಸ್‌ಗಳನ್ನು ತಪ್ಪದೇ ತೆಗೆದುಕೊಳ್ಳಬೇಕು

ಕಚ್ಚಿದ ನಾಯಿಯ ಗುರುತನ್ನು ಇಟ್ಟುಕೊಳ್ಳಬೇಕು. ಅದರ ವರ್ತನೆಯ ಮೇಲೆ ನಿಗಾ ಇರಿಸಬೇಕು. ಅದು ಬೀದಿನಾಯಿಯಾಗಿದ್ದು, ಸಾಧ್ಯವಿದ್ದರೆ ರೇಬಿಸ್ ಲಸಿಕೆ ಹಾಕಿಸಬೇಕು. ಸಾಕುನಾಯಿಗಳಿದ್ದರೆ ಅವಕ್ಕೆ ಪ್ರತಿ ವರ್ಷ ರೇಬಿಸ್ ಲಸಿಕೆ ಹಾಕಿಸಬೇಕು. ಆಗ ರೇಬಿಸ್ ಹರಡುವುದನ್ನು ತಡೆಗಟ್ಟಬಹುದು

ಆಧಾರ: ರೇಬಿಸ್ ತಡೆಗಟ್ಟಲು ರಾಷ್ಟ್ರೀಯ ಕಾರ್ಯಯೋಜನೆ ವರದಿ 2023, ವಿಶ್ವ ಆರೋಗ್ಯ ಸಂಸ್ಥೆ ವರದಿಗಳು, ದಿ ಗಾರ್ಡಿಯನ್

'ಮೂಢನಂಬಿಕೆ ಸಲ್ಲ'

ತೀರಾ ಇತ್ತೀಚೆಗೆ ವ್ಯಕ್ತಿಯೊಬ್ಬರು ನನ್ನ ಬಳಿ ಬಂದು ಮಗನನ್ನು ಉಳಿಸಿಕೊಡುವಂತೆ ಅಂಗಲಾಚಿದರು. ಆದರೆ, ಕಾಲಮಿಂಚಿತ್ತು.

ಬಾಲಕನಿಗೆ ನಾಯಿ ಕಚ್ಚಿತ್ತು. ತಕ್ಷಣವೇ ಬಾಲಕನನ್ನು ತಂದೆ ನಾಟಿ ವೈದ್ಯರ ಬಳಿ ಕರೆದುಕೊಂಡು ಹೋಗಿದ್ದರು. ತೋಳಿನ ಭಾಗಕ್ಕೆ ಬಳ್ಳಿಯೊಂದನ್ನು ಕಟ್ಟಿದರೆ, ರೇಬಿಸ್ ಗುಣವಾಗುತ್ತದೆ ಎಂಬ ನಂಬಿಕೆ. ಎರಡು ತಿಂಗಳ ನಂತರ ಬಾಲಕನಲ್ಲಿ ರೇಬಿಸ್ ರೋಗಲಕ್ಷಣಗಳು ಕಾಣಿಸಿಕೊಂಡವು. ಕೆಲವೇ ದಿನಗಳಲ್ಲಿ ಆತ ಮೃತಪಟ್ಟ.

ದೊಡ್ಡಬಳ್ಳಾಪುರದ ಬಳಿ ಗ್ರಾಮವೊಂದಲ್ಲಿ 12 ಹಸುಗಳು ಕೆಲವೇ ದಿನಗಳಲ್ಲಿ ಒಂದಾದ ಮೇಲೊಂದು ಮೃತಪಟ್ಟವು. ಗ್ರಾಮಕ್ಕೆ ಗಂಡಾಂತರ ಒದಗಿದೆ ಎಂದು ತಿಳಿದ ಗ್ರಾಮಸ್ಥರು ದೊಡ್ಡ ಹೋಮವೊಂದನ್ನು ಆಯೋಜಿಸಿದ್ದರು. ರೇಬಿಸ್‌ನಿಂದ ಹಸು ಸತ್ತಿರುವ ಬಗ್ಗೆ ಅವರಲ್ಲಿ ಅರಿವೇ ಇರಲಿಲ್ಲ.

ಹೀಗೆ, ರೇಬಿಸ್ ಸುತ್ತಲೂ ಹಲವು ಮೂಢನಂಬಿಕೆಗಳಿವೆ. ಜೊತೆಗೆ ಜಾಗೃತಿಯ ಕೊರತೆಯೂ ಇದೆ. ಒಮ್ಮೆ ರೇಬಿಸ್ ಬಂದರೆ ಜನರನ್ನು ಸಾವಿನಿಂದ ಬಚಾವು ಮಾಡಲು ಸಾಧ್ಯವಿಲ್ಲ. ಆದರೆ, ನಾಯಿ ಕಚ್ಚಿದ ಕೂಡಲೇ ಮುಂಜಾಗ್ರತಾ ಕ್ರಮ ವಹಿಸಿದರೆ, ಸಾವನ್ನು ತಡೆಯಬಹುದು. ನಾಯಿ ಕಚ್ಚಿದ ಕೂಡಲೇ ಬಟ್ಟೆ ಸೋಪಿನಿಂದ 15 ನಿಮಿಷಗಳವರೆಗೆ ಗಾಯವನ್ನು ಸ್ವಚ್ಛ ಮಾಡಬೇಕು. ನಂತರ ತಕ್ಷಣದಲ್ಲಿಯೇ ವೈದ್ಯರ ಬಳಿ ಹೋಗಬೇಕು. ನಮ್ಮ ಜನರಗಳಲ್ಲಿ ಇರುವ ಮತ್ತೊಂದು ಸಮಸ್ಯೆ ಎಂದರೆ, ಲಸಿಕೆಗೆ ಬರದೇ ಇರುವುದು. ಎರಡು ಬಾರಿ ಬಂದವರು, ನಂತರ ಲಸಿಕೆ ಪಡೆದುಕೊಳ್ಳುವುದಕ್ಕೆ ಬರುವುದೇ ಇಲ್ಲ. ಈ ನಿರ್ಲಕ್ಷ್ಯವನ್ನು ಜನರು ಬಿಡಬೇಕು.

ಶ್ರೀಕೃಷ್ಣ ಇಸಳೂರ, ರೇಬಿಸ್ ತಜ್ಞ
ಪ್ರಾಧ್ಯಾಪಕ, ಪಶುವೈದ್ಯಕೀಯ ಮಹಾವಿದ್ಯಾಲಯ, ಹೆಬ್ಬಾಳ, ಬೆಂಗಳೂರು

ಎಡಗೈ ಹಿಡಿದ ನಿರೂಪ್!

ಭಿನ್ನವಾದ ಶೀರ್ಷಿಕೆಯಿಂದಲೇ ಸದ್ದು ಮಾಡುತ್ತಿರುವ ದಿಗಂತ್ ನಟನೆಯ 'ಎಡಗೈಯೇ ಅಪಘಾತಕ್ಕೆ ಕಾರಣ' ಸಿನಿಮಾ ತಂಡದಿಂದ ಹೊಸ ಸುದ್ದಿ ಹೊರಬಿದ್ದಿದೆ. 'ರಂಗಿತರಂಗ', 'ವಿಕ್ರಾಂತ್ ರೋಣ' ಖ್ಯಾತಿಯ ನಟ ನಿರೂಪ್ ಭಂಡಾರಿ ವಿಶೇಷ ಪಾತ್ರದಲ್ಲಿ ದಿಗಂತ್‌ಗೆ ಜೊತೆಯಾಗಿದ್ದಾರೆ.

ನಾಯಕನಾಗಿ ಬೆಳ್ಳಿಪರದೆಯಲ್ಲಿ ಮಿಂಚಿರುವ ನಿರೂಪ್ ಭಂಡಾರಿ, ದಿಗಂತ್ ಚಿತ್ರದಲ್ಲಿ ವಿಶೇಷ ಪಾತ್ರ ಮಾಡಲು ಸಿನಿಮಾದ ಕಥಾಹಂದರವೇ ಕಾರಣವಂತೆ. ಕಮರ್ಷಿಯಲ್ ಸಿನಿಮಾಗಳ ಮಧ್ಯೆ ಇಂತಹ ವಿಭಿನ್ನ ರೀತಿಯ ಕಾನ್ಸೆಪ್ಟ್ ಇರುವ ಚಿತ್ರದ ಕಥೆ ನಿರೂಪ್ ಅವರಿಗೆ ಇಷ್ಟವಾಯಿತಂತೆ. ಚಿತ್ರವನ್ನು ಸಮರ್ಥ್ ಬಿ. ಕಡಕೋಳ್ ನಿರ್ದೇಶನ ಮಾಡುತ್ತಿದ್ದಾರೆ. ಇದು ಅವರ ನಿರ್ದೇಶನದ ಮೊದಲ ಚಿತ್ರ. ಶೀರ್ಷಿಕೆಯೇ ಹೇಳುವಂತೆ ಇದು ಎಡಗೈ ಬಳಸುವವರ ಸಮಸ್ಯೆಗಳ ಸುತ್ತ ಸುತ್ತುವ ಸಿನಿಮಾವಾಗಿದೆ. 'ಅಂಬಿ ನಿಂಗ್ ವಯಸ್ಸಾಯ್ತೋ' ಸಿನಿಮಾ ಖ್ಯಾತಿಯ ನಿರ್ದೇಶಕ ಗುರುದತ್ ಗಾಣಿಗ ಮತ್ತು ನಿರ್ದೇಶಕ ಸಮರ್ಥ್ ಬಿ. ಕಡಕೋಳ್ ಜೊತೆಯಾಗಿ ಈ ಸಿನಿಮಾವನ್ನು ನಿರ್ಮಾಣ ಮಾಡುತ್ತಿದ್ದಾರೆ. ಸಿನಿಮಾದಲ್ಲಿ ದಿಗಂತ್‌ಗೆ ನಟಿ ಧನು ಹರ್ಷ ಜೋಡಿಯಾಗಿದ್ದಾರೆ. ನಟಿಯರಾದ ರಾಧಿಕಾ ನಾರಾಯಣ್ ಮತ್ತು ನಿಧಿ ಸುಬ್ಬಯ್ಯ ಕೂಡ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ❖

ನಿರೂಪ್ ಹಾಗೂ ದಿಗಂತ್

'ರೋನಿ' ಟ್ರೇಲರ್ ಬಿಡುಗಡೆ

ರುತ್ವಿ ಪಟೇಲ್

ಧರ್ಮ ಕೀರ್ತಿರಾಜ್, ತಿಲಕ್ ಅಭಿನಯದ 'ರೋನಿ' ಚಿತ್ರದ ಟ್ರೇಲರ್ ಹಾಗೂ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಕಿರಣ್.ಆರ್.ಕೆ ಕಥೆ ಬರೆದು, ನಿರ್ದೇಶಿಸಿರುವ ಚಿತ್ರಕ್ಕೆ ಎಂ.ರಮೇಶ್ ಹಾಗೂ ಪವನ್‌ಕುಮಾರ್ ಬಂಡವಾಳ ಹೂಡಿದ್ದಾರೆ.

'ಥ್ರಿಲ್ಲರ್, ಸಸ್ಪೆನ್ಸ್ ಕಥೆ. ಶ್ರೀಮಂತ ಹುಡುಗಿಯ ಮನೆಯಲ್ಲಿರುವ ಮೂವತ್ತು ಕೋಟಿ ರೂಪಾಯಿ ದರೋಡೆಯಾಗುತ್ತದೆ. ಇದನ್ನು ತನಿಖೆ ನಡೆಸಲು ಎಸಿಪಿ ಅಧಿಕಾರಿಯೊಬ್ಬರು ನೇಮಕಗೊಳ್ಳುತ್ತಾರೆ. ಅವರಿಂದ ಆರೋಪಿಗಳನ್ನು ಪತ್ತೆ ಮಾಡಲು ಸಾಧ್ಯವಾಗುವುದಿಲ್ಲ. ಇದೇ ವೇಳೆ ಎರಡು ಕೊಲೆಗಳು ನಡೆಯುತ್ತವೆ. ಕೊಲೆ ಮಾಡಿದವರು ಯಾರು? ದರೋಡೆಗೂ ಕೊಲೆಗೂ ಇರುವ ಸಂಬಂಧವೇನು ಎಂಬುದನ್ನು ಚಿತ್ರದಲ್ಲಿಯೇ ನೋಡಬೇಕು. ನಾಲ್ಕು ಪಾತ್ರಗಳಿದ್ದು, ಇದರಲ್ಲಿ ರೋನಿ ಯಾರು ಎನ್ನುವುದು ಕ್ಲೈಮಾಕ್ಸ್‌ನಲ್ಲಿ ತಿಳಿಯುತ್ತದೆ' ಎಂದರು ನಿರ್ದೇಶಕ ಕಿರಣ್.

ಮುಂಬೈ ಮೂಲದ ರುತ್ವಿ ಪಟೇಲ್ ನಾಯಕಿ. ತಾರಾಗಣದಲ್ಲಿ ಕೀರ್ತಿರಾಜ್, ರಘು ಪಾಂಡೇಶ್ವರ, ಬಲರಾಜವಾಡಿ ಮುಂತಾದವರಿದ್ದಾರೆ. ಆಕಾಶ್‌ಪರ್ವ ಸಂಗೀತ ಸಂಯೋಜನೆ, ವೀನಸ್‌ನಾಗರಾಜಮೂರ್ತಿ ಛಾಯಾಗ್ರಹಣ, ವೆಂಕಿ. ಯುಡಿವಿ ಸಂಕಲನ ಚಿತ್ರಕ್ಕಿದೆ. ಅಕ್ಟೋಬರ್ ತಿಂಗಳಲ್ಲಿ ಚಿತ್ರ ಬಿಡುಗಡೆಗೆ ಚಿತ್ರತಂಡ ಸಿದ್ಧತೆ ನಡೆಸಿದೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ಅಸೂಯೆ ಎಂಬ ಅಂಗೈನ ಕೆಂಡ

ನುಡಿ ಬೆಳಗು



ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಒಂದು ಹಾವು, ಮಿಂಚುಹುಳವೊಂದನ್ನು ಹಿಡಿಯಲು ಬಹಳ ಪ್ರಯತ್ನಪಡುತ್ತಿತ್ತು. ಅದನ್ನು ನೋಡಿದ ಮಿಂಚುಹುಳಕ್ಕೆ ಆಶ್ಚರ್ಯವಾಗಿ 'ನಾನು ನಿನ್ನನ್ನು ಮೂರು ಪ್ರಶ್ನೆ ಕೇಳಲಾ' ಎಂದಿತು. ಹಾವು,'ಆಯಿತು ಕೇಳು' ಎಂದಿತು. 'ನಾನು ನಿನ್ನ ಆಹಾರ ಸರಪಳಿಯಲ್ಲಿ ಸೇರುತ್ತೇನಾ' ಎಂದಿತು ಮಿಂಚುಹುಳ. ಇಲ್ಲ ಎಂದು ಹೇಳಿತು ಹಾವು. 'ನಾನು ನಿನಗೇನಾದರೂ ತೊಂದರೆ ಮಾಡಿದ್ದೇನೆಯೇ' ಎಂದು ಮಿಂಚುಹುಳ ಎರಡನೇ ಪ್ರಶ್ನೆ ಕೇಳಿತು. ಅದಕ್ಕೂ ಇಲ್ಲ ಎಂದೇ ಉತ್ತರ. 'ಹಾಗಾದರೆ ನೀನು ನನ್ನನ್ನು ಕಬಳಿಸಿಬಿಡಲು ಹೊಂಚು ಹಾಕುತ್ತಿರುವುದು ಏಕೆ ಅಂತಾದರೂ ಹೇಳುತ್ತೀಯಾ' ಎಂದು ಅಚ್ಚರಿಯಿಂದ ಕೇಳಿತು ಮಿಂಚುಹುಳು. ಅದಕ್ಕೆ ಹಾವು, 'ನೀನು ಹೊಳೆಯುವುದನ್ನು ನನ್ನಿಂದ ಸಹಿಸಲಾಗುತ್ತಿಲ್ಲ' ಎಂದಿತು!

ಬೇರೆಯವರ ಸಂತೋಷವನ್ನಾಗಲೀ, ಯಶಸ್ಸನ್ನಾಗಲೀ ನೋಡಿದರೆ ನಮಗೆ ಕಸಿವಿಸಿ ಆಗುತ್ತದೆಂದರೆ ಅದಕ್ಕಿಂತ ವಿಚಿತ್ರ ಬೇರಿಲ್ಲ. ಆದರೆ, ಈ ಅಸೂಯೆ ಎನ್ನುವುದು ಮನುಷ್ಯನಲ್ಲಿ ಹಾಸುಹೊಕ್ಕಾಗಿರುವ ಸ್ವಭಾವ. ತನ್ನ ತಂದೆ ಧೃತರಾಷ್ಟ್ರ, ಪಾಂಡವರಿಗೆ ಖಾಂಡವವೆಂಬ ಪಾಳುಬಿದ್ದ ಜಾಗವನ್ನು ಅರ್ಧರಾಜ್ಯವೆಂದು ಕೊಟ್ಟು ಕಳಿಸಿದಾಗ ಸುಮ್ಮನಿದ್ದ ದುರ್ಯೋಧನ ಅವರು ಸ್ವಂತ ಪರಿಶ್ರಮದಿಂದ ಅದನ್ನು ಭೂಮಿಯ ಮೇಲಿನ ಸ್ವರ್ಗವನ್ನಾಗಿಸಿಕೊಂಡಾಗ ಅಸೂಯೆಯಿಂದ ಕುದಿಯುತ್ತಾನೆ. ಈ ಅಸೂಯೆಯೇ ಮಹಾಭಾರತ ಯುದ್ಧಕ್ಕೆ ಮುನ್ನುಡಿ ಬರೆದು ಬಹುದೊಡ್ಡ ಅನಾಹುತಕ್ಕೆ ಕಾರಣವಾಗುತ್ತದೆ.

ತ್ರೀ ಈಡಿಯಟ್ಸ್ ಸಿನಿಮಾದಲ್ಲಿರುವ 'ಸ್ನೇಹಿತ ಅನುತ್ತೀರ್ಣನಾದರೆ ಬೇಸರವಾಗುತ್ತದೆ. ಆದರೆ, ಆತ ಮೊದಲ ಸ್ಥಾನ ಪಡೆದರೆ ಇನ್ನೂ ಬೇಸರವಾಗುತ್ತದೆ' ಎಂಬ ಸಂಭಾಷಣೆ ಈ ಅಸೂಯೆ ಅನ್ನುವುದು ಎಂತಹ ಆಪ್ತ ಸಂಬಂಧಗಳಲ್ಲೂ ಇಣುಕುತ್ತದೆ ಎಂಬುದನ್ನು ಬಹಳ ಚೆನ್ನಾಗಿ ಹೇಳುತ್ತದೆ. ಇತರರು ಕಷ್ಟಪಟ್ಟು ಯಶಸ್ವಿಯಾದರೆ ಅದರಿಂದ ಸ್ಫೂರ್ತಿ ಪಡೆದು ನಾವೂ ಪ್ರಯತ್ನಪಟ್ಟು ಮುಂದುವರೆಯಲು ಪ್ರಯತ್ನಿಸಬೇಕು. ಅದನ್ನು ಬಿಟ್ಟು ಅಸೂಯೆಯಿಂದ ಬೇರೆಯವರ ವ್ಯಕ್ತಿತ್ವವನ್ನು ನಾಶ ಮಾಡಲು ಹೊರಡುವುದು ಕ್ಷುಲ್ಲಕತೆ. ಸಾಮಾಜಿಕ ಜಾಲತಾಣಗಳಲ್ಲಿ ಕಾರಣವೇ ಇಲ್ಲದೇ ಬೇರೆಯವರ ತೇಜೋವಧೆ ಮಾಡುವ ವ್ಯಕ್ತಿಗಳು ಇದೇ ಅಸೂಯೆ ಎಂಬ ಗುಣಪಡಿಸಲಾಗದ ಕಾಯಿಲೆಯಿಂದ ನರಳುವವರೇ.

ಬೇರೆಯವರ ಸಾಧನೆಯ ಬಗ್ಗೆ ಅಸೂಯೆ ಪಟ್ಟು ಒದ್ದಾಡುವುದೆಂದರೆ ನಮ್ಮ ಅಂಗೈಯಲ್ಲಿ ಉರಿವ ಕೆಂಡ ಹಿಡಿದುಕೊಂಡಂತೆ. ಬೇರೆಯವರನ್ನು ಸುಡುತ್ತದೋ ಇಲ್ಲವೋ! ಆದರೆ, ಅದು ನಮ್ಮನ್ನು ಸುಡದೇ ಬಿಡದು. ಕೆಲವೊಮ್ಮೆ ನಮ್ಮ ಕೀಳರಿಮೆಯೂ ಅಸೂಯೆಯ ರೂಪದಲ್ಲಿ ಹೊರಬರುತ್ತದೆ. ಹೇಗೆ ತುಕ್ಕು ಕಬ್ಬಿಣವನ್ನು ನಾಶ ಮಾಡುತ್ತದೆಯೋ ಅಸೂಯೆ ನಮ್ಮ ನೆಮ್ಮದಿಯನ್ನು ಹಾಳು ಮಾಡುತ್ತದೆ. ನಮ್ಮ ಸುತ್ತಮುತ್ತ ಈ ರೀತಿಯ ವ್ಯಕ್ತಿಗಳಿದ್ದರೆ ಜಾಗೃತರಾಗೋಣ. ಯಾರಾದರೂ ಯಶಸ್ವಿಯಾದರೆ ನಮ್ಮೆದೆಯೊಳಗೆ ಅವಲಕ್ಕಿ ಕುಟ್ಟಿದಂತಾಗುತ್ತದೆಯೇ? ಮೇಲಿನ ಕಥೆಯ ಹಾವಿನಂತಹ ಅಸೂಯಾಪರರು ನಾವಾಗದಂತೆ ಎಚ್ಚರಿಕೆ ವಹಿಸೋಣ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಸೆಪ್ಟೆಂಬರ್ 28, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ಚತುರ್ದಶಿ ಗಂ. 18-50 ನಕ್ಷತ್ರ: ಪೂರ್ವಾಭಾದ್ರ ಗಂ. 25-49 ಯೋಗ: ಗಂಡ ಗಂ. 23-55 ಕರಣ: ಗರ ಗಂ. 08-34, ಕನ್ಯಾ ಮಾಸದ 11 ನೇದಿನ, ಮಳೆನಕ್ಷತ್ರ: ಹಸ್ತ 1. ರಾಹುಕಾಲ : ಮಧ್ಯಾಹ್ನ 01-30 – 03-00, ಸೂರ್ಯೋದಯ : 06-23 ಸೂರ್ಯಾಸ್ತ : 06-19, ಮುಸ್ಲಿಂ ದಿನಾಂಕ : 12 ರಬಿಉಲ್ಲಾವಲ್, ದಿನ ವಿಶೇಷ : ಅನಂತ ಚತುರ್ದಶಿ, ಇಂದ್ರ ಪೂರ್ಣಿಮಾ, ಮಿಲಾದ್-ಉನ್-ನಬಿ ಅಥವಾ ಈದ್-ಎ-ಮಿಲಾದ್ (ಪ್ರೊಫೆಟ್ ಜನ್ಮದಿನ) (ಮುಸ್ಲಿಂ), ಫತೇಹ ದ್ವಾಜ್ದಹಂ ಅಥವಾ ಬಾರಾ ವಫಾತ್, (ಮುಸ್ಲಿಂ), ಅದೃಷ್ಟ ಸಂಖ್ಯೆ : 11, 9

ಮೇಷ: ಮನೆಯ ಮಂಗಳ ಕಾರ್ಯಗಳಿಗೆ ಅಡ್ಡಿ ಉಂಟುಮಾಡುವ ಪ್ರಯತ್ನವು ನೆರೆಯವರಿಂದ ನಡೆಯಬಹುದು. ಆಹಾರ ಪದಾರ್ಥದ ಉದ್ದಿಮೆದಾರರಿಗೆ ಹೊಸ ಯೋಜನೆ ಸಾಫಲ್ಯ ತರಲಿದೆ. ದ್ವೇಷ ಮನೋಭಾವಗಳು ಸರಿಯಾಗಲಿದೆ.

ವೃಷಭ: ಯಾವುದೇ ರೀತಿಯ ಖರೀದಿಯಲ್ಲಿ ಎಚ್ಚರವಿರಲಿ, ಮೋಸ ಹೋಗುವ ಸಂಭವವಿದೆ. ಕಾನೂನಿಗೆ ವಿರುದ್ಧವಾದ ಕೆಲವು ಸಂಗತಿಗಳು ನಡೆಯಬಹುದು. ಬಂಧು ಮಿತ್ರರೊಡನೆ ಸಂತಸದ ಕ್ಷಣ ಹಂಚಿಕೊಳ್ಳುವಂತಾಗಲಿದೆ.

ಮಿಥುನ: ವೈಯಕ್ತಿಕವಾಗಿ ಎಷ್ಟು ಹಣ ಗಳಿಸಬಹುದೆಂದು ಲೆಕ್ಕಾಚಾರ ಹಾಕುವುದಕ್ಕಿಂತ ಬಂಡವಾಳ ಕಾಯ್ದುಕೊಳ್ಳುವುದರತ್ತ ಗಮನ ಹರಿಸಿ. ಸೂರ್ಯನಾರಾಯಣನ ಸ್ಮರಣೆ ಮಾಡಿದಲ್ಲಿ ಯಶಸ್ಸು ಕಾಣುವಿರಿ.

ಕರ್ಕಾಟಕ: ಷೇರುಪೇಟೆಯ ಲೆಕ್ಕಾಚಾರ ಅರಿತಿರುವ ನೀವು ಹೆಚ್ಚಿನ ಸಂಪಾದನೆ ಮಾಡುವಿರಿ. ಬಾಕಿ ಉಳಿದ ಕೆಲಸವನ್ನು ಪೂರ್ತಿಗೊಳಿಸಲು ಪ್ರಶಸ್ತವಾಗಿದೆ. ಮಕ್ಕಳ ಆರೋಗ್ಯದಲ್ಲಿನ ಕ್ಷೀಣತೆ ತಲೆನೋವಿಗೆ ಕಾರಣವಾಗುತ್ತದೆ.

ಸಿಂಹ: ತಂತ್ರಜ್ಞಾನಿಗಳಿಗೆ ಉದ್ಯೋಗದಲ್ಲಿ ಬಗೆಹರಿಸಲಾಗದ ಸಮಸ್ಯೆ ಎದುರಾಗಬಹುದು. ವಿದೇಶ ಯಾತ್ರಿಗಳಿಗೆ ಪ್ರಯಾಣದಲ್ಲಿ ಸುಖ, ನಿರ್ಭಯದ ವಾತಾವರಣ ಉಂಟಾಗುವುದು. ನೂತನ ವಸ್ತ್ರ ಖರೀದಿಯ ಯೋಗವಿದೆ.

ಕನ್ಯಾ: ಕಾರ್ಖಾನೆಯಲ್ಲಿ ರಾತ್ರಿ ಪಾಳಿ ಕೆಲಸವನ್ನು ಬದಲಾಯಿಸಿ ಕೊಳ್ಳುವ ಪ್ರಯತ್ನ ನಡೆಸಬಹುದು. ಲೋಹ ವಸ್ತು ವ್ಯಾಪಾರಿಗಳಿಗೆ ವಿತರಕರಿಂದ ಸಣ್ಣ-ಪುಟ್ಟ ತೊಂದರೆ ಆಗುತ್ತದೆ. ಯಶಸ್ಸಿನ ಹೊಸ ಮಾರ್ಗಗಳು ಅರಿವಾಗುತ್ತದೆ.

ತುಲಾ: ಆಕಸ್ಮಿಕ ಪ್ರಯಾಣದಿಂದ ದಿನಚರಿಯ ಕಾರ್ಯಗಳು, ಅನಿವಾರ್ಯದ ಬೇರೆ ಕೆಲಸಗಳೆಲ್ಲದೂ ವಿಳಂಬವಾಗಲಿವೆ. ಎಂಜಿನಿಯರಿಂಗ್ ವ್ಯಾಸಂಗ ಮಾಡುವವರಿಗೆ ಉತ್ತೇಜನ ಸಿಗಲಿದೆ. ಹಿತಶತ್ರುಗಳ ಬಗ್ಗೆ ಜಾಗ್ರತೆ ಇರಲಿ.

ವೃಶ್ಚಿಕ: ಅಧಿಕಾರಿ ವರ್ಗದವರಲ್ಲಿ ಅವಶ್ಯಕತೆಗಿಂತ ಜಾಸ್ತಿ ಮಾತನಾಡುವುದು ಸಮಸ್ಯೆಯನ್ನು ಕರೆದಂತಾಗುವುದು. ಯಾವ ವಿಚಾರಕ್ಕೂ ಬೇಸರ ಪಡುವ ಅವಶ್ಯಕತೆ ಇಲ್ಲ. ಉದ್ಯೋಗದಲ್ಲಿ ಕ್ರಿಯಾಶೀಲತೆಯಿಂದ ಹೆಚ್ಚು ಮೆರೆಯುವಿರಿ.

ಧನು: ಉದ್ಯೋಗಾಕಾಂಕ್ಷಿಗಳಿಗೆ ಸಂಸ್ಥೆಯ ಲೆಕ್ಕಾಚಾರವನ್ನು ನೋಡುವ ಅಮೋಘ ಅವಕಾಶಗಳು ಸಿಗಲಿದೆ. ವಿವೇಕಯುಕ್ತವಾದ ನಡವಳಿಕೆ ಪ್ರಯೋಜನಗಳನ್ನು ನೀಡುತ್ತದೆ. ಶ್ರಮದ ದುಡಿಮೆಯೇ ಮಂತ್ರವಾಗಿರಲಿ.

ಮಕರ: ದೈಹಿಕವಾಗಿ ಬಲಾಢ್ಯರಾಗಿರುವ ನಿಮಗೆ ಮಾನಸಿಕವಾಗಿ ಬಹಳ ದೊಡ್ಡ ಹೊಡೆತ ಬೀಳುವ ಸಂಭವವಿದೆ. ನಿಮಗೆ ಒದಗಿಬರುವ ಅವಕಾಶಗಳು ಭವಿಷ್ಯಕ್ಕೆ ಅನುಕೂಲವಾಗಿರುವುದು. ಟ್ರಾವೆಲ್ ಏಜೆಂಟರ್‌ಗಳಿಗೆ ಶುಭ ದಿನ.

ಕುಂಭ: ಜನರನ್ನು ಆಕರ್ಷಿಸುವ ಕಲೆ ಹೊಂದಿರುವ ನಿಮಗೆ ವ್ಯ ಹಾರದಲ್ಲಿ ಆಕರ್ಷಿಸುವುದು ಕಷ್ಟವಿಲ್ಲ. ಹೊಸ ಮನೆಗೆ ಹೋಗಬಹುದು. ಅನಿರೀಕ್ಷಿತ ಘಟನೆಯಿಂದ ವಿಚಲಿತರಾಗದೆ ಮುಂದುವರಿಯಿರಿ.

ಮೀನ: ರಸ ಪದಾರ್ಥಗಳ ವ್ಯವಹಾರ ನಡೆಸುವವರಿಗೆ ಹೆಸರು ಹೆಚ್ಚಿಸಿಕೊಳ್ಳಲು ಉತ್ತಮ ಅವಕಾಶ ಸಿಗಲಿದೆ. ವಾಕ್ಚಾತುರ್ಯವನ್ನು ಬೆಳೆಸಿಕೊಳ್ಳುವ ಬಗ್ಗೆ ನಿಮ್ಮ ಪ್ರಯತ್ನವಿರಲಿ. ಸಾಲದ ರೂಪದಲ್ಲಿ ಹಣವನ್ನು ಯಾರಿಗೂ ನೀಡಬೇಡಿ.

ಪದಬಂಧ 5454

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ವನದಲ್ಲಿ ದೊರೆತಿರುವ ಆದಾಯ (4)
3.ಕಾಡು ಪ್ರಾಣಿ ಇಲ್ಲಿದೆ (4)
5.ದುಃಖಕ್ಕೆ ಮೂಲವಾದ ಅತೀ ಆಸೆ (3)
6.ಒಂದು ಕಡೆಯಿಂದ ಇನ್ನೊಂದಡೆಗೆ ಸಾಗಿಸುವಿಕೆ (3)
8.ತವರಿನವರು ಕೊಟ್ಟಿರುವ ಲೋಹ (3)
10.ಮಂಕ ಹೊತ್ತಿರುವ ಬುಟ್ಟಿ (3)
11.ಸರದ ಜೊತೆಯಿರಿಸಿದ ಸಾಮಾನು (3)
13.ದೇವಾಲಯದ ಗೋಪುರದ ತುದಿ (3)
15.ಈಕೆ ಒಡಹುಟ್ಟಿದವಳು (4)
16.ಪಟದಲ್ಲಿಯೇ ಈ ತೊಳಲಾಟ! (4)

ಮೇಲಿಂದ ಕೆಳಕ್ಕೆ

1.ವರ ಪಡೆದಿರುವ ಬೇಡ (4)
2.ನನಗದು ಬೇಕು ಎಂದವನ ಕೈಯಲ್ಲಿನ ದುಡ್ಡು (3)
3.ಮದುವೆ ಗಂಡು ತೋರಿರುವ ವ್ಯಾಯಾಮದ ಪಟ್ಟು (3)
4.ಕಾಲವನ್ನು ತೋರಿಸುವ ಯಂತ್ರ (4)
7.ಈತ ವಾದ್ಯ ನುಡಿಸುವವನು (3)
9.ವಾಗ್ಮಿ ಇಲ್ಲಿಗೆ ಬಂದಿದ್ದಾನೆ (3)
10.ಮಂದ ಬುದ್ಧಿಯವನ ಮುಗುಳುನಗೆ (4)
12.ಕುಡಿಗಣ್ಣಲ್ಲಿ ನೋಡಿದ ನೋಟ (4)
13.ಪಾಪ! ಕರಿಯ ಮರಿ ಬಿದ್ದಿದೆಯಲ್ಲಾ ಈ ಪ್ರಪಾತದಲ್ಲಿ! (3)
14.ಸರಸದ ಮಾತುಕತೆ (3)

1			2	■	3			4
	■	■		■		■	■	
	■	■	5			■	■	
6	7		■	■	■	8	9	
■		■	■	■	■	■		■
10			■	■	■	11		12
	■	■	13		14	■	■	
	■	■		■		■	■	
15				■	16			

5453ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಧುಮಾಸ 3.ಅನುಭವ
5.ಬಡತನ 7.ಕ್ಷಮಾಗುಣ
9.ವನಪಾಲಕ 12.ಮದಕರಿ
13.ನವರಂಗ 15.ಸರ್ವನಾಮ
16.ಪರಿಚಿತ

ಮೇಲಿಂದ ಕೆಳಕ್ಕೆ:
1.ಮನೋಬಲ
2.ಮಾವುತ 4.ವರುಣ
6.ನವೀನ 8.ಮಾದಕ
9.ವರ್ತಕ 10.ಲಶುನ
11.ಅಂಗಜಾತ 12.ಮಟ್ಟಸ
14.ವಲ್ಲರಿ

ಸುಡೊಕು 5840

				9				8
1	9		8			5		2
		2		6				
		7			9	6		
4	2			3			5	9
6			7		8			
2		5	4		7	9		6
								5
9		6	3		5		4	1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5839 ಸುಡೊಕು

8	7	3	2	1	9	4	6	5
6	2	9	4	5	8	7	1	3
4	1	5	6	7	3	9	2	8
5	4	2	7	9	6	8	3	1
3	6	7	8	4	1	5	9	2
1	9	8	3	2	5	6	4	7
9	8	1	5	6	2	3	7	4
2	3	4	9	8	7	1	5	6
7	5	6	1	3	4	2	8	9

ಷೇರುಪೇಟೆ ವಹಿವಾಟು 173



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,664
ಇಂದಿನ ಅಂತ್ಯ	19,716
▲	52
ದಿನದ ಗರಿಷ್ಠ	19,730

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹535
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹537

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1750 (1740)
ಸೋಯಾ (ರಿಫೈನ್ಡ್)	₹870 (870)
ಸೂರ್ಯಕಾಂತಿ (ರಿಫೈನ್ಡ್)	₹870 (870)
ಪಾಮೋಲಿನ್	₹814 (805)

ವಿನಿಮಯ ದರ

$ ಡಾಲರ್	83.22
£ ಪೌಂಡ್	101.11
€ ಯುರೊ	87.89
¥ ಯೆನ್ (100ಕ್ಕೆ)	56

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಪುತ್ತೂರು	₹4500-7300
ತಿಪಟೂರು	₹6900-8055
ತುರುವೇಕೆರೆ	₹8000-8000

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹250-503
ದ್ವಿತಳಿ (ಬಿ.ವಿ)	₹336-612

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹143
ಆರ್‌ಎಸ್‌ಎಸ್-5	₹137
ಗುಡ್ ಲಾಟ್	₹125

(ಪ್ರತಿ ಕೆ.ಜಿಗೆ)

ಖಾಸಗಿ ಕಂಪನಿಗಳಲ್ಲಿ ಐ.ಟಿ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೆರಿಗೆ ವಂಚನೆ, ಆದಾಯಕ್ಕೆ ಸಂಬಂಧಿಸಿದಂತೆ ತಪ್ಪು ಮಾಹಿತಿ ಒದಗಿಸಿರುವ ಆರೋಪದ ಮೇಲೆ ನಗರದ ವಿವಿಧೆಡೆ ಹತ್ತಕ್ಕೂ ಹೆಚ್ಚು ಖಾಸಗಿ ಕಂಪನಿಗಳ ಕಚೇರಿಗಳ ಮೇಲೆ ಬುಧವಾರ ದಾಳಿಮಾಡಿದ ಆದಾಯ ತೆರಿಗೆ (ಐ.ಟಿ) ಇಲಾಖೆ ಅಧಿಕಾರಿಗಳು, ಶೋಧ ನಡೆಸಿದ್ದಾರೆ.

ಸಿ.ವಿ. ರಾಮನ್ ನಗರ, ಹುಳಿಮಾವು ಸಮೀಪದ ಅಪಾರ್ಟ್‌ಮೆಂಟ್, ಭಾಗಮನೆ ಟೆಕ್‌ಪಾರ್ಕ್ ಸೇರಿದಂತೆ ಹಲವೆಡೆ ಖಾಸಗಿ ಕಂಪನಿಗಳ ಕಚೇರಿಗಳಲ್ಲಿ ಶೋಧ ನಡೆದಿದೆ. ಅವುಗಳಲ್ಲಿ ಹೆಚ್ಚಿನವು ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿದ ಉದ್ದಿಮೆಗಳ ಕಚೇರಿಗಳು ಎಂದು ಮೂಲಗಳು ತಿಳಿಸಿವೆ.

ಕೆಲವು ಖಾಸಗಿ ಕಂಪನಿಗಳು ತಮ್ಮ ವಹಿವಾಟಿನ ನೈಜ ಮಾಹಿತಿಯನ್ನು ಮುಚ್ಚಿಟ್ಟು, ತಪ್ಪು ಮಾಹಿತಿ ನೀಡಿ ತೆರಿಗೆ ವಂಚಿಸುತ್ತಿರುವ ಆರೋಪಗಳಿವೆ. ಹಣಕಾಸು ವಹಿವಾಟಿಗೆ ಸಂಬಂಧಿಸಿದಂತೆ ಎರಡು ಬಗೆಯ ದಾಖಲೆಗಳನ್ನು ನಿರ್ವಹಿಸಿ, ತೆರಿಗೆ ವ್ಯಾಪ್ತಿಯಿಂದ ತಪ್ಪಿಸಿಕೊಳ್ಳುತ್ತಿರುವ ದೂರುಗಳೂ ಇವೆ. ಈ ಕುರಿತು ಪರಿಶೀಲನೆಗಾಗಿ ದಾಳಿ ನಡೆದಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಬೆಳಿಗ್ಗೆ ಏಕಕಾಲಕ್ಕೆ ಎಲ್ಲ ಕಚೇರಿಗಳ ಮೇಲೆ ದಾಳಿ ಮಾಡಿದ್ದು, ತಡ ರಾತ್ರಿಯವರೆಗೂ ಶೋಧ ಮುಂದುವರಿದಿತ್ತು. ಕಂಪನಿಗಳ ಲೆಕ್ಕಪತ್ರಗಳ ದಾಖಲೆಗಳು, ಬ್ಯಾಂಕ್ ದಾಖಲೆಗಳು ಮತ್ತು ಹಣಕಾಸು ವಹಿವಾಟಿಗೆ ಸಂಬಂಧಿಸಿದ ಕಾಗದಪತ್ರಗಳನ್ನು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಎಫ್‌ಕೆಸಿಸಿಐಗೆ ಮೊದಲ ಉಪಾಧ್ಯಕ್ಷೆ ಆಗಿ ಉಮಾ ರೆಡ್ಡಿ ಆಯ್ಕೆ

ಪ್ರಜಾವಾಣಿ ವಾರ್ತೆ

ರಮೇಶ್ ಚಂದ್ರ

ಉಮಾ ರೆಡ್ಡಿ

ಬೆಂಗಳೂರು: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ಅಧ್ಯಕ್ಷರಾಗಿ 2023–24ನೇ ಅವಧಿಗೆ ರಮೇಶ್ ಚಂದ್ರ ಲಹೋಟಿ ಅವರು ಆಯ್ಕೆ ಆಗಿದ್ದಾರೆ. ಹಿರಿಯ ಉಪಾಧ್ಯಕ್ಷರಾಗಿ ಎಂ.ಜಿ. ಬಾಲಕೃಷ್ಣ ಆಯ್ಕೆ ಆಗಿದ್ದಾರೆ.

ಉಮಾ ರೆಡ್ಡಿ ಅವರು ಉಪಾಧ್ಯಕ್ಷೆಯಾಗಿ ಆಯ್ಕೆಯಾಗಿದ್ದು, ಎಫ್‌ಕೆಸಿಸಿಐನ ಇತಿಹಾಸದಲ್ಲಿ ಮಹಿಳೆಯೊಬ್ಬರು ಈ ಸ್ಥಾನಕ್ಕೆ ಆಯ್ಕೆ ಆಗಿರುವುದು ಇದೇ ಮೊದಲು.

ಉಮಾ ಅವರು ಎಫ್‌ಕೆಸಿಸಿಐನ ವಿವಿಧ ಸಮಿತಿಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ.

3,500 ಸಿಬ್ಬಂದಿ ವಜಾ ಮಾಡಲಿರುವ ಬೈಜುಸ್

ನವದೆಹಲಿ (ಪಿಟಿಐ): ಬೈಜುಸ್ ಕಂಪನಿಯು ಪ್ರಸಕ್ತ ಹಣಕಾಸು ವರ್ಷದಲ್ಲಿ ಗರಿಷ್ಠ 3,500 ಸಿಬ್ಬಂದಿಯನ್ನು ಕೆಲಸದಿಂದ ತೆಗೆಯಲಿದೆ ಎಂದು ಮೂಲಗಳು ಹೇಳಿವೆ.

ಕೋವಿಡ್ ವೇಳೆ ಆನ್‌ಲೈನ್ ಶಿಕ್ಷಣಕ್ಕೆ ಬೇಡಿಕೆ ಹೆಚ್ಚಾಗಿದ್ದರಿಂದ ಬೈಜುಸ್ ಹೆಚ್ಚಿನ ಸಂಖ್ಯೆಯಲ್ಲಿ ಸಿಬ್ಬಂದಿಯನ್ನು ನೇಮಿಸಿಕೊಂಡಿತ್ತು. ಈಗ ಬೇಡಿಕೆ ತಗ್ಗಿದ್ದು ಸಿಬ್ಬಂದಿಯನ್ನು ಕೆಲಸದಿಂದ ತೆಗೆಯುತ್ತಿದೆ ಎಂದು ಮೂಲಗಳು ತಿಳಿಸಿವೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪರಿಣಾಮ ಬೀರದ ತೆರಿಗೆ ಲೆಕ್ಕಾಚಾರ ಬದಲಾವಣೆ: ₹1.66 ಲಕ್ಷ ಕೋಟಿ ಹೂಡಿಕೆ

ಹೆಚ್ಚು ಹೂಡಿಕೆ ಸೆಳೆದ ಡೆಟ್ ಫಂಡ್

• ವಿಶ್ವನಾಥ ಎಸ್.

ಮುಖ್ಯಾಂಶಗಳು

- ಲಿಕ್ವಿಡ್ ಫಂಡ್, ಮನಿ ಮಾರ್ಕೆಟ್ ಫಂಡ್‌ಗಳಲ್ಲಿ ಹೆಚ್ಚು ಹೂಡಿಕೆ
- 2024ರಲ್ಲಿ ಹೂಡಿಕೆದಾರರಿಂದ ಲಾಭ ಗಳಿಕೆ ಸಾಧ್ಯತೆ

ಬೆಂಗಳೂರು: ಡೆಟ್ ಮ್ಯೂಚುವಲ್ ಫಂಡ್‌ಗಳಿಂದ ಸಿಗುವ ಲಾಭದ ತೆರಿಗೆ ಲೆಕ್ಕಾಚಾರದಲ್ಲಿ ಮಾಡಿರುವ ಬದಲಾವಣೆಯಿಂದ ಹೂಡಿಕೆ ಮೇಲೆ ಯಾವುದೇ ಪ್ರತಿಕೂಲ ಪರಿಣಾಮ ಬೀರಿಲ್ಲ. ಡೆಟ್ ಫಂಡ್‌ಗಳಲ್ಲಿ ಬಂಡವಾಳ ಒಳಹರಿವು ಹೆಚ್ಚಾಗುತ್ತಲೇ ಇದೆ.

ತೆರಿಗೆ ಪ್ರಯೋಜನಗಳನ್ನು ಕೈಬಿಟ್ಟ ಮೊದಲ ತಿಂಗಳಿನಲ್ಲಿ (ಏಪ್ರಿಲ್) ಡೆಟ್ ಫಂಡ್‌ಗಳಲ್ಲಿ ₹1.05 ಲಕ್ಷ ಕೋಟಿ ಬಂಡವಾಳ ಹೂಡಿಕೆ ಆಗಿದ್ದು, ಮೂರು ವರ್ಷಗಳಲ್ಲೇ ಗರಿಷ್ಠ ಮಟ್ಟ ಅದಾಗಿದೆ. 2023–24ರ ಏಪ್ರಿಲ್–ಆಗಸ್ಟ್ ಅವಧಿಯಲ್ಲಿ ಒಟ್ಟು ಹೂಡಿಕೆಯು ₹1.66 ಲಕ್ಷ ಕೋಟಿಯಷ್ಟು ಬಂಡವಾಳ ಹೂಡಿಕೆ ಆಗಿದೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಹಿರಿಯ ಹೂಡಿಕೆ ತಜ್ಞ ಶ್ರೀರಾಮ್ ಬಿ.ಕೆ.ಆರ್. 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

2022–23ನೇ ಹಣಕಾಸು ವರ್ಷದ ಏಪ್ರಿಲ್–ಆಗಸ್ಟ್ ಅವಧಿಯಲ್ಲಿ ಡೆಟ್ ಫಂಡ್‌ಗಳಿಂದ ₹48,992 ಕೋಟಿ ಬಂಡವಾಳ ಹಿಂತೆಗೆತ ಆಗಿತ್ತು ಎಂದು ಅವರು ತಿಳಿಸಿದರು.

ಡ್ಯುರೇಷನ್ ಫಂಡ್‌ಗಳಲ್ಲಿ ಲಿಕ್ವಿಡ್ ಫಂಡ್ ₹1.05 ಲಕ್ಷ ಕೋಟಿ ಹೂಡಿಕೆ ಆಗಿದ್ದು, ಹಿಂದಿನ ಅವಧಿಗೆ ಹೋಲಿಸಿದರೆ 1.8 ಪಟ್ಟು ಏರಿಕೆ ಕಂಡುಬಂದಿದೆ. ಮನಿ ಮಾರ್ಕೆಟ್ ಫಂಡ್‌ನಲ್ಲಿ ₹38,219 ಕೋಟಿ ಹೂಡಿಕೆ ಆಗಿದ್ದು ಹಿಂದಿನ ಅವಧಿಗೆ ಹೋಲಿಸಿದರೆ 18.8 ಪಟ್ಟು ಹೆಚ್ಚು ಹೂಡಿಕೆ ಆಗಿದೆ ಎಂದು ಶ್ರೀರಾಮ್ ಹೇಳಿದರು.

ಏಪ್ರಿಲ್ 1ರಿಂದ ಜಾರಿಗೆ ಬರುವಂತೆ ಸಾಲಪತ್ರ ಆಧಾರಿತ (ಡೆಟ್) ಮ್ಯೂಚುವಲ್ ಫಂಡ್‌ಗಳಲ್ಲಿ ಮಾಡುವ ಹೂಡಿಕೆಯಿಂದ ಬರುವ ಲಾಭಕ್ಕೆ ಅಲ್ಪಾವಧಿ ಬಂಡವಾಳ ವೃದ್ಧಿ ತೆರಿಗೆ ಅನ್ವಯಿಸಲಾಗಿದೆ.

ದೀರ್ಘಾವಧಿ ಬಂಡವಾಳ ವೃದ್ಧಿ ತೆರಿಗೆ ಪ್ರಯೋಜನಗಳನ್ನು ಕೈಬಿಡಲಾಗಿದೆ. ಜೊತೆಗೆ, ತೆರಿಗೆ ಲೆಕ್ಕ ಹಾಕುವಾಗ ಇಂಡೆಕ್ಸೇಷನ್ (ಹಣದುಬ್ಬರದ ಪ್ರಮಾಣವನ್ನು ಲೆಕ್ಕ ಹಾಕಿ, ತೆರಿಗೆ ಹೊರೆ ಇಳಿಸಿಕೊಳ್ಳುವುದು) ಪ್ರಯೋಜನ ಪಡೆಯಲು ಆಗುವುದಿಲ್ಲ.

ತೆರಿಗೆ ಬದಲಾವಣೆಗಳು ಜಾರಿಗೆ ಬರುವುದಕ್ಕೂ ಮೊದಲೇ ಡೆಟ್ ಫಂಡ್‌ಗಳಲ್ಲಿ ಸಾಕಷ್ಟು ಹೂಡಿಕೆ ಆಗಿತ್ತು. ಹೀಗಾಗಿ ಹೆಚ್ಚಿನ ಪರಿಣಾಮ ಆಗಿಲ್ಲ. ಮುಂದಿನ ವರ್ಷವೂ ಬಡ್ಡಿದರ ಇದೇ ಪ್ರಮಾಣದಲ್ಲಿ ಗರಿಷ್ಠ ಮಟ್ಟದಲ್ಲಿಯೇ ಇದ್ದರೆ ಡೆಟ್ ಫಂಡ್‌ಗಳಲ್ಲಿ ಬಂಡವಾಳ ಒಳಹರಿವು ಹೆಚ್ಚಾಗಲಿದೆ. ಆದರೆ, ಹಾಗಾಗುವ ಸಾಧ್ಯತೆ ಕಡಿಮೆ. ಏಕೆಂದರೆ 2024ರ ಮಧ್ಯಭಾಗದಲ್ಲಿ ದೇಶದಲ್ಲಿ ಮತ್ತು ಜಾಗತಿಕ ಮಟ್ಟದಲ್ಲಿ ಬಡ್ಡಿದರ ಇಳಿಕೆ ಮಾಡುವ ಪ್ರಕ್ರಿಯೆ ಆರಂಭ ಆಗುವ ನಿರೀಕ್ಷೆ ಇದೆ. ಹೀಗಾಗಿ ಬಹುಪಾಲು ಹೂಡಿಕೆದಾರರು ಲಾಭ ಮಾಡಿಕೊಳ್ಳಲು ಗಮನ ಹರಿಸಲಿದ್ದಾರೆ ಎಂದು ಎಲ್‌ಐಸಿ ಮ್ಯೂಚುವಲ್ ಫಂಡ್ ಅಸೆಟ್ ಮ್ಯಾನೇಜ್‌ಮೆಂಟ್ ಲಿಮಿಟೆಡ್‌ನ ಹಿರಿಯ ನಿಧಿ ನಿರ್ವಾಹಕ ರಾಹುಲ್ ಸಿಂಗ್ ತಿಳಿಸಿದರು.

ಮುಂಬೈ ಧಾರಣೆ

ಶೇಂಗಾ

27-09-2023

ಜಾವಾ 70/80(ಹೊಸ)	12400-12500
ಜಾವಾ 80/90(ಹೊಸ)	11900-12000
ದಪ್ಪ ಮಧ್ಯಪ್ರದೇಶ(ಹೊಸ)	10800-10900
ದಪ್ಪ ಗುಜರಾತ್(ಹೊಸ)	11500-11600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1760 (1750)
ಒಂದು ವಾರದ ಡೆಲಿವರಿ	1755 (1745)
ಸೋಯಾ ಕಚ್ಚಾ	835 (825)
ಪಾಮ್ ವಾರದ ಡೆಲಿವರಿ	812(803)
ಸೂರ್ಯಕಾಂತಿ ಎಣ್ಣೆ ಕಚ್ಚಾ	790 (790)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
58,200 (58,550)
ಬೆಳ್ಳಿ ಕೆ.ಜಿ
70,800 (71,450)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಅಮೆರಿಕ ಕಂಪನಿಗಳೊಂದಿಗೆ ಸಚಿವ ಎಂ.ಬಿ.ಪಾಟೀಲ ಮಾತುಕತೆ

ಇ–ಆಡಳಿತ ಸವಾಲಿಗೆ 'ಬ್ಲಾಕ್ ಚೈನ್'

ಪ್ರಜಾವಾಣಿ ವಾರ್ತೆ

ಅಮೆರಿಕಕ್ಕೆ ಭೇಟಿ ನೀಡಿರುವ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಬೋಯಿಂಗ್ ವಿಮಾನಯಾನ ಸಂಸ್ಥೆಗೆ ಭೇಟಿ ನೀಡಿದ್ದರು.

ಬೆಂಗಳೂರು: ಇ-ಆಡಳಿತ, ಸ್ಥಳೀಯ ಸಂಸ್ಥೆಗಳ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳಲು 'ಬ್ಲಾಕ್ ಚೈನ್' ತಂತ್ರಜ್ಞಾನದ ಅಗತ್ಯವಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಅಮೆರಿಕ ಪ್ರವಾಸದಲ್ಲಿರುವ ಅವರು, ವಿವಿಧ ಕಂಪನಿ ಪ್ರತಿನಿಧಿಗಳ ಜತೆಗಿನ ಮಾತುಕತೆಯ ನಂತರ ಮಾತನಾಡಿದರು.

'ಬ್ಲಾಕ್ ಚೈನ್' ತಂತ್ರಜ್ಞಾನ ಅಳವಡಿಕೆಗೆ ಸಮರ್ಥ ಪಾಲುದಾರರ ಅಗತ್ಯವಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿ ಜತೆ ಮಾತುಕತೆ ನಡೆಸಲಾಗಿದೆ. ಜಾಗತಿಕ ಕಂಪನಿಗಳು ಅನುಸರಿಸುತ್ತಿರುವ 'ಚೀನಾ + ಒನ್' ಕಾರ್ಯಾಚರಣೆ ತಂತ್ರದ ಸದುಪಯೋಗ ಪಡೆಯಲಾಗುವುದು. ಪ್ರಮುಖ ಬಹುರಾಷ್ಟ್ರೀಯ ಕಂಪನಿಗಳು ಚೀನಾದಲ್ಲಿ ತಾವು ಹೊಂದಿರುವ ತಯಾರಿಕಾ ಘಟಕದ ಜತೆಗೆ, ಬೇರೆ ದೇಶಗಳಲ್ಲಿ ಮತ್ತೊಂದು ಘಟಕ ಸ್ಥಾಪಿಸುವ ಯೋಜನೆಗಳನ್ನು ಹಾಕಿಕೊಳ್ಳುತ್ತಿವೆ. ಅಂತಹ ಕಂಪನಿಗಳಿಗೆ ಕರ್ನಾಟಕವು ಆಯಕಟ್ಟಿನ ಸ್ಥಳವಾಗಿದೆ ಎಂದರು.

ವಿಮಾನ ನಿಲ್ದಾಣಗಳ ಬಳಿ ಸರಕು ಸಾಗಣೆ ಕೇಂದ್ರಗಳ ಸ್ಥಾಪನೆ, ಪೈಲಟ್ ಹಾಗೂ ವಿಮಾನ ಸಿಬ್ಬಂದಿಗೆ ತರಬೇತಿ, ಬೆಂಗಳೂರು ವಿಮಾನ ನಿಲ್ದಾಣದ ಹತ್ತಿರ ಆರೋಗ್ಯ ತಂತ್ರಜ್ಞಾನ ಪಾರ್ಕ್ ಸ್ಥಾಪನೆ, ಸೌರಶಕ್ತಿ, ಪವನ ಶಕ್ತಿ ಮತ್ತಿತರ ಪರ್ಯಾಯ ಇಂಧನಗಳ ಸಂಗ್ರಹ ವ್ಯವಸ್ಥೆ ಕುರಿತು ಚರ್ಚಿಸಲಾಗಿದೆ. ಬೆಂಗಳೂರಿನ ಹೂಡಿಕೆ ಹೆಚ್ಚಿಸಲು ನಗರದ ದಟ್ಟಣೆ ತಗ್ಗಿಸಬೇಕಿದೆ ಎಂದು ಹೇಳಿದರು.

ಐಎಂಎಫ್ ಉಪ ವ್ಯವಸ್ಥಾಪಕ ನಿರ್ದೇಶಕಿ ಗೀತಾ ಗೋಪಿನಾಥ್, ಬೋಯಿಂಗ್ ಸಂಸ್ಥೆ ಉಪಾಧ್ಯಕ್ಷ ಗ್ರೆಟಾ ಲಂಡ್‌ಬರ್ಗ್, ನಿರ್ದೇಶಕರಾದ ನಿಕೋಲ ಪೊರ್ರೆಕಾ, ಯುಎಸ್‌ಐ ಸಿಇಒ ಮುಕೇಶ್ ಅಘಿ, ಉಪಾಧ್ಯಕ್ಷ ಸೂಸನ್ ರಿಚಿ, ಜಿಇ ವೆರ್ನೋವಾ ವ್ಯವಸ್ಥಾಪಕ ನಿರ್ದೇಶಕ ಪಿಕ್ಯಾರ್ಟ್, ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್.ಸೆಲ್ವಕುಮಾರ್, ಆಯುಕ್ತೆ ಗುಂಜನ್ ಕೃಷ್ಣ ಇದ್ದರು.

ಕರ್ನಾಟಕ ಬ್ಯಾಂಕಿನಿಂದ ಗ್ರಾಹಕರ ಮನೆಬಾಗಿಲಿಗೆ ಚಿನ್ನದ ಸಾಲ ಸೌಲಭ್ಯ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರ್ನಾಟಕ ಬ್ಯಾಂಕ್ ಗ್ರಾಹಕರ ಮನೆಬಾಗಿಲಿಗೆ ಹೋಗಿ ಚಿನ್ನದ ಸಾಲ ನೀಡುವ 'ಕೆಬಿಎಲ್-ಸ್ವರ್ಣ ಬಂಧು' ಯೋಜನೆ ಜಾರಿಗೊಳಿಸಿದೆ.

ಮಣಿಪಾಲ ಗ್ರೂಪ್ ಬೆಂಬಲಿತ 'ಸಹಿಬಂಧು' ಎನ್ನುವ ಚಿನ್ನದ ಸಾಲ ವ್ಯವಹಾರ ಸಂಬಂಧಿತ ಸಂಸ್ಥೆಯ ಸಹಭಾಗಿತ್ವದಲ್ಲಿ ರೂಪಿಸಿರುವ ಈ ಯೋಜನೆಯನ್ನು 'ಆಕರ್ಷಕ ಬಡ್ಡಿದರ ಹಾಗೂ ಸಂಪೂರ್ಣ ಡಿಜಿಟಲ್ ವ್ಯವಸ್ಥೆಯೊಂದಿಗೆ' ಎಂಬ ಟ್ಯಾಗ್‌ಲೈನ್‌ನೊಂದಿಗೆ ಜಾರಿಗೊಳಿಸಲಾಗಿದೆ. 'ಪ್ರಸಕ್ತ ಈ ಸೌಲಭ್ಯವು ಆಯ್ದ ಶಾಖೆಗಳಲ್ಲಿ ಮಾತ್ರ ಲಭ್ಯವಿದ್ದು, ಮುಂದಿನ ದಿನಗಳಲ್ಲಿ ಎಲ್ಲಾ ಶಾಖೆಗಳಿಗೆ ವಿಸ್ತರಿಸಲಾಗುವುದು' ಎಂದು ಬ್ಯಾಂಕಿನ ಎಂ.ಡಿ ಹಾಗೂ ಸಿಇಒ ಶ್ರೀಕೃಷ್ಣನ್ ಎಚ್. ತಿಳಿಸಿದ್ದಾರೆ.

ಬ್ಯಾಂಕಿನ ಕಾರ್ಯನಿರ್ವಾಹಕ ನಿರ್ದೇಶಕ ಶೇಖರ್ ರಾವ್, 'ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗಾಗಿ ವಿವಿಧ ಫಿನ್‌ಟೆಕ್ ಕಂಪನಿಗಳೊಂದಿಗೆ ಸಹಭಾಗಿತ್ವ ಹೊಂದಲಾಗಿದೆ. ಕೆಬಿಎಲ್- ಸ್ವರ್ಣ ಬಂಧು ಯೋಜನೆಯೂ ಅಂತಹ ಉಪಕ್ರಮಗಳಲ್ಲಿ ಒಂದು' ಎಂದಿದ್ದಾರೆ.

ಸಹಿಬಂಧು ಸಂಸ್ಥೆಯ ಸಹಸಂಸ್ಥಾಪಕ ರಾಜೇಶ್ ಶೇಟ್, 'ಕರ್ನಾಟಕ ಬ್ಯಾಂಕಿನೊಂದಿಗೆ ಈ ಸಹಭಾಗಿತ್ವವು ಸಂತಸ ತಂದಿದೆ. ಚಿನ್ನದ ಸಾಲ ಸೌಲಭ್ಯವನ್ನು ಗ್ರಾಹಕರ ಮನೆಬಾಗಿಲಿಗೆ ತಲುಪಿಸುವಲ್ಲಿ ಇದು ಸಹಕಾರಿಯಾಗಿದೆ' ಎಂದು ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ	
ಕೋಕ	15000-25000
ಹೊಸತು	28000-45000
ಹಳತು	46000-48000
ಕಾರ್ಕಳ	
ಹೊಸತು	30000-45000
ಹಳತು	40000-48500
ಕುಮಟ	
ಚಿಪ್ಪು	31509-34599
ಕೋಕ	20169-32009
ಫ್ಯಾಕ್ಟರಿ	13019-26929
ಹಳೆಚಾಲಿ	39999-41129
ಹೊಸಚಾಲಿ	37569-40199
ಪುತ್ತೂರು	
ಕೋಕ	11000-25000
ಹೊಸತು	34000-45000
ಶಿವಮೊಗ್ಗ	
ಬೆಟ್ಟೆ	48219-52800
ಗೊರಬಲು	18009-37269
ರಾಶಿ	42099-46599
ಸರಕು	5399-79540
ಸಿದ್ದಾಪುರ	
ಬಿಳಿಗೋಟು	32909-34909
ಚಾಲಿ	37409-40100
ಕೋಕ	28019-33099
ಕೆಂಪುಗೋಟು	28099-33019
ರಾಶಿ	42169-47099
ತಟ್ಟಿಬೆಟ್ಟೆ	42169-47099
ಶಿರಸಿ	
ಬೆಟ್ಟೆ	35400-44509
ಬಿಳಿಗೋಟು	27099-36211
ಚಾಲಿ	36800-41588
ಕೆಂಪುಗೋಟು	23599-25399
ರಾಶಿ	46398-48799
ಸುಳ್ಯ	
ಹಳತು	44800-46400
ತುಮಕೂರು	
ರಾಶಿ	44200-46100

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹11000
ಎಸಿ	₹6300
ಆರ್‌ಪಿ	₹9900
ಆರ್‌ಸಿ	₹5830

ರಾಮ ಮಂದಿರ ಆಂದೋಲನದ ಇತಿಹಾಸ ಪ್ರದರ್ಶನ: ಮಿಶ್ರಾ

ನವದೆಹಲಿ (ಪಿಟಿಐ): 'ರಾಮ ಮಂದಿರ ಸ್ಥಳದಲ್ಲಿ ನಡೆಸಲಾದ ಉತ್ಖನನದಲ್ಲಿ ದೊರೆತ ಪ್ರತಿಮೆಗಳು ಹಾಗೂ ಕಲಾಕೃತಿಗಳನ್ನು ಮತ್ತು ಮಂದಿರ ನಿರ್ಮಾಣಕ್ಕಾಗಿ ನಡೆಸಲಾದ ಆಂದೋಲನದ ಇತಿಹಾಸವನ್ನು ಅಯೋಧ್ಯೆಯ ಅಂತರರಾಷ್ಟ್ರೀಯ ರಾಮ ಕಥಾ ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶಿಸಲಾಗುವುದು' ಎಂದು ರಾಮ ಮಂದಿರ ನಿರ್ಮಾಣ ಸಮಿತಿಯ ಮುಖ್ಯಸ್ಥ ನೃಪೇಂದ್ರ ಮಿಶ್ರಾ ಅವರು ಹೇಳಿದ್ದಾರೆ.

'ಆಂದೋಲನದ ಕಾನೂನು, ರಾಜಕೀಯ ಮತ್ತು ಧಾರ್ಮಿಕ ಪ್ರಯಾಣದ ವಿವರಗಳನ್ನು ಪ್ರಸ್ತುತಪಡಿಸುವ ವಿಶೇಷ ಕೋಶವನ್ನು ಸಹ ರಚಿಸಲಾಗುತ್ತದೆ' ಎಂದು ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

'ಈ ವಸ್ತು ಸಂಗ್ರಹಾಲಯವನ್ನು ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ಗೆ ಗುತ್ತಿಗೆ ನೀಡಲಾಗಿದೆ. ಭಾರತೀಯ ಪುರಾತತ್ವ ಇಲಾಖೆ (ಎಎಸ್‌ಐ) ಉತ್ಖನನ ನಡೆಸಿದ ಸಂದರ್ಭದಲ್ಲಿ ಕೆಲವು ವಸ್ತುಗಳು ದೊರೆತಿವೆ. ಮಂದಿರ ನಿರ್ಮಾಣದ ಕಾಮಗಾರಿಯ ವೇಳೆಯೂ ಕೆಲವು ಪ್ರಾಚೀನ ವಸ್ತುಗಳು ದೊರೆತಿವೆ. ಅವುಗಳನ್ನು ಸುರಕ್ಷಿತವಾಗಿಡಲಾಗಿದೆ. ಇವುಗಳಲ್ಲಿ ಕೆಲವು ಕಲಾಕೃತಿ ಅಥವಾ ವಿಗ್ರಹಗಳನ್ನು ನ್ಯಾಯಾಲಯದ ಆದೇಶದದಿಂದ ರಕ್ಷಿಸಲಾಗಿದ್ದರೆ, ಕೆಲವನ್ನು ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ರಕ್ಷಿಸಿದೆ' ಎಂದಿದ್ದಾರೆ.

ರಾಮಮಂದಿರದ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿರುವುದು –ಪಿಟಿಐ ಚಿತ್ರ

'ಎಎಸ್‌ಐನ ಅನುಮತಿಯೊಂದಿಗೇ ವಿಗ್ರಹಗಳನ್ನು, ಕಲಾಕೃತಿ ಹಾಗೂ ಪಳೆಯುಳಿಕೆಗಳನ್ನು ವಸ್ತು ಸಂಗ್ರಹಾಲಯದಲ್ಲಿ ಇರಿಸಲಾಗುವುದು' ಎಂದು ಹೇಳಿದ್ದಾರೆ.

'ವಸ್ತು ಸಂಗ್ರಹಾಲಯದಲ್ಲಿ ವಿವಿಧ ಭಾಗಗಳಿವೆ. ಒಂದರಲ್ಲಿ ಉತ್ಖನನ ಹಾಗೂ ಮಂದಿರ ನಿರ್ಮಾಣದ ವೇಳೆ ದೊರೆತ ವಸ್ತುಗಳನ್ನು ಇರಿಸಲಾಗುವುದು. ಮತ್ತೊಂದರಲ್ಲಿ ರಾಮ ಮಂದಿರ ನಿರ್ಮಾಣ ವಿಚಾರದಲ್ಲಿ 2019ರಲ್ಲಿ ಸುಪ್ರೀಂ ಕೋರ್ಟ್ ನೀಡಿದ ಆದೇಶ ಸೇರಿದಂತೆ ಕಾನೂನು, ರಾಜಕೀಯ ಮತ್ತು ಧಾರ್ಮಿಕ ಆಂದೋಲನದ 500 ವರ್ಷಗಳ ಇತಿಹಾಸವನ್ನು ಪ್ರದರ್ಶನ ಮಾಡಲಾಗುವುದು' ಎಂದು ವಿವರಿಸಿದ್ದಾರೆ.

'ಆರ್ಥಿಕ ಚಟುವಟಿಕೆ ಹೆಚ್ಚಳ ಸಾಧ್ಯತೆ'

'ರಾಮಮಂದಿರ ಉದ್ಘಾಟನೆಯ ಬಳಿಕ ಅಯೋಧ್ಯೆಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಆರ್ಥಿಕ ಚಟುವಟಿಕೆಗಳು ಹೆಚ್ಚಳವಾಗುವ ಸಾಧ್ಯತೆ ಇದೆ. ಹಾಗೆಯೇ ಈ ನಗರ ನವದೆಹಲಿಯಷ್ಟು ವಿಸ್ತರಣೆಯಾಗಬಹುದು' ಎಂದು ನೃಪೇಂದ್ರ ಮಿಶ್ರಾ ಹೇಳಿದರು.

'ಬಿಹಾರ, ಛತ್ತೀಸಗಢ ಮತ್ತು ನೇಪಾಳದಲ್ಲಿರುವ ಶ್ರೀರಾಮನಿಗೆ ಸಂಬಂಧಿಸಿದ ಸ್ಥಳಗಳ ನವೀಕರಣ ಮಾಡುವಂತೆ ಕೋರಿ ಈಗಾಗಲೇ ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ಗೆ ಬೇಡಿಕೆಗಳು ಬಂದಿವೆ' ಎಂದರು. 'ಆದರೆ, ನವೀಕರಣದ ಜವಾಬ್ದಾರಿಯನ್ನು ಸ್ಥಳೀಯರಿಗೆ ವಹಿಸಲು ನಿರ್ಧರಿಸಿದ್ದೇವೆ' ಎಂದೂ ತಿಳಿಸಿದರು.

ನೆಲಮಹಡಿ ಡಿಸೆಂಬರ್ ಅಂತ್ಯಕ್ಕೆ ಮುಕ್ತಾಯ

'ಅಯೋಧ್ಯೆ ರಾಮ ಮಂದಿರದ ನೆಲ ಮಹಡಿ ನಿರ್ಮಾಣ ಕಾಮಗಾರಿ ಡಿಸೆಂಬರ್ ಅಂತ್ಯಕ್ಕೆ ಮುಕ್ತಾಯವಾಗಲಿದ್ದು, ಜನವರಿ 22ರಂದು ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮ ನಡೆಯುವ ನಿರೀಕ್ಷೆಯಿದೆ' ಎಂದು ನೃಪೇಂದ್ರ ಮಿಶ್ರಾ ಅವರು ತಿಳಿಸಿದ್ದಾರೆ.

'ಜನವರಿ 20ರಿಂದ 24ರ ನಡುವೆ ನಡೆಯುವ 'ಪ್ರಾಣ ಪ್ರತಿಷ್ಠಾಪನಾ' ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಭಾಗಿಯಾಗಲಿದ್ದಾರೆ. ಆದರೆ, ನಿರ್ದಿಷ್ಟ ದಿನಾಂಕ ನಿಗದಿಯಾಗಿಲ್ಲ ಎಂದು ಅವರು ತಿಳಿಸಿದ್ದಾರೆ.

ಸವಿನೆನಪು

ಜನನ: 14.06.1962
ನಿಧನ: 28.09.2021

ಎನ್. ಶಿವಕುಮಾರ್ ಬಿ.ಇ.,

ಸದಾ ನಿಮ್ಮ ನೆನೆಯುತ್ತಿರುವ...
ಕೆ.ಎನ್. ಚಕ್ರಪಾಣಿ - ಬಿಜೆಪಿ ಮುಖಂಡರು
ಅಧ್ಯಕ್ಷರು, ಚಕ್ರಪಾಣಿ ಫೌಂಡೇಶನ್ (ರಿ.) ಹಾಗೂ
ತಾಯಿ, ಧರ್ಮಪತ್ನಿ ಮತ್ತು ಮಕ್ಕಳು, ಸಹೋದರಿಯರು,
ಕುಟುಂಬ ವರ್ಗ, ಅಪಾರ ಬಂಧು ಬಳಗ ಹಾಗೂ ಸ್ನೇಹಿತರು.
ನಂ. 1298, ರಾಜರಾಜೇಶ್ವರಿ ಮಾರ್ಗ, ರೈಲ್ವೆ ಸ್ಟೇಷನ್ ಹತ್ತಿರ,
ಕೊಡಿಗೇಹಳ್ಳಿ, ವಿರೂಪಾಕ್ಷಪುರ, ಬೆಂಗಳೂರು - 560 097.

2ನೇ ವರ್ಷದ ಚಿರಸ್ಮರಣೆ

ಶ್ರೀಮತಿ ಎಸ್.ಎನ್. ಕಮಲ
ನಿವೃತ್ತ ಮುಖ್ಯಶಿಕ್ಷಕರು
ಜನನ: 5.10.1958 ಮರಣ: 28.9.2021
ನೀವು ತೋರಿದ ಪ್ರೀತಿ ನಮ್ಮಲ್ಲಿ ಅಮರ. ನಿಮ್ಮ ವ್ಯಕ್ತಿತ್ವದಿಂದ ನೀವು ಜನರ ಮನದಲ್ಲಿ ಅಜರಾಮರ.
ಸದಾ ನಿಮ್ಮ ನೆನಪಿನಲ್ಲಿ ಇರುವ
ಎಸ್. ನರಸಿಂಹಯ್ಯ
(ನಿವೃತ್ತ ಉಪ ತಹಶೀಲ್ದಾರ್).
& ಜೇನುಗೂಡು ಕುಟುಂಬದವರು, ಆನೇಕಲ್.
9448905609, 9731092405,
9901290901

ಎರಡನೇ ವರ್ಷದ ಪುಣ್ಯಸ್ಮರಣೆ

ದಿ|| ಎಂ. ರಾಮಲಕ್ಷ್ಮಮ್ಮ
ಎಂ.ರಾಮಚಂದ್ರಪ್ಪನವರ ಧರ್ಮಪತ್ನಿ,
ಮಾಜಿ ಪುರಸಭೆ ಅಧ್ಯಕ್ಷರು, ಮಾಜಿ ಸಿ.ಎಂ.ಸಿ ಸದಸ್ಯರು
ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ನಿಮ್ಮ ಆದರ್ಶ ಜೀವನ ನಮಗೆ ಎಂದಿಗೂ ಮಾರ್ಗದರ್ಶನ. ನಿಮ್ಮ ನೆನಪು ಸದಾ ಹಸಿರು ಮತ್ತು ಸ್ಫೂರ್ತಿದಾಯಕ
ಸದಾ ನಿಮ್ಮ ಸ್ಮರಣೆಯಲ್ಲಿ
ಪತಿ ಎಂ.ರಾಮಚಂದ್ರಪ್ಪ,
ಮೈದುನರು ಎಂ. ಚಿನ್ನರಾಜು &
ಎಂ.ರಾಮಕೃಷ್ಣಪ್ಪ, ಮಕ್ಕಳು, ಸೊಸೆಯಂದಿರು,
ಅಳಿಯಂದಿರು ಮತ್ತು ಮೊಮ್ಮಕ್ಕಳು,
ಯಲಹಂಕ, ಬೆಂಗಳೂರು

ವೈಕುಂಠ ಸಮಾರಾಧನೆ

ಶ್ರೀಮತಿ ಲಕ್ಷ್ಮೀಕಾಂತಮ್ಮ
ಇವರು ದಿನಾಂಕ 18–09–2023ನೇ ಸೋಮವಾರದಂದು ದೈವಾಧೀನರಾಗಿದ್ದು, ತತ್ಸಂಬಂಧವಾದ ಇವರ ಉತ್ತರ ಕ್ರಿಯಾದಿ ಕಾರ್ಯವು
ದಿ: 28–09–2023ನೇ ಗುರುವಾರ ಬೆಳಿಗ್ಗೆ
ನಂ.2, 2ನೇ ಗುಡ್ಡಣ್ಣ ರಸ್ತೆ, ರಂಗನಾಥಪುರ, ಕಾಮಾಕ್ಷಿಪಾಳ್ಯ, ಬೆಂಗಳೂರು–79
ಇಲ್ಲಿ ನೆರವೇರಲಿದೆ. ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಹರಿಕಥೆ: ಶಿವಕಥಾ ಚಕ್ರವರ್ತಿ ಹ||ವಿ||ಬಿ. ಶಿವಕುಮಾರ ಶಾಸ್ತ್ರಿ ಅವರಿಂದ
ಭೋಜನ: ಮಧ್ಯಾಹ್ನ 12:00ರ ನಂತರ
ಇಂತಿ ದುಃಖತಪ್ತರು:
ಶ್ರೀ ಜಿ. ಕೃಷ್ಣಪ್ಪ ಮತ್ತು ಕುಟುಂಬ ಹಾಗೂ ಬಂಧು ಮಿತ್ರರು

LOOKING TO BUILD, BUY OR SELL A PROPERTY
Please refer Classifieds on Sunday

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

✓ ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

✓ ತಕ್ಷಣ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಟಿ.ವಿ.ಎಸ್, MNCಗಳಿಗೆ SSLC, PUC, Degree, Diplomaದವರು 18,000- 56,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9036125229

ಕಂಪನಿ ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ. ಊಟ ವಸತಿ 18,500–67,000/–. SSLC PUC Degree. ಸಂಪರ್ಕಿಸಿ. 9945791526, 8861041526

Part-Time Jobs

✓ ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

DH DECCAN HERALD ಪ್ರಜಾವಾಣಿ Classifieds More value, more impact REAL ESTATE
The 1st thing to do when Selling/ Buying your Property
#1 PLACE YOUR AD HERE
www.dhclassifieds.com
BOOK NOW
Book your ad with us now!
For more details contact:
+91 9886213331
+91 9845114560
080- 45557163/164

ಪ್ರವಾಸ

Pilgrimage Tours

ನೇಪಾಳ ಪ್ರವಾಸ 9ದಿನಗಳು 26/10/23 ಕಾಶಿ ಪ್ರವಾಸ 7ದಿನಗಳು 27/10/23 ಗುಜರಾತ್ ಪ್ರವಾಸ 8ದಿನಗಳು 31/10/23 ಪೂರಿ ಪ್ರವಾಸ 4ದಿನಗಳು 26/10/23 ಸುವರ್ಣ ಯಾತ್ರ 9008381022, 9480843945.

ಗುಜರಾತ್ ಪ್ರವಾಸ 12ದಿನ 26.10.23. ನೇಪಾಳ, ಮುಕ್ತಿನಾಥ್,ಕಾಶಿ, 11ದಿನ 21.11.23. ಸಿಂಗಪುರ್ ಮಲೇಶಿಯಾ 7ದಿನ 4.12.23. ಪುರಿಜಗನ್ನಾಥ್ ಪ್ರವಾಸ 3ದಿನ 15.12.23. ರಾಜಸ್ಥಾನ್ ಪ್ರವಾಸ 9ದಿನ 20.12.23.ನಂದಿನಿ ಟೂರಿಸ್ಟ್ 9916574089

10.10.2023ಮತ್ತು 10.11.2023 6ದಿನಗಳು ವಿಮಾನದಲ್ಲಿ ಅಲಹಾಬದ್,ಕಾಶಿ, ಗಯಾ,ಅಯೋಧ್ಯ (ಕೆಲವೇ ಸೀಟುಗಳಿವೆ)24000/ಪ್ರತಿ ತಿಂಗಳು ಅಂಡಮಾನ್ ಹವಳದ್ವೀಪ Land_Package15000/ ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9845560219/ 9739847429

Travel

22.11.2023 ವಿಜಯವಾಡ ಭದ್ರಾಚಲಂ ವಾಸವಿಪೆನುಗೊಂಡ ಕಲ್ಕತ್ತ,ಗಂಗಾಸಾಗರ್ ಪೂರಿಜಗನ್ನಾಥ್ ಕೋನಾರ್ಕ್,ಭುವನೇಶ್ವರ್. 11.12.2023 16 ದಿನಗಳ ಅಷ್ಟ ಜ್ಯೋತಿರ್ಲಿಂಗಗಳು ಮಹಾರಾಷ್ಟ್ರ,ಮಧ್ಯಪ್ರದೇಶ ಗುಜರಾತ್ ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವೆಲ್ಸ್ ಬೆಂಗಳೂರು.70 9342287551 8050629305

ಭವಿಷ್ಯ

Astrology

★ಒಂದೇ ಕರೆಯಲ್ಲಿ★ ಸ್ತ್ರೀಪುರುಷ ವಶೀಕರಣ,ಹಣಕಾಸು ಮನೆತನ, ಇನ್ನೂ ಯಾವುದೇ ಸಮಸ್ಯೆಗಳಿಗೆ 2 ಗಂಟೆಯಲ್ಲಿ 100% ಪರಿಹಾರ. ನಾರಾಯಣ ಆಚಾರ್ಯ. 9880811806

ವೈಯಕ್ತಿಕ

Announcements

I, SUMA Murali W/O Murali K R/O #250,8thRoad,Defence Layout,Vidyaranyapura,Bengaluru-97 have changed my name to Suma D vide affidavit dated 25-09-2023 before the notary R.Ramesh (Reg.No 19895) Bengaluru.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

ಚಿನ್ನಕ್ಕೆ ಗುರಿಯಿಟ್ಟ ಸಿಫ್ಟ್ ಕೌರ್ ಸಮ್ರಾ • ಮಹಿಳೆಯರ 25 ಮೀ. ಪಿಸ್ತೂಲ್ ತಂಡಕ್ಕೆ ಬಂಗಾರ ಸಂಭ್ರಮ • ಒಂದೇ ದಿನ ಏಳು ಪದಕ ಬಾಚಿದ ಶೂಟರ್‌ಗಳು

ಶೂಟಿಂಗ್ ರೇಂಜ್‌ನಲ್ಲಿ ಪದಕಗಳ ಫಸಲು

ಹಾಂಗ್‌ಝೌ (ಪಿಟಿಐ): ನಿಖರ ಗುರಿ ಹಿಡಿಯುವಲ್ಲಿ ಯಶಸ್ವಿಯಾದ ಭಾರತದ ಶೂಟರ್‌ಗಳು ಏಷ್ಯನ್ ಕ್ರೀಡಾಕೂಟದಲ್ಲಿ ಬುಧವಾರ ಎರಡು ಚಿನ್ನ ಸೇರಿದಂತೆ ಏಳು ಪದಕಗಳನ್ನು ಗೆದ್ದು ಸಂಭ್ರಮಿಸಿದರು.

ಹಾಂಗ್‌ಝೌ ಶೂಟಿಂಗ್ ರೇಂಜ್‌ನಲ್ಲಿ ನಡೆದ ಮಹಿಳೆಯರ 50 ಮೀ. ರೈಫಲ್ 3 ಪೊಸಿಷನ್ ಸ್ಪರ್ಧೆಯಲ್ಲಿ ಭಾರತದ ಯುವ ಶೂಟರ್ ಸಿಫ್ಟ್ ಕೌರ್ ಸಮ್ರಾ ಚಿನ್ನಕ್ಕೆ ಗುರಿಯಿಟ್ಟು ಗಮನ ಸೆಳೆದರು. ಒಟ್ಟು 469.6 ಪಾಯಿಂಟ್ಸ್ ಕಲೆಹಾಕಿದ ಅವರು ವಿಶ್ವದಾಖಲೆ ಮತ್ತು ಕೂಟ ದಾಖಲೆಯನ್ನೂ ತಮ್ಮ ಹೆಸರಿಗೆ ಬರೆಯಿಸಿಕೊಂಡರು.

ಏಷ್ಯನ್ ಕ್ರೀಡಾಕೂಟದ ರೈಫಲ್ 3 ಪೊಸಿಷನ್ ಸ್ಪರ್ಧೆಯಲ್ಲಿ ಭಾರತಕ್ಕೆ ಚಿನ್ನ ಗೆದ್ದುಕೊಟ್ಟ ಮೊದಲ ಶೂಟರ್ ಎಂಬ ಗೌರವ ಅವರಿಗೆ ಒಲಿಯಿತು. ಇದೇ ವಿಭಾಗದಲ್ಲಿ ಕಣದಲ್ಲಿದ್ದ ಆಶಿ ಚೋಕ್ಸಿ, 451.9 ಪಾಯಿಂಟ್ಸ್‌ಗಳೊಂದಿಗೆ ಕಂಚು ಜಯಿಸಿದರು. ಬೆಳ್ಳಿ ಪದಕ ಚೀನಾದ ಕ್ವಿಯಾಂಗ್‌ಯುಯಿ ಝಾಂಗ್ (462.3) ಅವರಿಗೆ ಒಲಿಯಿತು.

ಚಿನ್ನ ಗೆಲ್ಲುವ ಮುನ್ನ ಸಮ್ರಾ ಅವರು ಅರ್ಹತಾ ಸುತ್ತಿನಲ್ಲಿ 594 ಪಾಯಿಂಟ್ಸ್ (600 ರಲ್ಲಿ) ಗಳಿಸಿ ಕೂಟ ದಾಖಲೆ ತಮ್ಮ ಹೆಸರಿಗೆ ಬರೆಯಿಸಿಕೊಂಡರು.

25 ಮೀ. ಪಿಸ್ತೂಲ್ ತಂಡಕ್ಕೆ ಚಿನ್ನ: ಶೂಟಿಂಗ್ ರೇಂಜ್‌ನಲ್ಲಿ ಬುಧವಾರ ಮೊದಲ ಚಿನ್ನವನ್ನು ಮನು ಭಾಕರ್, ರಿದಂ ಸಾಂಗ್ವಾನ್ ಮತ್ತು ಇಶಾ ಸಿಂಗ್ ಅವರನ್ನೊಳಗೊಂಡ ಮಹಿಳೆಯರ 25 ಮೀ. ಪಿಸ್ತೂಲ್ ತಂಡ ಗೆದ್ದುಕೊಟ್ಟಿತು. ಭಾರತ ತಂಡ ಒಟ್ಟು 1,759 ಪಾಯಿಂಟ್ಸ್ ಕಲೆಹಾಕಿತು.

ಸಮ್ರಾ, ಚೋಕ್ಸಿ ಮತ್ತು ಮಾನಿನಿ ಕೌಶಿಕ್ ಅವರು ಮಹಿಳೆಯರ 50 ಮೀ. ರೈಫಲ್ 3 ಪೊಸಿಷನ್ ಸ್ಪರ್ಧೆಯಲ್ಲಿ ಬೆಳ್ಳಿ ಗೆದ್ದರು. ಅವರು ಒಟ್ಟು 1,764 ಪಾಯಿಂಟ್ಸ್ ಸಂಗ್ರಹಿಸಿದರು. ಆತಿಥೇಯ ಚೀನಾ (1,773) ಚಿನ್ನ ಗೆದ್ದರೆ, ಕಂಚಿನ ಪದಕ ದಕ್ಷಿಣ ಕೊರಿಯಾ (1,756) ತಂಡದ ಪಾಲಾಯಿತು.

ಮಹಿಳೆಯರ 25 ಮೀ. ಪಿಸ್ತೂಲ್ ವಿಭಾಗದಲ್ಲಿ ಇಶಾ ಸಿಂಗ್ 34 ಪಾಯಿಂಟ್ಸ್‌ನೊಡನೆ ಬೆಳ್ಳಿ ಜಯಿಸಿದರು. ಇದೇ ವಿಭಾಗದಲ್ಲಿ ಭಾರತದ ಭರವಸೆ ಎನಿಸಿದ್ದ ಮನು, ಆರನೇ ಸ್ಥಾನಕ್ಕೆ ಕುಸಿತ ಕಂಡರು.

18 ವರ್ಷದ ಇಶಾ, ಚಿನ್ನದ ಪದಕದ ಪೈಪೋಟಿಯಲ್ಲಿ ಐದು ಅವಕಾಶಗಳಲ್ಲಿ ಮೂರರಲ್ಲಿ ನಿಖರ ಗುರಿ ಹಿಡಿಯಲು ವಿಫಲರಾದರು. ಚಿನ್ನ ಗೆದ್ದ ಚೀನಾದ ರುಯಿ ಲಿಯು (38 ಪಾಯಿಂಟ್ಸ್) ಒಮ್ಮೆ ಮಾತ್ರ ಗುರಿ ತಪ್ಪಿದರು.

ಅರ್ಹತಾ ಸುತ್ತಿನಲ್ಲಿ ಅಗ್ರಸ್ಥಾನ ಪಡೆದು ಫೈನಲ್ ಪ್ರವೇಶಿಸಿದ್ದ ಮನು ಅವರಿಗೆ ಪದಕ ಗೆಲ್ಲುವ ಅದೃಷ್ಟ ಇರಲಿಲ್ಲ. ರಿದಂ ಅವರು ಅರ್ಹತಾ ಸುತ್ತಿನಲ್ಲಿ ಏಳನೇ ಸ್ಥಾನ ಪಡೆದಿದ್ದರು. ಆದರೆ ಒಂದು ದೇಶದ ಇಬ್ಬರಿಗೆ ಮಾತ್ರ ಫೈನಲ್‌ನಲ್ಲಿ ಆಡುವ ಅವಕಾಶವಿದ್ದ ಕಾರಣ ಪದಕ ಸುತ್ತಿನ ಪೈಪೋಟಿಯಲ್ಲಿ ಅವರು ಸ್ಥಾನ ಪಡೆಯಲಿಲ್ಲ.

ಇಶಾ ಅವರ ಬೆಳ್ಳಿ, ಶೂಟಿಂಗ್‌ನಲ್ಲಿ ಈ ಬಾರಿ ಭಾರತಕ್ಕೆ ದೊರೆತ 10ನೇ ಪದಕ ಆಗಿದೆ. ಇದರೊಂದಿಗೆ 2018ರ ಕೂಟದಲ್ಲಿ ತೋರಿದ್ದ ಸಾಧನೆಯನ್ನು (9 ಪದಕ) ಮೀರಿ ನಿಂತಿತು.

ಮಹಿಳೆಯರ 50 ಮೀ. ರೈಫಲ್ 3 ಪೊಸಿಷನ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದ ಸಿಫ್ಟ್ ಕೌರ್ ಸಮ್ರಾ (ಎಡ) ಮತ್ತು ಕಂಚು ಜಯಿಸಿದ ಆಶಿ ಚೋಕ್ಸಿ ಅವರ ಸಂಭ್ರಮ –ಪಿಟಿಐ ಚಿತ್ರ

ಎಂಬಿಬಿಎಸ್ ಕೋರ್ಸ್‌ಗೆ ಗುಡ್‌ಬೈ

ಪಂಜಾಬ್‌ನ ಫರೀದ್‌ಕೋಟ್‌ನವರಾದ ಸಿಫ್ಟ್ ಕೌರ್, ತಮ್ಮ ಚಿತ್ತವನ್ನು ಶೂಟಿಂಗ್‌ನತ್ತ ಹರಿಸಲು ಎಂಬಿಬಿಎಸ್ ಕೋರ್ಸ್‌ಅನ್ನು ಅರ್ಧಕ್ಕೇ ಮೊಟಕುಗೊಳಿಸಿದ್ದರು. ಎಂಬಿಬಿಎಸ್ ಕೋರ್ಸ್ ಮಾಡುವ ಜತೆಯಲ್ಲೇ ಶೂಟಿಂಗ್ ತರಬೇತಿ ಪಡೆಯುವುದು 23 ವರ್ಷದ ಸಿಫ್ಟ್ ಅವರಿಗೆ ಕಷ್ಟವೆನಿಸಿತ್ತು.

‘ಫರೀದ್‌ಕೋಟ್‌ನ ಜಿಜಿಎಸ್ ವೈದ್ಯಕೀಯ ಕಾಲೇಜಿನಲ್ಲಿ ಪಡೆಯುತ್ತಿದ್ದ ಎಂಬಿಬಿಎಸ್ ಶಿಕ್ಷಣವನ್ನು ಮಾರ್ಚ್‌ನಲ್ಲಿ ಮೊಟಕುಗೊಳಿಸಿದೆ. ಇದೀಗ ಅಮೃತ್‌ಸರದ ಗುರುನಾನಕ್ ದೇವ್ ವಿಶ್ವವಿದ್ಯಾಲಯದಲ್ಲಿ ಬ್ಯಾಚುಲರ್ ಆಫ್ ಫಿಸಿಕಲ್ ಎಜುಕೇಷನ್ ಅಂಡ್ ಸ್ಪೋರ್ಟ್ಸ್ ಕೋರ್ಸ್ ಮಾಡುತ್ತಿರುವೆ’ ಎಂದು ಚಿನ್ನದ ಸಾಧನೆಯ ಬಳಿಕ ಅವರು ಪ್ರತಿಕ್ರಿಯಿಸಿದರು.

ಅನಂತ್ ಜೀತ್‌ಗೆ ಬೆಳ್ಳಿ

ಅನಂತ್ ಜೀತ್ ಸಿಂಗ್ ನರುಕಾ ಪುರುಷರ ಸ್ಕೀಟ್ ವಿಭಾಗದಲ್ಲಿ ಬೆಳ್ಳಿ ಗೆದ್ದರು. ಇದಕ್ಕೂ ಮುನ್ನ ಅವರು ಅಂಗದ್ ವೀರ್ ಸಿಂಗ್ ಬಾಜ್ವಾ ಮತ್ತು ಗುರುಜ್ಯೋತ್ ಸಿಂಗ್ ಅವರೊಂದಿಗೆ ತಂಡ ವಿಭಾಗದಲ್ಲಿ ಕಂಚು ಜಯಿಸಿದ್ದರು.

ಆರಂಭಿಕ ಸುತ್ತುಗಳಲ್ಲಿ ನಿಖರ ಗುರಿ ಸಾಧಿಸಿದ್ದ ಅನಂತ್, ಚಿನ್ನ ಗೆಲ್ಲುವ ಭರವಸೆ ಮೂಡಿಸಿದ್ದರು. ಆದರೆ ಕೊನೆಯ ಸುತ್ತುಗಳಲ್ಲಿ ಎಡವಿದರು. ಅವರು 60 ರಲ್ಲಿ 58 ಪಾಯಿಂಟ್ಸ್ ಕಲೆಹಾಕಿದರು. 60 ಪಾಯಿಂಟ್ಸ್ ಕಲೆಹಾಕಿದ ಕುವೈತ್‌ನ ಅಬ್ದುಲ್ಲಾ ಅಲ್‌ರಶೀದಿ, ವಿಶ್ವದಾಖಲೆ ಸರಿಗಟ್ಟುವುದರೊಂದಿಗೆ ಚಿನ್ನ ತಮ್ಮದಾಗಿಸಿಕೊಂಡರು. ಕತಾರ್‌ನ ನಾಸೆರ್ ಅಲ್ ಅತಿಯಾ (46 ಪಾಯಿಂಟ್ಸ್) ಕಂಚು ಜಯಿಸಿದರು.

ತಂಡ ವಿಭಾಗದಲ್ಲಿ ಅನಂತ್, ಬಾಜ್ವಾ ಮತ್ತು ಗುರುಜ್ಯೋತ್ ಅವರು 355 ಪಾಯಿಂಟ್ಸ್‌ಗಳೊಂದಿಗೆ ಮೂರನೇ ಸ್ಥಾನ ಗಳಿಸಿದರು. ಚೀನಾ ಮತ್ತು ಕತಾರ್ ತಂಡಗಳು ಕ್ರಮವಾಗಿ ಚಿನ್ನ ಹಾಗೂ ಬೆಳ್ಳಿ ಗೆದ್ದವು. ಭಾರತ ಮಹಿಳಾ ಸ್ಕೀಟ್ ತಂಡ ನಾಲ್ಕನೇ ಸ್ಥಾನ ಪಡೆದು ಪದಕ ವಂಚಿತವಾಯಿತು.

ಕಂಚು ಗೆದ್ದ ಪುರುಷರ ಸ್ಕೀಟ್ ತಂಡದ ಅನಂತ್ ಜೀತ್ ಸಿಂಗ್, ಅಂಗದ್ ವೀರ್ ಸಿಂಗ್ ಬಾಜ್ವಾ ಮತ್ತು ಗುರುಜ್ಯೋತ್ ಸಿಂಗ್

ಮಹಿಳೆಯರ 25 ಮೀ. ಪಿಸ್ತೂಲ್ ವಿಭಾಗದಲ್ಲಿ ಬೆಳ್ಳಿ ಗೆದ್ದ ಇಶಾ ಸಿಂಗ್ – ಪಿಟಿಐ ಚಿತ್ರ

ಪದಕ ಪಟ್ಟಿ (ಅಗ್ರ 10 ದೇಶ)

ರ್‍ಯಾಂಕ್	ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಚೀನಾ	76	43	21	140
2	ದಕ್ಷಿಣ ಕೊರಿಯಾ	19	18	33	70
3	ಜಪಾನ್	15	27	24	66
4	ಉಜ್ಬೇಕಿಸ್ತಾನ	6	10	12	28
5	ಥಾಯ್ಲೆಂಡ್	6	3	8	17
6	ಹಾಂಗ್‌ಕಾಂಗ್	5	8	14	27
7	ಭಾರತ	5	7	10	22
8	ಇಂಡೊನೇಷ್ಯಾ	3	2	7	12
9	ಸಿಂಗಪುರ	2	3	4	9
10	ಚೀನಾತೈಪೆ	2	3	4	9

ಕೌಶಲ ಹೆಚ್ಚಿಸಬೇಕು: ಮನು ಭಾಕರ್

‘ವೈಯಕ್ತಿಕ ವಿಭಾಗದಲ್ಲಿ ಪದಕ ಗೆಲ್ಲಬೇಕಾದರೆ ನನ್ನ ಕೌಶಲ ಇನ್ನಷ್ಟು ಹೆಚ್ಚಿಸಬೇಕು’ ಎಂದು ಭಾರತದ ಶೂಟರ್ ಮನು ಭಾಕರ್ ತಿಳಿಸಿದರು.

ಮಹಿಳೆಯರ 25 ಮೀ. ತಂಡ ವಿಭಾಗದಲ್ಲಿ ಚಿನ್ನ ಜಯಿಸಿದ್ದ ಅವರು ವೈಯಕ್ತಿಕ ವಿಭಾಗದಲ್ಲಿ ಐದನೇ ಸ್ಥಾನಕ್ಕೆ ಸರಿದಿದ್ದರು. ಅವರಿಗೆ ಈ ಹಿಂದೆ ಕೂಡಾ ಪ್ರಮುಖ ಕೂಟಗಳ ವೈಯಕ್ತಿಕ ವಿಭಾಗದಲ್ಲಿ ನಿರಾಸೆ ಎದುರಾಗಿತ್ತು. 2018ರ ಜಕಾರ್ತ ಕೂಟದಲ್ಲಿ ಇದೇ ವಿಭಾಗದಲ್ಲಿ ಆರನೇ ಸ್ಥಾನ ಪಡೆದಿದ್ದರು.

ಪುರುಷರ ಸೇಲಿಂಗ್‌ನಲ್ಲಿ ಭಾರತಕ್ಕೆ ಕಂಚಿನ ಪದಕ

ವಿಷ್ಣುಗೆ ಒಂದಂಕದಿಂದ ಕೈತಪ್ಪಿದ ಬೆಳ್ಳಿ

ನಿಂಗ್ಬೊ(ಪಿಟಿಐ): ಭಾರತದ ವಿಷ್ಣು ಸರವಣನ್ ಏಷ್ಯನ್ ಕ್ರೀಡಾಕೂಟದ ಸೇಲಿಂಗ್ ಡಿಂಘಿ ಐಎಲ್‌ಸಿಎ 7 ಪುರುಷರ ವಿಭಾಗದಲ್ಲಿ ಕಂಚಿನ ಪದಕ ಗಳಿಸಿದರು.

11 ರೇಸ್‌ಗಳಿರುವ ಈ ವಿಭಾಗದಲ್ಲಿ ಸರವಣನ್ 34 ಅಂಕಗಳಿಸಿದರು. ಕೇವಲ ಒಂದು ಪಾಯಿಂಟ್ ಅಂತರದಿಂದ ಬೆಳ್ಳಿ ಪದಕ ತಪ್ಪಿಸಿಕೊಂಡರು.

ದಕ್ಷಿಣ ಕೊರಿಯಾದ ಜೀಮೈನ್ ಎಚ್‌ಎ 33 ಅಂಕಗಳೊಂದಿಗೆ ಎರಡನೇ ಸ್ಥಾನಪಡೆದರು. ಸಿಂಗಪುರದ ಜುನ್ ಹಾನ್ ರಿಯಾನ್ ಲೊ 26 ಅಂಕಗಳೊಂದಿಗೆ ಚಿನ್ನದ ಪದಕಕ್ಕೆ ಕೊರಳೊಡ್ಡಿದರು.

2017ರಿಂದ ರಾಷ್ಟ್ರೀಯ ಚಾಂಪಿಯನ್ ಆಗಿರುವ ವಿಷ್ಣು 2021ರಲ್ಲಿ ಟೋಕಿಯೊ ಒಲಿಂಪಿಕ್ ಕೂಟದಲ್ಲಿ ಏಷ್ಯಾ ಮಟ್ಟದಲ್ಲಿ ಎರಡನೇ ಶ್ರೇಷ್ಠ ಸೇಲರ್ ಆಗಿದ್ದರು.

ವಿಷ್ಣು ಮುಂಬೈನಲ್ಲಿ ಆರ್ಮಿ ಯಾಚಿಂಗ್ ನಾಡ್‌ನಲ್ಲಿ ತಮ್ಮ ತಂದೆಯಿಂದ ಸೇಲಿಂಗ್ ತರಬೇತಿ ಪಡೆದಿದ್ದರು. ಆಗ ವಿಷ್ಣುಗೆ ಒಂಬತ್ತು ವರ್ಷವಾಗಿತ್ತು. 2019ರಲ್ಲಿ ಕ್ರೊವೇಷ್ಯಾದಲ್ಲಿ ನಡೆದ 21 ವರ್ಷದೊಳಗಿನವರ ವಿಭಾಗದಲ್ಲಿ ಬೆಳ್ಳಿ ಪದಕ ಜಯಿಸಿದ್ದರು.

ಸೇಲಿಂಗ್ ಡಿಂಘಿ ಐಎಲ್‌ಸಿಎ 7 ಪುರುಷರ ವಿಭಾಗದಲ್ಲಿ ಕಂಚು ಗೆದ್ದ ಭಾರತದ ವಿಷ್ಣು ಸರವಣನ್ (ಬಲ). ಚಿನ್ನ ಗೆದ್ದ ಸಿಂಗಪುರದ ಜುನ್ ಹಾನ್ ರಿಯಾನ್ ಲೊ (ಎಡ) ಮತ್ತು ಬೆಳ್ಳಿ ಗೆದ್ದ ದಕ್ಷಿಣ ಕೊರಿಯಾದ ಜೀಮೈನ್ ಎಚ್‌ಎ –ಎಎಫ್‌ಪಿ ಚಿತ್ರ

ಗಾಳಿ ಬೀಸುವಿಕೆಯ ವೇಗ ಕಡಿಮೆಯಿದ್ದ ವಾತಾವರಣದಲ್ಲಿ ನಡೆದ ಸಿಂಗಲ್ ಡಿಂಘಿ ಐಎಲ್‌ಸಿಎ –6 ಮಹಿಳೆಯರ ವಿಭಾಗದಲ್ಲಿ ನೇತ್ರಾ ಕುಮನನ್ ಕಂಚಿನ ಪದಕ ತಪ್ಪಿಸಿಕೊಂಡರು. ವಿಭಾಗದ 12ನೇ ರೇಸ್ ರದ್ದಾಯಿತು. 2018ರಲ್ಲಿಯೂ ಭಾರತದ ಸೇಲಿಂಗ್ ಪಟುಗಳು ಒಂದು ಬೆಳ್ಳಿ ಮತ್ತು ಎರಡು ಕಂಚು ಗೆದ್ದಿದ್ದರು. ಈ ಬಾರಿಯೂ ಆ ದಾಖಲೆ ಸಮ ಮಾಡಿದರು.

ಮಂಗಳವಾರ ನೇಹಾ ಠಾಕೂರ್ ಬೆಳ್ಳಿ ಹಾಗೂ ಇಬಾದ್ ಅಲಿ ಕಂಚು ಜಯಿಸಿದ್ದರು.

ನೇತ್ರಾ 41 ನೆಟ್ ಪಾಯಿಂಟ್ಸ್ ಗಳಿಸಿದರು. ಸಿಂಗಪುರದ ಜಿಂಗ್ ಹುವಾ ವಿಕ್ಟೋರಿಯಾ (38) ಅವರು ಕಂಚು ಗೆದ್ದರು.

ಅರುಣಾಚಲ ಆಟಗಾರ್ತಿಯರಿಗೆ ಯಶಸ್ಸಿನ ಅರ್ಪಣೆ: ರೋಶಿಬಿನಾ

ಹಾಂಗ್‌ಝೌ (ಪಿಟಿಐ): ಪ್ರತಿಭಾನ್ವಿತೆ ರೋಶಿಬಿನಾ ದೇವಿ ಮಹಿಳೆಯರ ವುಶು 60 ಕೆ.ಜಿ. ಸ್ಪರ್ಧೆಯಲ್ಲಿ ಬುಧವಾರ ವಿಯೆಟ್ನಾಮಿನ ಥಿ ತು ಎನ್‌ಗುಯೆನ್ ಅವರನ್ನು ಮಣಿಸಿ ಫೈನಲ್ ತಲುಪಿದರು. ಇದರಿಂದ ಅವರಿಗೆ ಚಿನ್ನ ಅಥವಾ ರಜತ ಖಚಿತವಾಯಿತು.

ಎದುರಾಳಿಗೆ ಒಂದಿನಿತೂ ಅವಕಾಶ ನೀಡದ ರೋಶಿಬಿನಾ ಅವರು 2–0ಯಿಂದ ಸೆಣಸಾಟ ಗೆದ್ದರು. ಅವರು ಗುರುವಾರ ನಡೆಯಲಿರುವ ಚಿನ್ನದ ಪದಕದ ಸ್ಪರ್ಧೆಯಲ್ಲಿ ಚೀನಾದ ವು ಕ್ಸಿಯಾವೊವಿ ಅವರನ್ನು ಎದುರಿಸಲಿದ್ದಾರೆ.

ವುಶು ಫೈನಲ್ ತಲುಪಿದ ಭಾರತದ ಎರಡನೇ ಆಟಗಾರ್ತಿ ಎಂಬ ಹೆಗ್ಗಳಿಕೆ ರೋಶಿಬಿನಾ ಅವರದಾಯಿತು. 2010ರ ಗುವಾಂಗ್‌ಝೌ ಗೇಮ್ಸ್‌ನಲ್ಲಿ ಬೆಳ್ಳಿ ಗೆದ್ದ ಸಂಧ್ಯಾರಾಣಿ ದೇವಿ ಮೊದಲಿಗರು. ಆದರೆ ರೋಶಿಬಿನಾ ದೇವಿ 2018ರ ಕ್ರೀಡೆಗಳಲ್ಲಿ ಇದೇ ತೂಕ ವಿಭಾಗ ದಲ್ಲಿ ಕಂಚಿನ ಪದಕ ಗೆದ್ದಿದ್ದಾರೆ.

ತಮ್ಮ ಫೈನಲ್ ಪ್ರವೇಶದ ಸಾಧನೆಯನ್ನು ರೋಶಿಬಿನಾ ಅವರು ಅರುಣಾಚಲ ಪ್ರದೇಶದ ಮೂವರು ವುಶು ಆಟಗಾರ್ತಿಯರಿಗೆ ಸಮರ್ಪಿಸಿದ್ದಾರೆ. ಚೀನಾ ವೀಸಾ ಸಿಗದೇ ಈ ಆಟಗಾರ್ತಿಯರು ಭಾಗವಹಿಸಲು ಆಗಿರಲಿಲ್ಲ.

ನವೊರೆಮ್ ರೋಶಿಬಿನಾ ದೇವಿ

‘ಇಲ್ಲಿಗೆ ಬರಲಾಗದ ನನ್ನ ಮೂವರು ಸ್ನೇಹಿತೆಯರಿಗಾಗಿ ನಾನು (ಚಿನ್ನ) ಗೆಲ್ಲಬಯಸಿದ್ದೇನೆ. ಒನಿಲು ತೇಗಾ ನನ್ನ ಜೊತೆಗೇ ಇರುತ್ತಿದ್ದರು. ನಾವೆಲ್ಲ ಜೊತೆಗೆ ತರಬೇತಿ ಪಡೆಯುತ್ತಿದ್ದು, ಒಳ್ಳೆಯ ಸ್ನೇಹಿತೆಯರು. ಇಂಥ ದೊಡ್ಡ ಕ್ರೀಡಾಕೂಟದಲ್ಲಿ ಆತ್ಮೀಯರಿದ್ದರೆ ಉಲ್ಲಾಸವಿರುತ್ತದೆ’ ಎಂದರು.

ಚೆಸ್ ವೈಯಕ್ತಿಕ ವಿಭಾಗ: ಭಾರತಕ್ಕೆ ಬರಿಗೈ

ಹಾಂಗ್‌ಝೌ (ಪಿಟಿಐ): ಪದಕದ ಭರವಸೆಯಾಗಿದ್ದ ಗ್ರ್ಯಾಂಡ್‌ಮಾಸ್ಟರ್ ವಿದಿತ್ ಗುಜರಾತಿ ಅಂತಿಮ ಸುತ್ತಿನಲ್ಲಿ ಉಜ್ಬೇಕಿಸ್ತಾನದ ಜಾವೊಕಿರ್ ಸಿಂದರೋವ್ ಜಾವೊಕಿರ್ ಅವರಿಗೆ ಸೋತರು. ಆ ಮೂಲಕ ಬುಧವಾರ ಮುಕ್ತಾಯಗೊಂಡ ಏಷ್ಯನ್ ಗೇಮ್ಸ್ ಪುರುಷರ ಮತ್ತು ಮಹಿಳೆಯರ ಚೆಸ್ ವೈಯಕ್ತಿಕ ವಿಭಾಗದಲ್ಲಿ ಭಾರತಕ್ಕೆ ಯಾವುದೇ ಪದಕ ಸಿಗಲಿಲ್ಲ.

ವಿದಿತ್ (2694) ಎಂಟನೇ ಸುತ್ತಿನಲ್ಲಿ ತಮಗಿಂತ ಕೆಳಕ್ರಮಾಂಕದ ಮಂಗೋಲಿಯಾ ಆಟಗಾರ ಬಿಲ್ಗುನ್ ಸುಮಿಯ (2460) ಜೊತೆ ಡ್ರಾ ಮಾಡಿಕೊಂಡಿದ್ದು ದುಬಾರಿಯಾಯಿತು. ಅಂತಿಮ ಸುತ್ತಿನಲ್ಲೂ ಸೋತಿದ್ದರಿಂದ ಪದಕದಾಸೆ ಭಗ್ನಗೊಂಡಿತು.

ಮೂರನೇ ಶ್ರೇಯಾಂಕದ ವಿದಿತ್ (5.5 ಅಂಕ) ಐದನೇ ಸ್ಥಾನ ಪಡೆದರೆ, ಕಣದಲ್ಲಿದ್ದ ಭಾರತದ ಮತ್ತೊಬ್ಬ ಆಟಗಾರ ಅರ್ಜುನ್ ಇರಿಗೇಶಿ (5.5) ಆರನೇ ಸ್ಥಾನ (ಟೈಬ್ರೇಕ್ ಆಧಾರದಲ್ಲಿ) ಪಡೆದರು. ವಿದಿತ್ 7ನೇ ಸುತ್ತಿನ ನಂತರ ಜಂಟಿ ಎರಡನೇ ಸ್ಥಾನದಲ್ಲಿದ್ದರು.

ಅಗ್ರ ಶ್ರೇಯಾಂಕದ ವೀ ಯಿ (ಚೀನಾ) ಅವರು 9 ಸುತ್ತುಗಳಲ್ಲಿ 7.5 ಅಂಕ ಸಂಗ್ರಹಿಸಿ ಚಿನ್ನದ ಪದಕ ಪಡೆದರು. ಎರಡನೇ ಶ್ರೇಯಾಂಕದ ನಾಡಿರ್ಬೆಕ್ ಅಬ್ದುಸತ್ತಾರೋವ್ (ಉಜ್ಬೇಕಿಸ್ತಾನ) ಏಳು ಅಂಕ ಪಡೆದು ಬೆಳ್ಳಿ ಮತ್ತು ಜಾವೊಕಿರ್ 6.5 ಅಂಕ ಸಂಗ್ರಹಿಸಿ ಕಂಚಿನ ಪದಕ ಪಡೆದರು.

ಜಿನೆರ್ ಝು

ಮಹಿಳೆಯರ ವಿಭಾಗದಲ್ಲಿ ದ್ರೋಣವಲ್ಲಿ ಹಾರಿಕಾ (6 ಅಂಕ) ನಾಲ್ಕನೇ ಸ್ಥಾನ ಪಡೆದರೆ, 2006 ದೋಹಾ ಕ್ರೀಡೆಗಳಲ್ಲಿ ಚಿನ್ನ ಗೆದ್ದಿದ್ದ ಕೋನೇರು ಹಂಪಿ (5.5) ಇಲ್ಲಿ ಏಳನೇ ಸ್ಥಾನ ಪಡೆದರು. ಇವರಿಬ್ಬರು ಎಂಟನೇ ಸುತ್ತಿನಲ್ಲಿ ಪರಸ್ಪರ ಎದುರಾಳಿಗಳಾಗಿದ್ದು, ಈ ಪಂದ್ಯ ‘ಡ್ರಾ’ ಆಗಿತ್ತು.

ಹಾರಿಕಾಗೆ ಸೋತ ಜಿನೆರ್: ಅಂತಿಮವಾಗಿ ಚಿನ್ನ ಗೆದ್ದ ಚೀನಾದ ಜಿನೆರ್ ಝು (7 ಅಂಕ) ಅವರು ಅಂತಿಮ ಸುತ್ತಿನಲ್ಲಿ ಹಾರಿಕಾ ಎದುರು ಆಘಾತಕಾರಿ ಸೋಲು ಕಂಡರು. ಆದರೆ ಅದು ಭಾರತದ ಆಟಗಾರ್ತಿಗೆ ಪದಕ ಗೆಲ್ಲಲು ನೆರವಾಗಲಿಲ್ಲ.

ಹಾರಿಕಾ ಅಂತಿಮ ಸುತ್ತಿನಲ್ಲಿ ಜಿನೆರ್ ಝು (ಚೀನಾ) ಅವರಿಗೆ ಆಘಾತ ನೀಡಿದರೂ, ಅದು ಪದಕ ಗೆಲ್ಲಲು ನೆರವಾಗಲಿಲ್ಲ. ಹಂಪಿ ಅಂತಿಮ ಸುತ್ತಿನಲ್ಲಿ ಬಿಬಿಸಾರಾ ಅಸ್ಸೌಬಯೇವಾ (ಕಜನಕಸ್ತಾನ) ಎದುರು ‘ಡ್ರಾ’ ಮಾಡಿಕೊಳ್ಳಲಷ್ಟೇ ಶಕ್ತರಾದರು.

ಜಿನೆರ್ (7.5), ಉಜ್ಬೇಕಿಸ್ತಾನದ ಉಮಿದಾ ಒಮೊನೊವಾ (6.5), ಚೀನಾದ ಹೌ ಯಿಫಾನ್ (6.5) ಕ್ರಮವಾಗಿ ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಪಡೆದರು.

ಹ್ಯಾಂಡ್‌ಬಾಲ್: ಡ್ರಾ ಸಾಧಿಸಿದ ವನಿತೆಯರು

ಹಾಂಗ್‌ಝೌ (ಪಿಟಿಐ): ಭಾರತ ವನಿತೆಯರ ಹ್ಯಾಂಡ್‌ಬಾಲ್ ತಂಡವು ಬುಧವಾರ ನಡೆದ ಗುಂಪು ಹಂತದ 2ನೇ ಪಂದ್ಯದಲ್ಲಿ 26–26ರಿಂದ ಹಾಂಗ್‌ಕಾಂಗ್ ವಿರುದ್ಧ ಡ್ರಾ ಸಾಧಿಸಿತು.

ಮೊದಲ ಪಂದ್ಯದಲ್ಲಿ ಭಾರತ ಜಪಾನ್ ತಂಡದ ಎದುರು ಮುಗ್ಗರಿಸಿತ್ತು. ಈ ಪಂದ್ಯದಲ್ಲಿ ಉತ್ತಮ ಪೈಪೋಟಿ ನೀಡಿದರೂ ಜಯ ಒಲಿಯಲಿಲ್ಲ. ಭಾರತ ತಂಡವು ಶುಕ್ರವಾರ ಚೀನಾ ವಿರುದ್ಧ ಮತ್ತು ಶನಿವಾರ ನೇಪಾಳ ವಿರುದ್ಧ ಸೆಣಸಲಿದೆ.

ಬಾಕ್ಸಿಂಗ್: ಎಂಟರ ಘಟ್ಟಕ್ಕೆ ನಿಖತ್

ಹಾಂಗ್‌ಝೌ (ಪಿಟಿಐ): ಎರಡು ಬಾರಿಯ ವಿಶ್ವ ಚಾಂಪಿಯನ್ ನಿಖತ್ ಝರೀನ್, ಏಷ್ಯನ್ ಗೇಮ್ಸ್ ಬಾಕ್ಸಿಂಗ್ ಸ್ಪರ್ಧೆಯ 50 ಕೆ.ಜಿ. ವಿಭಾಗದಲ್ಲಿ ಬುಧವಾರ ಎಂಟರ ಘಟ್ಟಕ್ಕೆ ದಾಪುಗಾಲಿಟ್ಟರು. ಆದರೆ ಭಾರತದ ಇನ್ನಿಬ್ಬರು ಅನುಭವಿಗಳಾದ ಶಿವ ಥಾಪಾ ಮತ್ತು ಸಂಜೀತ್ ಅವರ ಸವಾಲು ನಿರೀಕ್ಷೆಗಿಂತ ಬೇಗ ಅಂತ್ಯಗೊಂಡಿತು.

ನಿಖತ್ ಎರಡನೇ ಸುತ್ತಿನ ಸೆಣಸಾಟದಲ್ಲಿ ದಕ್ಷಿಣ ಕೊರಿಯಾದ ಚೊರೊಂಗ್ ಬಾಕ್ ಅವರನ್ನು 5–0 ಯಿಂದ ಸೋಲಿಸಿದರು.

ಆದರೆ ಆರು ಬಾರಿಯ ಏಷ್ಯನ್ ಚಾಂಪಿಯನ್‌ಷಿಪ್ ಪದಕ ವಿಜೇತರಾಗಿರುವ ಶಿವ ಅವರು ಇಲ್ಲೂ ಪದಕದ ನಿರೀಕ್ಷೆಯಲ್ಲಿದ್ದರು. ಆದರೆ 63.5 ಕೆ.ಜಿ. ವಿಭಾಗದ ಪ್ರಿ-ಕ್ವಾರ್ಟರ್‌ಫೈನಲ್‌ನಲ್ಲಿ ಕಿರ್ಗಿಸ್ತಾನದ 21 ವರ್ಷದ ಯುವಕ ಅಸ್ಕತ್ ಕುಲ್ತೇವ್ 5–0 ಯಿಂದ ಭಾರತದ ಬಾಕ್ಸರ್ ಮೇಲೆ ಅಮೋಘ ರೀತಿಯಲ್ಲಿ ಜಯಗಳಿಸಿದರು.

ನಿಖತ್ ಝರೀನ್

92 ಕೆ.ಜಿ. ವಿಭಾಗದಲ್ಲಿ ಹಾಲಿ ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ಲಾಝಿಝ್ಬೆಕ್ ಮುಲಜನೋವ್ 5–0ಯಿಂದ ಸಂಜೀತ್ ಅವರನ್ನು ಸುಲಭವಾಗಿ ಸೋಲಿಸಿದರು. ಈ ಎರಡು ಸೋಲುಗಳಿಂದ ಕಳೆಗುಂದಿದ್ದ ಭಾರತದ ಪಾಳೆಯದಲ್ಲಿ ನಿಖತ್ ಒಂದಿಷ್ಟು ಸಮಾಧಾನ ಮೂಡಿಸಿದರು.

ಬ್ಯಾಸ್ಕೆಟ್‌ಬಾಲ್: ಕ್ವಾರ್ಟರ್‌ಗೆ ಭಾರತ

ಹಾಂಗ್‌ಝೌ (ಪಿಟಿಐ): ಭಾರತ ಪುರುಷರ 3x3 ಬ್ಯಾಸ್ಕೆಟ್‌ಬಾಲ್ ತಂಡ ಬುಧವಾರ ‘ಸಿ’ ಗುಂಪಿನ ಲೀಗ್ ಪಂದ್ಯದಲ್ಲಿ ಮಕಾವೊ ತಂಡವನ್ನು 21–12 ಪಾಯಿಂಟ್‌ಗಳಿಂದ ಸೋಲಿಸಿ ಕ್ವಾರ್ಟರ್‌ಫೈನಲ್‌ಗೆ ಸ್ಥಾನ ಖಚಿತಪಡಿಸಿಕೊಂಡಿತು.

ಸಹೇಜ್ ಪ್ರತಾಪ್ ಸಿಂಗ್ ಸೆಖೊನ್ ಅವರು 10 ಪಾಯಿಂಟ್ಸ್ ಕಲೆಹಾಕಿ ಭಾರತದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಭಾರತ ಮೊದಲ ದಿನ ಮಲೇಷ್ಯಾ ತಂಡವನ್ನು 20–16 ರಿಂದ ಸೋಲಿಸಿತ್ತು. ಭಾರತ ಕೊನೆಯ ಲೀಗ್ ಪಂದ್ಯದಲ್ಲಿ ಕಳೆದ ಕ್ರೀಡೆಗಳಲ್ಲಿ ಚಿನ್ನ ಗೆದ್ದಿದ್ದ ಚೀನಾ ತಂಡವನ್ನು ಶುಕ್ರವಾರ ಎದುರಿಸಲಿದೆ. ಭಾರತ ಮಹಿಳಾ ತಂಡವೂ ಅದೇ ದಿನ ಆತಿಥೇಯ ತಂಡವನ್ನೇ ಎದುರಿಸಲಿದೆ.

ಮಹಿಳಾ ಹಾಕಿ: ಸಿಂಗಪುರಕ್ಕೆ 0–13 ಗೋಲುಗಳ ಸೋಲು

ಸಂಗೀತಾ ಹ್ಯಾಟ್ರಿಕ್: ಭಾರತ ಜಯಭೇರಿ

ಹಾಂಗ್‌ಝೌ (ಪಿಟಿಐ): ಸ್ಟ್ರೈಕರ್ ಸಂಗೀತಾ ಕುಮಾರಿ ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಭಾರತ ಮಹಿಳೆಯರ ಹಾಕಿ ತಂಡವು ಏಷ್ಯನ್ ಕ್ರೀಡಾಕೂಟದ ‘ಎ’ ಗುಂಪಿನಲ್ಲಿ ಜಯ ಸಾಧಿಸಿತು.

ಬುಧವಾರ ನಡೆದ ಪಂದ್ಯದಲ್ಲಿ ಭಾರತ ತಂಡವು 13–0 ಗೋಲುಗಳಿಂದ ಸಿಂಗಪುರ ವಿರುದ್ಧ ಜಯಿಸಿತು.

ಪಂದ್ಯದ ಮೊದಲ ಎರಡು ಕ್ವಾರ್ಟರ್‌ಗಳಲ್ಲಿಯೇ ಭಾರತದ ಆಟಗಾರ್ತಿಯರು ಎಂಟು ಗೋಲುಗಳನ್ನು ದಾಖಲಿಸಿದರು. ದ್ವಿತೀಯಾರ್ಧದದಲ್ಲಿ ಸಿಂಗಪುರ ತಂಡದ ಆಟಗಾರ್ತಿಯರು ಒಂದಿಷ್ಟು ಪ್ರತಿರೋಧ ತೋರಿದರು. ಅದರಿಂದಾಗಿ ಈ ಅವಧಿಯಲ್ಲಿ ಭಾರತಕ್ಕೆ ಐದು ಗೋಲು ಗಳಿಸಲು ಮಾತ್ರ ಸಾಧ್ಯವಾಯಿತು.

ಸಂಗೀತಾ ಕುಮಾರಿ (23ನೇ ನಿಮಿಷ, 47ನಿ, 56ನಿ) ಮೂರು ಗೋಲು ಗಳಿಸಿದರು. ನವನೀತ್ ಕೌರ್ ಅವರು 14ನೇ ನಿಮಿಷದಲ್ಲಿಯೇ ಎರಡು ಗೋಲು ಹೊಡೆದರು. ಉದಿತಾ (6ನಿ), ಸುಶೀಲಾ ಚಾನು (8ನಿ), ದೀಪಿಕಾ (11ನಿ), ದೀಪ್ ಗ್ರೇಸ್ ಎಕ್ಕಾ (17ನಿ), ನೇಹಾ (19ನಿ), ಸಲೀಮಾ ಟೆಟೆ (35ನಿ), ಮೊನಿಕಾ (52ನಿ) ಮತ್ತು ವಂದನಾ ಕಟಾರಿಯಾ (56ನಿ) ಗೋಲು ಗಳಿಸಿದರು.

ಶುಕ್ರವಾರ ನಡೆಯುವ ಎರಡನೇ ಪಂದ್ಯದಲ್ಲಿ ಭಾರತ ತಂಡವು ಮಲೇಷ್ಯಾ ಎದುರು ಆಡಲಿದೆ.

‘ಇವತ್ತಿನ ಪಂದ್ಯದಲ್ಲಿ ಚೆನ್ನಾಗಿ ಆಡಿದ ತೃಪ್ತಿ ಇದೆ. ಯುವ ಆಟಗಾರ್ತಿಯರು ಸೀನಿಯರ್ ಆಟಗಾರ್ತಿಯರೊಂದಿಗೆ ಉತ್ತಮ ಹೊಂದಾಣಿಕೆಯಿಂದ ಆಡಿದರು. ಇದರಿಂದಾಗಿ ಎಲ್ಲವೂ ಸಾಂಗವಾಗಿ ನೆರವೇರಿತು‘ ಎಂದು ಭಾರತ ತಂಡದ ನಾಯಕಿ ಸವಿತಾ ಪೂನಿಯಾ ಹೇಳಿದರು.

ಭಾರತ ಮಹಿಳಾ ಹಾಕಿ ತಂಡದ ಸಂಭ್ರಮ –ಪಿಟಿಐ ಚಿತ್ರ

‘ಮುಂದಿನ ಪಂದ್ಯ ಮಲೇಷ್ಯಾದ ಎದುರು ಆಡಲಿದ್ದೇವೆ. ಆ ಪಂದ್ಯದ ಕುರಿತು ಸದ್ಯ ನಮ್ಮ ಯೋಚನೆ ಮತ್ತು ಯೋಜನೆ ಇದೆ. ಮಲೇಷ್ಯಾದ ಆಟವನ್ನು ಅರಿಯಲು ನಮಗೆ ಲಭ್ಯವಿರುವ ಒಂದು ದಿನದ ಅವಕಾಶದಲ್ಲಿ ಪ್ರಯತ್ನಿಸುತ್ತವೆ. ಅದಕ್ಕೆ ತಕ್ಕಂತೆ ತಂತ್ರಗಾರಿಕೆ ರೂಪಿಸುತ್ತೇವೆ. ನಮ್ಮ ಗುಂಪಿನಲ್ಲಿ ಕೊರಿಯಾ ಕೂಡ ಇದೆ. ಅವರದ್ದು ಒಳ್ಳೆಯ ಬಳಗವೇ ಇದೆ. ಆದರೆ ಎದುರಿಸಿ ನಿಲ್ಲುವ ವಿಶ್ವಾಸ ನಮಗೆ ಇದೆ‘ ಎಂದೂ ಸವಿತಾ ಹೇಳಿದರು.

ಸವಿತಾ ಬಳಗವು ಪೆನಾಲ್ಟಿ ಕಾರ್ನರ್‌ಗಳಲ್ಲಿ ನಿಖರ ಆಟ ತೋರಿತು. ಹೀಗಾಗಿ ಐದು ಪೆನಾಲ್ಟಿಗಳು ಗೋಲುಗಳಲ್ಲಿ ಪರಿವರ್ತನೆಗೊಂಡವು. ಪಂದ್ಯದ ಆರಂಭದಿಂದಲೇ ಆಕ್ರಮಣಶೈಲಿಯ ಅಟವನ್ನು ಆಡಿದ ಭಾರತ ಕೊನೆಯವರೆಗೂ ಸಿಂಗಪುರದ ಮೇಲೆ ಒತ್ತಡ ಹೇರಿತ್ತು.

ಭಾರತಕ್ಕೆ ಜಪಾನ್ ಸವಾಲು ಇಂದು

ಹಾಂಗ್‌ಝೌ (ಪಿಟಿಐ): ಹರ್ಮನ್‌ಪ್ರೀತ್ ಸಿಂಗ್ ನಾಯಕತ್ವದ ಭಾರತ ಹಾಕಿ ತಂಡವು ಗುರುವಾರ ಬಲಿಷ್ಠ ಜಪಾನ್ ತಂಡವನ್ನು ಎದುರಿಸಲಿದೆ.

ಪುರುಷರ ಹಾಕಿ ವಿಭಾಗದ ಎ ಗುಂಪಿನಲ್ಲಿ ಭಾರತ ತಂಡವು ಕಳೆದ ಎರಡು ಪಂದ್ಯಗಳಲ್ಲಿ ಉಜ್ಬೇಕಿಸ್ತಾನ ಮತ್ತು ಸಿಂಗಪುರ ಎದುರು ಭರ್ಜರಿ ಜಯ ಸಾಧಿಸಿತ್ತು.

ಆದರೆ ಜಪಾನ್ ಕಠಿಣ ಸವಾಲು ಒಡ್ಡುವ ತಂಡವಾಗಿದೆ. ಜಪಾನ್ ತಂಡವು ಹಾಲಿ ಚಾಂಪಿಯನ್ ಕೂಡ ಆಗಿದೆ. ತಂಡವು 2018ರ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಜಯಿಸಿತ್ತು.

ಇಲ್ಲಿ ಜಪಾನ್ ತಂಡವೂ ಎರಡು ಪಂದ್ಯಗಳಲ್ಲಿ ಆಡಿದೆ. ಬಾಂಗ್ಲಾದೇಶ ವಿರುದ್ಧ (7–2) ಮತ್ತು ಉಜ್ಬೇಕಿಸ್ತಾನ (10–1) ವಿರುದ್ಧ ಪಂದ್ಯಗಳನ್ನು ಜಯಿಸಿದೆ.

ಕ್ರೀಡಾಕೂಟದಲ್ಲಿ ಇಂದು

ವುಶು: ಚಿನ್ನದ ಪದಕಕ್ಕೆ ಸ್ಪರ್ಧೆ; ಬೆಳಿಗ್ಗೆ 6.30 (ರೊಶಿಬಿನಾ ದೇವಿ)
ಇ-ಸ್ಪೋರ್ಟ್ಸ್: ಲೀಗ್ ಆಫ್ ಲೆಜೆಂಡ್ಸ್; ಸೆಮಿಫೈನಲ್; ಬೆಳಿಗ್ಗೆ 6.30 (ವಿರ್ಧ್ವಲ್ ಖಾಡೆ)
ಮಹಿಳೆಯರ ಬ್ಯಾಡ್ಮಿಂಟನ್: ಮೊದಲ ಸುತ್ತು; ಬೆಳಿಗ್ಗೆ 7.12
ಈಜು: ಮೊದಲ ಸುತ್ತು ಮತ್ತು ಫೈನಲ್; ಬೆಳಿಗ್ಗೆ 7.30
ಶೂಟಿಂಗ್: ಪುರುಷರ 10 ಮೀ ಏರ್ ಪಿಸ್ತೂಲು (ವೈಯಕ್ತಿಕ ಮತ್ತು ತಂಡ); ಬೆಳಿಗ್ಗೆ 9.30
ಮಹಿಳೆಯರ ಸ್ಕ್ವಾಷ್: ಭಾರತ–ಮಲೇಷ್ಯಾ; ಬೆಳಿಗ್ಗೆ 10
ಬಾಕ್ಸಿಂಗ್: 60 ಕೆಜಿ ವಿಭಾಗ; ಮಧ್ಯಾಹ್ನ 12.30 (ಜಾಸ್ಮಿನ್ ಲಂಬೋರಿಯಾ, ದೀಪಕ್ ಭೋರಿಯಾ)
ಟೆನಿಸ್: ಪುರುಷರ ಡಬಲ್ಸ್ ಸೆಮಿಫೈನಲ್; ಮಧ್ಯಾಹ್ನ 2
ಜಿಮ್ನಾಸ್ಟಿಕ್ಸ್: ಫೈನಲ್ ಸ್ಪರ್ಧೆ; ಮಧ್ಯಾಹ್ನ 2 (ಪ್ರಣತಿ ನಾಯಕ್)
ಪುರುಷರ ಬ್ಯಾಸ್ಕೆಟ್‌ಬಾಲ್: ಭಾರತ– ಚೀನಾ; ಮಧ್ಯಾಹ್ನ 3.30
ಪುರುಷರ ಫುಟ್‌ಬಾಲ್: ಭಾರತ–ಸೌದಿ ಅರೇಬಿಯಾ; ಸಂಜೆ 5
ಟೇಬಲ್ ಟೆನಿಸ್: ಮಹಿಳೆಯರ ಡಬಲ್ಸ್; ಸಂಜೆ 5
ಪುರುಷರ ಹಾಕಿ: ಭಾರತ– ಜಪಾನ್; ಸಂಜೆ 6.15

ನೇರಪ್ರಸಾರ: ಸೋನಿ ಸ್ಪೋರ್ಟ್ಸ್

ಏಕದಿನ ಕ್ರಿಕೆಟ್: ರೋಹಿತ್ ಉತ್ತಮ ಬ್ಯಾಟಿಂಗ್; ಭಾರತಕ್ಕೆ ಸರಣಿ ಗೆಲುವು

ಮ್ಯಾಕ್ಸ್‌ವೆಲ್ ಕೈಚಳಕ: ಆಸ್ಟ್ರೇಲಿಯಾಕ್ಕೆ ಜಯ

ರಾಜ್‌ಕೋಟ್(ಪಿಟಿಐ): ಭಾರತ ತಂಡದ ಘಟಾನುಘಟಿಗಳ ವಿಕೆಟ್ ಗಳಿಸಿದ ಗ್ಲೆನ್ ಮ್ಯಾಕ್ಸ್‌ವೆಲ್ ಆಸ್ಟ್ರೇಲಿಯಾ ತಂಡಕ್ಕೆ ಗೆಲುವಿನ ಕಾಣಿಕೆ ನೀಡಿದರು.

ಸೌರಾಷ್ಟ್ರ ಕ್ರಿಕೆಟ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಏಕದಿನ ಸರಣಿಯ ಮೂರನೇ ಪಂದ್ಯದಲ್ಲಿ ಮ್ಯಾಕ್‌ವೆಲ್ (10–0–40–4) ದಾಳಿಗೆ ಕುಸಿದ ಆತಿಥೇಯ ತಂಡವು 66 ರನ್‌ಗಳಿಂದ ಸೋತಿತು. ಮೊದಲೆರಡು ಪಂದ್ಯಗಳಲ್ಲಿ ಗೆದ್ದಿದ್ದ ಭಾರತವು ಸರಣಿಯನ್ನು ತನ್ನದಾಗಿಸಿಕೊಂಡಿತು.

ಟಾಸ್ ಗೆದ್ದ ಆಸ್ಟ್ರೇಲಿಯಾ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಅಗ್ರಕ್ರಮಾಂಕದ ಬ್ಯಾಟರ್‌ಗಳ ಉತ್ತಮ ಆಟದಿಂದಾಗಿ ಆಸ್ಟ್ರೇಲಿಯಾ 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 352 ರನ್ ಗಳಿಸಿತು. ಅದಕ್ಕುತ್ತರವಾಗಿ ಭಾರತ ತಂಡವು 49.4 ಓವರ್‌ಗಳಲ್ಲಿ 286 ರನ್ ಗಳಿಸಿ ಆಲೌಟ್ ಆಯಿತು. ಅದಕ್ಕೆ ಕಾರಣವಾಗಿದ್ದು ಮ್ಯಾಕ್ಸ್‌ವೆಲ್ ಅವರ ಪರಿಣಾಮಕಾರಿ ಬೌಲಿಂಗ್.

ಕಳೆದೆರಡು ಪಂದ್ಯಗಳಲ್ಲಿ ವಿಶ್ರಾಂತಿ ಪಡೆದು ಮರಳಿದ ನಾಯಕ ರೋಹಿತ್ ಶರ್ಮಾ (81; 57ಎ, 4X5), ವಿರಾಟ್ ಕೊಹ್ಲಿ (56; 61ಎ, 4X5, 6X1) ಅರ್ಧಶತಕಗಳನ್ನು ಗಳಿಸಿದರು. ಕಳೆದ ಪಂದ್ಯದಲ್ಲಿ ಶತಕ ಬಾರಿಸಿದ್ದ ಶ್ರೇಯಸ್ ಅಯ್ಯರ್ (48; 43ಎ) ಎರಡು ರನ್‌ಗಳ ಅಂತರದಿಂದ ಅರ್ಧಶತಕ ತಪ್ಪಿಸಿಕೊಂಡರು. ಈ ಮೂವರ ವಿಕೆಟ್‌ಗಳನ್ನೂ ಮ್ಯಾಕ್ಸ್‌ವೆಲ್ ತಮ್ಮ ಬುಟ್ಟಿಗೆ ಹಾಕಿಕೊಂಡರು. ವಿಶ್ರಾಂತಿ ಪಡೆದ ಶುಭಮನ್ ಗಿಲ್ ಬದಲು ರೋಹಿತ್ ಜೊತೆಗೆ ಇನಿಂಗ್ಸ್ ಆರಂಭಿಸಿದ ವಾಷಿಂಗ್ಟನ್ ಸುಂದರ್ (18 ರನ್) ವಿಕೆಟ್ ಕೂಡ ಮ್ಯಾಕ್ಸ್‌ವೆಲ್ ಪಾಲಾಯಿತು. ಭಾರತದ ಬ್ಯಾಟರ್‌ಗಳು ಉತ್ತಮ ಜೊತೆಯಾಟ ಕುದುರಿಸುವ ಹಂತದಲ್ಲಿಯೇ ಮ್ಯಾಕ್ಸ್‌ವೆಲ್ ತಮ್ಮ ಕೈಚಳಕ ತೋರಿದರು.

ಉತ್ತಮ ಆರಂಭ: ಡೇವಿಡ್ ವಾರ್ನರ್ (56; 34ಎಸೆತ) ಮತ್ತು ಮಿಚೆಲ್ ಮಾರ್ಷ್ (96; 84ಎ) ಅಮೋಘ ಆರಂಭ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 78 ರನ್ ಗಳಿಸಿ ಭದ್ರ ಅಡಿಪಾಯ ಹಾಕಿದರು. ವಾರ್ನರ್ ಔಟಾದ ನಂತರ ಸ್ಟೀವನ್ ಸ್ಮಿತ್ (74 ರನ್) ಮತ್ತು ಮಾರ್ನಸ್ ಲಾಬುಷೇನ್ (72 ರನ್) ಅವರೂ ಅರ್ಧಶತಕಗಳನ್ನು ಬಾರಿಸಿದರು.

ಇನ್ನೊಂದೆಡೆ ಮಾರ್ಷ್ 13 ಬೌಂಡರಿ ಮತ್ತು 3 ಸಿಕ್ಸರ್ ಗಳಿಸಿ ಶತಕದ ಸನಿಹ ಸಾಗಿದ್ದರು. ಆದರೆ ಕುಲದೀಪ್ ಯಾದವ್ ಎಸೆತದಲ್ಲಿ ಪ್ರಸಿದ್ಧ ಕೃಷ್ಣಗೆ ಕ್ಯಾಚಿತ್ತ ಮಾರ್ಷ್ ನಾಲ್ಕು ರನ್‌ಗಳ ಅಂತರದಿಂದ ಶತಕ ತಪ್ಪಿಸಿಕೊಂಡರು. ಮಾರ್ಷ್ ಮತ್ತು ಸ್ಮಿತ್ ಎರಡನೇ ವಿಕೆಟ್ ಜತೆಯಾಟದಲ್ಲಿ 137 ರನ್ ಸೇರಿಸಿದರು. ಏಳನೇ ವಿಕೆಟ್ ಜೊತೆಯಾಟದಲ್ಲಿ ಲಾಬುಷೇನ್ ಅವರೊಂದಿಗೆ ಸೇರಿದ ಪ್ಯಾಟ್ ಕಮಿನ್ಸ್ 46 ರನ್ ಸೇರಿಸಿ ತಂಡವು ದೊಡ್ಡ ಮೊತ್ತ ಗಳಿಸಲು ಕಾರಣರಾದರು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 352 (ಡೇವಿಡ್ ವಾರ್ನರ್ 56, ಮಿಚೆಲ್ ಮಾರ್ಷ್ 96, ಸ್ಟೀವನ್ ಸ್ಮಿತ್ 74, ಮಾರ್ನಸ್ ಲಾಬುಷೇನ್ 72, ಜಸ್‌ಪ್ರೀತ್ ಬೂಮ್ರಾ 81ಕ್ಕೆ3, ಕುಲದೀಪ್ ಯಾದವ್ 48ಕ್ಕೆ2, ಮೊಹಮ್ಮದ್ ಸಿರಾಜ್ 68ಕ್ಕೆ1, ಪ್ರಸಿದ್ಧಕೃಷ್ಣ 45ಕ್ಕೆ1) **ಭಾರತ:** 49.4 ಓವರ್‌ಗಳಲ್ಲಿ 286 (ರೋಹಿತ್ ಶರ್ಮಾ 81, ವಿರಾಟ್ ಕೊಹ್ಲಿ 56, ಶ್ರೇಯಸ್ ಅಯ್ಯರ್ 48, ಕೆ.ಎಲ್. ರಾಹುಲ್ 26, ರವೀಂದ್ರ ಜಡೇಜ 35, ಜೋಷ್ ಹ್ಯಾಜಲ್‌ವುಡ್ 42ಕ್ಕೆ2, ಗ್ಲೆನ್ ಮ್ಯಾಕ್ಸ್‌ವೆಲ್ 40ಕ್ಕೆ4)

ಫಲಿತಾಂಶ: ಆಸ್ಟ್ರೇಲಿಯಾ ತಂಡಕ್ಕೆ 66 ರನ್‌ಗಳ ಜಯ. ಭಾರತಕ್ಕೆ 2–1ರಿಂದ ಸರಣಿ ಜಯ.

ಸರಣಿ ಜಯದ ಟ್ರೋಫಿಯೊಂದಿಗೆ ಭಾರತ ತಂಡದ ಸಂಭ್ರಮ –ಎಎಫ್‌ಪಿ ಚಿತ್ರ

ಗ್ಲೆನ್ ಮ್ಯಾಕ್ಸ್‌ವೆಲ್ –ಪಿಟಿಐ ಚಿತ್ರ

ದಾಖಲೆ ಬರೆದ ಲೋಕೇಶ್

ಆತಿಥೇಯ ಜಿಲ್ಲೆಯ ರೇಖಾಗೆ ಮೊದಲ ಪದಕ ಸಂಭ್ರಮ

● ವಿಕ್ರಂ ಕಾಂತಿಕೆರೆ

ಮಂಗಳೂರು: ಮೈಸೂರಿನ ಬೋಪಣ್ಣ ಮತ್ತು ತಮ್ಮದೇ ಜಿಲ್ಲೆಯ ರಮೇಶ್ ಅವರ ಪೈಪೋಟಿ ಮೀರಿನಿಂತ ಯಾದಗಿರಿಯ ಲೋಕೇಶ್ ಕೃಷ್ಣಪ್ಪ ಅವರು ರಾಜ್ಯ ಜೂನಿಯರ್ ಮತ್ತು ಯೂತ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ 20 ವರ್ಷದೊಳಗಿನ ಪುರುಷರ 800 ಮೀಟರ್ಸ್ ಓಟದಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದುಕೊಂಡರು. ಬೆಳಗಾವಿಯ ತುಷಾರ್ ವಸಂತ ಬೇಕನ್ 23 ವರ್ಷದೊಳಗಿನವರ ವಿಭಾಗದ ಚಿನ್ನ ತಮ್ಮದಾಗಿಸಿಕೊಂಡರು.

ಲೋಕನಾಥ ಬೋಳಾರ್ ಸ್ಮರಣಾರ್ಥ ಆಯೋಜಿಸಿರುವ ಕೂಟದಲ್ಲಿ ಲೋಕೇಶ್ 1 ನಿಮಿಷ 52.45 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಆಕಾಶ್ ಗೊಲ್ಲರ (1:52.90) ಹೆಸರಿನಲ್ಲಿದ್ದ ದಾಖಲೆ ಮುರಿದರು. ಯಾದಗಿರಿಯ ಡಿವೈಇಎಸ್ ಕ್ರೀಡಾನಿಲಯದ ಬಾಲಕೃಷ್ಣ ಅವಲಕ್ಕಿ ಅವರ ಶಿಷ್ಯ ಲೋಕೇಶ್ 1500 ಮೀಟರ್ಸ್ ಓಟದಲ್ಲಿ ದಕ್ಷಿಣ ವಲಯ ಮತ್ತು ರಾಜ್ಯ ಕೂಟದಲ್ಲಿ ಕಳೆದ ವರ್ಷ ಚಿನ್ನ ಗೆದ್ದಿದ್ದರು. 2021ರ ರಾಜ್ಯ ಚಾಂಪಿಯನ್‌ಷಿಪ್‌ನ 800 ಮೀಟರ್ಸ್‌ನಲ್ಲಿ ಬೆಳ್ಳಿ ಪದಕ ಗಳಿಸಿದ್ದರು. 800 ಮೀಟರ್ಸ್ ವಿಭಾಗದಲ್ಲಿ ಇದು ಅವರಿಗೆ ಮೊದಲ ಚಿನ್ನ.

ಮೊದಲ ದಿನದ ಫಲಿತಾಂಶಗಳು: 23 ವರ್ಷದೊಳಗಿನ ಪುರುಷರ 800 ಮೀ: ತುಷಾರ್ (ಬೆಳಗಾವಿ)–1. ಕಾಲ: 1ನಿ 55.06 ಸೆ, ಆಶ್ರಿತ್ ಎಂ.ಎಸ್ (ಶಿವಮೊಗ್ಗ)–2, ಸೂರ್ಯ ಕೆ (ಯಾದಗಿರಿ)–3; 20 ವರ್ಷದೊಳಗಿನವರ 800 ಮೀ: ಲೋಕೇಶ್ ಕೆ (ಯಾದಗಿರಿ)–1. ಕಾಲ: 1ನಿ 52.45ಸೆ (ಕೂಟ ದಾಖಲೆ: ಹಿಂದಿನ ದಾಖಲೆ: ಆಕಾಶ್ ಗೊಲ್ಲರ 1ನಿ 52.90ಸೆ), ಬೋಪಣ್ಣ ಕೆ.ಎ (ಮೈಸೂರು)–2, ರಮೇಶ್ (ಯಾದಗಿರಿ)–3; 18 ವರ್ಷದೊಳಗಿನ ಬಾಲಕರ 800 ಮೀ: ಕೆ.ಬಿ.ಯಶವಂತ್ (ದಕ್ಷಿಣ ಕನ್ನಡ)–1. ಕಾಲ: 1ನಿ 56.40ಸೆ, ರಾಮು ಯಂಕ (ದ.ಕ)–2, ಸೈಯದ್ ಇರ್ಫಾನ್ (ಧಾರವಾಡ)–3; 16 ವರ್ಷದೊಳಗಿನ ಬಾಲಕರ 800 ಮೀ: ಸೈಯದ್ ಸಬಿ (ಧಾರವಾಡ)–1.ಕಾಲ: 1ನಿ 57.73ಸೆ, ತನಿಷ್ ವಿ.ಎಚ್ (ಉಡುಪಿ)–2, ಸಾಕ್ಷಿತ್ ಸಿ. (ಚಿಕ್ಕಮಗಳೂರು)–3.

20 ವರ್ಷದೊಳಗಿನ ಮಹಿಳೆಯರ 800 ಮೀ: ರೇಖಾ ಬಸಪ್ಪ (ದ.ಕ)–1. ಕಾಲ: 2ನಿ 16.59ಸೆ, ಪ್ರತೀಕ್ಷಾ (ಉಡುಪಿ)–2, ಪ್ರಣಮ್ಯ (ಯಾದಗಿರಿ)–3; 18 ವರ್ಷದೊಳಗಿನ ಬಾಲಕಿಯರ 800 ಮೀ: ಪ್ರಿಯಾಂಕಾ (ಧಾರವಾಡ)–1. ಕಾಲ: 2ನಿ 14.50ಸೆ, ಶರಣ್ಯಾ (ಬೆಂಗಳೂರು)–2, ಶಿಲ್ಪಾ ರಾಕೇಶ್ (ಧಾರವಾಡ)–3; 16 ವರ್ಷದೊಳಗಿನ ಬಾಲಕಿಯರ 800 ಮೀ: ಅಕ್ಷರಾ (ಬೆಳಗಾವಿ)–1. ಕಾಲ: 2ನಿ 29.56ಸೆ, ಇಂಪನಾ ಕೆ.ಆರ್ (ಬೆಂಗಳೂರು)–2, ಸ್ನೇಹಾ ಎಂ.ಎಂ (ಕೊಡಗು)–3.

ಬಾಲಕರ 800 ಮೀಟರ್ಸ್ ಓಟದಲ್ಲಿ ಚಿನ್ನ ಗೆದ್ದ ದಕ್ಷಿಣ ಕನ್ನಡ ಜಿಲ್ಲೆಯ ಕೆ.ಬಿ. ಯಶವಂತ್ ಮುನ್ನುಗ್ಗಿದ ಪರಿ (0672) – ಪ್ರಜಾವಾಣಿ ಚಿತ್ರ/ಫಕ್ರುದ್ದೀನ್ ಎಚ್

ಲೋಕೇಶ್

ನೇಪಾಳ ತಂಡ ಮೂರು ವಿಶ್ವದಾಖಲೆ

ಏಷ್ಯನ್ ಗೇಮ್ಸ್ ಕ್ರಿಕೆಟ್: ಕುಶಾಲ ವೇಗದ ಶತಕ, ದೀಪೇಂದ್ರ ಅರ್ಧಶತಕ ಬರಾಟೆ

ಹಾಂಗ್‌ಝೌ (ಪಿಟಿಐ): ಅಂತರರಾಷ್ಟ್ರೀಯ ಟಿ20 ಕ್ರಿಕೆಟ್ ಮಾದರಿಯಲ್ಲಿ ನೇಪಾಳದ ಬ್ಯಾಟರ್‌ಗಳು ಮೂರು ವಿಶ್ವದಾಖಲೆಗಳನ್ನು ಪೇರಿಸಿದರು.

ಏಷ್ಯನ್ ಕ್ರೀಡಾಕೂಟದ ಪುರುಷರ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಮಂಗೋಲಿಯಾ ಎದುರಿನ ಪಂದ್ಯದಲ್ಲಿ ನೇಪಾಳ ತಂಡವು 300ಕ್ಕೂ ಹೆಚ್ಚು ರನ್‌ಗಳ ಮೊತ್ತ ದಾಖಲಿಸಿತು.

ಈ ಸಾಧನೆ ಮಾಡಿದ ಮೊಟ್ಟ ಮೊದಲ ತಂಡವಾಯಿತು. ಅಫ್ಗಾನಿಸ್ತಾನ ತಂಡವು 2019ರಲ್ಲಿ ಐರ್ಲೆಂಡ್ ವಿರುದ್ಧ ಗಳಿಸಿದ್ದ 278 ರನ್‌ಗಳ ಮೊತ್ತವೇ ಈ ಮಾದರಿಯಲ್ಲಿ ಗರಿಷ್ಠವಾಗಿತ್ತು.

ಟಾಸ್ ಗೆದ್ದ ಮಂಗೋಲಿಯಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ನೇಪಾಳ ತಂಡವು 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 314 ರನ್ ಗಳಿಸಿತು. ಅದಕ್ಕೆ ಕಾರಣವಾಗಿದ್ದು ಕುಶಾಲ ಮಲ್ಲಾ ಹೊಡೆದ ಶರವೇಗದ ಶತಕ ಮತ್ತು ದೀಪೇಂದ್ರಸಿಂಗ್ ಗಳಿಸಿದ ಮಿಂಚಿನ ಅರ್ಧಶತಕ. ಎರಡೂ ವಿಶ್ವದಾಖಲೆಯ ಪುಟ ಸೇರಿದವು.

19 ವರ್ಷದ ಎಡಗೈ ಬ್ಯಾಟರ್ ಕುಶಾಲ ಮಲ್ಲಾ 34 ಎಸೆತಗಳಲ್ಲಿ ಶತಕ ಬಾರಿಸಿದರು. ದಕ್ಷಿಣ ಆಫ್ರಿಕಾದ ಡೇವಿಡ್ ಮಿಲ್ಲರ್ ಮತ್ತು ಭಾರತದ ರೋಹಿತ್ ಶರ್ಮಾ ಈ ಮೊದಲು 35 ಎಸೆತಗಳಲ್ಲಿ 100ರ ಗಡಿ ದಾಟಿದ್ದರು. ಕುಶಾಲ ಒಟ್ಟು 50 ಎಸೆತಗಳಲ್ಲಿ 137 ರನ್ ಹೊಡೆದರು. ಅದರಲ್ಲಿ 12 ಸಿಕ್ಸರ್ ಮತ್ತು 8 ಬೌಂಡರಿ ಇದ್ದವು.

ನೇಪಾಳದ ಐದನೇ ಕ್ರಮಾಂಕದ ಬ್ಯಾಟರ್ ದೀಪೇಂದ್ರ ಸಿಂಗ್ ಐರೀ 9 ಎಸೆತಗಳಲ್ಲಿ ಅರ್ಧಶತಕ ಬಾರಿಸಿ ಭಾರತದ ಯುವರಾಜ್ ಸಿಂಗ್ (12 ಎಸೆತದಲ್ಲಿ 58) ದಾಖಲೆಯನ್ನು ನುಚ್ಚುನೂರು ಮಾಡಿದರು. ಯುವಿ 2007ರ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಇಂಗ್ಲೆಂಡ್ ಎದುರು ಈ ಸಾಧನೆ ಮಾಡಿದ್ದರು. 16 ವರ್ಷಗಳ ನಂತರ ದೀಪೇಂದ್ರ ಆ ದಾಖಲೆಯನ್ನು ಮುರಿದರು. ಅವರು 520ರ ಸ್ಟ್ರೈಕ್‌ರೇಟ್‌ನಲ್ಲಿ ಅಜೇಯ 52 ರನ್ ದಾಖಲಿಸಿದರು. ಒಟ್ಟು ಹತ್ತು ಎಸೆತ ಎದುರಿಸಿದರು. ಎಂಟು ಸಿಕ್ಸರ್ ಹೊಡೆದರು.

ಸಂಕ್ಷಿಪ್ತ ಸ್ಕೋರು: ನೇಪಾಳ: 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 314 (ಕುಶಾಲ್ ಮಲ್ಲ 137, ರೋಹಿತ್ ಪಾಡೆಲ್ 61, ದೀಪೇಂದ್ರ ಸಿಂಗ್ ಐರಿ 52, ದವಾಸುರೇನ್ ಜೆನ್ಯೆನ್‌ಸುರೇನ್ 60ಕ್ಕೆ 1) **ಮಂಗೋಲಿಯಾ:** 13.1 ಓವರ್‌ಗಳಲ್ಲಿ 41 (ದವಾಸುರೇನ್ ಜೆನ್ಯೆನ್‌ಸುರೇನ್ 10, ಕರಣ್ ಕೆಸಿ 1 ರನ್‌ಗೆ 2, ಅವಿನಾಶ್ ಬೊಹ್ರಾ 2ಕ್ಕೆ2, ಸಂದೀಪ್ ಲಾಮಿಚಾನೆ 7ಕ್ಕೆ2)

ಫಲಿತಾಂಶ: 273 ರನ್‌ಗಳ ಜಯ.

ಕಾಂಬೋಡಿಯಾ: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 125 (ಲಕ್ಷಿತ್ ಗುಪ್ತಾ 24, ಎಟಿನಿ ಬೆವುಕಸ್ 15, ಶಾರ್ವನ್ ಗೋಡಾರ 36, ರಿಯಾನ್ ಡ್ರೇಕ್ 15ಕ್ಕೆ3) **ಜಪಾನ್:** 18.1 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 126 (ಲಚ್ಲನ್ ಯರಾಮೊಟೊ 32, ಶಿರಾಯ ಪಿಟಮೊರಾ 23, ಕೆಂಡಲ್ ಕಾಡೊವಾಕಿ 35, ಶಾರ್ವನ್ ಗೋಡಾರ 25ಕ್ಕೆ3, ರಾಮ್ ಶರಣ್ 24ಕ್ಕೆ2)

ಫಲಿತಾಂಶ: ಜಪಾನ್ ತಂಡಕ್ಕೆ 3 ವಿಕೆಟ್‌ಗಳ ಜಯ.

ನೇಪಾಳದ ದೀಪೇಂದ್ರ ಸಿಂಗ್ ಐರಿ –ಎಎಫ್‌ಪಿ ಚಿತ್ರ

19th Asian Games
Hangzhou 2022

ನೇಪಾಳದ ದಾಖಲೆಗಳು

1 ಟಿ20 ಕ್ರಿಕೆಟ್‌ನ ಇನಿಂಗ್ಸ್‌ನಲ್ಲಿ 300ಕ್ಕೂ ಹೆಚ್ಚು ರನ್ ಗಳಿಸಿದ ಮೊದಲ ತಂಡ

34 ಶರವೇಗದ ಶತಕ ದಾಖಲಿಸಲು ಕುಶಾಲ ಮಲ್ಲ ಆಡಿದ ಎಸೆತಗಳು. ಡೇವಿಡ್ ಮಿಲ್ಲರ್ ಮತ್ತು ರೋಹಿತ್ ಶರ್ಮಾ (35 ಎಸೆತಗಳು) ದಾಖಲೆಯನ್ನು ಅಳಿಸಿಹಾಕಿದರು

9 ಟಿ20 ಕ್ರಿಕೆಟ್‌ನ ವೇಗದ ಅರ್ಧಶತಕ ದಾಖಲಿಸಿದ ದೀಪೇಂದ್ರಸಿಂಗ್ ಐರಿ ಆಡಿದ ಎಸೆತಗಳು. ಅವರು ಯುವರಾಜ್ ಸಿಂಗ್ 12 ಎಸೆತದಲ್ಲಿ ಮಾಡಿದ್ದ ಸಾಧನೆಯನ್ನು ಮೀರಿ ನಿಂತರು

273 ಟಿ20 ಮಾದರಿಯಲ್ಲಿ ಅತಿ ಹೆಚ್ಚು ರನ್‌ಗಳ ಅಂತರದ ಜಯ ಇದಾಗಿದೆ

26 ನೇಪಾಳ ತಂಡವು ದಾಖಲಿಸಿದ ಒಟ್ಟು ಸಿಕ್ಸರ್‌ಗಳು. ಚುಟುಕು ಮಾದರಿಯಲ್ಲಿ ಇನಿಂಗ್ಸ್‌ವೊಂದರಲ್ಲಿ ದಾಖಲಾದ ಗರಿಷ್ಠ ಸಿಕ್ಸರ್‌ಗಳು ಇವು.

ಟಿಟಿ: ಪ್ರಿ ಕ್ವಾರ್ಟರ್‌ಗೆ ಸತ್ಯನ್–ಬಾತ್ರಾ

ಹಾಂಗ್‌ಝೌ (ಪಿಟಿಐ): ಭಾರತದ ಜಿ.ಸತ್ಯನ್ ಮತ್ತು ಮಣಿಕಾ ಬಾತ್ರಾ ಜೋಡಿ ಥಾಯ್ಲೆಂಡ್‌ನ ನಪಾಟ್ ತನ್ಮತಿಕೊಮ್– ಸುತಾಸಿನಿ ಸವಿತಾಬಟ್ ಅವರನ್ನು ಮಣಿಸಿ ಏಷ್ಯನ್ ಗೇಮ್ಸ್ ಟೇಬಲ್ ಟೆನಿಸ್ ಟೂರ್ನಿಯ ಮಿಶ್ರ ಡಬಲ್ಸ್ ವಿಭಾಗದ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಬುಧವಾರ ನಡೆದ ಪಂದ್ಯದಲ್ಲಿ ಸತ್ಯನ್– ಬಾತ್ರಾ 10-12, 11-8, 11-3, 11-8 ರಿಂದ ಗೆದ್ದರು. ಹರ್ಮೀತ್ ದೇಸಾಯಿ– ಶ್ರೀಜಾ ಅಕುಲಾ ಜೋಡಿ 12–10, 11–7, 11–7 ರಿಂದ ಮಕಾವ್‌ನ ಚಿ ಚೆಂಗ್– ಹ್ಯೂ ಲಿ ಸೀಕ್ ಅವರನ್ನು ಮಣಿಸಿ 16ರ ಘಟ್ಟ ಪ್ರವೇಶಿಸಿತು. ಪುರುಷರ ಡಬಲ್ಸ್‌ನಲ್ಲಿ ಮಾನವ್ ಠಕ್ಕರ್– ಮನುಷ್ ಶಾ 11-8, 8-11, 11-6, 7-11, 12-10 ರಿಂದ ಥಾಯ್ಲೆಂಡ್‌ನ ನಪಾಟ್ ತನ್ಮತಿಕೊಮ್–ಸಿತಿಸಕ್ ನುಚಾರ್ಟ್ ಎದುರು ಗೆದ್ದರು.

ಸ್ಕ್ವಾಷ್: ಪಾಕ್‌ಗೆ ಮಣಿದ ಭಾರತ

ಹಾಂಗ್‌ಝೌ (ಪಿಟಿಐ): ಭಾರತ ಪುರುಷರ ತಂಡ ಏಷ್ಯನ್ ಕ್ರೀಡಾ ಕೂಟದ ಸ್ಕ್ವಾಷ್ ಟೂರ್ನಿಯ ಪಂದ್ಯದಲ್ಲಿ ಬುಧವಾರ 1–2 ರಿಂದ ಪಾಕಿಸ್ತಾನ ಎದುರು ಸೋತಿತು. 'ಎ' ಗುಂಪಿನ ಕೊನೆಯ ಲೀಗ್ ಪಂದ್ಯದಲ್ಲಿ ನೇಪಾಳ ವನ್ನು ಮಣಿಸಿದರೆ ಭಾರತಕ್ಕೆ ಸೆಮಿ ಫೈನಲ್ ಪ್ರವೇಶಿಸುವ ಅವಕಾಶವಿದೆ.

ಅಭಯ್ ಸಿಂಗ್ ಮತ್ತು ಮಹೇಶ್ ಮನಗಾಂವ್ಕರ್ ಅವರು ಪಾಕ್ ಎದುರಾಳಿಗಳ ಕೈಯಲ್ಲಿ ಸೋತರೆ, ಸೌರವ್ ಘೋಷಾಲ್ ಮಾತ್ರ ಗೆಲುವು ಸಾಧಿಸಿದರು.

ಬಾಗನ್‌ಗೆ ಮಣಿದ ಬಿಎಫ್‌ಸಿ

ಕೋಲ್ಕತ್ತ (ಪಿಟಿಐ): ಬೆಂಗಳೂರು ಎಫ್‌ಸಿ ತಂಡವು ಬುಧವಾರ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಪಂದ್ಯದಲ್ಲಿ 0–1ರಿಂದ ಮೋಹನ್ ಬಾಗನ್ ಸೂಪರ್ ಜೈಂಟ್ ತಂಡಕ್ಕೆ ಮಣಿಯಿತು.

ಬಿಎಫ್‌ಸಿ ತಂಡವು ಆರಂಭಿಕ ಹಂತದಲ್ಲಿ ಉತ್ತಮ ಹಿಡಿತ ಸಾಧಿಸಿತ್ತು. ಆದರೆ, ದ್ವಿತೀಯಾರ್ಧದಲ್ಲಿ ಆತಿಥೇಯ ತಂಡದ ಸದಸ್ಯರು ಚುರುಕಿನ ಆಟದ ಮೂಲಕ ಗಮನ ಸೆಳೆದರು. ಬಾಗನ್ ತಂಡದ ಜೇಸನ್ ಕಮ್ಮಿನ್ಸ್ ರವಾನಿಸಿದ ಚೆಂಡನ್ನು 67ನೇ ನಿಮಿಷದಲ್ಲಿ ಹ್ಯೂಗೊ ಬೌಮಸ್ ಗುರಿ ಸೇರಿಸಿ ಮೇಲುಗೈ ಒದಗಿಸಿದರು.

ಪಂದ್ಯದ ವೇಳೆ ಉಭಯ ತಂಡಗಳ ಆಟಗಾರರ ಮಧ್ಯೆ ಕೆಲವು ಬಾರಿ ಮಾತಿನ ಚಕಮಕಿ ನಡೆಯಿತು. ಹೀಗಾಗಿ, ರೆಫ್ರಿ ಬಿಎಫ್‌ಸಿ ತಂಡದ ಸುರೇಶ್ ಸಿಂಗ್ ಮತ್ತು ನೊರೆಮ್ ಸಿಂಗ್ ಅವರಿಗೆ ಕ್ರಮವಾಗಿ 75ನೇ ಮತ್ತು 92ನೇ ನಿಮಿಷಗಳಲ್ಲಿ ಕೆಂಪು ಕಾರ್ಡ್ ತೋರಿಸಿ ಹೊರ ಕಳುಹಿಸಿದರು.

ಎಂಎಫ್‌ಎಆರ್ ತಂಡಕ್ಕೆ ಜಯ

ಬೆಂಗಳೂರು: ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 1–0 ಯಿಂದ ರೆಬೆಲ್ಸ್ ಎಫ್‌ಸಿ ವಿರುದ್ಧ ಜಯ ಸಾಧಿಸಿತು. ಮತ್ತೊಂದು ಪಂದ್ಯದಲ್ಲಿ ರಿಯಲ್ ಚಿಕ್ಕಮಗಳೂರು ಎಫ್‌ಸಿ ತಂಡವು 1–1ರಿಂದ ಎಫ್‌ಸಿ ಡೆಕ್ಕನ್ ತಂಡದೊಂದಿಗೆ ಡ್ರಾ ಸಾಧಿಸಿತು.

ಐಸಿಸಿ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಪಾಲ್ಗೊಳ್ಳಲಿರುವ ಪಾಕಿಸ್ತಾನ ತಂಡದ ನಾಯಕ ಬಾಬರ್ ಅಜಂ, ಶಾಹೀನ್ ಆಫ್ರಿದಿ ಹಾಗೂ ಸಹ ಆಟಗಾರರು ಬುಧವಾರ ಹೈದರಾಬಾದ್‌ಗೆ ಬಂದಿಳಿದರು –ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

ಈಕ್ವೆಸ್ಟ್ರಿಯನ್: ಫೈನಲ್‌ಗೆ ವಿಪುಲ್

ಹಾಂಗ್‌ಝೌ (ಪಿಟಿಐ): ಏಷ್ಯನ್ ಕ್ರೀಡಾಕೂಟದಲ್ಲಿ ಭಾರತದ ಈಕ್ವೆಸ್ಟ್ರಿಯನ್ ಸ್ಪರ್ಧಿಗಳ ಉತ್ತಮ ಪ್ರದರ್ಶನ ಮುಂದುವರಿದಿದ್ದು ವಿಪುಲ್ ಹೃದಯ್, ಅನುಷ್ ಅಗರವಾಲ್ ಮತ್ತು ದಿವ್ಯಕೃತಿ ಸಿಂಗ್ ಅವರು ಡೆಸಾಜ್ ವೈಯಕ್ತಿಕ ವಿಭಾಗದಲ್ಲಿ ಫೈನಲ್ ಪ್ರವೇಶಿಸಿದ್ದಾರೆ.

ಬುಧವಾರ ನಡೆದ ಅರ್ಹತಾ ಸುತ್ತಿನಲ್ಲಿ ವಿಪುಲ್ 73.883 ಪಾಯಿಂಟ್ಸ್‌ಗಳೊಂದಿಗೆ ಅಗ್ರಸ್ಥಾನ ಪಡೆದು ಪದಕ ಸುತ್ತು ತಲುಪಿದರು. ಅನುಷ್ (71.706) ಮತ್ತು ದಿವ್ಯಕೃತಿ (67.676) ಅವರು ಕ್ರಮವಾಗಿ ನಾಲ್ಕು ಹಾಗೂ 11ನೇ ಸ್ಥಾನ ಪಡೆದು ಫೈನಲ್‌ಗೆ ಅರ್ಹತೆ ಗಳಿಸಿದರು. ಅಗ್ರ 15 ಸ್ಥಾನಗಳನ್ನು ಪಡೆದ ಸ್ಪರ್ಧಿಗಳು ಗುರುವಾರ ನಡೆಯುವ ಫೈನಲ್‌ನಲ್ಲಿ ಸ್ಥಾನ ಪಡೆದರು.

ಟೆನಿಸ್ ಸಿಂಗಲ್ಸ್: ಪದಕದ ಆಸೆ ಭಗ್ನ

ಹಾಂಗ್‌ಝೌ (ಪಿಟಿಐ): ಕ್ವಾರ್ಟರ್‌ಫೈನಲ್‌ನಲ್ಲಿ ಸುಮಿತ್ ನಗಾಲ್ ಮತ್ತು ಅಂಕಿತಾ ರೈನಾ ಹೊರಬೀಳುವುದರೊಂದಿಗೆ ಏಷ್ಯನ್ ಗೇಮ್ಸ್ ಟೆನಿಸ್ ಸಿಂಗಲ್ಸ್‌ನಲ್ಲಿ ಭಾರತದ ಪದಕದ ಕನಸು ಬುಧವಾರ ನುಚ್ಚುನೂರಾಯಿತು.

ಝಿಜಿನ್ ಝಾಂಗ್ ತವರಿನಲ್ಲಿ ಪ್ರಶಸ್ತಿಗೆ ನೆಚ್ಚಿನ ಆಟಗಾರನಾಗಿದ್ದು, ಅವರ ಎದುರು ಗೆಲ್ಲುವುದು ನಗಾಲ್‌ಗೆ ಕಠಿಣವೇ ಆಗಿತ್ತು. 2 ಗಂಟೆ 16 ನಿಮಿಷಗಳ ಹೋರಾಟದಲ್ಲಿ ನಗಾಲ್ ಒಂದು ಸೆಟ್ ಪಡೆಯುವಲ್ಲಿ ಯಶಸ್ವಿಯಾದರೂ, ಅಂತಿಮವಾಗಿ ಝಾಂಗ್ 6–7 (3), 6–1, 6–2ರಿಂದ ಗೆದ್ದರು. 2010ರಲ್ಲಿ ಸೋಮ್‌ದೇವ್ ದೇವ್‌ವರ್ಮನ್ ಚಿನ್ನ ಗೆದ್ದಿದ್ದರು. ನಂತರದ ಕ್ರೀಡೆಗಳಲ್ಲಿ ಯೂಕಿ ಭಾಂಬ್ರಿ (2014, ಇಂಚಿಯಾನ್), ಪ್ರಜ್ಞೇಶ್ ಗುಣೇಶ್ವರನ್ (2018, ಜಕಾರ್ತಾ) ಅವರು ಕಂಚು ಜಯಿಸಿದ್ದರು.

ಕಳೆದ ಸಲದ ಕ್ರೀಡೆಗಳಲ್ಲಿ ಕಂಚಿನ ಪದಕ ಗೆದ್ದಿದ್ದ ಅಂಕಿತಾ 2 ಗಂಟೆ 53 ನಿಮಿಷಗಳ ದೀರ್ಘ ಕ್ವಾರ್ಟರ್ ಫೈನಲ್‌ನಲ್ಲಿ 6–3, 4–6, 4–6 ರಿಂದ ಜಪಾನ್‌ನ ಹಾರುಕಾ ರಾಜಿ ಎದುರು ಸೋಲನುಭವಿಸಿದರು.

ಫೆನ್ಸಿಂಗ್ ತಂಡದ ಸವಾಲು ಅಂತ್ಯ

ಹಾಂಗ್‌ಝೌ (ಪಿಟಿಐ): ಭಾರತ ಮಹಿಳಾ ಫೆನ್ಸಿಂಗ್ ತಂಡದವರು ಈಪೀ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಹಾಗೂ ಪುರುಷರ ತಂಡದವರು ಫಾಯಿಲ್ ವಿಭಾಗದ 16ರ ಘಟ್ಟದಲ್ಲಿ ನಿರಾಸೆ ಅನುಭವಿಸಿದರು.

ಬಿಟಿಸಿ ಅಧ್ಯಕ್ಷರಾಗಿ ಅರವಿಂದ್ ರಾಘವನ್

ಬೆಂಗಳೂರು: ಅರವಿಂದ್ ರಾಘವನ್ ಅವರು ಬೆಂಗಳೂರು ಟರ್ಫ್ ಕ್ಲಬ್ (ಬಿಟಿಸಿ) ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಆಗಿದ್ದಾರೆ.

ಬುಧವಾರ ನಡೆದ ನೂತನ ಆಡಳಿತ ಸಮಿತಿಯ ಮೊದಲ ಸಭೆಯಲ್ಲಿ ಅರವಿಂದ್ ಅವರನ್ನು ಆಯ್ಕೆ ಮಾಡಲಾಯಿತು. ಸೋಮವಾರ ನಡೆದಿದ್ದ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ 2023–24ನೇ ಸಾಲಿಗೆ ಆಡಳಿತ ಸಮಿತಿಯನ್ನು ಆಯ್ಕೆ ಮಾಡಲಾಯಿತು.



ಸ್ಟಿವರ್ಡ್ಸ್: ಅರವಿಂದ್ ರಾಘವನ್, ಶಂಕರ್ ಬಾಲು, ಟಿಎಚ್‌ಆರ್ ರಾಜೀವ.

ಸರ್ಕಾರದಿಂದ ನಾಮನಿರ್ದೇಶಿತರು: ಕರ್ನಾಟಕ ರಾಜ್ಯ ಹಣಕಾಸು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಬೆಂಗಳೂರು ನಗರ ಪೊಲೀಸ್ ಕಮಿಷನರ್.

ಸಮಿತಿ ಸದಸ್ಯರು: ದರ್ಶನ್ ಲೋಕೇಶ್, ದಯಾನಂದ ಆರ್. ಮಾಂಡ್ರೆ.

ಪಾಂಡೆ ಅಬ್ಬರ: ನೆದರ್ಲೆಂಡ್ಸ್‌ಗೆ ಸೋಲು

ಬೆಂಗಳೂರು: ಅನುಭವಿ ಬ್ಯಾಟರ್ ಮನೀಷ್ ಪಾಂಡೆ (105; 76ಎ, 4X15, 6X4) ಅವರ ಅಬ್ಬರದ ಶತಕದ ಬಲದಿಂದ ಕರ್ನಾಟಕ ತಂಡವು ನೆದರ್ಲೆಂಡ್ಸ್ ವಿರುದ್ಧದ ಅಭ್ಯಾಸ ಪಂದ್ಯದಲ್ಲಿ 1 ವಿಕೆಟ್ ಅಂತರದ ಜಯ ಸಾಧಿಸಿತು.

ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ನೆದರ್ಲೆಂಡ್ಸ್ 47.5 ಓವರ್‌ಗಳಲ್ಲಿ 296 ರನ್ ಗಳಿಸಿತು. ತಂಡದ ಕಾಲಿನ್ ಆಕೆರ್ಮನ್ (79 ರನ್) ಅರ್ಧಶತಕ ಗಳಿಸಿದರು. ಗುರಿ ಬೆನ್ನಟ್ಟಿದ ಕರ್ನಾಟಕ ತಂಡವು ಪಾಂಡೆ ಶತಕ ಮತ್ತು ಕೆ.ಎಲ್. ಶ್ರೀಜಿತ್ (73 ರನ್) ಅರ್ಧಶತಕದ ಬಲದಿಂದ 39.2 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 300 ರನ್ ಗಳಿಸಿ ಗೆದ್ದಿತು

ಸಂಕ್ಷಿಪ್ತ ಸ್ಕೋರು: ನೆದರ್ಲೆಂಡ್ 47.5 ಓವರ್‌ಗಳಲ್ಲಿ 296 (ಮಾರ್ಕ್ ವೊ ಡೊವ್ಡ್ 48, ಕಾಲಿನ್ ಅಕೆರ್ಮನ್ 79, ವೆಸ್ಲಿ ಬೆರೆಸಿ 29, ಸ್ಕಾಟ್ ಎಡ್ವರ್ಡ್ಸ್ 42, ಎಂ. ವೆಂಕಟೇಶ್ 56ಕ್ಕೆ2, ಮನೋಜ್ ಬಾಂಢಗೆ 58ಕ್ಕೆ2, ಪ್ರವೀಣ ದುಬೆ 61ಕ್ಕೆ2, ಪ್ರಣವ್ ಭಾಟಿಯಾ 49ಕ್ಕೆ2) **ಕರ್ನಾಟಕ:** 39.2 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 300 (ದೇವದತ್ತ ಪಡಿಕ್ಕಲ್ 22, ಕೆ.ಎಲ್. ಶ್ರೀಜಿತ್ 73, ಮನೀಷ್ ಪಾಂಡೆ 105, ಅಭಿನವ್ ಮನೋಹರ್ 32, ಮನೋಜ್ ಬಾಂಢಗೆ 28, ಲೊಗಾನ್ ವ್ಯಾನ್‌ಬೀಕ್ 75ಕ್ಕೆ2, ಪಾಲ್ ವ್ಯಾನ್ ಮೀಕರೆನ್ 61ಕ್ಕೆ2, ವೆಸ್ಲಿ 50ಕ್ಕೆ3)

ಮನೀಷ್ ಪಾಂಡೆ

ಬ್ಯಾಡ್ಮಿಂಟನ್: ಬ್ರೆಜಿಲ್ ವಿರುದ್ಧ ಭಾರತಕ್ಕೆ ಜಯ

ನವದೆಹಲಿ: ಭಾರತದ ಯುವ ಬ್ಯಾಡ್ಮಿಂಟನ್ ತಂಡವು ಅಮೆರಿಕದಲ್ಲಿ ನಡೆಯುತ್ತಿರುವ ಬಿಡಬ್ಲ್ಯುಎಫ್ ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ ಬ್ರೆಜಿಲ್ ತಂಡವನ್ನು 5–0ಯಿಂದ ಮಣಿಸಿ, ಗೆಲುವಿನ ಓಟವನ್ನು ಮುಂದುವರಿಸಿದೆ.

ಮಿಕ್ಸೆಡ್ ಡಬಲ್ಸ್ ಪಂದ್ಯದಲ್ಲಿ ಸಮರವೀರ್ ಮತ್ತು ರಾಧಿಕಾ ಶರ್ಮಾ; ಬಾಲಕರ ಸಿಂಗಲ್ಸ್ ಪಂದ್ಯದಲ್ಲಿ ಲೋಕೇಶ್ ರೆಡ್ಡಿ; ಬಾಲಕಿಯರ ಸಿಂಗಲ್ಸ್‌ನಲ್ಲಿ ದೇವಿಕಾ ಸಿಹಾಗ್; ಬಾಲಕರ ಡಬಲ್ಸ್‌ನಲ್ಲಿ ದಿವ್ಯಂ ಅರೋರಾ ಮತ್ತು ಮಯಾಂಕ್ ರಾಣಾ; ಬಾಲಕಿಯರ ಡಬಲ್ಸ್ ಜೋಡಿ ವೆನ್ನಾಲ ಕಲಗೋಟ್ಲ ಮತ್ತು ಶ್ರೀಯಾಂಶಿ ವಾಲಿಶೆಟ್ಟಿ ಅವರು ಎದುರಾಳಿ ಆಟಗಾರರ ವಿರುದ್ಧ ಗೆಲುವು ಸಾಧಿಸಿದರು.